"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

(ನೂರ ಐವತ್ತೈದನೆಯ ಅಧಿವೇಶನ)

**ಶುಕ್ರವಾರ, 21ನೇ ಮಾರ್ಚ್ 2025**

## ವಿಷಯಾನುಕ್ರಮಣಿಕೆ (INDEX)


**1. ಕಾರ್ಯದರ್ಶಿಯವರ ವರದಿ**

**2."ಕೆಳಮನೆಯಲ್ಲಿ ಸಚಿವ ಸಂಪುಟದ ಸದಸ್ಯರೊಬ್ಬರು ಹನಿಟ್ರ್ಯಾಪ್‌ಗೆ ಒಳಗಾಗಿರುವ ವಿಚಾರ ಪ್ರಸ್ತಾಪಿಸಿದ್ದು, ಈ ಕುರಿತು ಸರ್ಕಾರ ಉತ್ತರಿಸಬೇಕೆನ್ನುವ ಬಗ್ಗೆ."**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಸಿ.ಟಿ.ರವಿ
- ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು)

**3. ವಿತ್ತೀಯ ಕಾರ್ಯಕಲಾಪ**

**2025-26ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ**

- ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ
- ಶ್ರೀ ಹೆಚ್.ಪಿ.ಸುಧಾಮ್ ದಾಸ್
- ಶ್ರೀ ಎಂ.ನಾಗರಾಜು
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)
- ಶ್ರೀ ಸುನಿಲ್ ವಲ್ಯಾಪುರ್
- ಡಾ: ಯತೀಂದ್ರ ಎಸ್.
- ಶ್ರೀ ಸಿ.ಟಿ.ರವಿ
- ಶ್ರೀ ಪುಟ್ಟಣ್ಣ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಎನ್.ಚಲುವರಾಯಸ್ವಾಮಿ (ಕೃಷಿ ಸಚಿವರು)
- ಶ್ರೀ ಕೆ.ಎಸ್.ನವೀನ್
- ಶ್ರೀ ಎಸ್.ರವಿ
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಎಂ.ನಾಗರಾಜು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**4. ಪ್ರಕಟಣೆ**

**"ವಿಧಾನಸಭೆಯು ಅಂಗೀಕರಿಸಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಕುರಿತು."**

**5. ಆಡಳಿತ ಪಕ್ಷದ ಸದಸ್ಯರ ಪದಬಳಕೆಯ ಬಗ್ಗೆ ವಿರೋಧಪಕ್ಷದ ಸದಸ್ಯರಿಂದ ಆಕ್ಷೇಪ ಮತ್ತು ಧರಣಿ.**

- ಶ್ರೀ ಸುನೀಲ್ ವಲ್ಯಾಪುರ್

**6. ಕಾರ್ಯದರ್ಶಿಯವರ ವರದಿ**

**7. ಆಡಳಿತ ಪಕ್ಷದ ಸದಸ್ಯರ ಪದಬಳಕೆಯ ಬಗ್ಗೆ ವಿರೋಧಪಕ್ಷದ ಸದಸ್ಯರಿಂದ ಆಕ್ಷೇಪ ಮತ್ತು ಮುಂದುವರೆದ ಧರಣಿ.**

- ಶ್ರೀ ಪುಟ್ಟಣ್ಣ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)

**8. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಪಶು ಆಹಾರ (ಉತ್ಪಾದನೆ ಮತ್ತು ಗುಣಮಟ್ಟ ನಿಯಂತ್ರಣದ ವಿನಿಯಮನ) ವಿಧೇಯಕ, 2025**

**– ಶ್ರೀ ಕೆ.ವೆಂಕಟೇಶ್ (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು)**

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**ಆ) ಡಾ: ಹೆಚ್.ನರಸಿಂಹಯ್ಯ ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2025**

– ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**9. ಆಡಳಿತ ಪಕ್ಷದ ಸದಸ್ಯರ ಆಕ್ಷೇಪಾರ್ಹ ಪದಬಳಕೆಯ ಬಗ್ಗೆ ವಿರೋಧಪಕ್ಷದ ಸದಸ್ಯರಿಂದ ಮುಂದುವರೆದ ಧರಣಿ ಮತ್ತು ಸಂಬಂಧಪಟ್ಟ ಸದಸ್ಯರನ್ನು ಸದನದಿಂದ ಹೊರಗೆ ಹಾಕಬೇಕೆಂಬ ಒತ್ತಾಯ.**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
- ಶ್ರೀ ಎಸ್.ಎಲ್.ಭೋಜೇಗೌಡ
- ಡಾ: ಎಂ.ಆರ್.ಸೀತಾರಾಂ
- ಶ್ರೀ ಪುಟ್ಟಣ್ಣ
- ಶ್ರೀ ರಾಮೋಜಿಗೌಡ
- ಶ್ರೀ ಬಿ.ಕೆ.ಹರಿಪ್ರಸಾದ್

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**10. ಶಾಸನ ರಚನೆ**

**ಮುಂದುವರಿದ ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಇ) ನೋಟರಿಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025**

- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**11. ಆಡಳಿತ ಪಕ್ಷದ ಸದಸ್ಯರ ಆಕ್ಷೇಪಾರ್ಹ ಪದಬಳಕೆಯ ಬಗ್ಗೆ ವಿರೋಧಪಕ್ಷದ ಸದಸ್ಯರಿಂದ ಮುಂದುವರೆದ ಧರಣಿ ಮತ್ತು ಸಂಬಂಧಪಟ್ಟ ಸದಸ್ಯರನ್ನು ಸದನದಿಂದ ಹೊರಗೆ ಹಾಕಬೇಕೆಂಬ ಒತ್ತಾಯ.**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಪುಟ್ಟಣ್ಣ
- ಡಾ: ಎಂ.ಆರ್.ಸೀತಾರಾಂ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಕೆ.ಅಬ್ದುಲ್ ಜಬ್ಬರ್
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**12. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಈ) ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2025**

- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**ಉ) ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2025**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರ ಪರವಾಗಿ)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**13) ಪೂರಕ ಅಂದಾಜುಗಳನ್ನೊಪ್ಪಿಸುವುದು.**

- ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು)

**14) ಶಾಸನ ರಚನೆ**

**ಮುಂದುವರಿದ ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಊ) ಕರ್ನಾಟಕ ಧನವಿನಿಯೋಗ (ಸಂಖ್ಯೆ-2) ವಿಧೇಯಕ, 2025**

- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**15) ವಿತ್ತೀಯ ಕಾರ್ಯಕಲಾಪ**

**2025-26ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ.**

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಐವನ್ ಡಿ'ಸೋಜಾ
- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್)
- ಶ್ರೀ ಎಸ್.ಎಲ್.ಭೋಜೇಗೌಡ

**16. "ಕೆಳಮನೆಯಲ್ಲಿ ಸಚಿವ ಸಂಪುಟದ ಸದಸ್ಯರೊಬ್ಬರು ಹನಿಟ್ರ್ಯಾಪ್‌ಗೆ ಒಳಗಾಗಿರುವ ವಿಚಾರ ಪ್ರಸ್ತಾಪಿಸಿದ್ದು, ಈ ಕುರಿತು ಸರ್ಕಾರ ಉತ್ತರಿಸಬೇಕೆನ್ನುವ ಬಗ್ಗೆ."**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

**17. 2025-26ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆಗೆ ಸರ್ಕಾರದಿಂದ ಉತ್ತರ.**

- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

**18. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಋ) ಕರ್ನಾಟಕ ಧನವಿನಿಯೋಗ ವಿಧೇಯಕ, 2025**

- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**ಎ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2025**

- ಶ್ರೀ ಸಂತೋಷ್ ಎಸ್.ಲಾಡ್ (ಕಾರ್ಮಿಕ ಸಚಿವರು) (ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**19. ಸರ್ಕಾರದ ಲಿಖಿತ ಉತ್ತರಗಳ ಮಂಡನೆ:**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಇ) ನಿಯಮ 72ರ ಗಮನ ಸೆಳೆಯುವ ಸೂಚನೆಗಳ ಉತ್ತರಗಳು

ಈ) ನಿಯಮ 330 ರ ಸೂಚನೆಗಳ ಉತ್ತರಗಳು

ಉ) ನಿಯಮ 58ಎ ಅಡಿಯಲ್ಲಿ ಪ್ರಸ್ತಾಪಿಸಿದ ಶೂನ್ಯವೇಳೆ ಸೂಚನೆಗಳ ಉತ್ತರಗಳು

## 20. ನಿರ್ಣಯ

**"ವಿಶ್ವವಿದ್ಯಾಲಯ ಧನಸಹಾಯ ಆಯೋಗ ಹೊರಡಿಸಿರುವ ಕರಡು "University Grants Commission (Minimum Qualifications for Appointment and Promotion of Teachers and Academic Staff in Universities and Colleges and Measures for the Maintenance of Standards in Higher Education) Regulations, 2025" ಅನ್ನು ಹಿಂಪಡೆಯಬೇಕೆಂದು ನಿರ್ಣಯಿಸಲಾಗಿರುವ ಕುರಿತು.**

– ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)

(ನಿರ್ಣಯ ಅಂಗೀಕರಿಸಲ್ಪಟ್ಟಿತು)

## 21. ಪ್ರಕಟಣೆ

## 22. ಸಭೆಯ ಮುಂದಿಡಲಾದ ಕಾಗದ ಪತ್ರಗಳು

## 23. ಶಾಸನ ರಚನೆ

**ಮುಂದುವರಿದ ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

### ಏ) ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025

– ಶ್ರೀ ಎಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

### ಐ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2025

– ಶ್ರೀ ಎಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ)

– ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

– ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)

– ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

– ಶ್ರೀ ಶಿವರಾಜ್ ಎಸ್. ತಂಗಡಗಿ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು)

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

– ಶ್ರೀ ಬಿ.ಕೆ.ಹರಿಪ್ರಸಾದ್

– ಶ್ರೀ ಪುಟ್ಟಣ್ಣ

– ಶ್ರೀ ಎಸ್.ಎಲ್.ಭೋಜೇಗೌಡ

– ಡಾ: ಎಂ.ಆರ್.ಸೀತಾರಾಂ

- ಶ್ರೀ ಸಿ.ಟಿ.ರವಿ
- ಶ್ರೀ ಸುನೀಲ್ ವಲ್ಯಾಪುರ್
- ಶ್ರೀ ಎ.ವಸಂತ್ ಕುಮಾರ್
- ಡಾ: ಉಮಾಶ್ರೀ
- ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)
- ಶ್ರೀ ಐವನ್ ಡಿ'ಸೋಜಾ
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಕೆ.ಎಸ್.ನವೀನ್
- ಡಾ: ಯತೀಂದ್ರ ಎಸ್.
- ಶ್ರೀ ಎಂ.ನಾಗರಾಜು
- ಶ್ರೀಮತಿ ಬಲ್ಕೀಸ್ ಬಾನು

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**24. ನಿರ್ಣಯಗಳು**

**ಅ) ಸಂವಿಧಾನದ ಮೂಲಭೂತ ತತ್ವಗಳನ್ನು ಉಲ್ಲಂಘಿಸುವ ನಿಬಂಧನೆಗಳನ್ನು ಒಳಗೊಂಡಿರುವ ವಕ್ಫ್ (ತಿದ್ದುಪಡಿ) ಮಸೂದೆ, 2024 ಅನ್ನು ತಕ್ಷಣ ಹಿಂಪಡೆಯುವ ಮೂಲಕ ದೇಶದ ಸರ್ವಾನುಮತದ ಅಭಿಪ್ರಾಯಗಳನ್ನು ಗೌರವಿಸಲು ಕೇಂದ್ರ ಸರ್ಕಾರವು ವಿಳಂಬವಿಲ್ಲದೇ ಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರವನ್ನು ಸರ್ವಾನುಮತದಿಂದ ಆಗ್ರಹಿಸುವ ಬಗ್ಗೆ.**

- ಶ್ರೀ ಎಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ)

(ನಿರ್ಣಯ ಅಂಗೀಕರಿಸಲ್ಪಟ್ಟಿತು)

**ಆ) ಭಾರತ ಸರ್ಕಾರವು ಸಂವಿಧಾನದ ಅನುಚ್ಛೇದ 46ರಂತೆ ಕೇಂದ್ರ ಬಜೆಟ್‌ನ ಒಂದು ಭಾಗವನ್ನು ಪರಿಶಿಷ್ಟ ಜಾತಿ ಉಪ ಯೋಜನೆ (ಪರಿಶಿಷ್ಟ ಜಾತಿಗಳ ಅಭಿವೃದ್ಧಿ ಕ್ರಿಯಾ ಯೋಜನೆ-DAPSC) ಮತ್ತು ಬುಡಕಟ್ಟು ಉಪ ಯೋಜನೆಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಿಡಲು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಅನುಕೂಲವಾಗುವಂತೆ ವಿವಿಧ ಕೇಂದ್ರ ಯೋಜನೆಗಳಿಗೆ ಹಣವನ್ನು ಒದಗಿಸಲು, ಸಂವಿಧಾನದ ಅನುಚ್ಛೇದ 46ರ ಅಡಿಯಲ್ಲಿ ಕೇಂದ್ರ ಕಾಯ್ದೆಯನ್ನು ಜಾರಿಗೆ ತರುವ ಬಗ್ಗೆ.**

ಶ್ರೀ ಎಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು)

(ನಿರ್ಣಯ ಅಂಗೀಕರಿಸಲ್ಪಟ್ಟಿತು)

**25) ಸಾರಾಂಶ**

~~~~~~~~~
~~~~~~~~~

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(556) 21-03-2025(10-40) **bkp-vk**

# ಕರ್ನಾಟಕ ವಿಧಾನ ಪರಿಷತ್ತು

**ಶುಕ್ರವಾರ, *2ನೇ ಮಾರ್ಚ್* 2025**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

1. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕವಿಪ:-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ‘ಕರ್ನಾಟಕ ಪಶು ಆಹಾರ ಉತ್ಪಾದನೆ ಮತ್ತು ಗುಣಮಟ್ಟ ನಿಯಂತ್ರಣದ ವಿನಿಯಮನ ವಿಧೇಯಕ 2025’ ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**2.“ಸಚಿವ ಸಂಪುಟದ ಸದಸ್ಯರೊಬ್ಬರು ಹನಿಟ್ರ್ಯಾಪ್‌ಗೆ ಒಳಪಟ್ಟಿರುವ ಬಗ್ಗೆ ಪ್ರಸ್ತಾಪಿಸಿದ್ದು, ಈ ಕುರಿತು ಉನ್ನತ ಮಟ್ಟದ ತನಿಖೆಗೆ ಆದೇಶಿಸಬೇಕೆನ್ನುವ ಕುರಿತು.”**

- - - - - -

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಅಂದರೆ, ಕೆಲವು ದಿನಗಳಿಂದ ಸರ್ಕಾರದಲ್ಲಿ ಒಂದು ಗೊಂದಲದ ವಾತಾವರಣವಿದೆ. ಅದು ಏನೆಂದರೆ, ನಿನ್ನೆ ಮಾನ್ಯ ಸಚಿವರಾದ ಸತೀಶ್ ಜಾರಕಿಹೊಳಿಯವರು ಒಂದು ವಿಚಾರವನ್ನು ಹೇಳಿದ್ದಾರೆ. ನಮ್ಮಲ್ಲಿ ಶ್ರೀ ಕೆ.ಎನ್. ರಾಜಣ್ಣ ಎಂಬ ಸಚಿವರಿದ್ದಾರೆ, ಅವರೂ ಸೇರಿದಂತೆ ಸುಮಾರು 48 ಜನರ ಮೇಲೆ ಈ ಹನಿಟ್ರ್ಯಾಪ್ ಆಗಿರುವಂಥದ್ದು ಇದೆ. ಇವತ್ತು ರಾಜ್ಯದಲ್ಲಿ ಪತ್ರಿಕೆಗಳನ್ನು ನೋಡಿದರೆ, ನಾವು ತಲೆ ತಗ್ಗಿಸುವಂತಹ ಪರಿಸ್ಥಿತಿ ಇದೆ. ಜನಪ್ರತಿನಿಧಿಗಳು ಜನರ ಮುಂದೆ ಹೋಗುವುದಕ್ಕೆ ಧೈರ್ಯವಿಲ್ಲ. ಹಿಂದೆ ಒಂದು ಕಾಲವಿತ್ತು. ಹಗೆತನಗಳನ್ನು ತೀರಿಸಿಕೊಳ್ಳಬೇಕಾದರೆ, some weapons were needed. ಆದರೆ, ಈಗ ಯಾವ weapons ಬೇಕಾಗಿಲ್ಲ. ಅಂದರೆ, ವ್ಯಕ್ತಿ ಸಾಯಲೂ ಬಾರದು, ಬದುಕಲು ಬಾರದು. ಅಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡತಕ್ಕಂತಹ ಈ ತಂತ್ರಗಾರಿಕೆಗಳಿಗೆ ಒಂದು ತೆರೆ ಎಳೆಯುವಂತಹ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. ಈಗ ಅದು ಎಷ್ಟು ಕೆಟ್ಟದು ಎಂದರೆ, ನಮ್ಮ ದೇಶದಲ್ಲಿ ಕತ್ತಲೆಯ ಬದುಕು ಬೇರೆ, ಬೆಳಕಿನ ಬದುಕೇ ಬೇರೆ ಇದೆ. ಅದು ಬೇರೆ ದೇಶದಲ್ಲಿ ಇರಬಹುದು. ಅವರಿಗೆ ಕತ್ತಲು ಮತ್ತು ಬೆಳಕು ಒಂದೇ ಇರಬಹುದು. ಅದು ತೆರೆದ ಸಮಾಜ. ಆದರೆ, ನಮ್ಮದು ತೆರೆದ ಸಮಾಜವಲ್ಲ. ಆ ಕಾರಣದಿಂದಾಗಿ, ನಮ್ಮಲ್ಲಿಯೇ ಯಾರ್‍ಯಾರ ಮೇಲೆ ಏನೇನು ಇದೆಯೋ ಗೊತ್ತಿಲ್ಲ. ಆದರೆ, ನಾವು ಹೊರಗಡೆ ತಲೆ ಎತ್ತಿಕೊಂಡು ಓಡಾಡಬೇಕಲ್ಲವೇ? ಆ ಕಾರಣದಿಂದ ನನಗೆ ಏನು ಅನಿಸುತ್ತದೆಂದರೆ, a thorough investigation is needed in this issue.

ಆದುದರಿಂದ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹಪಡಿಸುತ್ತೇನೆ. ಇದನ್ನು ಒಂದು ಉನ್ನತ sitting Judge ಇರಬಹುದು, ಇಲ್ಲವೆಂದರೆ, ನಾನು ಅದಕ್ಕೂ ಮೀರಿ ಹೇಳುತ್ತಿದ್ದೇನೆ. ಯಾವುದೇ ಕಾರಣಕ್ಕಾದರೂ ಮತ್ತೆ

ಪ್ರತಿಯೊಂದಕ್ಕೂ ಬಿ.ಜೆ.ಪಿ.ಯವರು ಸಿ.ಬಿ.ಐ. ಎಂದು ಕೇಳುತ್ತಾರೆ ಎಂಬ ಈ ಭಾವನೆ ಇದೆ. ಆದರೆ, ಇದರಲ್ಲಿ ನಮ್ಮ ಮೇಲಿನ ಆಪಾದನೆ ಏನೂ ಇಲ್ಲ. ಅದು ಸರ್ಕಾರದ ಒಳಗಡೆ ಇರುವುದರಿಂದ, ಮಾನ್ಯ ಮಂತ್ರಿಗಳ ಮೇಲೆಯೇ ಈ ರೀತಿಯ ವಿಷಯ ಆಗಿದೆ ಎನ್ನುವಂಥದ್ದಾದರೆ ಅವರಿಗೂ ಸಹ ನ್ಯಾಯ ಸಿಗಬೇಕಲ್ಲವೇ? ಇದು ಆ ಪಕ್ಷ, ಈ ಪಕ್ಷ ಎನ್ನುವಂತಹ ಪ್ರಶ್ನೆ ಅಲ್ಲ. ಇದು ಪ್ರತಿಯೊಬ್ಬ ಸದಸ್ಯರ ಪ್ರಶ್ನೆಯಾಗಿರುವುದರಿಂದ, ಮಾನ್ಯ ಸಚಿವರಾದ ಕೆ.ಎನ್. ರಾಜಣ್ಣನವರ ಮೇಲೆಯೇ ಅಗಿರಲಿ ಅಥವಾ ಬೇರೆ ಯಾರ ಮೇಲೆಯೇ ಆಗಿರಲಿ. ಈ ಹನಿಟ್ರ್ಯಾಪ್ ಆಗಿದ್ದರೆ, ಇದನ್ನು ಮಧುಬಲೆ ಎಂದು ಕನ್ನಡದಲ್ಲಿ ಹೇಳುತ್ತಾರೆ. ಈ ಮಧುಬಲೆಗೆ ನೀವು ಯಾರನ್ನಾದರೂ ಬೀಳಿಸುವ ತಂತ್ರಗಾರಿಕೆಯನ್ನು ಮಾಡಿ, ಹಗೆತನ ಮಾಡುವುದು. "ಮಧು" ಅಂದರೆ, ಮಧು ಬಂಗಾರಪ್ಪ ಅಲ್ಲ, ಆದುದರಿಂದ ಇವತ್ತು ಇದಕ್ಕೆ ಉತ್ತರ ಸಿಗಬೇಕಾಗಿದೆ. ದಯವಿಟ್ಟು ಅವರಿಗೇ ನ್ಯಾಯ ಸಿಗಬೇಕಾಗಿರುವ ಕಾರಣದಿಂದ ನಾವೂ ಅದಕ್ಕೂ ಕೂಡ support ಮಾಡುತ್ತೇವೆ. ಅಂದರೆ, ಅವರಿಗೆ ನ್ಯಾಯ ಸಿಗಬೇಕಾಗಿದೆ. ಈಗ ಅವರಿಗಾದರೂ ನ್ಯಾಯ ಸಿಗಬೇಕಲ್ಲವೇ ಅದಕ್ಕಾದರೂ ಸಿ.ಬಿ.ಐ.ಗೆ ನೀಡಲಿ. ಇದಕ್ಕೆ ಸಂಬಂಧಪಟ್ಟಂತೆ ತೀರ್ಮಾನ ತೆಗೆದುಕೊಳ್ಳಬೇಕು ಮತ್ತು ಸರ್ಕಾರ ಇದಕ್ಕೆ ಉತ್ತರ ಕೊಡಬೇಕು. ಇಲ್ಲವಾದರೆ ನಾವು ಇದನ್ನು ಒಪ್ಪುವುದಕ್ಕೆ ಆಗುವುದಿಲ್ಲ. ನಾವು ಇದರ ವಿರುದ್ಧ ಎಂತಹ ಹೋರಾಟಕ್ಕೂ ಸಹ ಸಿದ್ಧರಿದ್ದೇವೆ. ಏಕೆಂದರೆ, ಇದು ಸದಸ್ಯರ ಭವಿಷ್ಯ ಮತ್ತು ಗೌರವ ಮತ್ತೆ ಈ ಸದನದ ಗೌರವ ಕೂಡ ಆಗಿದೆ. ಆ ಕಾರಣದಿಂದ ಸರ್ಕಾರ ಇದಕ್ಕೆ ಉತ್ತರ ಕೊಡಬೇಕು. ಇಲ್ಲವಾದರೆ ನಾವು ದೊಡ್ಡ ಹೋರಾಟವನ್ನು ಮಾಡಬೇಕಾಗುತ್ತದೆ ಎನ್ನತಕ್ಕಂಥದ್ದನ್ನು ಹೇಳುತ್ತೇನೆ. ಮೊದಲು ಇದಕ್ಕೆ ಉತ್ತರ ನೀಡಿದ ಮೇಲೆ ಆಮೇಲೆ ಉಳಿದ ವಿಚಾರಗಳನ್ನು ತೆಗೆದುಕೊಳ್ಳೋಣ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮೀಡಿಯಾದಲ್ಲಿ ಬಂದಿರತಕ್ಕಂತಹ ವಿಷಯದ ಮೇಲೆ ಮಾತನಾಡುತ್ತಿದ್ದಾರೆ. ಅದನ್ನು ಜನರಲ್ ಆಗಿ ಯಾವುದೇ ಸದಸ್ಯರು ಮಾತನಾಡಿರಬಹುದು. ಈಗ ಅವರು ಮಾತನಾಡಿರತಕ್ಕಂಥದ್ದು ಮತ್ತು ನಾವು ನೋಡಿರತಕ್ಕಂಥದ್ದರ ಬಗ್ಗೆ ಏನೂ ಹೇಳುತ್ತಿಲ್ಲ. ಅವರು ಯಾವುದೋ ಒಂದು ಹೆಸರು ಹೇಳುತ್ತಿದ್ದಾರೆ. ಅದು ಅವರಿಗೆ ಗೊತ್ತಿಲ್ಲ. ಇದು ಬಿ.ಜೆ.ಪಿ.ಯವರ ಮೇಲೆಯೂ ಇದೆ. ಈ ಕಡೆಯೂ ಇದೆ ಮತ್ತೆ ಎಲ್ಲರ ಕಡೆಯೂ ಸಹ ಇದೆ ಎಂಬ ಮಾತನ್ನು ಅವರು ಹೇಳಿದ್ದಾರೆ. ಹಾಗಾಗಿ, ಈಗಾಗಲೇ ಅದಕ್ಕೆ ಅದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡಿದೆ. ಈಗಾಗಲೇ ಮಾನ್ಯ ಗೃಹಸಚಿವರು ಅದರ ಬಗ್ಗೆ thorough enquiry ಮಾಡಿಸುತ್ತೇವೆ ಎಂಬ ಮಾತನ್ನು ಸದನದಲ್ಲಿ ಹೇಳಿದ್ದಾರೆ. ಹಾಗಾಗಿ, ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡಿದೆ. ಅದನ್ನು ಗೃಹ ಇಲಾಖೆಯವರು enquiry ಮಾಡಿದ ನಂತರ ಅದರ ಮಾಹಿತಿ ನೀಡುತ್ತೇನೆ.

**ಸಭಾಪತಿಯವರು:-** ಈ ವಿಷಯವಾಗಿ enquiry ನಡೆಯುತ್ತಿದೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಲ್ಲಿ...

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು...**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ಕೆಳಮನೆಯಲ್ಲಿ ದೊಡ್ಡ ರಾದ್ಧಾಂತವಾಗಿದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೆ, ತಾವು ಒಂದು ನಿಮಿಷ ಕುಳಿತುಕೊಳ್ಳಿ. ತಾವು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಅದಕ್ಕೆ ಸರ್ಕಾರದಿಂದ ಉತ್ತರ ಬಂತು. ಈಗ ಅದನ್ನು ಮತ್ತೆ ಏಕೆ ಬೆಳೆಸುತ್ತಿದ್ದೀರಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅದಕ್ಕೆ ಉತ್ತರ ಕೊಡಬೇಕಾಗಿತ್ತು. ಇದನ್ನು ಹಾದಿಯಲ್ಲಿ ಮಾತನಾಡಿರುವುದು ಅಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ವಿಧಾನ ಸಭೆಯಲ್ಲಿ Minister statement ನೀಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೆ, ತಾವು ಮಧ್ಯದಲ್ಲಿ ಎದ್ದೆದ್ದು ಮಾತನಾಡಿದರೆ, ನಾನು ಕೇಳುವುದಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾವು ತಮ್ಮ ಅನುಮತಿ ಕೇಳುತ್ತಿದ್ದೇವೆ. ಇದು ಗಂಭೀರವಾದ ವಿಷಯವಾಗಿದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೆ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ ತಾವು ಮಾತನಾಡುವುದೇ?

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಅನುಮತಿ ಕೇಳಿಯೇ ಮಾತನಾಡುತ್ತಿದ್ದೇನೆ.

**(ಗೊಂದಲ)**

**ಸಭಾಪತಿಯವರು:-** ನಾನು ಮಾತನಾಡಿ ಎಂದಾಗ ತಾವು ಮಾತನಾಡಿ. ಮಾನ್ಯ ಸಭಾನಾಯಕರೆ ಸರ್ಕಾರದ ಸ್ಪಷ್ಟ ನಿರ್ಧಾರ ಏನೆಂದು ಹೇಳಿ.

**ಶ್ರೀ ಕೃಷ್ಣ ಭೈರೇಗೌಡ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹ ಸಚಿವರು ಇಬ್ಬರೂ ಸಹ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಸರ್ಕಾರ ಇದರ ಬಗ್ಗೆ ಉನ್ನತ ಮಟ್ಟದ ತನಿಖೆಯನ್ನು ಮಾಡುತ್ತದೆ. ಈಗ ಯಾರು ತಪ್ಪಿತಸ್ಥರು ಇದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ನಾವು ಸರ್ಕಾರದ ಸ್ಪಷ್ಟ ಹೇಳಿಕೆಯನ್ನು already ಹೇಳಿದ್ದೇವೆ.

**(ಮುಂದು)**

**(557) 21.03.2025 10.50 ಎಸ್‌ವಿ-ಬಿಎನ್‌ಎಸ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೃಷ್ಣ ಬೈರೇಗೌಡ (ಮುಂದು):-**

ಹಾಗಾಗಿ ಇದನ್ನು ಬದಿಗಿಡುವುದಾಗಲೀ, ಮುಚ್ಚಿಡುವುದಾಗಲೀ, ಮತ್ತೊಂದೇನಾದರೂ ಮಾಡುವುದಾಗಲೀ ಇಲ್ಲ. ಏನಾದರೂ ಸತ್ಯಾಂಶ ಇದ್ದರೆ ತನಿಖೆಯಿಂದ ಹೊರತರುತ್ತೇವೆ. ಅದನ್ನು ರಾಜ್ಯದ ಜನತೆಗೂ ಒಪ್ಪಿಸುತ್ತೇವೆ. ಅದರ ಮೇಲೆ ಕ್ರಮವನ್ನೂ ತೆಗೆದುಕೊಳ್ಳುತ್ತೇವೆ. ಇದರಲ್ಲಿ ಯಾರಿಗೂ ಅನುಮಾನ ಬೇಡ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ಇಬ್ಬರೂ ಹೇಳಿದ್ದಾರೆ. ಇದು ನಾನು ಹೇಳುತ್ತಿರುವ ಮಾತಲ್ಲ. ಹಾಗಾಗಿ ಇದರ ಬಗ್ಗೆ ವಿರೋಧ ಪಕ್ಷದವರಿಗೆ ಯಾವುದೇ ಆತಂಕವೂ ಬೇಡ, ಅನುಮಾನವೂ ಬೇಡ. ಜನರಿಗೆ ಸತ್ಯವನ್ನು ತಿಳಿಸುತ್ತೇವೆ.

**ಸಭಾಪತಿಯವರು:-** Enquiry ಮಾಡುತ್ತೀರಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಗೆ ಬಂದು ಅದರ ಬಗ್ಗೆ ಉತ್ತರ ಕೊಡಬೇಕು.

**ಸಭಾಪತಿಯವರು:-** ಆಯಿತು, ಹೇಳುತ್ತೇನೆ.

**3) ವಿತ್ತೀಯ ಕಾರ್ಯಕಲಾಪ**

**2025-26ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ**

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ. ಅವರು ಬಜೆಟ್ ಅನ್ನು ಮಂಡನೆ ಮಾಡಿದ್ದನ್ನು ನೋಡಿ ಉತ್ತರ ಕರ್ನಾಟಕದ ಜನರಾದ ನಾವು ವಿಶೇಷವಾಗಿ ಸ್ವಾಗತ ಮಾಡುತ್ತಿದ್ದೇವೆ. ಇವತ್ತಿನ ಪೇಪರ್‌ನಲ್ಲಿ "ವಿರೋಧ ಪಕ್ಷಗಳ ಟೀಕೆಗಳಿಗೆ ತಲೆ ಕೆಡಿಸಿಕೊಳ್ಳಬಾರದು. ಟೀಕೆಗಳಿಗೆ ಎಷ್ಟೇ ಸಮಜಾಯಿಷಿ ಕೊಟ್ಟರೂ ಅದರಿಂದ ಜನರಿಗೆ ಮನವರಿಕೆಯಾಗುವುದಿಲ್ಲ. ನಿಮ್ಮ ಸಾಧನೆ ಉತ್ತರವಾಗುತ್ತದೆ" ಎಂದು ಬಂದಿದೆ. ವಿರೋಧ ಪಕ್ಷದವರು ನಮ್ಮ ಮುಖ್ಯಮಂತ್ರಿಯವರ ಮೇಲೆ, ನಮ್ಮ ಸರ್ಕಾರದ ಮೇಲೆ ಎಷ್ಟೇ ಟೀಕೆ ಮಾಡಿದರೂ ಕೂಡ ಅದಕ್ಕೆ ಸಕಾರಾತ್ಮಕವಾಗಿ ನಮ್ಮ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಆ ದೃಷ್ಟಿಯಿಂದ ಅದರ ಬಗ್ಗೆ ಹೆಚ್ಚು ಚರ್ಚೆ ಮಾಡುವ ಅವಶ್ಯಕತೆಯಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಮ್ಮ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳು ಉಪಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರಾಗಿದ್ದಾಗ ಒಂದು ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡಿ ಬಡ ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲ ಮಾಡಿಕೊಟ್ಟಿದ್ದಾರೆ ಎಂದು ಮೆಡಿಕಲ್ ಕಾಲೇಜಿನಲ್ಲಿ ಸೀಟು ಪಡೆದವರು ಮತ್ತು ಅದಕ್ಕಿಂತ ಹೆಚ್ಚಿನ ಸ್ಥಾನವನ್ನು ಪಡೆದಿರುವವರು ಪ್ರತಿದಿನ ಹೇಳುತ್ತಾರೆ. ನಮ್ಮ ಬೆಳಗಾವಿಯಲ್ಲಿ ತಾವು ಮಾಡಿಕೊಟ್ಟಿರುವ ಮೆಡಿಕಲ್ ಕಾಲೇಜಿನಿಂದ ಬಡ ಮಕ್ಕಳಿಗೆ ತುಂಬಾ ಅನುಕೂಲವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಮಾನ್ಯ ಡಾ: ಶರಣಪ್ರಕಾಶ್ ಪಾಟೀಲ್‌ರವರ ಗಮನಕ್ಕೆ ಕೂಡ ನಾವು ತಂದಿದ್ದೇವೆ. ಚಿಕ್ಕೋಡಿಯಲ್ಲಿ ಒಂದು ಕ್ಯಾನ್ಸರ್ ಆಸ್ಪತ್ರೆಯನ್ನು ಮಂಜೂರು ಮಾಡಬೇಕೆಂದು ನಾವು ಕೇಳಿಕೊಂಡಿದ್ದೇವೆ. ಕಳೆದ ಮೂರು ವರ್ಷಗಳಿಂದ ಮಾನ್ಯ ಮುಖ್ಯಮಂತ್ರಿಯವರ ಬಳಿ ವಿನಂತಿ ಮಾಡಿಕೊಳ್ಳುತ್ತಿದ್ದೇವೆ. ನಮ್ಮಲ್ಲಿ ಹೆಚ್ಚಿನ ಪ್ರಮಾಣದ ಕ್ಯಾನ್ಸರ್ ರೋಗಿಗಳಿರುವುದರಿಂದ, ಅವರು ಔಷಧೋಪಚಾರಕ್ಕಾಗಿ ಮಹಾರಾಷ್ಟ್ರದ ಕೊಲ್ಹಾಪುರ, ಮೀರಜ್, ಸಾಂಗ್ಲಿ ಆಸ್ಪತ್ರೆಗಳಿಗೆ ಹೋಗಿ ಸಾಕಷ್ಟು ಖರ್ಚು ಮಾಡಿ ಬರುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವಾಗ ಈ ಕ್ಯಾನ್ಸರ್ ಆಸ್ಪತ್ರೆಯ ಬಗ್ಗೆ ನಾನಾಗಲೀ ಅಥವಾ ಮಾನ್ಯ ಗಣೇಶ್ ಹುಕ್ಕೇರಿಯವರಾಗಲೀ ಸ್ವಂತ ಮನವಿಯನ್ನು ಕೊಟ್ಟು ಈ ಬಜೆಟ್‌ನಲ್ಲಿ ಘೋಷಣೆ ಮಾಡಿ ಹಣ ಒದಗಿಸಬೇಕೆಂದು ಕೇಳಿದ್ದೆವು. ತಾವು ಘೋಷಣೆ ಮಾಡಿದರೆ 10 ಎಕರೆ ಜಮೀನನ್ನು ಕ್ಯಾನ್ಸರ್ ಆಸ್ಪತ್ರೆಗಾಗಿ ಕೊಡುತ್ತೇವೆಂದು ಹೇಳಿದ್ದೆವು. ಈ ಬಜೆಟ್ ಪುಸ್ತಕವನ್ನು ನೋಡಿದ ಮೇಲೆ ಆ ಕ್ಯಾನ್ಸರ್ ಆಸ್ಪತ್ರೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಪ್ರಸ್ತಾಪಿಸಿರುವುದಿಲ್ಲ ಎಂದು ತಿಳಿಯಿತು.

ಮಹಾರಾಷ್ಟ್ರವು ನಮಗೆ ಕಾಳಮ್ಮವಾಡಿ ಅಣೆಕಟ್ಟಿನಿಂದ ನಮಗೆ ಪ್ರತಿವರ್ಷ 4 ಟಿಎಂಸಿ ನೀರು ಬಿಡಬೇಕು. ಹಿಂದೆ ಮಾನ್ಯ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ ಮಹಾರಾಷ್ಟ್ರ ಮತ್ತು ಕರ್ನಾಟಕ ಸರ್ಕಾರಗಳ ಒಪ್ಪಂದದ

ಮೇರೆಗೆ ಕಾಳಮ್ಮವಾಡಿ ಅಣೆಕಟ್ಟಿನಿಂದ ನಮಗೆ 4 ಟಿಎಂಸಿ ನೀರು ಬಿಡಬೇಕು. ಆದರೆ ಪ್ರತಿವರ್ಷ ಮಹಾರಾಷ್ಟ್ರ ಸರ್ಕಾರದವರು ಏನೋ ಒಂದು ಕುಂಟುನೆವ ಹೇಳಿ ವೇದಗಂಗಾ ಹಾಗೂ ದೂಧ್‌ಗಂಗಾ ನದಿಗಳಿಗೆ 4 ಟಿಎಂಸಿ ನೀರನ್ನು ಬಿಡುತ್ತಿಲ್ಲ. ಸಮರ್ಪಕವಾಗಿ ನೀರು ಬಿಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಕ್ಯಾನ್ಸರ್ ಆಸ್ಪತ್ರೆ ಮಾಡಬೇಕು ಮತ್ತು ಕಾಳಮ್ಮವಾಡಿ ಅಣೆಕಟ್ಟಿನಿಂದ ಸರಿಯಾಗಿ ನಮಗೆ ನೀರನ್ನು ಬಿಡಬೇಕೆಂದು ಸರ್ಕಾರಕ್ಕೆ ಮತ್ತು ಮಾನ್ಯ ಮುಖ್ಯಮಂತ್ರಿಯವರಿಗೆ ವಿಶೇಷವಾಗಿ ಮನವಿ ಮಾಡಿಕೊಳ್ಳುತ್ತೇನೆ. ನಾನು ಹೆಚ್ಚಾಗಿ ಏನೂ ಮಾತನಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಒಳ್ಳೆಯ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ. ನಮ್ಮ ಉತ್ತರ ಕರ್ನಾಟಕದವರದ್ದು ಒಂದು ಆಸೆ ಇದೆ. ಏನೆಂದರೆ ಚಿಕ್ಕೋಡಿ ಜಿಲ್ಲೆ ಆಗಬೇಕು. ಬೆಳಗಾವಿ ಜಿಲ್ಲೆಯಲ್ಲಿ 15 ತಾಲ್ಲೂಕುಗಳಿದ್ದು, 18 ಜನ ಶಾಸಕರಿದ್ದಾರೆ. ಇದು ದೊಡ್ಡ ಜಿಲ್ಲೆಯಾಗಿದ್ದು, ನಾವು ಹಲವಾರು ವರ್ಷಗಳಿಂದ ಚಿಕ್ಕೋಡಿಯನ್ನು ಜಿಲ್ಲೆಯಾಗಿ ಘೋಷಣೆ ಮಾಡಿ ಎಂದು ಕೇಳುತ್ತಿದ್ದೇವೆ. ಪ್ರತಿ ಬಾರಿ ಮುಖ್ಯಮಂತ್ರಿಯವರು ಬೆಳಗಾವಿಗೆ ಬಂದಾಗ ನಾವೆಲ್ಲಾ ಶಾಸಕರು ಅವರನ್ನು ಭೇಟಿಯಾದಾಗ ಹೇಳುತ್ತಾರೆ. ಎಲ್ಲಾ ಶಾಸಕರನ್ನು ಕರೆದು ಮಾತನಾಡಿ, ಚಿಕ್ಕೋಡಿ ಜಿಲ್ಲೆ ಮಾಡುವುದು ಅವಶ್ಯಕವಿದೆ ಎನ್ನುವ ತಮ್ಮ ವಿಚಾರವನ್ನು ವ್ಯಕ್ತ ಮಾಡುತ್ತಾರೆ. ಆದರೆ ಇಲ್ಲಿ ಬೆಂಗಳೂರಿಗೆ ಬಂದಾಗ ಆ ವಿಚಾರವನ್ನು ಬಿಟ್ಟುಬಿಡುತ್ತಾರೆ. ಕಾರಣವೇನೆಂಬುದು ನಮಗೆ ಗೊತ್ತಿಲ್ಲ. ಬೆಳಗಾವಿ ಜಿಲ್ಲೆಯಲ್ಲಿ ನೀವು ಚಿಕ್ಕೋಡಿ ಜಿಲ್ಲೆ ಮಾಡಿ, ಗೋಕಾಕ ಜಿಲ್ಲೆ ಮಾಡಿ, ಬೈಲಹೊಂಗಲ ಜಿಲ್ಲೆ ಮಾಡಿ; ನಮ್ಮದೇನೂ ತಕರಾರಿಲ್ಲ. ಆದರೆ ಚಿಕ್ಕೋಡಿಯನ್ನು ಜಿಲ್ಲೆ ಮಾಡುವುದು ಅತ್ಯಂತ ಅವಶ್ಯಕವೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಅಥಣಿ ತಾಲ್ಲೂಕಿನ ಗಡಿಯಿಂದ ಜನರು ಜಿಲ್ಲಾಧಿಕಾರಿಗಳ ಕಛೇರಿಗೆ ಏನಾದರೂ ಕೆಲಸ ಮಾಡಿಕೊಳ್ಳಲಿಕ್ಕೆ ಬರಬೇಕಾದರೆ ಸುಮಾರು 190 ಕಿ.ಮೀ. ಕ್ರಮಿಸಿ ಬೆಳಗಾವಿಗೆ ಬರಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಸರ್ಕಾರಕ್ಕೆ ಪದೇ ಪದೇ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಯಾವಾಗೆಲ್ಲಾ ಬೆಂಗಳೂರಿನಲ್ಲಿ ಅಥವಾ ಬೆಳಗಾವಿಯಲ್ಲಿ ಸದನ ಚಾಲೂ ಆಗುತ್ತದೆಯೋ, ಆಗ ಚಿಕ್ಕೋಡಿಯಲ್ಲಿ ಉಪವಾಸ ಪ್ರಾರಂಭವಾಗುತ್ತದೆ. ನಮ್ಮ ಸದನ ಮುಗಿಯುವವರೆಗೆ ಉಪವಾಸವನ್ನು ಅಲ್ಲಿನ ಜನರು ಮಾಡುತ್ತಿದ್ದಾರೆ. ಚಿಕ್ಕೋಡಿಯಲ್ಲಿ ಎಲ್ಲಾ ಕಛೇರಿಗಳೂ ಇರುವುದರಿಂದ ಚಿಕ್ಕೋಡಿ ಜಿಲ್ಲೆಯಾಗುವುದಕ್ಕೆ ಜನರ ಬೇಡಿಕೆಯಿರುವುದರಿಂದ ಅದನ್ನು ಒಂದು ಜಿಲ್ಲೆಯಾಗಿ ಘೋಷಣೆ ಮಾಡಬೇಕು. ಚಿಕ್ಕೋಡಿಯಲ್ಲಿ ಒಂದು ಕ್ಯಾನ್ಸರ್ ಆಸ್ಪತ್ರೆಯನ್ನು ಮಂಜೂರು ಮಾಡಿದರೆ ಅದಕ್ಕೆ 10 ಎಕರೆ ಜಮೀನನ್ನು ನಾವು ಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಿ, ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಪತಿಯವರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. 2025-26ನೇ ಆಯವ್ಯಯ ಕುರಿತಂತೆ 3 ದಿನಗಳಿಂದ ಸದನದಲ್ಲಿ ವಿಸ್ತೃತವಾದ ಚರ್ಚೆ ನಡೆಯುತ್ತಿದೆ, ವೈವಿಧ್ಯಮಯ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಸಾಮಾನ್ಯವಾಗಿ ಯಾವುದೇ ಸರ್ಕಾರ ಆಯವ್ಯಯ

ಮಂಡಿಸಿದಾಗ ಆಡಳಿತ ಪಕ್ಷದವರು ಅದನ್ನು ಸಮರ್ಥಿಸಿ, ವೈಭವೀಕರಿಸುವುದು; ವಿರೋಧ ಪಕ್ಷದವರು ಅದರಲ್ಲಿ ಯಾವುದೇ ಗುಣಾತ್ಮಕ ಅಂಶ ಕಾಣಿಸಲಿಲ್ಲ ಎಂದು ದೂರುವುದು, ಟೀಕೆ ಮಾಡುವುದು ಸಾಂಪ್ರದಾಯಿಕವಾಗಿ ನಡೆದುಬಂದಿದೆ. ಇಂಥ ಅಭಿಪ್ರಾಯಗಳು ವ್ಯಕ್ತವಾಗುವ ಸಂದರ್ಭದಲ್ಲಿ ಪರ-ವಿರೋಧ ಎನ್ನುವ ಪೂರ್ವಾಗ್ರಹಗಳ ಹಿನ್ನೆಲೆಯಿಲ್ಲದೆ ವಸ್ತುನಿಷ್ಠವಾಗಿ ಅಭಿಪ್ರಾಯಗಳು ವ್ಯಕ್ತವಾದರೆ ಅಂಥ ಅಭಿಪ್ರಾಯಗಳಿಗೆ ಸಾರ್ವಜನಿಕರಿಂದ, ಮಾಧ್ಯಮದಿಂದ ವಿಶ್ವಾಸಾರ್ಹತೆ ಹೆಚ್ಚುತ್ತದೆ ಎನ್ನುವುದು ನನ್ನ ಭಾವನೆ.

ಮಾನ್ಯ ಸಿದ್ಧರಾಮಯ್ಯನವರ ಐತಿಹಾಸಿಕ 16ನೇ ಬಜೆಟ್ ಮಂಡನೆ ಸಂದರ್ಭದಲ್ಲಿ ಬೇರೆಯವರಿಗೆ ಯಾವ ರೀತಿಯಿತ್ತೋ ಗೊತ್ತಿಲ್ಲ, ನನಗಂತೂ ಒಂದು ಆತಂಕವಿತ್ತು. ಏಕೆಂದರೆ ಗ್ಯಾರಂಟಿ ಯೋಜನೆಯಂಥ ಒಂದು ದೊಡ್ಡ ಪ್ರಯೋಗ ನಮ್ಮ ಕರ್ನಾಟಕದಲ್ಲಿ ನಡೆದಿತ್ತು. ಇದು ದೇಶದಲ್ಲಿ ಪ್ರಥಮ ಬಾರಿಗೆ ಆಗಿತ್ತು. ನವದೆಹಲಿಯಲ್ಲಿ ಬಂದಿದ್ದ ಗ್ಯಾರಂಟಿ ಸ್ಕೀಮ್ ಅಥವಾ freebies ಇಷ್ಟು ಗಾತ್ರದಲ್ಲಿ ಇರಲಿಲ್ಲ.

(ಮುಂದು)

**(558) 21-03-2025/11.00/ಎಂವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಹೆಚ್.ಪಿ.ಸುಧಾಮ್ ದಾಸ್ (ಮುಂದು):-**

ಇದು ಒಂದು ಅತಿ ದೊಡ್ಡ ಸಾಮಾಜಿಕ ಕಲ್ಯಾಣ ಯೋಜನೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಏನು self impose ಮಾಡಿಕೊಂಡಿದೆಯೋ regarding financial discipline ಅದರ ಚೌಕಟ್ಟಿನೊಳಗೆ ಬಜೆಟ್ ಮಂಡಿಸಿರುವುದು ಅಲ್ಲದೆ, ಯಾವುದೇ ಹೊಸ ತೆರಿಗೆಗಳ ಪ್ರಸ್ತಾವನೆ ಇಲ್ಲದೆ, ಕೆಲವು ಇಲಾಖೆಗಳಿಗೆ ಹೊಸತನದ ಸ್ಪರ್ಷ ಕೊಟ್ಟು, ತಮ್ಮ ಅನುಭವವನ್ನು ಸಮರ್ಪಕವಾಗಿ ಬಳಸಿಕೊಂಡಿದ್ದಾರೆ. ರಾಜ್ಯಕ್ಕೆ ಅವರ ಅನುಭವದ ಉಪಯೋಗವಾಗಿದೆ. ಅದರಲ್ಲೂ ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಸಂದರ್ಭದಲ್ಲಿ ಆರ್ಥಿಕ ಇಲಾಖೆಯ ಜವಾಬ್ದಾರಿ ಹೊತ್ತಿರುವಂತಹವರಿಗೆ ಮಾತ್ರ ಗೊತ್ತಿರುತ್ತದೆ. ಅಂದರೆ, ಇದರ ಒತ್ತಡದ ತೀವ್ರತೆ ಎಷ್ಟು ಇರುತ್ತದೆ ಎಂದು. ಇಂತಹ ಸಂದರ್ಭದಲ್ಲಿಯೂ ಕೂಡ ರಾಜ್ಯದ ಆದಾಯ 2,92,647/- ಕೋಟಿ ರೂಪಾಯಿಗಳಷ್ಟು ಬೆಳದಿರುವುದು ನಮ್ಮ ಮಾನ್ಯ ಮುಖ್ಯಮಂತ್ರಿಗಳ ದೂರದೃಷ್ಟಿಯ ಫಲ ಎನ್ನುವುದರಲ್ಲಿ ನನಗಂತೂ ಯಾವುದೇ ರೀತಿಯ ಅನುಮಾನವಿಲ್ಲ. ಮುಂದಿನ ಆಯವ್ಯಯ ಮಂಡನೆಯ ಹೊತ್ತಿಗೆ ಏನು fiscal deficit, revenue deficit ಇದೆಯೋ, ಈ ಎರಡನ್ನೂ ಮೀರಿ ಸಾಲದ ಪ್ರಮಾಣದಲ್ಲೂ ಕೂಡ ಬಹಳ ನಿಯಂತ್ರಣ ಸಾಧಿಸಿ ರಾಜ್ಯದ ಆರ್ಥಿಕತೆ ಸಾಲದ ಕಾರ್ಮೋಡದ ಹೊರಗಡೆ ಇರುವ ರೀತಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಎಚ್ಚರ ವಹಿಸುತ್ತಾರೆ ಎನ್ನುವಂತಹ ಭರವಸೆ ನನಗಂತೂ ಸಂಪೂರ್ಣವಾಗಿದೆ. ಆಯವ್ಯಯ ಕುರಿತಂತೆ ಅಭಿಪ್ರಾಯ ಸಲ್ಲಿಕೆಯಾಗುವ ಸಂದರ್ಭದಲ್ಲಿ ಈಗಾಗಲೇ ಚರ್ಚೆಯಾಗಿರುವ ಅಂಕಿ-ಅಂಶಗಳ ಬಗ್ಗೆ ನಾನು ಮತ್ತೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಅದರಲ್ಲಿ ಬಹಳ ತೀವ್ರತರವಾದ ಚರ್ಚೆಗೆ ಗುರಿಯಾಗಿರುವುದು ನಮ್ಮ ಮಾನ್ಯ ಮುಖ್ಯಮಂತ್ರಿಗಳ ಮಹತ್ವಾಕಾಂಕ್ಷೆಯ ಕಲ್ಯಾಣ ಯೋಜನೆಯಾಗಿರುವ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆ

ಕುರಿತು. ಶೋಷಿತರ ಮತ್ತು ಸಾಮಾಜಿಕವಾಗಿ ದುರ್ಬಲವಾಗಿರುವ ಸಮುದಾಯ ಕುರಿತಂತೆ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಬದ್ಧತೆಯನ್ನು ಯಾರೂ ಕೂಡ ಪ್ರಶ್ನೆ ಮಾಡುವುದಕ್ಕೆ ಸಾಧ್ಯವಿಲ್ಲ. ನಾನು ವಿರೋಧ ಪಕ್ಷದವರನ್ನು ಒಳಗೊಂಡು ಈ ಮಾತನ್ನು ಹೇಳುತ್ತಿದ್ದೇನೆ. ಅವರೂ ಕೂಡ ಯಾವುದೇ ಸಂದರ್ಭದಲ್ಲಿಯೂ ಕೂಡ ಈ ಬಗ್ಗೆ ಶಂಕೆ ವ್ಯಕ್ತಪಡಿಸಲಿಲ್ಲ. ಅಷ್ಟರಮಟ್ಟಿಗೆ ಅಭಾದಿತವಾದ ಬದ್ಧತೆಯನ್ನು ಕಾಯ್ದುಕೊಂಡಿದ್ದಾರೆ. ಅವರ ಬದ್ಧತೆ ಕೇವಲ ಎಸ್.ಸಿ./ಎಸ್.ಟಿ. ಸಮುದಾಯಗಳಿಗೆ ಸಂಬಂಧಿಸಿದಂತೆ ಕಾನೂನು ಜಾರಿಗೆ ತರುವುದಕ್ಕೆ ಮಾತ್ರ ಸೀಮಿತಗೊಂಡಿಲ್ಲ. ಅವರಿಗೆ ಸಂಬಂಧಿಸಿದ ಅವರ ರಕ್ಷಣೆ, ಕಲ್ಯಾಣ ಕುರಿತಂತೆ ಅನೇಕ ಕಾಯಿದೆಗಳನ್ನು ಕೂಡ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರ ವೈಯಕ್ತಿಕ ಆಸಕ್ತಿಯಿಂದ ಬಂದಿದೆ. ಅದು DCRE (Directorate of Civil Rights Enforcement) ಇರಬಹುದು, P.T.S. ಗೆ ಸಂಬಂಧಿಸಿದಂತೆ ತಿದ್ದುಪಡಿ ಇರಬಹುದು. ಇನ್ನಿತರೆ ಕಾಯಿದೆಗಳು ಇರಬಹುದು. ಈಗ ಅದರಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಕಾಯಿದೆ ಕುರಿತಂತೆ ಉಂಟಾಗುತ್ತಿರುವ ಚರ್ಚೆ ಬಗ್ಗೆ ನಾನು ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಬಹಳಷ್ಟು ಕಾಲದಿಂದ ದೇಶದ ಯೋಜನಾ ಆಯೋಗ ಅನೇಕ ವಾಸ್ತವಿಕ ವಿಮರ್ಶೆ ನಡೆಸಿ, ದೇಶದ ಅಭಿವೃದ್ಧಿ ಆಗಬೇಕು ಎಂದರೆ, ಶೋಷಿತ ಸಮುದಾಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಶೇಷ ಕಾಳಜಿ ವಹಿಸಿ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸದ ಹೊರತು ಅಭಿವೃದ್ಧಿಯ ಕನಸು ಕಾಣುವುದಕ್ಕೆ ಸಾಧ್ಯವಿಲ್ಲ ಎನ್ನುವ ಅಭಿಪ್ರಾಯಪಟ್ಟ ಹಿನ್ನೆಲೆಯಲ್ಲಿ 1975ರಲ್ಲಿಯೇ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಶ್ರೀಮತಿ ಇಂದಿರಾ ಗಾಂಧಿಯವರ ಕಾಲದಲ್ಲಿ ಈ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಕಾಯಿದೆಯ ಸ್ವರೂಪ ಜಾರಿಗೆ ಬಂತು. ಯೋಜನಾ ಆಯೋಗದ ಈ ಶಿಫಾರಸ್ಸಿನ ಸಾರಾಂಶದ ಅನ್ವಯ ಮಾನ್ಯ ಮುಖ್ಯಮಂತ್ರಿಗಳು ಕೂಡ ಎಸ್.ಸಿ./ಎಸ್.ಟಿ. ಸಮುದಾಯಗಳಿಗೆ ಸಂಬಂಧಿಸಿದಂತೆ ತರಲಾಗುತ್ತಿರುವ ಕಾಯಿದೆಗೆ ಸಂಬಂಧಪಟ್ಟಂತೆ ಕಾನೂನಿನ ಚೌಕಟ್ಟು ರೂಪಿಸುವುದಕ್ಕೆ ಹೆಜ್ಜೆ ಇಟ್ಟು, 2013ರ ನವೆಂಬರ್ ತಿಂಗಳಿನ ಬೆಳಗಾವಿಯಲ್ಲಿ ಪ್ರಸ್ತಾಪವನ್ನು ಮಂಡಿಸಿದರು. ದಿನಾಂಕ 20.03.2014ರಲ್ಲಿ ಈ ಕಾಯಿದೆ ಜಾರಿಗೆ ಬಂತು. ಅಂದರೆ, ಮೊನ್ನೆಗೆ ಸುಮಾರು 11 ವರ್ಷಗಳಾಗಿದೆ. 2014-15ನೇ ಸಾಲಿನಿಂದ 2024-25 ಸಾಲಿನವರೆಗೆ ರಾಜ್ಯ ಸರ್ಕಾರ ಎಸ್.ಸಿ./ಎಸ್.ಟಿ. ಸಮುದಾಯಕ್ಕೆ ನೀಡಿರುವ ಒಟ್ಟು ಅನುದಾನ, ಅಂದರೆ ಪ್ರಸ್ತುತ ಸಾಲಿನ ಆಯವ್ಯಯದ ಸಂಖ್ಯೆಗಳನ್ನು ಹೊರತುಪಡಿಸಿ ಹೇಳುವುದಾದರೆ, ಅದು ಸುಮಾರು 2,94,963/- ಕೋಟಿ ರೂಪಾಯಿಗಳು. ಈ ಹಣದಲ್ಲಿ ಎಸ್.ಸಿ/ಎಸ್.ಟಿ. ಜನಸಂಖ್ಯೆ ಅದರಲ್ಲಿ Below Poverty Line (BPL) ನಮ್ಮ ಸರ್ಕಾರದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯಿಂದ ಹೊರಡಿಸಲಾಗಿರುವ ಜನಸಂಖ್ಯೆ 85,05,688 BPL card ಹೊಂದಿರುವ ಎಸ್.ಸಿ./ಎಸ್.ಟಿ. ಸಮುದಾಯದ ಜನಸಂಖ್ಯೆ. ನಮ್ಮ ರಾಜ್ಯದ ಯೋಜನಾ ಮತ್ತು ಸಾಂಖ್ಯಿಕ ಇಲಾಖೆಯ ಅನ್ವಯ ಒಂದು ಸಂಸಾರದಲ್ಲಿ ಶೇಕಡಾ 4.71 ಸದಸ್ಯರು ಇರುತ್ತಾರೆ. ಹಾಗಾದರೆ, ಬಿ.ಪಿ.ಎಲ್. ಸಮುದಾಯವನ್ನು ಸಂಸಾರದ ಸಂಖ್ಯೆಯಲ್ಲಿ ನೋಡುವುದಾದರೆ, 18,09,719 ಕುಟುಂಬಗಳು ಬಿ.ಪಿ.ಎಲ್. ವ್ಯಾಪ್ತಿಯಲ್ಲಿ ಬರುತ್ತಾರೆ. ಒಂದು ಆಸಕ್ತಿದಾಯಕವಾದ ಅಂಕಿ-ಅಂಶಗಳನ್ನು ಹೇಳಬೇಕು ಎಂದರೆ, 2014-15 ರಿಂದ 2024-25ರ ಒಳಗಡೆ ನಮ್ಮ ರಾಜ್ಯ ಸರ್ಕಾರ ಆಯವ್ಯಯದ ಹಣವನ್ನು ನೇರವಾಗಿ ಈ ಬಿ.ಪಿ.ಎಲ್.

ಸಂಸಾರಗಳಿಗೆ ಒದಗಿಸಿದೆ ಎಂದರೆ, ಒಂದೊಂದು ಸಂಸಾರಕ್ಕೆ 16.3 ಲಕ್ಷ ಹಣ ನೇರವಾಗಿ ಹೊರಟು ಹೋಗುತ್ತಿತ್ತು. ಒಂದು ವೇಳೆ ಇದು ಏನಾದರೂ ಜಾರಿಗೆ ಬಂದಿದ್ದರೆ, ಮಾನ್ಯ ಸಚಿವರಾದ ಶ್ರೀ ಕೆ.ಹೆಚ್.ಮುನಿಯಪ್ಪನವರು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯವರು ಕೊಡುವ ಅಕ್ಕಿಯನ್ನು ತೆಗೆದುಕೊಳ್ಳುವುದಕ್ಕೂ ಅರ್ಹತೆ ಬರುತ್ತಿರಲಿಲ್ಲ. ಈ ಅನುದಾನದ ಜೊತೆಗೆ ಅವರ ಕುಲಕಸಬು, ಉದ್ಯೋಗ, ಅವರ ಶ್ರಮ ಮತ್ತು ಅವರ ಕೂಲಿಯ ಸಂಪಾದನೆಗಳು ಸೇರಿಕೊಂಡಿದ್ದರೆ, ಯಾವಾಗಲೋ ಎಲ್ಲರೂ ಕರ್ನಾಟಕದಲ್ಲಿ ಈ ಬಿ.ಪಿ.ಎಲ್. ಕೆಳಗಡೆ ಯಾವುದೇ ಎಸ್.ಸಿ./ಎಸ್.ಟಿ. ಸಮುದಾಯಗಳು ಇರುತ್ತಿರಲಿಲ್ಲ.

(ಮುಂದು)

**(559) 21.03.2025 11.10 LL-KS (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಹೆಚ್.ಪಿ ಸುಧಾಮ್ ದಾಸ್ (ಮುಂದು):**

ಆದರೆ, ದುರದೃಷ್ಟಕರ ಎಂದರೆ ಪರಿಸ್ಥಿತಿ ಆ ರೀತಿ ಇರುವುದಿಲ್ಲ. ಸರ್ಕಾರ ಈ ಹಣವನ್ನು 34 ಇಲಾಖೆಗಳ ಮುಖಾಂತರ 147 ಯೋಜನೆಗಳ ಮುಖಾಂತರ ಅರ್ಹ ದಲಿತರಿಗೆ ತಲುಪಿಸುವುದಾಗಿ ಘೋಷಣೆ ಮಾಡಿದ್ದು, ಅದರಂತೆ ಅನುದಾನ ಹಂಚಿಕೆ ಮಾಡುತ್ತಿದೆ. ಹಾಗಾದರೆ, ಈ ಹಣ ಎಲ್ಲಿಗೆ ಹೋಗುತ್ತಿದೆ? ಇದೇ SCSP/TSP (Scheduled Castes Sub Plan/ Tribal Sub Plan) ಕಾಯಿದೆಯ ಧ್ಯೇಯೋದ್ದೇಶಗಳನ್ನು ನೋಡಬೇಕಾದರೆ, ಅದರ ಉದ್ದೇಶ Human Development Index ಅಂದರೆ, ಮಾನವ ಅಭಿವೃದ್ಧಿ ಸೂಚ್ಯಂಕ ಅದು ಎಸ್.ಸಿ./ಎಸ್.ಟಿ. ಸಮುದಾಯಕ್ಕೆ ಸಂಬಂಧಿಸಿದಂತೆ, ಯಾವ ಸೂಚ್ಯಂಕ ಇದೆಯೋ ಆ ಸೂಚ್ಯಂಕ ಇನ್ನಿತರ ವರ್ಗದ ಜನಸಂಖ್ಯೆಗೆ ಅಂದರೆ, ಜನರಲ್ ಪಾಪುಲೇಶನ್‌ಗೆ ಅದರ ಮಧ್ಯ ಇರುವಂತಹ ಗ್ಯಾಪ್ ಅನ್ನು ಕಡಿಮೆ ಮಾಡುವಂತಹ ಉದ್ದೇಶದಿಂದ ಈ SCSP/TSP ಕಾಯಿದೆ ರೂಪಿತವಾಗಿದೆ. ಅದಕ್ಕೋಸ್ಕರ ಕಾನೂನಿನ ರೂಪದಲ್ಲಿ ಇದನ್ನು ಮಂಡಿಸಿದ್ದಾರೆ. ಈಗ ಪ್ರಶ್ನೆ ಬಂದಿರುವುದೇನೆಂದರೆ, ಏಕೆ ಬಿಪಿಎಲ್ ಕುಟುಂಬಗಳು ಇನ್ನು ಉಳಿದುಕೊಂಡಿವೆ. 2,94,000/- ಕೋಟಿ ರೂಪಾಯಿಗಳು ಖರ್ಚು ಆದರೂ ಸಹ, ಈ ಎಸ್.ಸಿ./ಎಸ್.ಟಿ. ಸಮುದಾಯಕ್ಕೆ ಇನ್ನು ಅನುದಾನ ಬೇಕಾಗಿರುತ್ತದೆಯೇ? ಎಲ್ಲೆಡೆ ವ್ಯಾಪಕವಾಗಿ ಮೂಡುತ್ತಿರುವ ಅಭಿಪ್ರಾಯ ಏನೆಂದರೆ, ರಾಜ್ಯದ ಸಂಪನ್ಮೂಲಗಳೆಲ್ಲವೂ ಕೂಡ ದಲಿತರ, ಎಸ್.ಸಿ./ಎಸ್.ಟಿ. ಸಮುದಾಯಗಳ ಪಾಲಾಗುತ್ತಿದೆ. ಆದಾಯ 2,92,000/- ಕೋಟಿ ರೂಪಾಯಿಗಳು. ಪ್ರಸ್ತುತ ಈ ಸಾಲಿನ ಬಜೆಟ್ ಅನ್ನು ತೆಗೆದುಕೊಳ್ಳೋಣ. ಅದರಂತೆ, ಆದಾಯ 2,92,647/- ಕೋಟಿ ರೂಪಾಯಿಗಳು. ಆದರೆ, ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯಿದೆಯ ಕಾರ್ಯಕ್ರಮ ಅನುಷ್ಠಾನಕ್ಕೆ 42,218/- ಕೋಟಿ ರೂಪಾಯಿಗಳು. ಇಷ್ಟೆಲ್ಲಾ ಆದರೂ ಸಹ, ಏತಕ್ಕೆ ದಲಿತರ ಏಳಿಗೆ ಆಗುತ್ತಿಲ್ಲ? ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯಿದೆಯ ಏನು ಹೇಳುತ್ತದೆಯೆಂದರೆ, the Human Development Index should be brought on par with general population. ಅದರಲ್ಲಿ, life expectancy at birth, income generation capacity, education, employment and so many other aspects are considered under this index.

ನಮ್ಮ ಕಾಯಿದೆಯಲ್ಲಿ ಒದಗಿಸುತ್ತಿರುವಂತಹ ಸಂಪನ್ಮೂಲಗಳೆಲ್ಲವೂ ಈ ಚಟುವಟಿಕೆಗಳಿಗೆ ಬೆಂಬಲವನ್ನು ನೀಡುವುದರ ಮುಖಾಂತರ Human Development Index improve ಮಾಡುವುದಾಗಿದೆ. ಆಯಿತು, ಈ ಕಾಯಿದೆಯಲ್ಲಿರುವಂತಹ ಅಂಶಗಳಾದರೂ ಸರಿಯಾಗಿ ಪಾಲನೆಯಾಗುತ್ತಿದೆಯೇ ಎನ್ನುವುದನ್ನು ನೋಡುವುದಾದರೆ, ಮೊದಲನೆಯದಾಗಿ "……Facilitate at least annual social auditing of expenditure of Scheduled Castes or Tribal funds, and facilitate analysis of improvement in Human Development Index, against the projections for the State and district: ……"ಆಯಿತು. Social auditing ಸರಿಯಾಗಿ ನಡೆಯುತ್ತಿದೆಯೇ ಎನ್ನುವುದನ್ನು ನೋಡುವುದಾದರೆ, ಇತ್ತೀಚೆಗೆ ಅಂದರೆ, 2020ರ ನಂತರ, ಸಮಾಜ ಕಲ್ಯಾಣ ಇಲಾಖೆಯಿಂದ ಹಲವಾರು ಏಜೆನ್ಸಿಗಳ ಮುಖಾಂತರ ಸೋಶಿಯಲ್ ಆಡಿಟಿಂಗ್ ನಡೆಸಿರುತ್ತಾರೆ. ಜಿಗಣಿಯಲ್ಲಿ ಬೇಸ್ ಆಗಿರುವ Public Affairs Centre ಎಂಬ ಒಂದು ಏಜೆನ್ಸಿಯಿಂದ ಜೂನ್ 2024ರಲ್ಲಿ "*Impact Assessment of Agricultural Inputs and, Quality Control on Scheme under Schedule Castes Sub-Allocation Scheme*" ಎಂದು ಒಂದು ಮಾಡಿದ್ದಾರೆ. ಅದೇ ಏಜೆನ್ಸಿಯಿಂದ *Day Scholarship Scheme for Pre-Matric Students*' ಈ ವಿಷಯಕ್ಕೆ ಸಂಬಂಧಿಸಿದಂತೆ, ಸೋಶಿಯಲ್ ಆಡಿಟಿಂಗ್ ನಡೆದಿದೆ. ಅದರಲ್ಲಿ ಸ್ಯಾಂಪಲ್ ಆಗಿ ಐದು ಜಿಲ್ಲೆಗಳನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ಚಿಕ್ಕಬಳ್ಳಾಪುರ, ಧಾರವಾಡ, ಹಾಸನ, ಚಿತ್ರದುರ್ಗ ಮತ್ತು ರಾಯಚೂರು ಜಿಲ್ಲೆಗಳನ್ನು ತೆಗೆದುಕೊಂಡಿರುತ್ತಾರೆ. ಕುತೂಹಲಕಾರಿ ಅಂಶ ಎಂದರೆ, ಈ ಏಜೆನ್ಸಿ ಕೊಟ್ಟಿರುವ ಶಿಫಾರಸ್ಸಿನಲ್ಲಿ ಶೇಕಡ 50 ರಷ್ಟು ಮೀರಿ ವ್ಯಕ್ತವಾಗಿರುವ ಅಭಿಪ್ರಾಯ ಎಸ್‌ಸಿಎಸ್‌ಪಿ/ಟಿಎಸ್‌ಪಿ ಹಣವನ್ನು ಸರಿಯಾಗಿ ವಿನಿಯೋಗಿಸುತ್ತಿಲ್ಲ ಎನ್ನುವ ಅಭಿಪ್ರಾಯ ವ್ಯಕ್ತವಾಗಿರುತ್ತದೆ. ಅದಲ್ಲದೇ, *Evaluation Study on Impact Assessment of Land Purchase Scheme*'.

**ಸಭಾಪತಿಯವರು:-** ಮಾನ್ಯ ಸುಧಾಮ್ ದಾಸ್‌ರವರೇ, ಇನ್ನು ಮೂರು ನಿಮಿಷಗಳಲ್ಲಿ ತಮ್ಮ ಮಾತನ್ನು ಪೂರ್ಣಗೊಳಿಸಿ.

**ಶ್ರೀ ಹೆಚ್.ಪಿ. ಸುಧಾಮ್ ದಾಸ್:-** ಮಾನ್ಯ ಸಭಾಪತಿಯವರೇ, ನೀವು ಯಾವಾಗಲೂ ಒಂದು ಮಾತನ್ನು ಹೇಳುತ್ತೀರಿ. ತಮಗೆ ಪ್ರಿಯವಾದ ಉತ್ತರ ಏನೆಂದರೆ, ಪರಿಹಾರ ಹೇಳಿ ಎಂದು ಹೇಳುತ್ತೀರಿ. ಹಾಗಾಗಿ, ತಮಗೆ ಪ್ರಿಯವಾದಂತಹ ಪರಿಹಾರವನ್ನು ಕೂಡ ನಾನು ಒದಗಿಸುತ್ತೇನೆ.

**ಸಭಾಪತಿಯವರು:-** ಪರಿಹಾರವನ್ನು ನಂತರ ಕೊಡಲು. ಈಗ ತಾವು ಮಾತನಾಡಿ ಮುಗಿಸಿ.

**ಶ್ರೀ ಹೆಚ್.ಪಿ. ಸುಧಾಮ್ ದಾಸ್:-** ಮಾನ್ಯ ಸಭಾಪತಿಯವರೇ, ಎಸ್‌ಸಿಎಸ್‌ಪಿ/ಟಿಎಸ್‌ಪಿ ವಿಚಾರ ಆಗಿರುವುದರಿಂದ, ಇದರ ಬಗ್ಗೆ ವಿಶೇಷವಾದಂತಹ ಕಾಳಜಿ ತಮಗೂ ಕೂಡ ಇದೆ. ಹಾಗಾಗಿ, ತಾವು ನನಗೆ ಸಮಯ ಒದಗಿಸುತ್ತೀರೆಂದು ಭಾವಿಸಿದ್ದೇನೆ. ಅಲ್ಲದೇ, ನಾನು ಯಾವುದೇ ನಿರುಪಯುಕ್ತ ಮಾತುಗಳನ್ನು ಆಡುವುದಿಲ್ಲ. ದಯವಿಟ್ಟು ಮನದಟ್ಟು ಮಾಡಿಕೊಳ್ಳಿ.

**ಶ್ರೀ ಎಂ. ನಾಗರಾಜು:–** ಮಾನ್ಯ ಸುಧಾಮ್ ದಾಸ್‌ರವರೇ, ಮಾನ್ಯ ಸಭಾಪತಿಯವರೇ ಇದನ್ನು ಮನದಟ್ಟು ಮಾಡಿಕೊಳ್ಳಬೇಕೇ?

**ಸಭಾಪತಿಯವರು:–** ಮಾನ್ಯ ನಾಗರಾಜುರವರೇ, ತಾವು ಕೂಡ ಬಹಳಷ್ಟು ಬಾರಿ ನನಗೆ ಮನದಟ್ಟು ಮಾಡಿರುತ್ತೀರಿ.

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೇ, ತಾವು ಹಾಕಿರುವಂತಹ ಗೆರೆಯನ್ನು ಈ ನಾಗರಾಜು ದಾಟುವುದೇ ಇಲ್ಲ. ಅದು ನನಗೆ ಲಕ್ಷ್ಮಣರೇಖೆ ಇದ್ದಹಾಗೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಥಮ ಬಾರಿಗೆ ಮಾತನಾಡುತ್ತಿದ್ದಾರೆ. ಹಾಗಾಗಿ, ಕನಿಷ್ಠ ಪಕ್ಷ ಒಂದು ವ್ಯತ್ಯಾಸವಾದರೂ ಪರವಾಗಿಲ್ಲ. ಅದನ್ನು ಅವರು ಆಗಲೇ ಮನದಟ್ಟು ಮಾಡಿಕೊಂಡಿರುತ್ತಾರೆ.

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೇ, ನಾನು ಅದನ್ನು ಆಕ್ಷೇಪಣೆ ಮಾಡಿರುವುದಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಐದು ವರ್ಷಗಳಲ್ಲಿ ಕೇಳುತ್ತಿರುವ ಭಾಷಣಗಳಲ್ಲಿ, ಮಾನ್ಯ ಸದಸ್ಯರು ಮೊದಲ ಬಾರಿಗೆ ಮಾತನಾಡುತ್ತಿದ್ದರೂ ಸಹ, this is one of the best speeches. ಅವರಿಂದಲೇ. ಹಾಗಾಗಿ, ತಾವು ಅವರಿಗೆ ಇನ್ನು ಸ್ವಲ್ಪ ಸಮಯ ಕೊಡಿ. ಅದರಿಂದಾಗಿ, ಅವರು ಇನ್ನು ಸ್ವಲ್ಪ ಚರ್ಚೆ ಮಾಡುತ್ತಾರೆ.

**ಸಭಾಪತಿಯವರು:–** ನಾವು ಕೂಡ ಸಮಯ ಕೊಟ್ಟಿರುತ್ತೇವೆ.

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡಿರುತ್ತಾರೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಅವರು ಮಾತನಾಡಲಿ.

**ಶ್ರೀ ಹೆಚ್.ಪಿ. ಸುಧಾಮ್ ದಾಸ್:–** ಮಾನ್ಯ ಸಭಾಪತಿಯವರೇ, ಇಂತಹ ಗಂಭೀರ ಸಮಯದಲ್ಲಿಯೂ ಸಹ ಆಗಾಗ್ಗೆ ಈ ರೀತಿಯ ಮನರಂಜನೆಗಳು ಬರುತ್ತಿರುತ್ತವೆ.

**ಸಭಾಪತಿಯವರು:–** ಹೌದು ಬರಬೇಕಾಗುತ್ತದೆ.

**ಶ್ರೀ ಹೆಚ್.ಪಿ. ಸುಧಾಮ್ ದಾಸ್:–** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಮುಖ್ಯ ಸಚೇತಕರು ಯಾವಾಗಲೂ ಸಹ ಗ್ಯಾರಂಟಿ ಯೋಜನೆ ವಿಷಯ ಬಂದಾಗ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, "ನೀವು ಇದಕ್ಕೆ ವಿರೋಧ ಇದ್ದೀರಾ" ಎಂದು ಕೇಳುತ್ತಾರೆ. ಅದಕ್ಕೆ ಅವರು, "ಏಯ್, ನಾನು ವಿರೋಧ ಇಲ್ಲ" ಎಂದು ಹೇಳುತ್ತಾರೆ. ಹಾಗಾಗಿ, ಅವರನ್ನು ಕಾರ್ನರ್ ಮಾಡುವುದಕ್ಕೆ ನಮ್ಮ ಮುಖ್ಯ ಸಚೇತಕರು ಪ್ರಯತ್ನ ಮಾಡುತ್ತಿರುತ್ತಾರೆ. ಇದು ಬಹಳ ಸಂದರ್ಭದಲ್ಲಿ ಆಗಿರುತ್ತದೆ. ಅದರಿಂದಾಗಿ, ಪದೇ ಪದೇ ನಮಗೆ ಮನರಂಜನೆ ಕೂಡ ಸಿಗುತ್ತಿದೆ.

**ಶ್ರೀ ಎನ್. ರವಿಕುಮಾರ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಗ್ಯಾರಂಟಿ ಯೋಜನೆಗಳಿಗೆ ಆಡಳಿತ ಪಕ್ಷದಲ್ಲಿಯೇ ಅನೇಕರು ವಿರೋಧ ಮಾಡುವವರು ಇದ್ದಾರೆ.

**ಶ್ರೀ ಹೆಚ್. ಪಿ. ಸುಧಾಮ್ ದಾಸ್:–** ಮಾನ್ಯ ಸಭಾಪತಿಯವರೇ, ಯಾರು ವಿರೋಧ ಇದ್ದಾರೆ ಎಂಬುದರ ಬಗ್ಗೆ ದಾಖಲೆ ತೋರಿಸಲಿ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಡಿ.ಟಿ. ಶ್ರೀನಿವಾಸ್‌ರವರು ಮತ್ತು ಅನೇಕರು ಈ ಬಗ್ಗೆ ಮಾತನಾಡಿರುತ್ತಾರೆ. ಆಡಳಿತ ಪಕ್ಷದಲ್ಲಿಯೇ ಅನೇಕ ಸದಸ್ಯರು ಇದರ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ.

**ಶ್ರೀ ಟಿ.ಡಿ. ಶ್ರೀನಿವಾಸ್(ಶಿಕ್ಷಕರ ಕ್ಷೇತ್ರ):–** ಮಾನ್ಯ ರವಿಕುಮಾರ್‌ರವರೇ, ನಾನು, ನೀವು ಮತ್ತು ಡಾ॥ ತಳವಾರ್ ಸಾಬಣ್ಣನವರು ಮಾತನಾಡಿರುವುದನ್ನು ನಾನು ಹೇಳುತ್ತೇನೆ.

**ಶ್ರೀ ಹೆಚ್.ಪಿ. ಸುಧಾಮ್ ದಾಸ್:–** ಮಾನ್ಯ ಸಭಾಪತಿಯವರೇ, ಅದರ ಹೊರತಾಗಿ ಇನ್ನಿತರ ಸೋಶಿಯಲ್ ಆಡಿಟಿಂಗ್ ವಿಷಯಕ್ಕೆ ಸಂಬಂಧಿಸಿದಂತೆ ಕೂಡ ನಾನು ಮಾತನಾಡುತ್ತೇನೆ. University of Agricultural Sciences ನವರು ಕೂಡ *'Evaluation of Milk Incentive Scheme'* ಕುರಿತಂತೆ ಸೋಶಿಯಲ್ ಆಡಿಟಿಂಗ್ ಮಾಡಿರುತ್ತಾರೆ. ಅದು 2019–20, 2020–21, 2021–22 ಸಂಬಂಧಿಸಿರುತ್ತದೆ. ಅದೇ ಸಂಸ್ಥೆಯು MGNREGA (Mahatma Gandhi National Rural Employment Guarantee Scheme) Evaluation Report ಅನ್ನು ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಿದೆ. ಮೈನರ್ ಇರಿಗೇಷನ್ ಸಂಬಂಧಿಸಿದಂತೆ ತನ್ನ ವರದಿ ನೀಡಿರುತ್ತದೆ. ಈ Public Affairs Centre ಎಂಬುದು Non–Profit Organization (NPO) ಎಂದು ಇದೆಯೋ…. ಅದೊಂದನ್ನು ಬಿಟ್ಟು ಇನ್ನು ಸರ್ಕಾರಿ ಸಂಸ್ಥೆಗಳು ಏನು ವರದಿ ಸಲ್ಲಿಸಿವೆಯೋ ಆ ವರದಿಯಲ್ಲಿಯೂ ಕೂಡ ವ್ಯಕ್ತವಾಗಿರುವ ಅಂಶ ಏನೆಂದರೆ, ಸರ್ಕಾರದ ನಿರೀಕ್ಷೆಗೆ ಅನುಗುಣವಾಗಿ ಈ ಕಾರ್ಯಕ್ರಮ ಸಮರ್ಪಕವಾಗಿ ಅರ್ಹ ದಲಿತರಿಗೆ ತಲುಪುತ್ತಿಲ್ಲ. ಹಾಗಾಗಿ, ಇದರ ಬಗ್ಗೆ crosscheck ಮಾಡುವುದಕ್ಕೆ ಬೇರೆ ಏನು ಇದೆ? Human Development Index ಎಂದು ಇದೆ. The Human Development Index is the main objective of the SCSP/TSP scheme to close the gap between the overall development of the State. Human Development Index ಸಂಬಂಧಿಸಿದಂತೆ, ಸಲ್ಲಿಕೆಯಾಗಿರುವ ವರದಿ 2022ರಲ್ಲಿ ಸಲ್ಲಿಕೆಯಾಗಿದೆ. ಅದರಲ್ಲಿ ಯಾವುದೇ ನಿರೀಕ್ಷಿತ ಬದಲಾವಣೆ ಕಂಡುಬಂದಿರುವುದಿಲ್ಲವೆಂದು ವರದಿ ಹೇಳಿರುತ್ತದೆ. ನಾನು ಇಲ್ಲಿ ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ, ದಲಿತರ, ಅಲ್ಪಸಂಖ್ಯಾತರ, ಶೋಷಿತರ ವರ್ಗದ ಹಿತರಕ್ಷಣೆ ಕಾಯುವ ಉದ್ದೇಶದಲ್ಲಿ ನಮ್ಮ ಮುಖ್ಯಮಂತ್ರಿಗಳ, ನಮ್ಮ ಸಚಿವರ ಸಂಪುಟದ ಸದಸ್ಯರ ಬದ್ಧತೆ ಕುರಿತು ನಮಗ್ಯಾರಿಗೂ ಅನುಮಾನವಿಲ್ಲ.

(ಮುಂದು)

**ಶ್ರೀ ಹೆಚ್.ಪಿ.ಸುಧಾಮ್ ದಾಸ್ (ಮುಂದು):**

ಇಲ್ಲಿ ಇರುವ ಪ್ರಶ್ನೆಯೇನೆಂದರೆ, ಒಂದು ವರ್ಗದ ಅಧಿಕಾರಿಗಳ ಅನುಷ್ಠಾನ ಕುರಿತಂತೆ ಸಾಕಷ್ಟು ವೈಫಲ್ಯವಾಗಿರುವುದು ಗೋಚರಿಸುತ್ತಿದೆ. ಅನೇಕ ಶಾಸಕ ಸಹೋದ್ಯೋಗಿಗಳ ಅನುಭವ ಹಾಗೂ ನನ್ನ ಅನುಭವದ ಆಧಾರದ ಮೇಲೆ ಅತ್ಯಂತ ಜವಾಬ್ದಾರಿಯಿಂದ ಹೇಳಿಕೆ ಮಾಡುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಕ್ರಮ ಜರುಗಿಸುವುದರ ಬಗ್ಗೆ ಸಹ ಯೋಚನೆ ಮಾಡಬೇಕು.

**ಶ್ರೀ ಹೆಚ್.ಪಿ.ಸುಧಾಮ್ ದಾಸ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಕಾಯ್ದೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಅಷ್ಟೊಂದು ಆಸಕ್ತಿ ವಹಿಸಿದರೂ ಕೂಡ ಕಳೆದ ಜನವರಿಯಲ್ಲಿ ನಡೆದ ರಿವ್ಯೂ ಮೀಟಿಂಗ್‌ನಲ್ಲಿ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಗೆ ಸಂಬಂಧಿಸಿದಂತೆ ಖರ್ಚಾಗಿರುವ ಅನುದಾನ ಕೇವಲ ಶೇಕಡ 54 ರಷ್ಟು ಮಾತ್ರ. ಇದು ಯಾರ ಜವಾಬ್ದಾರಿ? ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಅಧಿಕಾರಿಗಳ ಹಾಗೂ ಸರ್ಕಾರದ ಆದ್ಯತೆ ಬಗ್ಗೆ ಯಾವ ರೀತಿ ಮನವರಿಕೆ ಮಾಡಬೇಕು. ಈ ಕಾಯ್ದೆ ರೀತ್ಯಾ ‘ಯಾವುದೇ ಅಂಶಗಳ ಉಲ್ಲಂಘನೆಯಾದ ಪಕ್ಷದಲ್ಲಿ 11 ವರ್ಷಗಳ ಶಿಕ್ಷೆ ವಿಧಿಸಲಾಗುವುದು’ ಎಂದು ಉಲ್ಲೇಖ ಮಾಡಲಾಗಿದೆ. ಈಗಾಗಲೇ 11 ವರ್ಷಗಳು ಕಳೆದಿದ್ದು, Human Development Index ಹಾಗೂ social audit reports ನಿಂದಾಗಿ ವ್ಯಾಪಕ ಉಲ್ಲಂಘನೆ ಕಾಣಿಸುತ್ತಿದ್ದು, ಇಷ್ಟು ವ್ಯಾಪಕವಾಗಿ ಉಲ್ಲಂಘನೆಯಾದರೂ ಒಬ್ಬ ಅಧಿಕಾರಿಗಾದರೂ ಶಿಕ್ಷೆಯಾಗಿದೆಯೇ? ದಲಿತರಿಗೆ ಸಂಬಂಧಿಸಿದಂತೆ ಕೋಲಾರದ ಕಂಬಾಲಪಲ್ಲಿ ಯಲ್ಲಿ 7 ಜನರ ಸಜೀವ ದಹನವಾಗಿ ಸುಮಾರು 25 ವರ್ಷಗಳು ಕಳೆದರೂ ಒಬ್ಬರಿಗೂ ಶಿಕ್ಷೆಯಾಗಿಲ್ಲ. ಈ ಒಂದು ಸಣ್ಣ ಕಾಯ್ದೆ ಉಲ್ಲಂಘನೆಗೆ ಶಿಕ್ಷೆ ನಿರೀಕ್ಷೆ ಮಾಡುವಷ್ಟು ನಾವು ಅವಿವೇಕಿಗಳೇ? ವ್ಯವಸ್ಥೆಯು ಅಷ್ಟರ ಮಟ್ಟಿಗೆ ಕರಾಳವಾಗಿದೆ. ಈ ವ್ಯವಸ್ಥೆಯನ್ನಿಟ್ಟುಕೊಂಡು ಯಾವುದೇ ಕಲ್ಯಾಣ ಯೋಜನೆ, ಶೋಷಿತರ ಉದ್ದಾರವನ್ನು ನಿರೀಕ್ಷೆ ಮಾಡುವುದು ಬಹಳ ಕಷ್ಟವಾಗುತ್ತದೆ. ವ್ಯವಸ್ಥೆ ಕುರಿತು ಆಮೂಲಾಗ್ರ ಬದಲಾವಣೆಯಾಗಬೇಕಾಗಿದೆ.

ಯಾವುದೇ ಒಂದು ಅಭಿವೃದ್ಧಿ ಕಾರ್ಯ ಇರಲಿ ಅಥವಾ ಕಲ್ಯಾಣ ಕಾರ್ಯ ಇರಲಿ, ಅದರಿಂದ ಶೋಷಿತ ವರ್ಗದವರಿಗೆ ಏಳಿಗೆಯಾಗಲಿಲ್ಲವೆಂದರೆ, ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಎನ್ನುವುದು ಸಾಮಾನ್ಯ ಜ್ಞಾನವುಳ್ಳವರಿಗೆಲ್ಲಾ ಗೊತ್ತಿದೆ. ನಾನು ಹೇಳಬೇಕಾದ ಅನೇಕ ಪ್ರಮುಖಾಂಶದಲ್ಲಿ ಒಂದು ಪ್ರಮುಖಾಂಶವೇನೆಂದರೆ, ಸಾರ್ವಜನಿಕರೆಲ್ಲರೂ ನಿರೀಕ್ಷೆ ಮಾಡಿದಷ್ಟು ಸಂಪನ್ಮೂಲ ಪರಿಶಿಷ್ಟ ವರ್ಗದವರಿಗೆ ಆ ಸಂಪನ್ಮೂಲ ತಲುಪುತ್ತಿಲ್ಲ. ಯಾರು ಕೂಡ ಅದರ ಬಗ್ಗೆ ಅಸೂಹೆಪಡುವಷ್ಟು ಅವಶ್ಯಕತೆ ಇಲ್ಲ. ಎರಡನೆಯದಾಗಿ, ಕಾಯ್ದೆ ಅನುಷ್ಠಾನದಲ್ಲಿ ಯಾರು ಜವಾಬ್ದಾರಿ ಹೊತ್ತಿರುತ್ತಾರೆ, ಅಂಥವರು ಕನಿಷ್ಠ ಪಕ್ಷ ಸಂವಿಧಾನದ ಮೂಲ ತತ್ವಗಳ ಬಗ್ಗೆ ಅರಿವು ಇದ್ದರೆ ಒಳ್ಳೆಯದು. ಸಂವಿಧಾನದ ಅನುಚ್ಛೇದ 14 ಸಮಾನತೆ ಬಗ್ಗೆ ಹೇಳುವುದಾದರೆ, ಅನುಚ್ಛೇದ 15 ಮತ್ತು ಅನುಚ್ಛೇದ 16 ರಲ್ಲಿ ಸಮಾನತೆ ಸಾಧಿಸುವ ಸಲುವಾಗಿ ಅಗತ್ಯವಿದ್ದರೆ ಯಾವುದೇ ಕಾನೂನನ್ನು ಜಾರಿಗೆ ತನ್ನಿ’ ಎಂದು ಹೇಳುತ್ತದೆ. ಅದೆಲ್ಲವನ್ನೂ ನಮ್ಮ ಸರ್ಕಾರವು ಶಿಸ್ತು ಬದ್ಧವಾಗಿ ನಡೆಸಿಕೊಂಡು ಬಂದಿದೆ. ಪ್ರತಿಯೊಂದು ಕಾನೂನಿನ ಅಂಶವಾಗಲಿ ಮತ್ತು ಉಲ್ಲೇಖವಾಗಲಿ ಎಲ್ಲಿಯೂ

ದೋಷ ಹುಡುಕಲು ಸಾಧ್ಯವಿಲ್ಲ. ಆದರೆ, ಜಾರಿಗೆ ತರುವ ವಿಷಯದಲ್ಲಿ ಅತ್ಯಂತ ಶೋಚನೀಯ ಪರಿಸ್ಥಿತಿ ಇದ್ದು, ಇದಕ್ಕೆ ಪರಿಹಾರವೇನು?

ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರ ಅಧ್ಯಕ್ಷತೆಯಲ್ಲಿಯೇ 'ರಾಜ್ಯ ಪರಿಷತ್ತು' ಎಂಬುದು ಅಸ್ತಿತ್ವದಲ್ಲಿದ್ದು, ಅದರಲ್ಲಿ ಶಿಫಾರಸ್ಸು, ಅನುಷ್ಠಾನ ಮತ್ತು allocation ಬಗ್ಗೆ ಚರ್ಚೆಯಾಗುತ್ತದೆ ಹಾಗೂ ಎಷ್ಟೊಂದು ಅಭಿಪ್ರಾಯವನ್ನು ಮಂಡನೆ ಮಾಡುವುದರ ಮೂಲಕ ಅದನ್ನು socially ರೆಕಾರ್ಡ್ ಸಹ ಮಾಡಲಾಗುತ್ತದೆ. ಆದರೆ, ಅಲ್ಲಿ ದಾಖಲಾದ minutes ನಲ್ಲಿ ಇರುವ ಯಾವುದೇ ಅಂಶವನ್ನು ಜಾರಿಗೆ ತರುವುದಿಲ್ಲ. ಅದರಲ್ಲಿ ಒಂದು ಅಂಶವು ಬಹಳ ಚೆನ್ನಾಗಿದ್ದು, ಆ ಸಮಿತಿಯ ಸದಸ್ಯರಾಗಿರುವ ಮಾನ್ಯ ಪ್ರಸಾದ್ ಅಬ್ಬಯ್ಯನವರು ಪದೇ ಪದೇ ಹೇಳುವುದೇನೆಂದರೆ, 'ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಗೆ ಸಂಬಂಧಿಸಿದಂತೆ ಜವಾಬ್ದಾರಿ ಹೊತ್ತಿರುವ ಸಮಾಜ ಕಲ್ಯಾಣ ಇಲಾಖೆ ಏನಿದೆ, ಆ ಇಲಾಖೆಯನ್ನು ಆರ್ಥಿಕ ಇಲಾಖೆಯ ಸುಪರ್ದಿನಿಂದ ಹೊರಗೆ ತಂದರೆ ಮಾತ್ರ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರಲು ಸಾಧ್ಯ' ಎಂದು ಬಹಳ ಚೆನ್ನಾಗಿ ಹೇಳಿದ್ದಾರೆ. ಆರ್ಥಿಕ ಇಲಾಖೆಯು ಕೆಲವೊಂದು ಬಾರಿ ಎಸ್.ಸಿ./ಎಸ್.ಟಿ. ಅಭಿವೃದ್ಧಿಗೆ ಸಂಬಂಧಿಸಿದಂತೆ, ಸಂವಿಧಾನ ವಿರೋಧಿಗಳಂತೆ ವರ್ತಿಸುತ್ತಾರೆ. ಇದು ನನ್ನ ಅಭಿಪ್ರಾಯ ಮಾತ್ರವಾಗಿಲ್ಲ, ಸಾರ್ವತ್ರಿಕ ಅಭಿಪ್ರಾಯವಾಗಿದೆ. ಸಮರ್ಪಕ ಅಭಿವೃದ್ಧಿಗೋಸ್ಕರ ಆರ್ಥಿಕ ಇಲಾಖೆಯಿಂದ ಮುಕ್ತಗೊಳಿಸಿ, ಸಮಾಜ ಕಲ್ಯಾಣ ಇಲಾಖೆಯ ಅಧೀನಕ್ಕೆ ಒಳಪಡಿಸುವುದಲ್ಲದೇ 143 ಯೋಜನೆಗಳನ್ನು 34 ಇಲಾಖೆಗಳ ಮೂಲಕ ಜಾರಿಗೆ ತರಬೇಕೆನ್ನುವ ಉದ್ದೇಶವೇನಿದೆ, ಅದನ್ನು ಸಮರ್ಪಕವಾಗಿ ಜಾರಿಗೆ ತರುವಲ್ಲಿ ಗ್ಯಾರಂಟಿ ಮಾಡಿಕೊಳ್ಳಬೇಕೆಂದರೆ, ಈಗಾಗಲೇ ಸುಮಾರು 11 ವರ್ಷಗಳು ವ್ಯಯವಾಗಿರುವುದನ್ನು ಬಿಟ್ಟು, ಕೇವಲ 6 ತಿಂಗಳ ಮಟ್ಟಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆ ಯಾವ ಜಿಲ್ಲೆಯಲ್ಲಿದೆ, ಅದು ಚಿತ್ರದುರ್ಗ ಜಿಲ್ಲೆಯಾಗಿರಬಹುದು ಅಥವಾ ಕೋಲಾರ ಜಿಲ್ಲೆಯಾಗಿರಬಹುದು ಅದೊಂದು ಜಿಲ್ಲೆ ಮಾತ್ರ ತೆಗೆದುಕೊಳ್ಳಿ. ಆ ಒಂದು ಜಿಲ್ಲೆಯಲ್ಲಿ ಸರ್ಕಾರ ಘೋಷಣೆ ಮಾಡಿರುವುದನ್ನು 6 ತಿಂಗಳೊಳಗೆ ಎಲ್ಲಾ ಇಲಾಖೆಗಳು ಆ ಕೆಲಸವನ್ನು ಮುಗಿಸಿರಬೇಕು ಎಂದು ಹೇಳಿ ಅದನ್ನು monitor ಮಾಡಿ. ಈ ರೀತಿ monitor ಮಾಡಿದಾಗ ಮಾತ್ರ ಎಲ್ಲರ focus ಅಲ್ಲಿಯೇ ಇರುತ್ತದೆ. ಆಯಾಯ ಸಂಬಂಧಪಟ್ಟ ಇಲಾಖೆಯು ಕಾರ್ಯಕ್ರಮ ಜಾರಿಗೆ ತರುವುದರಲ್ಲಿ ಯಾವುದೇ ಭ್ರಷ್ಟಾಚಾರ ನಡೆಯಲು ಸಾಧ್ಯ ಇರುವುದಿಲ್ಲ ಹಾಗೂ ಎಲ್ಲರು focused ಆಗಿ ಮಾಡುತ್ತಾರೆ. ಇದನ್ನು pilot project ರೀತಿ ಮಾಡಬೇಕು. ಜೊತೆಗೆ ಪ್ರತಿಯೊಬ್ಬರು ಆದ್ಯಾತಾನುಸಾರ ಕರ್ತವ್ಯವನ್ನು ನಿರ್ವಹಿಸುತ್ತಾರೆ. ಎಲ್ಲದಕ್ಕೂ ಮುಖ್ಯವಾಗಿ ಪ್ರತಿಯೊಂದು ಕೆಲಸದಲ್ಲಿನ ಗುಣಮಟ್ಟವು ನಿಯಂತ್ರಣಕ್ಕೆ ಬರುತ್ತದೆ. ಎರಡು ವರ್ಷ, ಮೂರು ವರ್ಷಗಳು ಎಂದು ಹೇಳುವ ಕೆಲಸ ಕೇವಲ 6 ತಿಂಗಳೊಳಗೆ ಮುಗಿಯುತ್ತದೆ. ಆಮೇಲೆ ಇನ್ನಿತರೆ ಜಿಲ್ಲೆಗಳಲ್ಲಿ ಅದೇ ಮಾನದಂಡವನ್ನು ಅನುಸರಿಸಿ, ವ್ಯಾಪಕವಾಗಿ ರಾಜ್ಯಾದ್ಯಂತ ಜಾರಿಗೆ ತನ್ನಿ.

ಕೊನೆಪಕ್ಷ ಇದನ್ನು ಸಹ ಮಾಡಲಿಲ್ಲವೆಂದರೆ, ಎಸ್.ಸಿ/ಎಸ್.ಟಿ. ಸಮುದಾಯದವರಿಗೆ ನ್ಯಾಯ ಒದಗಿಸಲು ಸಾಧ್ಯವಾಗುವುದಿಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದರಲ್ಲಿ ಆ ಸಮುದಾಯದವರ ಪಾತ್ರ

ಪ್ರಮುಖವಾಗಿರುತ್ತದೆ. ನಾವು ಈ ಕಾಯ್ದೆಯನ್ನು ಜಾರಿಗೆ ತರುವ ಸಂದರ್ಭದಲ್ಲಿ ಯಾವ ಆಶಯಗಳನ್ನಿಟ್ಟುಕೊಂಡು, 'ಪ್ಲಾನಿಂಗ್ ಕಮಿಷನ್' ಅನ್ನು ಜಾರಿಗೆ ತಂದಿದ್ದಾರೆ, ಆ ಪ್ಲಾನಿಂಗ್ ಕಮಿಷನ್ ಎನ್ನುವುದು ಒಂದು ಸಂವಿಧಾನಿಕ ಸಂಸ್ಥೆಯಾಗಿದೆ. ಆ ಸಂಸ್ಥೆಯನ್ನು ಕೆಡವಿದವರು ನಮ್ಮ ಬಿ.ಜೆ.ಪಿ. ಸರ್ಕಾರ. ಅವರ ಸಂವಿಧಾನದಿಂದ ಒಂದೊಂದು systematic ಆಗಿ disturb ಮಾಡಿಕೊಂಡು ಬಂದಿರುವುದರಿಂದ ದಲಿತರು ಎಚ್ಚೆತ್ತುಕೊಂಡಿರುವುದು. ಹಾಗಾಗಿ, ನಾವೆಲ್ಲರೂ ಒಂದಾಗಿ ಹೋರಾಟಕ್ಕೆ ಬಂದಿದ್ದೇವೆ. ದಲಿತರ ಅಸ್ತಿತ್ವಕ್ಕೆ ಶಂಕೆ ಬರುವ ರೀತಿ ಬಿ.ಜೆ.ಪಿ. ಯವರು ವರ್ತಿಸಿದ್ದು, ಯಾವ ದಲಿತರು ಬಿ.ಜೆ.ಪಿ. ಕಡೆ ಹೋಗುವುದಿಲ್ಲ. ದಲಿತ ಸಮುದಾಯ ಹಿಂದಿನ ತರ ಇಲ್ಲ. ಒಡೆದ,..

**ಶ್ರೀಮತಿ ಹೇಮಲತಾ ನಾಯಕ್:–** ಮಾನ್ಯ ಸಭಾಪತಿಯವರೇ, ಹಾಗಾದರೆ, ಮೀಸಲಾತಿಯನ್ನು ಏತಕ್ಕೆ ಮಾಡುತ್ತಿಲ್ಲ?

**ಶ್ರೀ ಹೆಚ್.ಪಿ.ಸುಧಾಮ್ ದಾಸ್:–** ಮಾನ್ಯ ಸಭಾಪತಿಯವರೇ, ನಾನು ಮೀಸಲಾತಿಯನ್ನು ನೀಡುತ್ತಿಲ್ಲವೆಂದು ಹೇಳುತ್ತಿಲ್ಲ. ಖಂಡಿತವಾಗಿ ಮೀಸಲಾತಿ ಜಾರಿಗೆ ಬರುತ್ತದೆ.

**ಶ್ರೀಮತಿ ಹೇಮಲತಾ ನಾಯಕ್:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಸರ್ಕಾರದ ಅಧಿಕಾರಕ್ಕೆ ಬಂದರೆ 'ಆ ರೀತಿ ಮಾಡುತ್ತೇವೆ, ಈ ರೀತಿ ಮಾಡುತ್ತೇವೆ' ಎಂದೆಲ್ಲಾ ದೊಡ್ಡದಾಗಿ ಹೇಳಿಕೊಳ್ಳುತ್ತಾರೆ ಅಲ್ಲವೇ? ಒಳ ಮೀಸಲಾತಿಯನ್ನು ಕೊಡುತ್ತಿಲ್ಲವೆಂದು ಹಾದಿ, ಬೀದಿಗಳಲ್ಲಿ ನಿಂತು ಹೋರಾಟ ಮಾಡುತ್ತಾರೆ. ಅವರಿಗೆ ಏನು ಹೇಳುತ್ತಾರೆ?

**ಶ್ರೀ ಹೆಚ್.ಪಿ.ಸುಧಾಮ್ ದಾಸ್:–** ಮಾನ್ಯ ಸಭಾಪತಿಯವರೇ, ಅವರ ಸಚಿವರು ಆ ರೀತಿ ಮಾಡುತ್ತಿರುವುದು.

**ಶ್ರೀಮತಿ ಹೇಮಲತಾ ನಾಯಕ್:–** ಮಾನ್ಯ ಸಭಾಪತಿಯವರೇ, ಒಳ ಮೀಸಲಾತಿ ಕೊಡುತ್ತಿಲ್ಲವೆಂದು ಅವರ ಪಕ್ಷದವರೇ ಹೇಳುತ್ತಿದ್ದಾರೆ. ಅದನ್ನು ಮೊದಲು ಹೇಳಲಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸುಧಾಮ್‌ದಾಸ್‌ರವರು ಮಾತನಾಡುತ್ತಿದ್ದಾರೆ ಅಲ್ಲವೇ? ಮಾನ್ಯ ಹೇಮಲತಾ ನಾಯಕ್‌ರವರು ಮಧ್ಯದಲ್ಲಿ ಏತಕ್ಕೆ ಎದ್ದು ಮಾತನಾಡಬೇಕು? ಅವರಿಗೆ ಅವಕಾಶ ಕೊಟ್ಟಾಗ ಮಾತನಾಡಲಿ.

**ಸಭಾಪತಿಯವರು:–** ಮಾನ್ಯ ಶ್ರೀಮತಿಹೇಮಲತಾ ನಾಯಕ್‌ರವರೇ, ಮಾನ್ಯ ಸುಧಾಮ್ ದಾಸ್‌ರವರು ಮೊದಲು ಮಾತನಾಡಲಿ.

**ಶ್ರೀಮತಿ ಹೇಮಲತಾ ನಾಯಕ್:–** ಮಾನ್ಯ ಸಭಾಪತಿಯವರೇ, ಅಲ್ಲಿ ಹೇಳುವುದನ್ನು ಬಿಟ್ಟು, ಇಲ್ಲಿ ಬಂದು ಹೇಳುತ್ತಿದ್ದಾರೆ.

**ಶ್ರೀ ಹೆಚ್.ಪಿ.ಸುಧಾಮ್ ದಾಸ್:–** ಮಾನ್ಯ ಸಭಾಪತಿಯವರೇ, ನಿಮ್ಮ ಸಚಿವರು writing ನಲ್ಲಿ ಬರೆದು ಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀಮತಿ ಹೇಮಲತಾ ನಾಯಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಿ.ಜೆ.ಪಿ. ಎಂದು ಉಲ್ಲೇಖ ಮಾಡಿದ ಸಲುವಾಗಿ ನಾನು ಮಾತನಾಡುತ್ತಿರುವುದು.

**ಶ್ರೀ ಹೆಚ್.ಪಿ.ಸುಧಾಮ್ ದಾಸ್:–** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ. ಸರ್ಕಾರವು ಮೀಸಲಾತಿಯನ್ನು ತೆಗೆಯಬೇಕೆಂದು ಇದ್ದಾರೆ. ಸಂವಿಧಾನವನ್ನೇ ಪ್ರಶ್ನೆ ಮಾಡುತ್ತಾರೆ. ಅವರ ಹತ್ತಿರ ಕಲಿಯುವಷ್ಟು ದುರ್ಗತಿ ನಮಗೆ ಬಂದಿಲ್ಲ. ಅವರಿಂದ ಸಲಹೆ ತೆಗೆದುಕೊಳ್ಳುವಷ್ಟು ದುರ್ಗತಿ ಕಾಂಗ್ರೆಸ್ ಪಕ್ಷದವರಿಗೆ ಬಂದಿಲ್ಲ.

**(ಗೊಂದಲ)**

(ಮುಂದು)

**(561) 21.03.2025/11.30/ಎಸ್‌ಕೆ-ಎಂಡಿ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸುಧಾಮ್ ದಾಸ್‌ರವರು ಮಾತನಾಡುತ್ತಿದ್ದು, ಇಲ್ಲಿಯವರೆಗೂ ಅವರು ಹಳಿ ತಪ್ಪಲಿಲ್ಲ. ಅವರು ಬಹಳ ಚೆನ್ನಾಗಿ ಮಾತನಾಡುತ್ತಾ ಬಂದರು. ಅವರು ಎಷ್ಟು ಚೆನ್ನಾಗಿ ಮಾತನಾಡಿದರು ಎಂದರೆ, ಅವರು ಏನು ಸತ್ಯ ಹೇಳಿದ್ದಾರೋ, ಅದನ್ನು ನಾನೇ ಹೇಳುತ್ತೇನೆ. ಅವರಿಗೆ ಸರ್ಟಿಫಿಕೇಟ್‌ನ್ನು ಕೊಡುತ್ತೇನೆ. ಸರ್ಕಾರ ಇಲ್ಲಿಯವರೆಗೂ ಯಾವ ರೀತಿ ನಡೆದುಕೊಂಡು ಬಂದಿರುವ ಬಗ್ಗೆ ಎಳೆ ಎಳೆಯಾಗಿ ಬಿಚ್ಚಿಟ್ಟರು. **(ಗೊಂದಲ)** ಕಾಂಗ್ರೆಸ್ ಸರ್ಕಾರ ಅವರಿಗೆ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ಕೊನೆಯದಾಗಿ ಏನಾಯಿತು ಎಂದರೆ, ಈಗ ಅವರು end-up ಮಾಡಬೇಕಾಗಿದೆ, ಇನ್ನೂ ಬೇರೆಯವರಿಗೆ ತೊಂದರೆಯಾಗಬಾರದಲ್ಲ, ಅದಕ್ಕೆ ಬಿ.ಜೆ.ಪಿ. ಮೇಲೆ ಮುಗಿಬಿದ್ದಿದ್ದಾರೆ.

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶಿತರು):–** ಮಾನ್ಯ ವಿರೋಧ ಪಕ್ಷದ ನಾಯಕರೇ, ಇಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ದೇಶದಲ್ಲಿ ಸಂವಿಧಾನಕ್ಕೆ ಏನಾದರೂ ಅಪಚಾರವಾಗಿದ್ದರೆ, ಅದು ಕಾಂಗ್ರೆಸ್‌ನಿಂದಲೇ ಅಪಚಾರವಾಗಿರುವಂತಹದ್ದು.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಸಂವಿಧಾನಕ್ಕೆ ಅನ್ಯಾಯ ಮಾಡಿದವರು ಯಾರು ಎಂದರೆ, ಬಿ.ಜೆ.ಪಿ.ಯವರು. ನೀವು ನಮ್ಮ ಸಮುದಾಯ ಎಂದು ಹೇಳುತ್ತೀರಲ್ಲ, ಆ ಸಮುದಾಯಕ್ಕೆ ಅನ್ಯಾಯ ಮಾಡಿದವರು ಯಾರು ಎಂದರೆ, ಬಿ.ಜೆ.ಪಿ. ಅವರು. ಇದು ಆರ್.ಎಸ್.ಎಸ್.ನ ನೀತಿ

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಕಾಂಗ್ರೆಸ್ ಪಕ್ಷ ಬಾಬಾ ಸಾಹೇಬ ಡಾ॥ ಬಿ.ಆರ್. ಅಂಬೇಡ್ಕರವರ ಸಂವಿಧಾನವನ್ನು ಅಪಚಾರ ಮಾಡಿದವರು.

**ಶ್ರೀ ಎನ್.ಎಸ್. ಬೋಸರಾಜು:–** ನಾವು ಹುಟ್ಟಿದಾಗಿನಿಂದ ಸಂವಿಧಾನವನ್ನು ನೋಡುತ್ತಲೇ ಇದ್ದೇವೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಸಂವಿಧಾನವನ್ನು ಪರಿಷ್ಕರಣೆ ಮಾಡಿ ಎಂದು ಹೇಳಿದವರು ಯಾರು?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ನೀವು ಸಂವಿಧಾನವನ್ನು ಒಪ್ಪಿಕೊಂಡಿಲ್ಲ. ಸಂವಿಧಾನಕ್ಕೆ ಏನಾದರೂ ದ್ರೋಹ ಬಗೆದಿದ್ದರೆ, ಅದು ಕಾಂಗ್ರೆಸ್ ಪಕ್ಷ. **(ಗೊಂದಲ)** ಶ್ರೀಮತಿ ಇಂದಿರಾ ಗಾಂಧಿಯವರಿಗೆ ಕೇಳಿ ಏನು ಮಾಡಿದರು? ನೀವು emergency ಯಾವ ಕಾರಣಕ್ಕಾಗಿ ತಂದಿರಿ ಎಂಬುದನ್ನು ಹೇಳಿ. **(ಗೊಂದಲ)** ನಿಮಗೆ ಗಂಡಾಂತರ ಬಂದಿತ್ತಾ? ಯಾವ ಗಂಡಾಂತರವಿಲ್ಲ. ನೀವು ಯಾವುದಕ್ಕೂ ಡಾ॥ ಬಿ.ಆರ್. ಅಂಬೇಡ್ಕರ್‌ರವರಿಗೆ ಅಪಮಾನ ಮಾಡಬೇಕು. ಸಂವಿಧಾನಕ್ಕೆ ದ್ರೋಹ ಮಾಡಬೇಕು. ಅದು ನಿಮ್ಮ ನೀತಿ. ಆ ಕಾರಣಕ್ಕಾಗಿ ಅದನ್ನು ಮಾಡಿದರೆ ಹೊರತು, ನಾವು ಯಾವುದೇ ಕಾರಣಕ್ಕೂ ಯಾವುದೇ ಸಂಸ್ಥೆಗಳನ್ನು ಮುಚ್ಚುವುದಾಗಲೀ, ತೊಂದರೆ ಮಾಡುವುದಾಗಲೀ, ಅನುಪಯೋಗ ಪಡಿಸುವುದಾಗಲೀ ನಾವು ಮಾಡಿಲ್ಲ. ಏನೇ ಮಾಡಿದರೂ ಕೂಡ ಸಂವಿಧಾನಕ್ಕೆ

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ನೀವು ಸಂವಿಧಾನಕ್ಕೆ ದ್ರೋಹ ಬಗೆದಿದ್ದೀರಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ನೀವು ನ್ಯಾಯವಾಗಿ ಏನು ಮಾಡಿದ್ದೀರಾ? **(ಗೊಂದಲ)** ದ್ರೋಹ ಮಾಡಿದವರು ನೀವು, ನಾವು ಅಲ್ಲ ಎಂಬುದನ್ನು ತಿಳಿದುಕೊಳ್ಳಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಡಾ॥ ಬಿ.ಆರ್. ಅಂಬೇಡ್ಕರ್‌ಗೆ ದ್ರೋಹ ಮಾಡಿದವರು ಕಾಂಗ್ರೆಸ್‌ನವರು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಸಂವಿಧಾನವನ್ನು ನೀವು ಹಾಳು ಮಾಡಿಬಿಟ್ಟಿರಿ ಎಂದು ಮಾನ್ಯ ಸುಧಾಮ್ ದಾಸ್‌ರವರು ಹೇಳಿದರು. ನಾವು ಮುಟ್ಟಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:–** ನೀವು ಸಂವಿಧಾನವನ್ನು ಒಪ್ಪಿಕೊಂಡೇ ಇಲ್ಲ. ನೀವು ಅದನ್ನು ತಿರಸ್ಕಾರ ಮಾಡಿದ್ದೀರಾ. **(ಗೊಂದಲ)** ನಿಮಗೆ ಬೇಕಾಗಿರುವುದು ಮನಸ್ಮೃತಿ'

**(ಗೊಂದಲ)**

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಡಾ॥ ಬಿ.ಆರ್. ಅಂಬೇಡ್ಕರ್‌ರವರ ವಿರುದ್ಧ candidate ಆಗಿ ಇಡೀ ಡಾ॥ ಬಿ.ಆರ್.ಅಂಬೇಡ್ಕರ್‌ರವರ ಜೀವನವನ್ನು ಹಾಳು ಮಾಡಿದವರು ಕಾಂಗ್ರೆಸ್‌ನವರು. ಕಾಂಗ್ರೆಸ್‌ಗೆ ನಾಚಿಕೆಯಾಗಬೇಕು.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಬಿ.ಜೆ.ಪಿ.ಗೆ ನಾಚಿಕೆಯಾಗಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಇದನ್ನು ಓದಿ ಹೇಳುತ್ತೇನೆ. ಡಾ॥ ಬಿ.ಆರ್. ಅಂಬೇಡ್ಕರ್‌ರವರು "Joining Congress will be suicidal" ಎಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ತಾವು ಬಜೆಟ್ ಚರ್ಚೆಗೆ ತೆಗೆದುಕೊಳ್ಳಿ. Planning Commission ನಲ್ಲಿ SCSP–TSP (Scheduled Castes Sub–Allocation & Tribal–Sub Allocation) ಒಂದು plan ಅನ್ನು separate ಆಗಿ ಮಾಡುತ್ತಿದ್ದರು. Planning Commission ಯಾವುದೇ ಆದೇಶಗಳು ಕೊಟ್ಟಿದ್ದು, ಮಾನದಂಡಗಳಿಗೆ ಒಳಪಟ್ಟರೂ ಕೂಡ ಅದು Finance Minister, Government of India ಗೆ binding ಇತ್ತು. 11 ವರ್ಷಗಳಿಂದ ಏನಾಯಿತು ಎಂದರೆ, Planning Commission ಅನ್ನು dismantle ಮಾಡಿ, ನೀತಿ ಆಯೋಗವನ್ನು ತಂದರು. ನೀತಿ ಆಯೋಗ ಏನು ಮಾಡಿದರು? Special Component for SC and Tribal Sub Plan ಅನ್ನು ಬಿಟ್ಟು, "Development Action for SC's and development Action for ST's" ಬಂತು. ಅದ್ಯಾವುದು Finance Department ಗೆ binding ಇತ್ತೋ, ನೀತಿ ಆಯೋಗ ಬಂದ ಮೇಲೆ binding ಇರಲಿಲ್ಲ. It was purely advocacy. ಅವರು ಏನೇ ಹೇಳಿದರೂ ಕೂಡ ಹಣಕಾಸು ಮಂತ್ರಿಯವರು ಅದನ್ನು ಸ್ವೀಕಾರ ಮಾಡಬಹುದು ಅಥವಾ ತಿರಸ್ಕಾರ ಮಾಡಬಹುದು. ಅವರು ಏನು ಹೇಳುತ್ತಿದ್ದಾರೆ ಎಂದರೆ, ಈ ಹಿಂದೆ Planning Commission ಇತ್ತು. ಅವರು ಚಾಚು ತಪ್ಪದೇ ಸರ್ಕಾರಗಳು ಮಾಡಬೇಕಾಗಿತ್ತು. ಆ ಸಂಸ್ಥೆಯನ್ನು dismantle ಮಾಡಿ, ಈಗ ನೀತಿ ಆಯೋಗ ಎನ್ನುವ ಒಂದು dummy ಸಂಸ್ಥೆಯನ್ನು ಕೂರಿಸಿ, ಎಸ್.ಸಿ., ಎಸ್.ಟಿ., ಅವರಿಗೆ ಮೋಸ ಆಗುತ್ತದೆ ಎಂದು ಹೇಳುವುದಕ್ಕೆ ಹೊರಟಿರುವಂತಹದ್ದು. ಸಂವಿಧಾನ ಹೋಯಿತು, ಡಾ॥ ಬಿ.ಆರ್. ಅಂಬೇಡ್ಕರ್‌ರವರನ್ನು ಸೋಲಿಸಿದ್ದಾಯಿತು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಚಿವರೇ, ಒಂದು ನಿಮಿಷ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ನಾನು ಇನ್ನೂ yield ಆಗಿಲ್ಲ. ಒಂದು ನಿಮಿಷ. ಈ ಹಿಂದೆ ಹಣಕಾಸು ಮಂತ್ರಿಯವರಿಗೆ binding ಇದ್ದಾಗ, ಇರುವ ಹಣವೆಲ್ಲಾ ಅಲ್ಲಿಗೆ ಹೋಗುತ್ತಿತ್ತು. ಈಗ ನೀತಿ ಆಯೋಗದ ಬರುವ ಹಣವನ್ನು production linked incentives ಗೆ ರೂ. 5,000 ಕೋಟಿ ರೂಪಾಯಿಗಳು ಹೋಗುತ್ತಿದೆ. Import of urea ಗೆ ರೂ. 3,000 ಕೋಟಿಗಳು ಹೋಗುತ್ತಿದೆ. ಫಸಲ್ ಬೀಮಾ ಯೋಜನೆಗೂ ಕೂಡ ಹೋಗುತ್ತಿದೆ. ತಾವು ಇಲ್ಲಿ 7(ಡಿ) ಎಂದು ಏನು ಹೇಳುತ್ತಿದ್ದೀರಾ. ಯಾವ್ಯಾವೋ "ಡಿ" ಆಗಿದೆ. ಅದರ ಬಗ್ಗೆ

ಅವರು ಹೇಳುವುದಕ್ಕೆ ಹೊರಟಿರುವಂತಹದ್ದು. ಒಳ ಮೀಸಲಾತಿ ಚರ್ಚೆಗೆ ಬಂತು. ಒಳ ಮೀಸಲಾತಿಯ ಬಗ್ಗೆ ಬಿಟ್ಟು ಬಿಡೋಣ. ಮೀಸಲಾತಿಯನ್ನು ತೆರವುಗೊಳಿಸಬೇಕು, ಇದು ನಮ್ಮ ಪ್ರಜಾಪ್ರಭುತ್ವಕ್ಕೆ ಸರಿಯಲ್ಲ ಎಂದು ಹೇಳಿ ನ್ಯಾಯಮೂರ್ತಿ ರಾಮಾ ಜೋಯಿಸ್‌ರವರು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿರುವ ಉದಾಹರಣೆಗಳು ಇವೆ.

**ಶ್ರೀ ಎನ್. ರವಿಕುಮಾರ್:-** ಇದು ಸುಳ್ಳು.

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಇದೆಲ್ಲಾ ಸುಳ್ಳು.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಒಂದು ನಿಮಿಷ ಅದರ ಬಗ್ಗೆ ಹೇಳುತ್ತೇನೆ. ನಾನು ನಿಮಗೆ interrupt ಮಾಡಿಲ್ಲ. ಈಗ ಡಾ॥ ಬಿ.ಆರ್. ಅಂಬೇಡ್ಕರ್‌ರವರ ಬಗ್ಗೆ ಹೇಳಿದರು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಸುಳ್ಳು ಹೇಳಿ ಸದನದ ದಾರಿ ತಪ್ಪಿಸುತ್ತಿದ್ದಾರೆ.

**ಶ್ರೀ ಪ್ರಿಯಾಂಕ್ ಖರ್ಗೆ:-** ಅಂಬೇಡ್ಕರ್‌ರವರು ಕಾಂಗ್ರೆಸ್ ಬಗ್ಗೆ ಒಂದು ಪುಸ್ತಕವನ್ನು ಬರೆದಿದ್ದಾರೆ. "What the Congress did for the depressed class?" ಎಂದು ಹೇಳಿದ್ದಾರೆ. 1955 ರಲ್ಲಿ ಅಂಬೇಡ್ಕರ್‌ರವರು ಒಂದು ಪತ್ರವನ್ನು ಬರೆಯುತ್ತಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಸುಳ್ಳು ಹೇಳಿ ಸದನದ ದಾರಿ ತಪ್ಪಿಸುವುದು ಬೇಡ. ಮಾನ್ಯ ಸುಧಾಮ್‌ದಾಸ್‌ರವರು ಹೇಳಿದ್ದನ್ನು ನಾನು ಹೇಳುತ್ತೇನೆ. ಎಸ್‌ಸಿಎಸ್‌ಪಿ/ಟಿಎಸ್‌ಪಿ ಹಣ ಕೊಟ್ಟಿದ್ದಾರೆ, ಅಧಿಕಾರಿಗಳು ದಾರಿ ತಪ್ಪಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಅಧಿಕಾರಿಗಳ ದಾರಿ ತಪ್ಪಿಸಿದರು. ಸರ್ಕಾರ ಅಧಿಕಾರಿಗಳ....

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ನನ್ನ ಸೋಲಿಗೆ ವೀರ್ ಸಾವರ್ಕರ್ ಕಾರಣ ಎಂದು ಪತ್ರ ಬರೆದಿದ್ದಾರೆ. ಇದು ಖುದ್ದಾಗಿ handwritten ನಲ್ಲಿ ಇದೆ. ಇವರು ಅಂಬೇಡ್ಕರ್‌ರವರನ್ನು ಸೋಲಿಸಿದ್ದು ಕಾಂಗ್ರೆಸ್ಸ್‌ನವರು ಎಂದು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಇದು ಸುಳ್ಳು.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಕೆಳಮನೆಯಲ್ಲಿ ರಾಜೀನಾಮೆ ಕೊಡುತ್ತೇನೆಂದು ಹೇಳಿದ್ದರು. ನಾನು ದಾಖಲೆ ಸಮೇತ ಕೊಡುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ನೀವು ಸಾಬೀತು ಮಾಡಿ. ನಾನು ರಾಜಿನಾಮೆ ಕೊಡುತ್ತೇನೆ, ಇದೆಲ್ಲಾ ಸುಳ್ಳು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಕೆಳಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಹೇಳಿದರೂ ಸಹ ಇದು ಸುಳ್ಳು.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಅಂಬೇಡ್ಕರ್‌ರವರ ಕೈ ಬರಹದಲ್ಲಿ ಇದೆ.

**(ಗೊಂದಲ)**

**ಶ್ರೀ ಛಲವಾದಿ ಟ. ನಾರಾಯಣಸ್ವಾಮಿ:–** ನಿಮ್ಮ ಬಂಡವಾಳ ಎಲ್ಲವೂ ಇದರಲ್ಲಿ ಇದೆ.

**(ಗೊಂದಲ)**

**(ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಈ ಹಂತದ ನಡವಳಿಯನ್ನು ದಾಖಲಿಸಿರುವುದಿಲ್ಲ)**

(ಮುಂದು)

(562) 21.03.2025/11.40/ಟಿಸಿಹೆಚ್–ಎಂಡಿ (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ನಾವು ಸಂವಿಧಾನವನ್ನು ಬದಲಾವಣೆ ಮಾಡುತ್ತೇವೆಂದು ಮಾನ್ಯ ಅನಂತ್ ಕುಮಾರ್ ಹೆಗಡೆಯವರು ಹೇಳಿದ್ದಾರೋ, ಇಲ್ಲವೋ?

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡಿದ ನಂತರ ವಿರೋಧ ಪಕ್ಷದವರು ಮಾತನಾಡಲಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ನಿಮ್ಮವರು ರಾಮಲೀಲಾ ಮೈದಾದನದಲ್ಲಿ ನಾವು ಸಂವಿಧಾನವನ್ನು ಬದಲಾವಣೆ ಮಾಡುತ್ತೇವೆ, ಮನುಸ್ಮೃತಿ ನಮ್ಮ ಸಂವಿಧಾನ ಆಗಬೇಕು ಎಂದು ಹೇಳಿದ್ದಾರೋ ಇಲ್ಲವೋ? **(ಗೊಂದಲ)** ನೀವು ನಿಮ್ಮ ಆತ್ಮಸಾಕ್ಷಿಯಾಗಿ ಹೇಳಿ, ಆ ದೇವರ ಸಾಕ್ಷಿಯಾಗಿ ಹೇಳಿ. ರಾಮನ ಹೆಸರಿನಲ್ಲಿ ಪ್ರಮಾಣ ಮಾಡಿ ನೀವು. ಆರ್.ಎಸ್.ಎಸ್ ನವರು ನಮಗೆ ಸಂವಿಧಾನ ಬೇಡ, ಮನುಸ್ಮೃತಿ ಬೇಕು ಎಂದು ಹೇಳುತ್ತಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ರಾಮನ ಪೂಜೆಯನ್ನು ರಾತ್ರಿ ಮಾಡಿದವರು ಯಾರು? ನಮಗೇನೂ ಗೊತ್ತಿಲ್ಲವೇ? ನಮಗೂ ಗೊತ್ತಿದೆ. ಅವರು ಹೇಳುತ್ತಿರುವುದು ಸುಳ್ಳು.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ಅವರು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ಆದರೆ ಇವರು ಸುಳ್ಳು ಎಂದು ಹೇಳುತ್ತಿದ್ದಾರೆ. **(ಗೊಂದಲ)** ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್‌ರವರನ್ನು ಸೋಲಿಸಿದ್ದು ವೀರ ಸಾವರ್ಕರ್‌ರವರೇ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಕೂಡ ಕನ್ನಡ ಮೀಡಿಯಮ್, ಇಂಗ್ಲೀಷ್ ಮೀಡಿಯಮ್ ಅಲ್ಲ. ಅಂಬೇಡ್ಕರ್‌ರವರ ಪತ್ರ ಇಂಗ್ಲೀಷ್‌ನಲ್ಲಿದೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಇದೆಲ್ಲಾ ಹೇಳಬೇಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಶ್ರೀ ವೀರ ಸಾವರ್ಕರ್ ರವರು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ರವರನ್ನು ಸೋಲಿಸಿದ್ದಾರೆ ಎಂದು ಈ ಪತ್ರದಲ್ಲಿ ಎಲ್ಲಾದರೂ ಇದ್ದರೆ ತೋರಿಸಲಿ. **(ಗೊಂದಲ)** . . . ಇಲ್ಲವೆಂದರೆ ಅವರು ರಾಜೀನಾಮೆ ನೀಡುತ್ತಾರೆಯೇ ಕೇಳಿ, ಸಾಬೀತು ಮಾಡಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, **(ಗೊಂದಲ)** RSS (Rashtriya Swayamsevak Sangh) ನವರು Organizer ಪತ್ರಿಕೆಯಲ್ಲಿ ವರದಿ ಮಾಡಿರುವುದನ್ನು ನಾನು ಓದುತ್ತೇನೆ. ಪತ್ರಿಕೆಯಲ್ಲಿ ಬರೆದಿರುವುದನ್ನು ಇವರು ಓದಿದರೆ ಗೊತ್ತಾಗುತ್ತದೆ. **(ಗೊಂದಲ)** RSS ನವರಿಗೆ ಪ್ರಜಾಪ್ರಭುತ್ವದ ಸಂವಿಧಾನ ಬೇಡ, ಮನುಸ್ಮೃತಿ ಬೇಕು. ಅವರ ಗುರು ರಾಮಲೀಲಾ ಮೈದಾನದಲ್ಲಿ ಏನು ಹೇಳಿದ್ದಾರೆ? **(ಗೊಂದಲ)** ನಾವು ಈ ಸಂವಿಧಾನವನ್ನು ಬದಲಾವಣೆ ಮಾಡುವುದಕ್ಕೆ ಬಂದಿದ್ದೇವೆ ಎಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ರವರನ್ನು ಸೋಲಿಸಿದ್ದು ಕಾಂಗ್ರೆಸ್‌ನವರು. ಜೀವನ ಪೂರ್ತಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ರವರನ್ನು ವಿರೋಧ ಮಾಡಿದವರು ಕಾಂಗ್ರೆಸ್‌ನವರು.

**(ಗೊಂದಲ)**

**ಶ್ರೀ ಎಂ.ನಾಗರಾಜ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅನುಮತಿಯನ್ನು ನೀಡಬೇಕು. ಡಿಸೆಂಬರ್ 17ನೇ ತಾರೀಖು ರಾಜ್ಯಸಭೆಯಲ್ಲಿ ಗೃಹ ಸಚಿವರು,,,,, **(ಗೊಂದಲ)** ಅಂಬೇಡ್ಕರ್, ಅಂಬೇಡ್ಕರ್ .......... **(ಗೊಂದಲ)** **......**

**ಶ್ರೀ ಎನ್.ರವಿಕುಮಾರ್:-** ಸುಮ್ಮನೆ ಸಾವರ್ಕರ್ ಆರ್‌ಎಸ್‌ಎಸ್ ಹೆಸರು ಹೇಳುತ್ತೀರಿ. ಬಾಬಾ ಸಾಹೇಬ್ ಡಾ.ಬಿ.ಆರ್ ಅಂಬೇಡ್ಕರ್‌ರವರಿಗೆ ಭಾರತ ರತ್ನ ಪ್ರಶಸ್ತಿ ಕೊಡದೇ ಇರುವವರು ನೀವು, ಅಂಬೇಡ್ಕರ್‌ರವರಿಗೆ ಪದ್ಮಭೂಷಣ..... ಇದು ಕಾಂಗ್ರೆಸ್ಸಿನ ಯೋಗ್ಯತೆ. ಕಾಂಗ್ರೆಸ್ಸಿನ ಯೋಗ್ಯತೆಗೆ ಧಿಕ್ಕಾರವಿರಲಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಬಾಬಾ ಸಾಹೇಬ್ ಡಾ. ಬಿ.ಆರ್ ಅಂಬೇಡ್ಕರ್‌ರವರಿಗೆ ಅಂತ್ಯ ಸಂಸ್ಕಾರಕ್ಕೆ 3 ಅಡಿ 6 ಅಡಿ ಜಾಗ ಕೊಡದೇ ಇರುವವರು ಇವರು, ಏನು ಇವರ ಯೋಗ್ಯತೆ? ಇವರಿಗೆ ನಾಚಿಕೆ ಆಗಬೇಕು.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಂ.ನಾಗರಾಜುರವರು ಸದನದ ಬಾವಿಗೆ ಆಗಮಿಸಿ ಘೋಷಣೆಗಳನ್ನು ಕೂಗುತ್ತಾ ಧರಣಿಯಲ್ಲಿ ನಿರತರಾದರು)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವತ್ತು ಆಡಳಿತ ಪಕ್ಷದ ಸದಸ್ಯರು ಬಾವಿಗೆ ಬಂದಿದ್ದಾರೆ. ಬಹಳ ಸಂತೋಷ. ಅವರು ಬಾವಿಯೊಳಗೆ ಮಾತನಾಡಬಹುದೇ? ಸರ್ಕಾರ ಬಾವಿಗೆ ಬಂದಿದೆ, ಎಷ್ಟು ಸಂತೋಷದ ಸಂಗತಿ!

**(ಈ ಹಂತದಲ್ಲಿ ಸದಸ್ಯರಾದ ಡಾ|| ಡಿ.ತಿಮ್ಮಯ್ಯನವರು ಸಹ ಸದನದ ಬಾವಿಗೆ ಬಂದರು)**

**Sri S.L.BOJEGOWDA:-** The House is not in order, House is not in order, House is not in order. ಮಾನ್ಯ ಸಭಾಪತಿಯವರೇ, ಈ ರೀತಿ ಮೌನ ವಹಿಸಿದರೆ ಹೇಗೆ? House is not in order.

**(ಈ ಹಂತದಲ್ಲಿ ಸದಸ್ಯರುಗಳಾದ ಶ್ರೀ ಎಂ.ನಾಗರಾಜು ಹಾಗೂ ಡಾ. ಡಿ.ತಿಮ್ಮಯ್ಯನವರು ಸದನದ ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿದರು)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕೊಡಿ. ನಾನು ಒಂದೇ ಒಂದು ಪ್ಯಾರಾಗ್ರಾಫ್ ಓದುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಅವರುಗಳು ಮಾತನಾಡಲಿ, ಯಾವುದು ಸಹ ರೆಕಾರ್ಡ್‌ಗೆ ಹೋಗುವುದಿಲ್ಲ.

**(ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಈ ಹಂತದಲ್ಲಿ ಯಾವುದೇ ನಡವಳಿಗಳನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿ, ಶ್ರೀಮತಿ ಭಾರತಿ ಶೆಟ್ಟಿ, ಶ್ರೀ ಐವನ್ ಡಿ'ಸೋಜಾ, ಶ್ರೀ ಪ್ರಿಯಾಂಕ್ ಖರ್ಗೆ, ಶ್ರೀ ಕೆ.ಎಸ್.ನವೀನ್, ಡಾ.ಯತೀಂದ್ರ ಎಸ್. ಮತ್ತು ಶ್ರೀ ಸಲೀಂ ಅಹಮದ್ ರವರು ಮಾತನಾಡಿದ್ದನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈಗ ವಾದ-ವಿವಾದ ಎರಡೂ ಕಡೆ ಇರುತ್ತದೆ. ಸರ್ಕಾರ ಹೇಳಿದ್ದನ್ನೂ ಕೂಡ ವಿರೋಧ ಪಕ್ಷದವರು ಕೇಳಬೇಕಲ್ಲವೇ? **(ಗೊಂದಲ)** ನಾವು ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂಥವರು. ಆದ್ದರಿಂದ ಅವಕಾಶ ಕೊಡಬಾರದು.

**(ಗೊಂದಲ)**

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕೂಡ ಇನ್ನಷ್ಟು ಮಾತನಾಡಿ.

**(ಗೊಂದಲ)**

(ಮುಂದು)

**(563)21.3.2025/11.50/ಎಂ.ಎಂ-ಎ.ಕೆ** **(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಈ ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ.

**ಸಭಾಪತಿಯವರು:-** ದಯಮಾಡಿ ಇನ್ನಷ್ಟು ಮಾತನಾಡಿ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸುಧಾಮ್‌ದಾಸ್‌ರವರು ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಹಣವನ್ನು ಸರ್ಕಾರ ಖರ್ಚು ಮಾಡುತ್ತಿಲ್ಲ ಎಂದು ಆಡಳಿತ ಪಕ್ಷದ ಸದಸ್ಯರಾಗಿ ಹೇಳುತ್ತಿದ್ದಾರೆ. ಅವರು ಮುಂದೆ ಹೇಳುತ್ತಿದ್ದರೆ ಅದನ್ನು track ತಪ್ಪಿಸುವುದಕ್ಕೆ ಕಾಂಗ್ರೆಸ್‌ನವರು ಪ್ರಯತ್ನ ಮಾಡುತ್ತಿದ್ದಾರೆ. ಅವರಿಗೆ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಹಣವನ್ನು ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)**:- ನೀವು ಮಾತನಾಡಬೇಡಿ, ನಿಮಗೇತಕ್ಕೆ ಬೇಕು?

**(ಗೊಂದಲ)**

**ಶ್ರೀ ಎ. ವಸಂತ ಕುಮಾರ್:-** ಮಾನ್ಯ ಸುಧಾಮ್‌ದಾಸ್‌ರವರು ಆಪಾದನೆ ಮಾಡಿದ್ದಾರೆ ಹೊರತು; ಸರ್ಕಾರ ಕೊಟ್ಟ ಅನುದಾನವನ್ನು ಅಧಿಕಾರಿಗಳು ಸರಿಯಾಗಿ ಅನುಷ್ಠಾನಗೊಳಿಸುತ್ತಿಲ್ಲ ಎಂದು ಹೇಳುತ್ತಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಒಂದು ನಿಮಿಷ ಕೇಳಿ. ಇದನ್ನೇ ಮುಂದುವರೆಸುತ್ತೀರಾ? ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಸ್ವತಂತ್ರವಿದೆಯೆಂದು ಬೇಕಾದ ಹಾಗೆ ಎದ್ದು ಇಡೀ ದಿನ ಇದನ್ನೇ ಮಾಡುವುದಲ್ಲ. ಹೀಗೇ ಮಾಡಿದರೆ ಸದನವನ್ನು ಮುಂದೂಡಬೇಕಾಗುತ್ತದೆ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಕುಳಿತುಕೊಳ್ಳಿ, ನಾನು ಹೇಳುವುದನ್ನು ಕೇಳಿ.

**(ಗೊಂದಲ)**

**ಶ್ರೀ ಎಂ. ನಾಗರಾಜು:-** ಪೀಠ ಹೇಳಿದ ಹಾಗೆ ಕೇಳಬೇಕು.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಪೀಠಕ್ಕೆ ಅಗೌರವ ತೋರುವುದು ಸರಿಯಲ್ಲ.

**(ಗೊಂದಲ)**

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** ಪೀಠವನ್ನು ಪ್ರಶ್ನೆ ಮಾಡುವ ಹಾಗಿಲ್ಲ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ಕೇಳಿ. ಸುಮ್ಮನೆ ಕುಳಿತುಕೊಳ್ಳಿ. ನಿಮಗೆ ಮಾನ ಮರ್ಯಾದೆ ಇದೆಯೇ? ಮಾನ್ಯ ಸಭಾನಾಯಕರೇ, ನಾನು ನಿಮಗೆ ಹೇಳುತ್ತೇನೆ . . .

**ಶ್ರೀ ಎ. ವಸಂತ ಕುಮಾರ್:-** ಮಾನ್ಯ ಸಭಾಪತಿಯವರಿಗೆ ಗೌರವ ಕೊಡದ ನೀವು ನಾಲಾಯಕ್.

**ಶ್ರೀ ಎನ್. ರವಿಕುಮಾರ್:-** ನೀವು ನಾಲಾಯಕ್.

**ಸಭಾಪತಿಯವರು:-** ಒಂದು ನಿಮಿಷ. ಮಾನ್ಯ ಸಭಾನಾಯಕರೇ, ನಿಮ್ಮಲ್ಲಿ ಬೇಕಾದ ಹಾಗೆ ಎದ್ದು ನಿಂತು ಮಾತನಾಡಿದರೆ ಅದು ಘನತೆ ಗೌರವ ಅಲ್ಲ. ನನಗೂ ಒಂದು ಮಿತಿ ಇರುತ್ತದೆ. ಕಡೆಪಕ್ಷ ನಾನು ಸುಮ್ಮನೆ ಕುಳಿತಾಗ ಅದನ್ನು ತಿಳಿದುಕೊಳ್ಳುವಂತಹ ಸೌಜನ್ಯ ಯಾರಿಗೂ ಇಲ್ಲ. ನಿಮ್ಮ ನಿಮ್ಮ ಕಡೆಯ ಸದಸ್ಯರನ್ನು ಕಂಟ್ರೋಲ್ ಮಾಡುವ ಜವಾಬ್ದಾರಿ ಸಭಾನಾಯಕರು ಮತ್ತು ವಿರೋಧ ಪಕ್ಷದ ನಾಯಕರಿಗಿದೆ. ಇದೆಲ್ಲವನ್ನೂ ಬಿಟ್ಟು ಈ ರೀತಿ ಮಾತನಾಡಿದರೆ ಏನನ್ನಿಸುತ್ತದೆ ಹೇಳಿ? ಒಬ್ಬರಾದರೂ ಮಾತನ್ನು ಕೇಳುತ್ತಾರಾ? ಮಂತ್ರಿಗಳು ಒಂದು ಕಡೆ ಮಾತನಾಡುತ್ತಾರೆ, ಇವರೂ ಒಂದು ಕಡೆ ಮಾತನಾಡುತ್ತಾರೆ. ಇದಕ್ಕೆ ಏನಾದರೂ ತಾಳ ತಂತಿ ಇಲ್ಲವೇ? ಯಾರೋ ಒಬ್ಬರು ಮಾತನಾಡುತ್ತಾರೆ, ಅವರೇನೋ ಕ್ಲಾರಿಫಿಕೇಷನ್ ಕೇಳಿದರು, ಅದು ಅಷ್ಟಕ್ಕೇ ಮುಗಿಯಬೇಕು. ಇಡೀ ಸದನ ಈ ರೀತಿ ಎದ್ದು ನಿಂತರೆ

ಹೇಗೆ? ನೀವು ಹೀಗೆಲ್ಲಾ ಗಲಾಟೆ ಮಾಡಿದರೆ ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ. ನಾನು ಯಾರಿಗೂ ಹೇಳುವುದಿಲ್ಲ. ಅವರು ಮಾತನಾಡುತ್ತಾರೆ, ಅವರು ಮಾತನಾಡಿ ಮುಗಿಸುವವರೆಗೂ ಬೇರೆ ಯಾರೂ ಮಾತನಾಡಬಾರದೆಂದು ನಿಮಗೆ ಹೇಳುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ, ಒಂದು ವಿಚಾರವನ್ನು ಕ್ಲಾರಿಫೈ ಮಾಡಬೇಕು.

**ಸಭಾಪತಿಯವರು:–** ಏತಕ್ಕೆ ಕ್ಲಾರಿಫೈ ಮಾಡುತ್ತೀರಿ? ಅವರು ಮಾತನಾಡುತ್ತಾರೆ. ನೀವು ಬರೆದಿಟ್ಟುಕೊಳ್ಳಿ. ಕೊನೆಯಲ್ಲಿ ನಿಮ್ಮ ಸರದಿ ಬಂದಾಗ ಮಾತನಾಡಿ. ಈಗ ಅವರು ಮಾತನಾಡುವಾಗ ನಡುವೆ ನೀವು ಈ ರೀತಿ ಮಾತನಾಡಿದರೆ ಹೇಗೆ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಏತಕ್ಕೆ ಕ್ಲಾರಿಫೈ ಮಾಡಬೇಕೆಂದು ಹೇಳುತ್ತೇನೆ. ಸದನಕ್ಕೆ wrong message ಹೋಗಬಾರದು. ಮಾನ್ಯ ಸಚಿವರಾದ ಪ್ರಿಯಾಂಕ್ ಖರ್ಗೆಯವರು . . .

**ಸಭಾಪತಿಯವರು:–** ಒಂದು ನಿಮಿಷ ಕೇಳಿ. ನಿಮಗದು ಸರಿ ಎನಿಸಿದರೆ ಬರೆದು ಕಳುಹಿಸಿ. ತಕ್ಷಣವೇ ನಾನು ಕಡತ ತರಿಸಿಕೊಂಡು ಸರಿಯಿಲ್ಲದಿದ್ದರೆ ಆಗಲೇ ಕಡತದಿಂದ ತೆಗೆಸುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ನಿಮ್ಮ ಗಮನಕ್ಕೇ ತರುತ್ತೇನೆ, ನಾನು ಅವರ ಕಡೆ ತಿರುಗಿಯೂ ಮಾತನಾಡುವುದಿಲ್ಲ. ಮಾನ್ಯ ಸಚಿವರು ಒಂದು ಪತ್ರವನ್ನು ಕೆಳಮನೆಯಲ್ಲೂ ಪ್ರದರ್ಶನ ಮಾಡಿದರು. ಆಮೇಲೆ ನಾನಿದನ್ನು ಸಾಬೀತು ಮಾಡುತ್ತೇನೆ; ಇಲ್ಲದಿದ್ದರೆ ನೀವು ರಾಜೀನಾಮೆ ಕೊಡಬೇಕು, ಇಲ್ಲವೆ ನಾನು ಕೊಡುತ್ತೇನೆಂದು ಹೇಳಿದರು. ಇದರಲ್ಲಿ ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಕಮಲಕಾಂತ್ ಎಂಬುವವರಿಗೆ ಜನವರಿಯಲ್ಲಿ ಒಂದು ಪತ್ರ ಬರೆಯುತ್ತಾರೆ. ಅದು ಅವರು ಸೋತ ಕ್ಷಣ. ಅದರಲ್ಲೇನಿದೆ ಎಂದರೆ, 'ಅಸೇಕರ್' ಎಂಬ ಒಬ್ಬ ವ್ಯಕ್ತಿ. ಆ ಪತ್ರದಲ್ಲಿ ಹೀಗೆ ಬರೆದಿದ್ದಾರೆ,

> *"Perhaps, what you say is true. Asogekar who was here recently told me that the plot to defeat me was hatched by Dange and Savarkar, who was inflamed by my…"*

ಇದೊಂದು ಬರಹ ಇದೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಯಾರು ಬೇಕಾದರೂ ಮಾತನಾಡಲಿ. ಅವರು ಇದನ್ನೆಲ್ಲಾ ತಂದು . . .

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಇಲ್ಲಿಯೇ ಇದೆ. ಒಂದು ನಿಮಿಷ ಕೇಳಿಸಿಕೊಳ್ಳಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, . . .

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ,

*"...Asogekar who was here recently told me that the plot to defeat me was hatched by Dange and Savarkar, who was inflamed by my proposal to partition Kashmir. He said, that was revealed to him by Salgaonkar."*

ಅಂದರೆ ಅವರು ಹೇಳಿದರು ಎಂದು ಇವರು ನನ್ನ ಹತ್ತಿರ ಹೇಳಿದರು. ಆದರೆ ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರೇ ಇದನ್ನು ಹೇಳಿದ್ದಾರೆ ಎಂದು ಇವರು ಹೇಳುತ್ತಿರುವುದು. ಇದು ತಪ್ಪಲ್ಲವೇ? ಅಂಬೇಡ್ಕರ್‌ರವರು ಎಲ್ಲಿ ಹೇಳಿದ್ದಾರೆ?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಅಂಬೇಡ್ಕರ್‌ರವರೇ ಸಾವರ್ಕರ್ ನನ್ನನ್ನು; ಅಂದಮೇಲೆ ನಾವು ಕನ್ನಡದವರು. ಹೋಗಲಿ, ಇಂಗ್ಲಿಷ್ ಬರುವವರು ಇದಕ್ಕೆ ಅರ್ಥ ಹೇಳಿ.

**(ಗೊಂದಲ)**

**ಡಾ: ಯತೀಂದ್ರ. ಎಸ್:–** ಸುಳ್ಳು, ಅಂಬೇಡ್ಕರ್‌ರವರು ಹೇಳಿಲ್ಲ.

**(ಗೊಂದಲ)**

**ಶ್ರೀ ಎ. ವಸಂತ ಕುಮಾರ್:–** ಮಾನ್ಯ ಸಭಾಪತಿಯವರೇ, ಈ ಪತ್ರವನ್ನು ಸರಿಯಾಗಿ ಅರ್ಥಮಾಡಿಕೊಂಡು (**ಗೊಂದಲ**)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಪಂಡಿತ್ ಜವಹರಲಾಲ್ ನೆಹರು ಅವರು ಲೇಡಿ ಮೌಂಟ್ ಬ್ಯಾಟನ್ ಅವರಿಗೆ ಪತ್ರ ಬರೆಯುತ್ತಾರೆ. ಅಂಬೇಡ್ಕರ್‌ರವರನ್ನು ಸೋಲಿಸಿದ್ದು ಬಹಳ ಖುಷಿಯಾಗಿದೆ ಎಂದು ಒಬ್ಬ ಹೆಣ್ಣಿನ ಮುಂದೆ ಸಂಭ್ರಮ ಪಡುತ್ತಾರೆ. ಅವರೇನು ಆಫೀಸರ್ ಅಲ್ಲ. ಮೌಂಟ್ ಬ್ಯಾಟನ್ ಅವರು . . .

**(ಗೊಂದಲ)**

**ಡಾ: ಯತೀಂದ್ರ. ಎಸ್:–** ಇವರಿಬ್ಬರು ವಿರೋಧ ಪಕ್ಷದಲ್ಲಿದ್ದಾರೆ. ಈ ಭಾಗದಲ್ಲಿ ಇದ್ದಾಗ (**ಗೊಂದಲ**)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಇಂತಹ ಕಾಂಗ್ರೆಸ್‌ನ ವಿಕೃತ ಮನುಷ್ಯರು ;

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಈಗ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಪ್ರಿಯಾಂಕ್ ಖರ್ಗೆಯವರೇ, ಕುಳಿತುಕೊಳ್ಳಿ, ಅವರು ಮಾತನಾಡಲಿ.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ಹೆಸರು ಹೇಳುತ್ತಿದ್ದಾರೆ. ನಿಮ್ಮ ಅನುಮತಿ...

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, officially published letter ಇದು. ಓದುವುದಕ್ಕೆ ಅವಕಾಶ ಕೊಡಬೇಕು.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ಮೊದಲು ನನಗೆ ಅವಕಾಶ ಕೊಡಿ. ಅವರು ಈಗ ಎದ್ದಿದ್ದಾರೆ. ಮಾನ್ಯ ರವಿಯವರೇ, ಒಂದು ನಿಮಿಷ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಆ ಪತ್ರದಲ್ಲಿ ಹೀಗೆ ಬರೆದಿದ್ದಾರೆ,

*"My dear Edwina,*

*Do you remember my telling you about the hundred days which were going to be a difficult period for me? How I look forward to the beginning of February when those hundred days would be over!..."*

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಅವರು ಕ್ಲಾರಿಫೈ ಮಾಡಲಿ.

**(ಗೊಂದಲ)**

**ಸಭಾಪತಿಯವರು:–** ಕುಳಿತುಕೊಳ್ಳಿ. ಒಂದು ನಿಮಿಷ. ನಾನು ಹೇಳುತ್ತಿದ್ದೇನೆ, ಅವರು ಮಾತನಾಡುತ್ತಾರೆ. ಶ್ರೀಮತಿ ಹೇಮಲತಾ ನಾಯಕ್‌ರವರು ಏನೋ ಒಂದು query ಕೇಳಿದರು. ಕೇಳಿದ ನಂತರ ಅವರಿಗೆ ಬರೆದಿಟ್ಟುಕೊಳ್ಳಿ, ನಿಮ್ಮ ಪಾಳಿ ಬಂದಾಗ ಮಾತನಾಡಿ ಎಂದು ಹೇಳುತ್ತೇನೆ. ನನ್ನ ಅನುಮತಿ ಇಲ್ಲದೇ ಎಲ್ಲರೂ ಬೇಕಾದ ಹಾಗೆ ಮಾತನಾಡಿದರೆ ನಾನು ಏನು ಮಾಡುವುದಕ್ಕಾಗುತ್ತದೆ? ಪ್ರಾಮಾಣಿಕವಾಗಿ ಹೇಳಿ. ಅವರು ಮಾತನಾಡಲಿ. ನಿಮಗೇನಾದರೂ ಸ್ಪಷ್ಟೀಕರಣ ಬೇಕಾದರೆ;

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಮೊಬೈಲ್ ನೋಡಿಕೊಂಡು ಹೇಳುತ್ತಾರೆ.

**ಸಭಾಪತಿಯವರು:–** ಒಂದು ನಿಮಿಷ ಕೇಳಿ. ಇಲ್ಲಿಗೆ ಬರುವವರೆಲ್ಲಾ ತಿಳಿದುಕೊಳ್ಳಬೇಕು. ಇಲ್ಲಿಗೆ ಯಾರೂ ಮೊಬೈಲ್ ತರಬಾರದು ಎಂದು ಹೇಳುತ್ತಿದ್ದೇನೆ.

**ಶ್ರೀ ಎನ್. ರವಿಕುಮಾರ್:–** ಮಂತ್ರಿಗಳು ತಂದಿದ್ದಾರೆ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ನಾನು ಹೇಳುತ್ತಿದ್ದೇನೆ, ಅದನ್ನು ಕೇಳುವುದಕ್ಕೆ ನಿಮಗೆ ಪುರುಸೊತ್ತಿಲ್ಲವೇ? ನನ್ನ ಬಾಯಿಯಲ್ಲಿ ಬಹಳ ಕೆಟ್ಟ ಮಾತು ಬರುತ್ತದೆ. ನೀವು ಕೇಳುವುದೇ ಇಲ್ಲ. ನಾನು ಹೇಳುತ್ತೇನೆ, ಇಲ್ಲಿ ಯಾರೂ ಮೊಬೈಲನ್ನು ಉಪಯೋಗ ಮಾಡಬಾರದು ಎಂದು ನೂರು ಸಲ ಹೇಳಿದ್ದೇನೆ. ಸುತ್ತೋಲೆ ಸಹ ಕಳುಹಿಸಿದ್ದೇನೆ. ಅಷ್ಟಿದ್ದರೂ ಮೊಬೈಲ್, ಲ್ಯಾಪ್‌ಟಾಪ್ ತಂದರೆ ಏನು ಮಾಡುವುದು? ದಯಮಾಡಿ ಯಾರೂ

ಮಾತನಾಡಬಾರದು. ನನ್ನ ಅನುಮತಿ ಇಲ್ಲದೇ ಮಾತನಾಡಿದರೆ ಯಾವುದೂ ಕಡತಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರಾದ ಸುಧಾಮ್‌ದಾಸ್‌ರವರು ಮಾತನಾಡಿ ಮುಗಿಸುವವರೆಗೆ ದಯಮಾಡಿ ಯಾರೂ ಮಾತನಾಡಬೇಡಿ. ನೀವು ಮಾತನಾಡಬೇಕೆಂದರೆ, ಕೈ ಎತ್ತಿ. ಮಾನ್ಯ ಮಂತ್ರಿಗಳೇ ದಯವಿಟ್ಟು ಮಾತನಾಡಬೇಡಿ. Please ಕುಳಿತುಕೊಳ್ಳಿ. ಯಾರೂ ಮಾತನಾಡಬೇಡಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. For clarification, permission ಕೇಳುತ್ತೇನೆ.

**ಸಭಾಪತಿಯವರು:-** ನಾನು ಅವಕಾಶ ಕೊಡುವುದಿಲ್ಲ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ clarification ಗೆ ಅವಕಾಶ ಕೊಡಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನಾನು ಅನುಮತಿ ಕೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ನೀವು ಇಲ್ಲಿ ಕುಳಿತುಕೊಂಡು ಕೆಲಸ ಮಾಡಿದ್ದೀರಿ, ನಿಮಗೆ ತಿಳಿಯುವುದಿಲ್ಲವೇ?

(ಮುಂದು)

**(564) 21.03.2025 (12.00) ಹೆಚ್‌ವಿ.ಎಕೆ** **(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಸನ್ಮಾನ್ಯ ಸಭಾಪತಿಯವರೇ, ಲೇಡಿ ಎಡ್ವಿನಾ ಮೌಂಟ್ ಬ್ಯಾಟನ್‌ಗೂ, ಮಾನ್ಯ ಜವಾಹರಲಾಲ್ ನೆಹರು ಅವರಿಗೂ ಏನು ಸಂಬಂಧ? ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರನ್ನು ಸೋಲಿಸಿದ್ದನ್ನು ಮಾನ್ಯ ನೆಹರುರವರು ಅವರೊಂದಿಗೆ ಹಂಚಿಕೊಂಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಯಾರೂ ಮಾತನಾಡಬೇಡಿ, ನಾನು ಯಾರಿಗೂ ಮಾತನಾಡಲು ಅವಕಾಶವನ್ನು ಕೊಡುವುದಿಲ್ಲ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ(ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಅವರು ನನ್ನ ಹೆಸರು ಹೇಳಿದ್ದಾರೆ; ಅದಕ್ಕಾಗಿ ನಾನು ಸ್ಪಷ್ಟೀಕರಣವನ್ನು ನೀಡಬೇಕಾಗಿದೆ. ಅದಕ್ಕಾಗಿ ನಾನು ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕೆಲವೊಂದು ಸವಲತ್ತುಗಳಿರುತ್ತದೆ. ಅವರು ಯಾವಾಗ ಬೇಕಾದರೂ ಎದ್ದು ಮಾತನಾಡಬಹುದು. ಅದು ಪದ್ಧತಿಯಾಗಿದೆ. ಅದಕ್ಕಾಗಿ ಅವರಿಗೆ ಮಾತನಾಡಲು ಅವಕಾಶವನ್ನು ನೀಡಿದ್ದೇನೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಸನ್ಮಾನ್ಯ ಸಭಾಪತಿಯವರೇ, ಅವರು ನನ್ನ ಹೆಸರು ಹೇಳಿ ಉಲ್ಲೇಖಿಸಿದ್ದಾರೆ; ನಾನು ಕೊಟ್ಟಿರುವ ಸಾಕ್ಷಿ, ಅದಕ್ಕಾಗಿ ನಾನು ಸ್ಪಷ್ಟೀಕರಣವನ್ನು ನೀಡಬೇಕಾಗಿದೆ. ನಾನು ಓದುವುದಕ್ಕೆ ಹೋಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಪ್ರಿಯಾಂಕ್ ಖರ್ಗೆಯವರೇ, ಸರ್ಕಾರ ಉತ್ತರ ಹೇಳುವಾಗ ಹೇಳುವಿರಂತೆ, ಈಗ ಮಾತನಾಡುವುದು ಬೇಡ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಡಾ||ಬಿ.ಆರ್.ಅಂಬೇಡ್ಕರ್‌ರವರು ಸೋತಿದ್ದು, ನನಗೆ ಬಹಳ ಅಂತೋಷವಾಗಿದೆ ಎಂದು ಮಾನ್ಯ ಜವಹರಲಾಲ್ ನೆಹರುರವರು ಪತ್ರವನ್ನು ಬರೆಯುತ್ತಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಹೆಚ್.ಪಿ. ಸುಧಾಮ್‌ದಾಸ್‌ರವರೇ, ತಾವು ತಮ್ಮ ಮಾತುಗಳನ್ನು ಮುಂದುವರಿಸಿ. ಮಧ್ಯೆ ಯಾರೂ ಮಾತನಾಡಬಾರದು.

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):–** ಸನ್ಮಾನ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಕ್ಕೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ಕೊಡುವುದಕ್ಕೆ ಅವಕಾಶವನ್ನು ನೀಡಿ.

**(ಗೊಂದಲ)**

**ಶ್ರೀ ಹೆಚ್.ಪಿ.ಸುಧಾಮ್‌ದಾಸ್ (ನಾಮನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಏನೋ ಹೇಳಿಕೆ ಮಾಡಬೇಕೆಂದು ಹೇಳುತ್ತಿದ್ದಾರೆ. ಅದಕ್ಕಾಗಿ ನಾನು ಯೀಲ್ಡ್ ಆಗಿದ್ದೇನೆ.

**ಸಭಾಪತಿಯವರು:–** ಮಾನ್ಯ ಹೆಚ್.ಪಿ.ಸುಧಾಮ್‌ದಾಸ್‌ರವರೇ, ಅದು ನಿಮ್ಮ ಕೆಲಸವಲ್ಲ; ನನ್ನ ಕೆಲಸ. ನೀವು ಮಾತನಾಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, who is he to do that? Tell me. Who is he to tell that? ಅವರು ಯೀಲ್ಡ್ ಆಗಿದ್ದಾರೆ ಅಥವಾ ಇಲ್ಲ ಎನ್ನುವುದನ್ನು ತಾವು ಹೇಳಬೇಕು. ಪೀಠ ಹೇಳಬೇಕು.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ಯಾರು ಮಾತನಾಡಬೇಡಿ. ನಾನು ಅದನ್ನು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕಾಗಿ ಅವರು ಯೀಲ್ಡ್ ಆಗಿದ್ದಾರೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸುಧಾಮದಾಸ್‌ರವರು ಮಾನ್ಯ ಸಚಿವರು ಮಾತನಾಡುವುದಕ್ಕಾಗಿ ಯೀಲ್ಡ್ ಆಗಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಪೀಠವನ್ನು ದಬಾಯಿಸುತ್ತಿದ್ದಾರೆ. ನಿಮಗೆ ಅವರನ್ನು ದಬಾಯಿಸುವುದಕ್ಕೆ ಅಧಿಕಾರವಿಲ್ಲ. ಪೀಠಕ್ಕೆ ಹೇಳಿ.

**ಶ್ರೀ ಪುಟ್ಟಣ್ಣ:–** ಸನ್ಮಾನ್ಯ ಸಭಾಪತಿಯವರೇ, ಪೀಠವನ್ನು ಕೇಳದೆ ಅವರು ಹೇಗೆ ಮಾತನಾಡುತ್ತಿದ್ದಾರೆ? ಮಾನ್ಯ ಸದಸ್ಯರು, ಮಾನ್ಯ ಸಚಿವರಿಗೆ ಮಾತನಾಡಲು ಅವಕಾಶವನ್ನು ನೀಡಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ನಾನು ದಬಾಯಿಸುತ್ತಿಲ್ಲ. ನಾನು ನೇರವಾಗಿ ಅವರಿಗೆ ಹೇಳುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ನಾನು ತಮಗೆ ಹೇಳುತ್ತಿದ್ದೇನೆ. ವಿರೋಧ ಪಕ್ಷದ ನಾಯಕನಾಗಿ, ನನಗೆ ಕೆಲವು ಹಕ್ಕುಗಳಿವೆ. ನನ್ನ ಹಕ್ಕಿನ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಅಧಿಕಾರವಿಲ್ಲ. ಹೌದು, ನಾನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಪುಟ್ಟಣ್ಣ (ತಮ್ಮ ಸ್ಥಾನದಲ್ಲಿ ಕುಳಿತು):– [XXX]**

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಗೂಂಡಾಗಿರಿ ಮಾಡುತ್ತಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೆ, ಪಾಯಿಂಟ್ ಆಫ್ ಆರ್ಡರ್ ಮಾನ್ಯ ಪುಟ್ಟಣ್ಣನವರು, **[XXX]** ಎಂದು ಹೇಳುತ್ತಿದ್ದಾರೆ. ನಿನ್ನೆ ನೋಡಿದರೆ **[XXX]** ಎಂದು ಹೇಳಿದ್ದಾರೆ. ಅವರನ್ನು ಸದನದಿಂದ ಹೊರಗೆ ಹಾಕಬೇಕು.

---

**[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಗೆ ಆಗಮಿಸಿ ಧರಣಿ ನಿರತರಾಗಿ ಘೋಷಣೆಗಳನ್ನು ಕೂಗಲಾರಂಭಿಸಿದರು)**

**ಸಭಾಪತಿಯವರು(ತಮ್ಮ ಪೀಠದಿಂದ ಎದ್ದು ನಿಂತು):–** ಕಡತ ನೋಡಿ ಹೇಳುತ್ತೇನೆ. ಒಂದು ನಿಮಿಷ ಕಡತ ಕೊಡುತ್ತಾರೆ. ನಾನು ಕಡತ ನೋಡಬೇಕಲ್ಲ. ಒಂದು ನಿಮಿಷ ಸುಮ್ಮನಿರಿ.

**(ಗೊಂದಲ)**

**ಸಭಾಪತಿಯವರು:–** ಕಡತವನ್ನು ಕಳುಹಿಸಿಕೊಟ್ಟಿದ್ದಾರೆ. ಅದನ್ನು ತೆಗೆದುಕೊಂಡು ಎರಡೇ ನಿಮಿಷದಲ್ಲಿ ನಾನು ನಿರ್ಣಯವನ್ನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ(ತಮ್ಮ ಸ್ಥಾನಕ್ಕೆ ಮರಳಿ):–** ಸನ್ಮಾನ್ಯ ಸಭಾಪತಿಯವರೇ, ಮಾತಿನ ಮೇಲೆ ನಿಗಾ ಇರಬೇಕಾಗುತ್ತದೆ. ಮೊನ್ನೆ ಅವರೇ **[XXX]** ಎಂದು ಹೇಳಿರುವುದನ್ನು ಕಡತದಿಂದ ತೆಗೆದಿದ್ದೀರಿ; ತಾವು ಕಡತವನ್ನು ತರಿಸಬೇಕು.

**(ಗೊಂದಲ)**

**ಸಭಾಪತಿಯವರು:–** ಕಡತವನ್ನು ತರಿಸಿದ್ದೇನೆ. ಮಾನ್ಯ ಪುಟ್ಟಣ್ಣನವರು **[XXX]** ಎಂದು ಹೇಳಿದ್ದಾರೆ. ಇದು ಅವರು ಹೇಳುವಂತಹ ಪದ್ಧತಿಯಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ತಮ್ಮ ಪೀಠಕ್ಕೆ ಮರಳಿ):–** ಸನ್ಮಾನ್ಯ ಸಭಾಪತಿಯವರೇ, ಅವರನ್ನು ಹೊರಗೆ ಹಾಕಿ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಸನ್ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ತಾವು ಕೇಳಬೇಕು.

**(ಗೊಂದಲ)**

**ಸಭಾಪತಿಯವರು:–** ನಾನು ಹೇಳಿದಂತೆ ತಾವುಗಳು ಕೇಳಬೇಕು; ನೀವು ಹೇಳಿದಂತೆ ನಾನು ಕೇಳುವುದಲ್ಲ. ಕಡತವನ್ನು ತರಿಸಿ ನೋಡಿದ್ದೇನೆ; ಅವರು ಮಾತನಾಡಿದ್ದಾರೆ. ಅದನ್ನು ಕಡತದಿಂದ ತೆಗೆದು ಹಾಕಿದ್ದೇನೆ. ಮುಗಿಯಿತು.

**(ಗೊಂದಲ)**

**(ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಧಿಕ್ಕಾರ, ಘೋಷಣೆಗಳನ್ನು ಕೂಗಿದರು)**

---

**[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಸದನದಿಂದ ಹೊರಗೆ ಹಾಕಿ. ಮೊನ್ನೆ **[XXX]** ಎಂದು ಹೇಳಿದ್ದಾರೆ. ಇವತ್ತು **[XXX]** ಎಂದು ಹೇಳುತ್ತಿದ್ದಾರೆ.

**(ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಧಿಕ್ಕಾರ, ಘೋಷಣೆಗಳನ್ನು ಕೂಗಿದರು)**

**ಶ್ರೀ ಪುಟ್ಟಣ್ಣ:–** ಸನ್ಮಾನ್ಯ ಸಭಾಪತಿಯವರೇ, ನಾನು ಮೊನ್ನೆ **[XXX]** ಎಂದು ಅವತ್ತು ಹೇಳಿದ್ದೇನೆ. ಆದರೆ, ಇವತ್ತು **[XXX]** ಎಂದು ಯಾರಿಗೂ ಹೇಳಿದವನಲ್ಲ; ಯಾವೊತ್ತು ಹೇಳಿಲ್ಲ. ಇದು ಸುಳ್ಳು. ಇವತ್ತು ನಾನು ಹೇಳಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದನ್ನು ನಾನು ಕೇಳಿಸಿಕೊಂಡ ಕೂಡಲೇ ಎದ್ದು ನಿಂತಿದ್ದೇನೆ.

**(ಗೊಂದಲ)**

**ಸಭಾಪತಿಯವರು:–** ನನಗೆ ಇದು authentic record. ಆ ರೆಕಾರ್ಡ್‌ನಲ್ಲಿ ಏನು ಕೊಡುತ್ತಾರೆ. ಅದರ ಆಧಾರದ ಮೇಲೆ ನಾನು ತೀರ್ಪು ಕೊಟ್ಟಿದ್ದೇನೆ. ಬರೆದಿರುವುದನ್ನು ರೆಕಾರ್ಡ್‌ನಲ್ಲಿ ತಂದು ಕೊಟ್ಟಿದ್ದಾರೆ. ಅದನ್ನು ಕಡತದಿಂದ ತೆಗೆದು ಹಾಕುವುದಷ್ಟೇ ನನ್ನ ಕೆಲಸ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಮೊದಲು ಅವರನ್ನು ಸದನದಿಂದ ಹೊರಗೆ ಹಾಕಿ ಇಲ್ಲದಿದ್ದರೆ ನಾವು ಒಪ್ಪುವುದಿಲ್ಲ.

**ಸಭಾಪತಿಯವರು:–** ಒಂದು ನಿಮಿಷ ಕೇಳಿ, ನನಗಿರುವ ಅಧಿಕಾರದ ವ್ಯಾಪ್ತಿಯಲ್ಲಿ ಅಸಂಸದೀಯ ಪದಗಳಿದ್ದರೆ; ಅದನ್ನು ತೆಗೆದು ಹಾಕುವಂತಹ ಅಧಿಕಾರವಿದೆ. ಅದನ್ನು ಅವರು ಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಇದು ಒಂದು ದಿನದ ಪ್ರಶ್ನೆಯಲ್ಲ. ಪ್ರತಿದಿನ ಇದೇ ಆಗುತ್ತಿದೆ. ನಾವು ಒಪ್ಪುವುದಕ್ಕೆ ಆಗುವುದಿಲ್ಲ. ಅವರನ್ನು ಸದನದಿಂದ ಹೊರಗೆ ಹಾಕಬೇಕು. ಕಡತದಿಂದ ತೆಗೆದು ಹಾಕುವುದು ಬಿಡುವುದು ನಿಮಗೆ ಬಿಟ್ಟ ವಿಚಾರವಾಗಿದೆ. ಇದನ್ನು ನಾವು ಒಪ್ಪುವುದಕ್ಕೆ ಆಗುವುದಿಲ್ಲ. ಈ ದುರ್ನಡತೆಗೆ ಸದನದಲ್ಲಿ ಅವಕಾಶವಿರಬಾರದು.

(ಮುಂದು)

**[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

**(565) 21.3.2025 12.10 ಪಿಕೆ:ಆರ್‌ಎನ್ (ಸಭಾಪತಿಗಳ ಉಪಸ್ಥಿತಿ)**

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ಇದನ್ನು ಒಪ್ಪುವುದಕ್ಕಾಗುವುದಿಲ್ಲ. ಇದು ಒಂದು ದಿವಸದ ಪ್ರಶ್ನೆಯಲ್ಲ. ಪ್ರತಿದಿನ ದಿನ ಇದೇ ರೀತಿಯ ಮಾತುಗಳಿರುತ್ತವೆ. ಇದನ್ನು ಒಪ್ಪುವುದಕ್ಕೆ ಆಗುವುದಿಲ್ಲ. ಅವರನ್ನು ಸದನದಿಂದ ಹೊರಗೆ ಹಾಕಬೇಕು. ಕಡತದಿಂದ ತೆಗೆಯುವುದು, ಬಿಡುವುದು ನಿಮಗೆ ಸಂಬಂಧಪಟ್ಟ ವಿಷಯವಾಗಿದೆ. ಈ ರೀತಿ ಎರಡನೆಯ ಸಲ ಆಗುತ್ತಿದೆ. ಇಂಥದ್ದನ್ನು ಒಪ್ಪುವುದಕ್ಕೆ ಆಗುವುದಿಲ್ಲ. ಇಂತಹ ದುರ್ನಡೆಗೆ ಸದನದಲ್ಲಿ ಅವಕಾಶ ಇರಬಾರದು.

**(ಗೊಂದಲ)**

**ಸಭಾಪತಿಯವರು:-** ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವನ್ನು 12.11 ಗಂಟೆಯಿಂದ 10 ನಿಮಿಷಗಳ ಕಾಲ ಮುಂದೂಡಲಾಯಿತು)

(565) 21.03.2025 12.50 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**(10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿದ್ದ ಸದನವು ಪುನಃ ಮಧ್ಯಾಹ್ನ 12 ಗಂಟೆ 58 ನಿಮಿಷಗಳಿಗೆ ಸಮಾವೇಶಗೊಂಡಿತು)**

## ಆಡಳಿತ ಪಕ್ಷದ ಸದಸ್ಯರ ಪದಬಳಕೆಯ ಬಗ್ಗೆ ವಿರೋಧಪಕ್ಷದ ಸದಸ್ಯರಿಂದ ಆಕ್ಷೇಪ ಮತ್ತು ಧರಣಿ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಬಜೆಟ್ ಮೇಲೆ ಇನ್ನೂ ಸಾಕಷ್ಟು ಚರ್ಚೆಯಾಗಬೇಕಾಗಿದೆ. ಎಲ್ಲರೂ ಕೂಡ participate ಮಾಡಬೇಕಾಗಿದೆ. ಈಗಾಗಲೇ ತಾವು ಪೀಠದಿಂದ ಕಡತಕ್ಕೆ ಹೋಗಬಾರದೆಂದು ಹೇಳಿದ್ದಿರಿ. ಕಡತಕ್ಕೆ ಹೇಗೆ ಹೋಯಿತೆಂದು ನಮಗೂ ಅರ್ಥವಾಗುತ್ತಿಲ್ಲ. ನೀವು ಪೀಠದಿಂದಲೇ ಯಾವುದೂ ಕಡತಕ್ಕೆ ಹೋಗಬಾರದೆಂದು ಹೇಳಿದ್ದಿರಿ. ಮಾನ್ಯ ಪುಟ್ಟಣ್ಣ ಅವರು "ನಾನು ಹೇಳಿರುವುದಿಲ್ಲ" ಎಂದು ಆಗಲೇ ಹೇಳಿದ್ದಾರೆ. ಆದ್ದರಿಂದ ವಿರೋಧ ಪಕ್ಷದವರಿಗೆ ಕುಳಿತುಕೊಳ್ಳಲು ಹೇಳಿ,. ಸದನವನ್ನು ನಡೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಕೋರುತ್ತೇನೆ.

**ಶ್ರೀ ಎಸ್. ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಇದು ಬಹಳ ಗಂಭೀರವಾಗಿರುವ ಪ್ರಶ್ನೆ. ನಿನ್ನೆ ಒಂದು ವಿಚಾರ ಬಂದಾಗ **[XXX]** ಎನ್ನುವ ಪದವನ್ನು ಕಡತದಿಂದ ತೆಗೆದು ಹಾಕಿದ್ದಿರಿ. ಅದೇ ಸದಸ್ಯರು ಮಾತನಾಡಿರುವಂಥದ್ದು.

**(ಮುಂದು)**

**(567) 21-03-2025/1.00/ಎಂವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):**

ಇವತ್ತು ಆ ಸದಸ್ಯರು ನಾನು ಮಾತನಾಡಿಲ್ಲವೆಂದು ಹೇಳುತ್ತಾರೆ. ಅವರು ಮಾತನಾಡಿಲ್ಲವೆಂದರೆ, ತಾವು ಇಲ್ಲಿ ಬರೆದು ಅದನ್ನು ಓದಿದ್ದೀರಿ. ತಾವು ಅದನ್ನು ಓದಿದಾಗ, ಇದನ್ನು ತಾವು ಕಡತದಿಂದ ತೆಗೆದುಹಾಕಿದ್ದೇನೆಂದು already ಹೇಳಿಬಿಟ್ಟಿದ್ದೀರಿ. ತಾವು ಹೇಳಿದ ಮೇಲೆ ಮಾನ್ಯ ಸದಸ್ಯರು ಹೇಳಿಲ್ಲವೆಂದು ಹೇಳುತ್ತಿದ್ದಾರೆ. ಅದು ಹೇಗೆ ಬಂತು ಎಂಬ ವಿಚಾರ ಬರಬೇಕು. ಆದರೆ, repeated ಆಗಿ ಈ ರೀತಿ ನಡೆಯುತ್ತಿರುವಂತಹ ವಿಚಾರದಲ್ಲಿ ತಮ್ಮ ಪೀಠದಿಂದ decision ಸರಿಯಾಗಿ ಬರಬೇಕಲ್ಲವೇ? ಇದು ಬಹಳ ಗಂಭೀರವಾಗಿ ಇರತಕ್ಕಂಥದ್ದು.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರೆ, ನಾನು ಹೇಳುವವರೆಗೆ ಎಲ್ಲರೂ ಶಾಂತರೀತಿಯಿಂದ ಕುಳಿತುಕೊಳ್ಳಬೇಕು. ಆಗ ನಾನು ಹೇಳುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಾಗಾದರೆ, ಅಲ್ಲಿಯವರೆಗೆ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ಇರಲಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಹೇಳಿದ ತಕ್ಷಣ ನಾನು ಎದ್ದುನಿಂತುಕೊಂಡಿದ್ದೇನೆ. ಇಲ್ಲವಾದರೆ ನಾನೇನು ನಿಂತುಕೊಳ್ಳುತ್ತಿರಲಿಲ್ಲ.

**ಸಭಾಪತಿಯವರು:** ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ತಮಗೆ ಈ ಸದನದ ನಿಯಮಗಳ ಬಗ್ಗೆ ಹೇಳುತ್ತೇನೆ ಕೇಳಿ. ಈಗ ನಿಯಮಗಳಲ್ಲಿ ಏನಿದೆ ಎಂದರೆ, ಈಗ ಗಲಾಟೆಯಾದಾಗ ಅದು ಕಡತಕ್ಕೆ ಹೋಗಬಾರದು ಎಂದು ಹೇಳಿರುತ್ತೇನೆ. ಆಗ ಯಾವುದೂ ಸಹ ಕಡತಕ್ಕೆ ಹೋಗುವುದಿಲ್ಲ. ಆಮೇಲೆ ಮತ್ತೊಮ್ಮೆ ಏನು ಹೇಳುತ್ತೇನೆಂದರೆ, ಅವರೆಲ್ಲರೂ ಮಾತನಾಡುವಾಗ ಯಾರು ನನ್ನ ಅನುಮತಿಯನ್ನು ತೆಗೆದುಕೊಂಡಿದ್ದಾರೆ, ಅವರ ಮಾತು ಮಾತ್ರ ಕಡತಕ್ಕೆ ಹೋಗಬೇಕು, ಬೇರೆ ಸದಸ್ಯರ ಮಾತು ಹೋಗಬಾರದೆಂದು ಹೇಳುತ್ತೇನೆ. ಆ ವಿಷಯ ಬಂದಾಗ, ಮಾನ್ಯ ಸದಸ್ಯರಾದ ಶ್ರೀ ಹೆಚ್.ಪಿ.ಸುಧಾಮ್ ದಾಸ್ ರವರು ಮಾತನಾಡುತ್ತಿದ್ದರು. ಅವರು ಮಾತನಾಡಿದಾಗ ಅದರ track ನಡೆಯಿತು. ಆ ರೀತಿ ನಡೆದಾಗ ಅದು ಬಂತು. ಅದು ಬಂದಿದ್ದರಿಂದ ನಮಗೆ ಏನು authentic ಎಂದರೆ, ಈ ಹಿಂದೆ ಬೆಳಗಾವಿ

**[XXX]**ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

ಅಧಿವೇಶನದಲ್ಲಿ ಆಗಿರುವುದು ತಮಗೆ ಗೊತ್ತಿರಬೇಕು. ನಮ್ಮದು ಅದು authentic ಇರುತ್ತದೆ. ಅದು ನಮಗೆ ಗೊತ್ತಾದಾಗ ಏನು ಮಾಡುತ್ತೇವೆ. ಅದು ದೊಡ್ಡ ವಿಷಯವಲ್ಲ. ಅದು unparliamentary word ಎಂದರೆ ಅದನ್ನು ಕಡತದಿಂದ ತೆಗೆದು ಹಾಕುತ್ತೇವೆ. ಆಗ ಅದು ಮುಗಿಯುತ್ತದೆ. ನಿಮ್ಮದು ಮುಗಿಯುತ್ತದೆ, ಅವರದು ಮುಗಿಯುತ್ತದೆ, ಎಲ್ಲರದು ಮುಗಿಯುತ್ತದೆ. ಆದುದರಿಂದ, ಇದನ್ನು ಬೆಳೆಸುವಂತಹ ಅವಶ್ಯತೆ ಇಲ್ಲ. ಈ ರೀತಿ ಪದೇಪದೇ ಮಾಡಿದರೆ, ಅದಕ್ಕೆ ನಮ್ಮಲ್ಲಿ ನಿಯಮಗಳಿವೆ. ನಾನು ಅದನ್ನು ಏನು ಮಾಡಬೇಕೆಂದು ನೋಡುತ್ತೇನೆ. ನಾನು ಅದನ್ನು ನೋಡುತ್ತಿದ್ದೇನೆ. ಅದನ್ನು ಇನ್ನು ತರಿಸಿಲ್ಲ. ಆದರೆ, ಅದನ್ನು ತರಿಸುತ್ತಿದ್ದೇನೆ. ಅದನ್ನು ತರಿಸಿ ನೋಡಿ, ಏನು ಮಾಡಬೇಕೆಂದು ವಿಚಾರ ಮಾಡಿ ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇನೆ. ನಿಮ್ಮಿಷ್ಟಕ್ಕೆ ನೀವು ಎದ್ದು ಅಲ್ಲಿ ಇಷ್ಟು, ಇಲ್ಲಿ ಇಷ್ಟು ಮಾತನಾಡಿದರೆ, ನಾನು ಆ ಸಮಯದಲ್ಲಿ ಪೀಠದಲ್ಲಿ ಸುಮಾರು 17 ನಿಮಿಷಗಳ ಕಾಲ ಸುಮ್ಮನೆ ಕುಳಿತುಕೊಂಡಿದ್ದೇನೆ. ಶ್ರೀಮತಿ ಹೇಮಲತಾ ನಾಯಕ್‌ರವರು ಏನೋ clarification ಕೇಳಿದರು. ನಂತರ ಶ್ರೀ ಹೆಚ್.ಪಿ.ಸುಧಾಮ್ ದಾಸ್‌ರವರು ಮಾತನಾಡಿದರು. ಅವರು ಮತ್ತು ಯಾರೋ ಹೇಳುತ್ತಿದ್ದರು. ಅದು ಅಲ್ಲಿಗೆ ಮುಗಿಯುತ್ತಿತ್ತು. ಅದನ್ನು ದೊಡ್ಡ issue ಮಾಡಿದರೆ, ಬಜೆಟ್ ಮೇಲೆ ಮಾತನಾಡುವುದಕ್ಕೆ ಇನ್ನು 18 ಜನ ಮಾನ್ಯ ಸದಸ್ಯರು ಇದ್ದಾರೆ. ಈಗ ಮತ್ತೆ ಇಬ್ಬರು ಸದಸ್ಯರು ತಮ್ಮ ಹೆಸರನ್ನು ಕೊಟ್ಟಿದ್ದಾರೆ. ಈಗ ಸುಮಾರು 7 ರಿಂದ 8 ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಉಳಿದಂತಹವರು ಮಾತನಾಡಬೇಕು. ಅವರು ಮಾತನಾಡಲಿ ಎಂದು ಹೇಳುತ್ತಿದ್ದೇನೆ. ದಯಮಾಡಿ ತಮಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಹೇಳುವುದೇನೆಂದರೆ, ನಾವು ಸದನವನ್ನು ನಡೆಸೋಣ. ಏಕೆಂದರೆ, ಸದನ ನಡೆಸುವುದಕ್ಕೆ ಇವತ್ತು ಕೊನೆಯ ದಿನವಾಗಿದೆ. ಮಾನ್ಯ ಮುಖ್ಯಮಂತ್ರಿಗಳು 3.00 ಗಂಟೆಗೆ ಬಂದು ಉತ್ತರ ಹೇಳುತ್ತೇನೆಂದು ಹೇಳಿದ್ದಾರೆ. ಈಗ 3.00 ಗಂಟೆಯವರೆಗೆ ಎಲ್ಲರೂ ಸಹ ಐದರಿಂದ ಹತ್ತು ನಿಮಿಷಗಳವರೆಗೆ ಮಾತನಾಡಿದರೆ, ಅವರ ಹೆಸರು ಸಹಿತ ಬರುತ್ತದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ. ನನ್ನ ಮಾತು ಕೇಳಿ, ಎಲ್ಲಾ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ಈಗ ಸದನವನ್ನು ನಡೆಸೋಣವೆಂದು ವಿನಂತಿ ಮಾಡುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸದನ ನಡೆಯಬಾರದು ಎಂಬುದು ನಮ್ಮ ಉದ್ದೇಶವಲ್ಲ. ನಾವು ಬಂದು ಸದನ ನಡೆಯಲಿ ಎಂದು ಎಷ್ಟು ಚೆನ್ನಾಗಿ cooperate ಮಾಡುತ್ತಿದ್ದೇವೆ. ಈಗ ಚರ್ಚೆ ಆಗಬೇಕು. ಈಗ ಸಮಯ ಸಾಕಾಗಲಿಲ್ಲ ಎಂಬುದೇ ನಿನ್ನೆಯಿಂದ ನಮಗೆ ಇರುವಂತಹ ಆತಂಕ. ಅದಕ್ಕೆ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾವು ಕೇಳಿಕೊಳ್ಳುತ್ತೇವೆ. ಈ ಕಡೆಯೂ 18 ಜನ ಮಾನ್ಯ ಸದಸ್ಯರು ಮಾತನಾಡುವವರು ಇದ್ದಾರೆ. ಆ ಕಡೆಯೂ ಸಹ ಮಾತನಾಡುವವರು ಇದ್ದಾರೆ. ಮತ್ತೆ ಜನತಾದಳ(ಎಸ್) ಸದಸ್ಯರು ಮಾತನಾಡುವಂತಹವರು ಇದ್ದಾರೆಂದು ನಾವೇ ಹೇಳಿದ್ದೇವೆ. ನಾವು ಅವಕಾಶ ಕೊಡಬೇಕು ಎಂತಲೇ ಹೇಳಿರುವುದು. ಆದರೆ, ತಾವು ನನಗೆ ಇದಕ್ಕೆ ಉತ್ತರ ಹೇಳಿ. ಈಗ ಮೊನ್ನೆಯ ದಿವಸ

**[XXX]** ಎಂದು ಹೇಳಿದರು. ನಾವು ಅದನ್ನು ಸಹಿಸಿಕೊಂಡೆವು. ತಾವು ಅದನ್ನು ಕಡತದಿಂದಲೂ ಸಹ ತೆಗೆದಿದ್ದೀರಿ. ಅದಕ್ಕೆ ಕ್ಷಮೆ ಕೇಳಿ ಆಯಿತು. ಅದಕ್ಕೆ ನಾವು ಆಯಿತು ಎಂದು ಬಿಟ್ಟಿದ್ದೇವೆ. ಆದರೆ, ಇವತ್ತು ನಮ್ಮ ಅಪ್ಪನವರೆಗೂ ಬಂದರು. ನಾಳೆಯ ದಿವಸ ಅವರು ಯಾರವರೆಗೂ ಬರಬಹುದು. ಇದು ಸದನದ ನೀತಿಯೇ? ಈ ರೀತಿ ನಡೆದುಕೊಳ್ಳಬೇಕೇ? ನಾವು ಇದನ್ನು ಕೇಳಿಸಿಕೊಂಡು ಸುಮ್ಮನೆ ಇರಬೇಕೇ?

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿಲ್ಲವೆಂದು ಹೇಳಿದ್ದಾರೆ. ಅದು ರೆಕಾರ್ಡ್ ಆಗಿದೆ. ತಾವು ರೆಕಾರ್ಡ್ ತರಿಸಿ ನೋಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈ ಸರ್ಕಾರಕ್ಕೆ...

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿಲ್ಲವೆಂದು ಹೇಳಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅವರು ಮಾನ್ಯ ಕಾರ್ಯದರ್ಶಿಯವರ ಬಳಿ ಬಂದು ಅವರನ್ನೆಲ್ಲಾ threaten ಮಾಡುತ್ತಿದ್ದಾರೆ. ಅಂದರೆ, ಅವರನ್ನು ನೀವು ಏನು ಅಂದುಕೊಂಡಿದ್ದೀರಿ? ನೀವು ಏಕೆ ಮಾಡಿದ್ದೀರಿ? ನಿಮ್ಮನ್ನು ಹಾಗೆ ಮಾಡುತ್ತೇನೆ, ನಿಮ್ಮ ಮೇಲೆ ಹಕ್ಕುಚ್ಯುತಿ ಮಂಡಿಸುತ್ತೇನೆಂದು ಅವರಿಗೆ ಧಮ್ಕಿ ಹಾಕುತ್ತಿದ್ದರು. ಅಂದರೆ, ನಾವು ಇದನ್ನೆಲ್ಲಾ ನೋಡಿಕೊಂಡು ಸುಮ್ಮನೆ ಇರಬೇಕೆಂದು ಹೇಳುತ್ತೀರಾ? ಆದುದರಿಂದ, ನಾವು ಇದನ್ನು ಬಿಡುವುದಕ್ಕೆ ಆಗುವುದಿಲ್ಲ. ತಾವು ಅವರನ್ನು ಹೊರಗಡೆ ಹಾಕಬೇಕು. ಅವರನ್ನು ಹೊರಗಡೆ ಹಾಕುವವರೆಗೂ ಇದು ಸಾಧ್ಯವೇ ಇಲ್ಲ. ಈ ಗೂಂಡಾಗಿರಿ ಕೆಲಸ...

**(ಗೊಂದಲ)**

**(ಈ ಹಂತದಲ್ಲಿ ಬಾವಿಯಲ್ಲಿ ಧರಣಿ ನಿರತರಾದ ಬಿ.ಜೆ.ಪಿ. ಮತ್ತು ಜೆಡಿ(ಎಸ್) ಪಕ್ಷದ ಮಾನ್ಯ ಸದಸ್ಯರು 'ಎಸ್.ಸಿ./ಎಸ್.ಟಿ. ಸಮುದಾಯಗಳಿಗೆ ಅವಮಾನ ಮಾಡಿದ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ' ಎಂದು ಘೋಷಣೆ ಕೂಗುತ್ತಿದ್ದರು)**

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**(ಗೊಂದಲ)**

---

**[XXX]**ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೂ ಸಹ ನಿಯಮಾವಳಿಗಳ ಬಗ್ಗೆ ಗೊತ್ತಿದೆ. **(ಗೊಂದಲ)** ನಾನು ರಾಜಕೀಯ ಮಾಡಿದ್ದೇನೆ. ಆದರೆ, ನಾನು ಎಲ್ಲರಂತೆ ಅಲ್ಲ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ಸಹ Deputy Chairman ಆಗಿ ಕೆಲಸ ಮಾಡಿದ್ದೇನೆ. ಆದುದರಿಂದ ನನಗೂ ಸಹ ನಿಯಮಾವಳಿಗಳ ಬಗ್ಗೆ ಗೊತ್ತಿದೆ.

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರೆ, ಒಂದು ನಿಮಿಷ. ಈಗ ಮಾನ್ಯ ಪುಟ್ಟಣ್ಣನವರು ಹೇಳುತ್ತಿದ್ದಾರೆ. ತಾವುಗಳು ಅವರು ಹೇಳುವುದಕ್ಕೆ ಆಸ್ಪದ ಕೊಡಬೇಕಲ್ಲವೇ? ಅವರು ಏನು ಹೇಳುತ್ತಾರೆಂದು ಹೇಳಲಿ. ಅವರು ಹೇಳುವುದನ್ನು ಕೇಳಿಸಿಕೊಳ್ಳಿ. ತಾವು ಈ ರೀತಿ ಏಕೆ ಗುದ್ದಾಡುತ್ತೀರಿ? ಮಾನ್ಯ ಪುಟ್ಟಣ್ಣನವರೆ ತಾವು ಸಮಾಧಾನವಾಗಿ ಮಾತನಾಡಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ಸಮಾಧಾನವಾಗಿ ಎರಡು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ತಮಗೆ ಗೊತ್ತಿರುವಂತೆ ನಾನು ಎರಡು ಬಾರಿ ಉಪ ಸಭಾಪತಿಯಾಗಿ ಮೂರು ವರ್ಷ ಕೆಲಸ ಮಾಡಿದ್ದೇನೆ. ಆದುದರಿಂದ, ನನಗೂ ಸಹ ನಿಯಮಾವಳಿಗಳ ಬಗ್ಗೆ ಗೊತ್ತಿದೆ. ನಾನು ತಮಗೆ ಏನು ಹೇಳಿದೆ ಎಂದರೆ, ದಯಮಾಡಿ ರೆಕಾರ್ಡ್ ಇರುತ್ತದೆ. ಅಲ್ಲಿ ಖಾಸಗಿ ವಾಹಿನಿಗಳು ಸಹ ಇದ್ದಾರೆ ಮತ್ತು ತಮ್ಮದೂ ಸಹ ಇದೆ. ನಾನು ತಮಗೆ ರೆಕಾರ್ಡ್ ನೋಡಿಬಿಟ್ಟು ಹೇಳಿ ಎಂದು ಹೇಳಿದೆ. ನಾನು ತಾವು ಏನು ಹೇಳಿದರೂ ಸಹ ಒಪ್ಪಿಕೊಳ್ಳುತ್ತೇನೆಂದು ಹೇಳಿದ್ದೇನೆ. ತಾವು ಅದನ್ನು ನೋಡಿಬಿಟ್ಟು ಹೇಳಿ. ಅದಕ್ಕೆ ನನ್ನದು ಏನೂ objection ಇಲ್ಲ. ನನಗೆ ಖಂಡಿತವಾಗಿ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರಿಗೆ ಅವಮಾನ ಮಾಡಬೇಕೆಂಬ ಭಾವನೆ ಇಲ್ಲ.

**(ಗೊಂದಲ)**

**ಸಭಾಪತಿಯವರು:–** ಸರಿ ಆಯಿತು.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನನಗೆ ಎರಡು ನಿಮಿಷಗಳ ಕಾಲಾವಕಾಶ ನೀಡಿ. ಈಗ ಎಂಟು ತಿಂಗಳ ಹಿಂದೆ ತೋಟಗಾರಿಕೆ ಇಲಾಖೆಗೆ ಒಬ್ಬರನ್ನು ಸಿಂಡಿಕೇಟ್ ಸದಸ್ಯರನ್ನಾಗಿ ಮಾಡಿದ್ದೀರಿ. ಆದರೆ, ಅದು issue ಆಗಿರಲಿಲ್ಲ. ಅದು ಬಿ.ಜೆ.ಪಿ. ಸದಸ್ಯರು. ನಾನು ಏನಾದರೂ ಬಿ.ಜೆ.ಪಿ. ಸದಸ್ಯರು ಎಂದು ಮಾತನಾಡಿದ್ದೇನೆಯೇ? ನಮ್ಮ ವಿಧಾನ ಪರಿಷತ್ತಿನ ಸದಸ್ಯರ ಗೌರವ ಉಳಿಯಬೇಕೆಂದು ನಾನೇ ಮೊನ್ನೆಯ ದಿವಸ raise ಮಾಡಿದೆ. ನಾನು

ಮೊನ್ನೆಯ ದಿವಸ ಮಾತನಾಡಿದಾಗ, ನಿನ್ನೆಯ ದಿವಸ ಅದರ order issue ಆಯಿತು. ನಾನು ಈಗಲೂ ಸಹ ಹೇಳುತ್ತಿದ್ದೇನೆ. ತಾವು ರೆಕಾರ್ಡ್ ನೋಡಿ, ಏನು ರೂಲಿಂಗ್ ಕೊಡುತ್ತೀರಿ, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ.

**ಸಭಾಪತಿಯವರು:–** ಆಯಿತು, ನಾನು ನೋಡಿರುವುದರಿಂದ ಹೇಳಿದ್ದೇನೆ. ನಾನು ಅದನ್ನು ಇನ್ನೂ ನೋಡುತ್ತಿದ್ದೇನೆ. ಟಿ.ವಿ. ಮತ್ತು ಬೇರೆ ಬೇರೆಯದನ್ನು ನೋಡುತ್ತಿದ್ದೇನೆ. ಅದನ್ನು ನೋಡಿ confirm ಮಾಡಿಕೊಂಡ ನಂತರ ಬಂದು ಸದನಕ್ಕೆ ಹೇಳುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾವು ಅದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ನಾವು ಈ ಅಪಮಾನವನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ತಾವು ನೋಡಿಬಿಟ್ಟು ಬಂದು ಆದೇಶ ನೀಡಿ. ಇದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ನಾನು ಹೇಳುವುದನ್ನು ಕೇಳಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅದು document ನಲ್ಲಿ ಇದೆ. ಅದು document ನಲ್ಲಿ ಇರುವುದನ್ನು ತಾವೇ ನೋಡಿದ್ದೀರಿ ಮತ್ತೆ ಹೇಳಿದ್ದೀರಿ. ಆಮೇಲೆ ಬಂದು ಹಕ್ಕುಚ್ಯುತಿ ಎಂದು ಅವರೆಲ್ಲರನ್ನು threaten ಮಾಡುತ್ತಿದ್ದಾರೆ. ಇದು ಗೂಂಡಾ ವರ್ತನೆ ಅಲ್ಲವೇ? ಸದನದಲ್ಲಿ ಈ ರೀತಿಯ ವರ್ತನೇ ಬೇಕೇ?

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಗೂಂಡಾ ನಡೆ ಇಲ್ಲ. ಅವರಿಗಿಂತ ಗೂಂಡಾತನ ಯಾರೂ ಇಲ್ಲ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅವರೂ ಸಹ ದಬಾಯಿಸಿದ್ದಾರೆ, ಅವರದು ಗೂಂಡಾಗಿರಿ ಅಲ್ಲವೇ?

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ತಾವು ರೆಕಾರ್ಡ್‌ಗೆ ಹೋಗಿರುವ ಪದದ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅವರು ಗೂಂಡಾಗಿರಿ ಮಾಡುವುದು, ನಾವು ಮಾಡುವುದಿಲ್ಲ.

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ತಾವು ಈಗಾಗಲೇ ಹೇಳಿದ್ದೀರಿ.

**(ಗೊಂದಲ)**

**ಸಭಾಪತಿಯವರು:–** ತಾವು ನಾನು ಏನು ಮಾಡಬೇಕೆಂದು ಹೇಳಿ. ಈಗ ನಾನು ಹೇಳುವುದನ್ನು ಕೇಳಿ. ನಾನು ಅದನ್ನು ನೋಡಿದ್ದೇನೆ ಮತ್ತು ಕೇಳಿದ್ದೇನೆ. ಈಗ ನನ್ನ ಕೆಲಸ ಏನೆಂದರೆ, ಅದು ಯಾವುದೇ ಇರಲಿ ಅದನ್ನು unparliamentary word ಅನ್ನು ಕಡತದಿಂದ ತೆಗೆದು ಹಾಕುವುದು. ಒಂದೊಂದು ಬಾರಿ ನಾನು ರೆಕಾರ್ಡ್ ಮಾಡಿಕೊಳ್ಳಬೇಡಿ ಎಂದು ಹೇಳುತ್ತೇನೆ. ಈಗ ಮಾನ್ಯ ಸದಸ್ಯರಾದ ಶ್ರೀ ಹೆಚ್.ಪಿ.ಸುಧಾಮ್ ದಾಸ್ ಮಾತನಾಡುವಾಗ ಇದು track ಗೆ ಬಂದಿತ್ತು. ಆಗ ಅದೆಲ್ಲವನ್ನು ಸಹ ಕಡತದಿಂದ ತೆಗೆದು ಹಾಕಿದ್ದೇನೆ. ಅದನ್ನು ಕಡತದಿಂದ ತೆಗೆದುಹಾಕಿದ ಮೇಲೆ ಅದು ಮುಗಿಯುತ್ತದೆ. ಮತ್ತೆ ತಾವು ಅದನ್ನು ಎಳೆಯುವುದನ್ನು ಮಾಡಬಾರದು. ಅವರದು ಅಷ್ಟಕ್ಕೆ ಮುಗಿದಿದೆ. ಈಗ ಕಡತದಿಂದ ತೆಗೆದುಹಾಕುವುದು ಬೇರೆ ಏನು ಇದೆ?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಅದನ್ನು ಮಾಡಿರುವುದಕ್ಕೆ ತಮಗೆ ಧನ್ಯವಾದಗಳು. ಅದು ಬೇರೆ ವಿಷಯ.

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅವರು ನಿರಂತರವಾಗಿ ಪದೇಪದೇ ಯಾವಾಗಲೂ ಇದೇ ರೀತಿ ಮಾಡುತ್ತಾರೆ. ನಾವು ಅವರ ಈ ನಡವಳಿಕೆಯನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನಾವು ಆ ರೀತಿ ನಡೆದುಕೊಳ್ಳುತ್ತಿದ್ದೇವೆಯೆ? ಈಗ ಯಾರಾದರೂ ನಂಬತಕ್ಕಂಥದ್ದು....

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರು ಪೀಠಕ್ಕೆ video recording ತರಿಸಿಕೊಂಡು ನೋಡಿ ಎಂದು ಹೇಳಿದ್ದಾರೆ. ಈಗ ತಪ್ಪಾಗಿದ್ದರೆ ಏನು ಬೇಕಾದರೂ ಶಿಕ್ಷೆ ಕೊಡಿ ಎಂದು ಹೇಳಿದ್ದಾರೆ. ಅಲ್ಲಿಯವರೆಗೆ ಅವರು ತಾಳ್ಮೆಯಿಂದ ಇರಬೇಕಲ್ಲವೇ?

**(ಗೊಂದಲ)**

**ಸಭಾಪತಿಯವರು:–** ನಾನು ಅದನ್ನು ನೋಡುತ್ತಿದ್ದೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಅದನ್ನು ನೋಡಿ ಆಗಿದೆ. ಅದನ್ನು ನೋಡಿ ಆದಮೇಲೆ ಮತ್ತೊಂದು ಬಾರಿ ಏನು ನೋಡುವುದು?

**(ಗೊಂದಲ)**

**ಸಭಾಪತಿಯವರು:–** ನಾನು ಅದನ್ನು ನೋಡುತ್ತಿದ್ದೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ನೋಡಿಯೇ ಅದನ್ನು ಕಡತದಿಂದ ತೆಗೆಯಿರಿ ಎಂದು ಹೇಳಿರುವುದು. ಅದಾದ ಮೇಲೆ ಅವರು ನೋಡಿದ್ದಾರೆ. ಈಗ ನಮಗೆ ಅವರನ್ನು ಹೊರಗಡೆ ಹಾಕಬೇಕು. ಇಲ್ಲವಾದರೆ ನಾವು ಇದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪೀಠದಿಂದ ಏನು ಆದೇಶ ಬರುತ್ತದೆ, ಅದನ್ನು ಒಪ್ಪಿಕೊಳ್ಳುತ್ತೇನೆಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಪೀಠದಿಂದ ಆದೇಶ ಬರಲಿ. ತಮ್ಮಿಂದ ಆದೇಶ ಬರುವವರೆಗೂ ನಾವು ಇಲ್ಲಿಯೇ ಇರುತ್ತೇವೆ.

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಇದನ್ನು Chair ಗೆ respect ಕೊಟ್ಟು ಹೇಳಿದ್ದೇನೆ. ಅದು ಏನು unparliamentary ಅಲ್ಲ. ಈ ಸದನದಲ್ಲಿ ಅವರು ಯಾರ್‍ಯಾರು ಏನೇನು ಮಾತನಾಡಿದ್ದಾರೆಂದು ನನಗೂ ಗೊತ್ತಿದೆ.

**(ಈ ಹಂತದಲ್ಲಿ ಬಾವಿಯಲ್ಲಿ ಧರಣಿ ನಿರತರಾದ ಬಿ.ಜೆ.ಪಿ. ಮತ್ತು ಜೆಡಿ(ಎಸ್) ಪಕ್ಷದ ಮಾನ್ಯ ಸದಸ್ಯರು 'ಗೂಂಡಾಗಿರಿ ಸರ್ಕಾರಕ್ಕೆ ಧಿಕ್ಕಾರ' ಎಂದು ಘೋಷಣೆ ಕೂಗುತ್ತಿದ್ದರು)**

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು ವಿಧೇಯಕವನ್ನು ಪಾಸ್ ಮಾಡಬೇಕು. ದಯವಿಟ್ಟು ಅವಕಾಶ ಮಾಡಿಕೊಡಲಿ. ಈಗ ಎಷ್ಟೊಂದು ವಿಧೇಯಕಗಳಿವೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ಇದು ಎಲ್ಲಿಯವರೆಗೂ ಮುಂದುವರೆಯುತ್ತದೆ. ನಾನು ಎಲ್ಲರಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ತಾವೆಲ್ಲರೂ ಸಹ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ಈಗ ಸದನವನ್ನು ನಡೆಸೋಣವೆಂದು ಹೇಳುತ್ತೇನೆ.

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರ ಮೇಲೆ ಕ್ರಮ ಆಗಬೇಕು.

**(ಗೊಂದಲ)**

**ಸಭಾಪತಿಯವರು:-** ಈಗ ಕ್ರಮ ಆಗಬೇಕು ಎಂದರೆ, ಏನು ಮಾಡಬೇಕೆಂದು ನನಗೆ ಕೊಡಿ. ಈಗ ತಾವು ಹೇಳಿದ ತಕ್ಷಣ ಹೊರಗೆ ಹಾಕುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದನ್ನು ನಾವು ಪಾಲಿಸಬೇಕೇ?

**(ಗೊಂದಲ)**

**ಸಭಾಪತಿಯವರು:-** ಅದು ಆಗುವುದಿಲ್ಲ. ಅದು ನನಗೆ ಬರಲಿ. ನಾನು ರೆಕಾರ್ಡ್ ಅನ್ನು ನೋಡುತ್ತಿದ್ದೇನೆ. ಅದು ಬಂದಾಗ ನಾನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಎನ್.ಚಲುವರಾಯಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಸ್ಪಷ್ಟವಾಗಿ ಪೀಠದಿಂದ ಆದೇಶ ಬರುವುದು, ಅವರ ಅನುಭವಕ್ಕಿಂತ ನಮ್ಮ ಅನುಭವ ಜಾಸ್ತಿ ಎಂದು ಹೇಳುವುದಿಲ್ಲ. ತಾವು clear ಆಗಿ ನೋಡಿ, ಆದೇಶ ಕೊಡುತ್ತೇನೆಂದು ಹೇಳಿದ್ದೀರಿ.

(ಮುಂದು)

**(567) 21.03.2025 1.10 ವೈಎಲ್-ಕೆಎಸ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ತಾವೇ ನೋಡಿದ್ದು, ಆ ಪದವನ್ನು ಕಡತದಿಂದ ತೆಗೆದುಬಿಡಿ ಎಂದು ಹೇಳಿದ್ದೀರಿ.

**ಶ್ರೀ ಎನ್.ಚೆಲುವರಾಯಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ನಾನು ಆ ರೀತಿ ಮಾತನಾಡಿಲ್ಲ ಎಂದು ಹೇಳಿದ್ದಾರೆ. ಹಾಗೆಯೇ ಏನು ಬೇಕಾದರೂ ತೀರ್ಮಾನ ಕೊಡುವ ಹಾಗಿಲ್ಲ. (ಗೊಂದಲ) ಮಾಡುತ್ತಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಯಾವ ರೀತಿ ಮಾತನಾಡುತ್ತಾರೆ ಎಂಬುದನ್ನು ನೋಡಿದ್ದೀರಿ. ವೈಯಕ್ತಿಕವಾಗಿ ಮಾನ್ಯ ಪುಟ್ಟಣ್ಣನವರ ಮೇಲೆ ನಮ್ಮ ಪ್ರಶ್ನೆ ಏನಿಲ್ಲ. ಆದರೆ, ಅವರ ಮೇಲೆ ಕ್ರಮ ಜರುಗಿಸಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಸದನದಲ್ಲಿ ಗದ್ದಲವಾಗುತ್ತಿರುವ ವಿಚಾರವಾಗಿ ತಾವು ಸ್ಪಷ್ಟವಾಗಿ ರೂಲಿಂಗ್ ಕೊಟ್ಟಿದ್ದೀರಿ. ತಾವು ಕೊಟ್ಟಿರುವ ರೂಲಿಂಗ್ ಅನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಒಪ್ಪುತ್ತಾರೆಯೇ, ಇಲ್ಲವೇ ಎಂಬುದನ್ನು ಕೇಳಿ. ಒಂದು ವೇಳೆ ಒಪ್ಪಲಿಲ್ಲವೆಂದರೆ, ಸದನದಿಂದಲೇ ಒಂದು ತೀರ್ಮಾನ ಕೈಗೊಳ್ಳಿ.

**(ಗೊಂದಲ)**

**ಸಭಾಪತಿಯವರು:–** ಅಷ್ಟೇ ಅಲ್ಲ. ಈಗಾಗಲೇ ರೂಲಿಂಗ್ ಕೊಟ್ಟು, ಕಡತದಿಂದ ಆ ಪದವನ್ನು ತೆಗೆದು ಹಾಕಿದ ಮೇಲೆ ಆ ವಿಚಾರ ಅಲ್ಲಿಗೆ ಮುಗಿಯಿತು. ಆದಾಗ್ಯೂ ಮಾನ್ಯ ವಿರೋಧ ಪಕ್ಷದ ನಾಯಕರು ಗಲಾಟೆ ಮಾಡುತ್ತಿರುವುದರಿಂದ ದೃಶ್ಯ ಮಾಧ್ಯಮಗಳಲ್ಲಿ ನೋಡುತ್ತೇನೆ ಎನ್ನುವಂಥ ಮಾತನ್ನು ಹೇಳಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ಮನವಿ ಮಾಡುವುದೇನೆಂದರೆ, ಈಗಾಗಲೇ ಒಂದು ಸಲ ಕಡತವನ್ನು ನೋಡಿದ ಮೇಲೆ ಇನ್ನೊಂದು ಸಲ ನೋಡುವಂಥ ಅಗತ್ಯವೇನಿದೆ? ಮಾನ್ಯ ಟಿ.ಎ.ಶರವಣನವರು ಆಡಳಿತ ಪಕ್ಷದವರಿಗೆ ನೀವು ಹಾಲು ಕುಡಿದಷ್ಟು, ನಾವು ನೀರು ಕುಡಿದಿಲ್ಲ ಎನ್ನುವಂಥ ಮಾತನ್ನು ಹೇಳಿದ್ದಕ್ಕೆ ಏನೆಲ್ಲಾ ಗದ್ದಲ ಮಾಡಿದ್ದರು. ಅದೇನು unconstitutional ಅಲ್ಲ, ಆದರೆ ಏನೆಲ್ಲಾ ಆಯಿತು ಎಂಬುದನ್ನು ತಾವೇ ಯೋಚನೆ ಮಾಡಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಟಿ.ಎ.ಶರವಣರವರು ತಮ್ಮ ಸ್ಥಾನಕ್ಕೆ ತೆರಳಿದರು)**

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿಸಿಕೊಳ್ಳಿ. ಈಗಾಗಲೇ ಕಡತದಿಂದ ಆ ಪದವನ್ನು ತೆಗೆದ ಮೇಲೆ ಅಲ್ಲಿಗೆ ವಿಚಾರ ಮುಗಿದ ಹಾಗೆ ಅಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಹೌದು. ತಾವು ಕಡತದಿಂದ ತೆಗೆಸಿದ್ದೀರಿ. ಆದರೆ, ತಮ್ಮ ಮಾತನ್ನು ಒಪ್ಪಲು ಸಾಧ್ಯವಿಲ್ಲ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಯವಿಟ್ಟು ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ. ನಾನು ಕೇಳಿರುವ ಪ್ರಶ್ನೆ ಮೇಲೆ ಚರ್ಚೆ ಮಾಡಲು ಅರ್ಧ ಗಂಟೆ ಕಾಲಾವಧಿ ಅಡಿಯಲ್ಲಿ ಅವಕಾಶ ಕಲ್ಪಿಸಿ, ತಾವು ಆವೊತ್ತಿನ ದಿವಸ ಪೀಠದಿಂದ ಎದ್ದು ತಮ್ಮ ಕೊಠಡಿಗೆ ಹೋಗಿದ್ದಿರಿ. ಮತ್ತೆ ಆ ಪ್ರಶ್ನೆ ಬಗ್ಗೆ ನಾನು ಮಾತನಾಡಿದಾಗ ಇನ್ನೊಂದು ಸಲ ಆ ಪ್ರಶ್ನೆ ಬಗ್ಗೆ ಹೇಳಿ ಎಂದು ಸಚಿವರು ಕೇಳಿದ್ದರು. ನಾನು ಕೂಡ 'ಸರಿ ಎಂದು ಮತ್ತೊಮ್ಮೆ ಪ್ರಶ್ನೆಯನ್ನು' ಓದಿದ್ದೆನು. ನಾನು ಪ್ರಶ್ನೆಯನ್ನು ಓದಿದ ಮೇಲೆ 'ಇದು ನನಗೆ ಅರ್ಥವಾಗಲಿಲ್ಲ' ಎಂದು ಮಾನ್ಯ ಸಚಿವರು ಹೇಳಿದ್ದರು. ಅದಕ್ಕೆ ನಾನು ಕೂಡ 'ನಿಮ್ಮಷ್ಟು ನಾನು ಓದಿಲ್ಲ, ನೀವು ಹಿರಿಯ ಸಚಿವರಾಗಿದ್ದೀರಿ, ನೀವು ಹಾಲು ಕುಡಿದಷ್ಟು, ನಾನು ನೀರು ಕುಡಿದಿಲ್ಲ' ಎಂದು ಹೇಳಿದ್ದೆನು. ನಾನು ಹೇಳಿದ ಮಾತಿನಲ್ಲಿ ತಪ್ಪೇನಿದೆ?

**ಸಭಾಪತಿಯವರು:–** ತಪ್ಪೇನಿಲ್ಲ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ನಾನು ತುಂಬಾ ಗೌರವಯುತವಾಗಿ ಒಳ್ಳೆಯ ಅರ್ಥದಲ್ಲಿ ನಾನು ಮಾನ್ಯ ಸಚಿವರಿಗೆ appreciate ಮಾಡಿದ್ದೆನು. ಆ ರೀತಿ appreciate ಮಾಡಿದನ್ನು ತಪ್ಪಾಗಿ ತಿಳಿದುಕೊಂಡು ಮಾನ್ಯ ಸಚಿವರೆಲ್ಲರೂ ನನ್ನ ಮೇಲೆ ದಾಳಿ ಮಾಡಿದ್ದರು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಬಹಳಷ್ಟು ವಿಚಾರಗಳನ್ನು ತೆಗೆಯಬೇಕಾಗುತ್ತದೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಅಶ್ವಥ್ ನಾರಾಯಣರವರು ಕೆಳಮನೆಯಲ್ಲಿ ಏನು ಮಾತನಾಡುತ್ತಿದ್ದಾರೆ! ಈ ಸದನದ ವಿರೋಧ ಪಕ್ಷದ ಸದಸ್ಯರು ಏನು ಮಾತನಾಡುತ್ತಿದ್ದಾರೆ! ಯಾವುದು ವ್ಯಂಗ ಇರಬೇಕು, ಏನೆಂಬುದರ ಬಗ್ಗೆ ಸಹ ಮಾತನಾಡೋಣ. ವಿರೋಧ ಪಕ್ಷದವರು ಈ ರೀತಿ ಮಾತನಾಡಿದರೆ, ನಾವು ಮಾತನಾಡಲು ತಯಾರಿದ್ದೇನೆ.

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರಾದ ಶ್ರೀ ಟಿ.ಎ.ಶರವಣನವರನ್ನು ಹೊರತುಪಡಿಸಿ, ಬಿ.ಜೆ.ಪಿ ಹಾಗೂ ಜೆ.ಡಿ.(ಎಸ್.) ಪಕ್ಷದ ಇನ್ನುಳಿದ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)**

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಪ್ರಿಯಾಂಕ್ ಖರ್ಗೆಯವರೆ ಕುಳಿತುಕೊಳ್ಳಿ. ಮಾನ್ಯ ಸುಧಾಮ್ ದಾಸ್‌ರವರೆ ಆಯವ್ಯಯದ ಭಾಷಣದ ಮೇಲೆ ಮಾತನಾಡಿ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರಾದ ಶ್ರೀ ಟಿ.ಎ.ಶರವಣನವರು ಸಹ ಸದನದ ಬಾವಿಗೆ ಬಂದರು)**

**ಶ್ರೀ ಹೆಚ್.ಪಿ.ಸುಧಾಮ್ ದಾಸ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಆಯವ್ಯಯ ಭಾಷಣಕ್ಕೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ದುರುದ್ದೇಶದಿಂದ ವಿರೋಧ ಪಕ್ಷದವರು ಅಡ್ಡಿ ಮಾಡುತ್ತಿದ್ದರು, ನನ್ನ ಕೆಲವು ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಅಧಿಕೃತವಾಗಿ ಸದನದ ಮುಂದೆ ದಾಖಲುಪಡಿಸುತ್ತೇನೆ. ಮೊದಲಿನಿಂದ ಪರಿಶಿಷ್ಟ ಸಮುದಾಯ, ಶೋಷಿತ ಸಮುದಾಯ ಹಾಗೂ ಮಹಿಳೆಯರಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷ ಬದ್ಧತೆ ಪ್ರಶ್ನಾತೀತವಾಗಿರುವುದು ತಮಗೆಲ್ಲಾ ಗೊತ್ತಿದೆ. ಅದು ತನ್ನ ಅನೇಕ ಕಾಯ್ದೆ, ಕಾರ್ಯಕ್ರಮಗಳ ಮೂಲಕ ಪರಿಶಿಷ್ಟರ ರಕ್ಷಣೆ, ಕಲ್ಯಾಣಕ್ಕೆ ಸಂಬಂಧಿಸಿದಂತೆ ಕ್ರಮಕೈಗೊಳ್ಳಬೇಕಾಗಿದೆ ಎಂಬುದು ತಮಗೆಲ್ಲಾ ಗೊತ್ತಿದೆ. ಶ್ರೀ ಪಂಡಿತ್ ಜವಾಹರಲಾಲ್ ನೆಹರೂರವರ ಕಾಲದಿಂದ ಹಿಡಿದು ಶ್ರೀಮತಿ ಇಂದಿರಾಗಾಂಧಿ, ಶ್ರೀ ರಾಜೀವ್‌ಗಾಂಧಿ, ಶ್ರೀ ಪಿ.ವಿ.ನರಸಿಂಹರಾವ್‌ವರೆಗೂ ಬದ್ಧತೆಯ ನಿಲುವಿಗೆ ಅಂಟಿಕೊಂಡಿದ್ದೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರವು

ಸಿದ್ಧಾಂತಗಳಿಗೆ ಅನುಗುಣವಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದರೂ ಕೂಡ ವಿರೋಧ ಪಕ್ಷದವರು ಈ ನನ್ನ ಮಾತಿಗೆ ಅಡ್ಡಿಪಡಿಸುತ್ತಿದ್ದಾರೆ. ಕೋವಿಡ್-19 ನೆಪದಲ್ಲಿ ಪರಿಶಿಷ್ಟ ಸಮುದಾಯದ scholarship,...

**ಶ್ರೀ ಐವನ್ ಡಿ'ಸೋಜಾ:-** ಡಾ॥ ಬಿ.ಆರ್.ಅಂಬೇಡ್ಕರ್‌ರವರ ವಿರೋಧಿ ಬಿ.ಜೆ.ಪಿ. ಸರ್ಕಾರಕ್ಕೆ ಧಿಕ್ಕಾರ, ಧಿಕ್ಕಾರ.

**ಸಭಾಪತಿಯವರು:-** ಮಾನ್ಯ ಸುಧಾಮ್ ದಾಸ್‌ರವರೇ, ಒಂದು ನಿಮಿಷ. ಸದನದ ಬಾವಿಯೊಳಗೆ ಧರಣಿ ನಿರತರಾಗಿ, ಪದೇ ಪದೇ ಘೋಷಣೆ ಕೂಗುತ್ತಿರುವ ತಮಗೆಲ್ಲಾ ಹೇಳುವುದೇನೆಂದರೆ, ಇವತ್ತು ಅಧಿವೇಶನದ ಕೊನೆಯ ದಿನವಾಗಿದ್ದು, ಮಧ್ಯಾಹ್ನ 3 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಸದನಕ್ಕೆ ಬಂದು ಆಯವ್ಯಯ ಭಾಷಣಕ್ಕೆ ಉತ್ತರ ನೀಡುತ್ತಾರೆ. ಹಾಗಾಗಿ, ತಮ್ಮ ಘೋಷಣೆಯನ್ನು ನಿಲ್ಲಿಸಿ, ಎಲ್ಲಾ ಸದಸ್ಯರಿಗೂ 5 ನಿಮಿಷ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟರೆ ಒಳ್ಳೆಯದು. ದಯವಿಟ್ಟು ತಮ್ಮ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಆ ವಿಚಾರವಾಗಿ ನಾನು ಮಾತನಾಡಿ ಮುಗಿಸಿದ್ದು, ಅದು ಸರಿಯೇ, ತಪ್ಪೇ ಏನೆಂಬುದು ನನಗೂ ಸಹ ಸರಿಯಾಗಿ ಗೊತ್ತಿಲ್ಲ. ಹಾಗಾಗಿ, ನಾನು ಇನ್ನೊಮ್ಮೆ ಆ ಪದವನ್ನು ಬಳಕೆ ಮಾಡಿದ್ದಾರೆಯೇ; ಇಲ್ಲವೇ ಎಂಬುದನ್ನು ದೃಶ್ಯ ಮಾಧ್ಯಮದಲ್ಲಿ ವೀಕ್ಷಣೆ ಮಾಡಿ, ಮತ್ತೊಮ್ಮೆ ಸರಿಯಾಗಿ ಅದರ ಬಗ್ಗೆ ತಿಳಿಸುತ್ತೇನೆ. ದಯವಿಟ್ಟು ತಮ್ಮ ತಮ್ಮ ಸ್ಥಾನಕ್ಕೆ ತೆರಳಿ. ಇನ್ನು ಮುಂದೆ ಈ ರೀತಿ ಸದನದೊಳಗೆ ಗಲಾಟೆ ಮಾಡಿದರೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 326 ಮತ್ತು ನಿಯಮ 327ರ ಪ್ರಕಾರ ಕ್ರಮಜರುಗಿಸಬೇಕಾಗುತ್ತದೆ. ಸದನದ ನಿಯಮವನ್ನು ಮೀರಿ ಮಾತನಾಡುವವರ ಮೇಲೆ ಕ್ರಮಕೈಗೊಳ್ಳಬೇಕಾಗುತ್ತದೆ. ಈಗಾಗಲೇ ಆ ಪದವನ್ನು ಕಡತದಿಂದ ತೆಗೆದು ಹಾಕಿ, ಇಲ್ಲಿಗೆ ಆ ವಿಚಾರವನ್ನು ಮುಗಿಸಿದ್ದು, ಅದಕ್ಕಿಂತ ಹೆಚ್ಚಾಗಿ ಏನೂ ಮಾಡಲು ಆಗುವುದಿಲ್ಲ. ಮಾನ್ಯ ಪುಟ್ಟಣ್ಣನವರನ್ನು ಹೊರಗೆ ಹಾಕಿ ಎಂದು ಹೇಳುತ್ತಿದ್ದೀರಿ. ನಿಯಮದ ಪ್ರಕಾರ ಹೊರಗೆ ಹಾಕಲು ಅವಕಾಶ ಇದ್ದರೆ ಬರೆದುಕೊಡಿ ನಾನು ಪರಿಶೀಲಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸುನೀಲ್ ವಲ್ಯಾಪೂರ್‌ರವರು ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸದನ ನಡೆಯಬೇಕೆಂಬುದಕ್ಕೆ ನಾವು ಸಹ ಬದ್ಧರಾಗಿದ್ದೇವೆ. ಆದರೆ, ಪ್ರಶ್ನೆ ಅದಲ್ಲ. ಇನ್ನೂ ಬೇಕಾದರೆ ಒಂದೆರಡೂ ದಿವಸ ಸದನವನ್ನು ಮುಂದೂಡಿ, ಚರ್ಚೆ ಮಾಡೋಣ. ಈ ಹಿಂದೆ ಸಹ ಹೇಳಿದಾಗ ಸಹಜವಾಗಿ ಇದೆಲ್ಲವೂ ನಡೆಯುತ್ತಿರುತ್ತದೆ ಎಂದು ಸುಮ್ಮನಾಗಿದ್ದೆವು. ಆದರೆ, ಪದೇ ಪದೇ ನಡೆಯುತ್ತಿರುವುದು ಹಾಗೂ ಇದು habitual ಆಗಿದೆ. ಆ ಕಾರಣದಿಂದ ನಮಗೆ ಒಪ್ಪಲು ಸಾಧ್ಯವಿಲ್ಲ. ಈಗಾಗಲೇ ತಾವು ಕಡತದಲ್ಲಿರುವ ಆ ಪದವನ್ನು ತೆಗೆದು ಬಿಡಿ ಎಂದು ರೂಲಿಂಗ್ ಕೊಟ್ಟಿದ್ದೀರಿ. ಆದರೆ, ಕ್ರಮಕೈಗೊಳ್ಳಬೇಕಲ್ಲವೇ?

**ಸಭಾಪತಿಯವರು:–** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ತಾವು ತಮ್ಮ ವಿಚಾರ ಏನಿದೆ, ಅದನ್ನು writing ನಲ್ಲಿ ಕಳುಹಿಸಿಕೊಡಿ, ನಾನು ಪರಿಶೀಲಿಸುತ್ತೇನೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ತಾವು ಪೀಠದಿಂದ ರೂಲಿಂಗ್ ಕೊಟ್ಟಿದ್ದೀರಿ. ಹಾಗೆಯೇ ಮಾನ್ಯ ಪುಟ್ಟಣ್ಣನವರು ಸಹ ಮಾಧ್ಯಮದಲ್ಲಿ ವೀಕ್ಷಿಸಿ ನೋಡಿ, ನಾನು ಆ ಪದವನ್ನು ಬಳಕೆ ಮಾಡಿದರೆ ಶಿಕ್ಷೆ ಅನುಭವಿಸುತ್ತೇನೆ ಎಂದು ಹೇಳಿದ್ದಾರೆ. ಹಾಗೆಯೇ ತಾವು ಕೂಡ ಪರಿಶೀಲಿಸಿ ಕ್ರಮಜರುಗಿಸುತ್ತೇನೆ ಎಂದು ಹೇಳಿದ್ದೀರಿ. ಅದಕ್ಕಿಂತ ಜಾಸ್ತಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇನೇನು ಮಾಡಲು ಸಾಧ್ಯ ಇದೆ? ಸದನ ನಡೆಯಬೇಕೇ, ಬೇಡವೇ? ವಿಧೇಯಕದ ಮೇಲೆ, ಆಯವ್ಯಯದ ಮೇಲೆ ಚರ್ಚೆಯಾಗಬೇಕೇ, ಬೇಡವೇ?

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗಾಗಲೇ ನಾನು ಹೇಳಬೇಕಾದ ವಿಚಾರವನ್ನು ಹೇಳಿ ಎಲ್ಲವನ್ನೂ ಸರಿ ಮಾಡಿದ್ದೇನೆ. ಆದಾಗ್ಯೂ ನಾನು ಏನು ಮಾಡಬೇಕೆಂಬುದನ್ನು ಹೇಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರನ್ನು ಸದನದಿಂದ ಹೊರಗೆ ಹಾಕಬೇಕು.

**ಸಭಾಪತಿಯವರು:–** ಈ ಬಗ್ಗೆ ನನಗೆ writing ನಲ್ಲಿ ಕೊಡಿ, ನಾನು ಅದನ್ನು ಪರಿಶೀಲಿಸುತ್ತೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು ಹೇಳಿದ ತಕ್ಷಣ ನನ್ನನ್ನು ಹೊರಗೆ ಹಾಕಿ ಬಿಡುತ್ತೀರಾ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಎಲ್ಲರನ್ನೂ ಕೂಡ threat ಮಾಡುತ್ತಿದ್ದಾರೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ಇಂತಹ ಬೆದರಿಕೆಗೆಲ್ಲಾ ಹೆದರುವುದಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮಗೆ ಮಾಡಬಾರದೆಲ್ಲಾ ಅವಮಾನ ಮಾಡಿ,....

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಅವರು ಯಾರಿಗೂ threat ಮಾಡಿಲ್ಲ. ಈ ಕಛೇರಿಯ ಅಧಿಕಾರಿ/ನೌಕರರಿದ್ದಾರೆ ಅವರಿಗೆ ಏನೇ ಸಮಸ್ಯೆ ಬಂದರೂ ನೋಡಿಕೊಳ್ಳುವ ಜವಾಬ್ದಾರಿ ನನಗೆ ಸೇರಿರುವುದು. I am the custodian of the House. ಆದ್ದರಿಂದ ಅಧಿಕಾರಿ/ನೌಕರರೆನಿದ್ದಾರೆ, ಹಾಗೆಯೇ ಈ ಸದನದ ಮಾನ್ಯ ಸದಸ್ಯರನ್ನು ಸಹ ನಾನೇ ನೋಡಿಕೊಳ್ಳುವುದು. ಈಗಾಗಲೇ ಆ ಪದ ಬಳಕೆಯಾಗಿರುವ ಬಗ್ಗೆ

ತಿಳಿದುಕೊಂಡು, ಕಡತದಿಂದ ತೆಗೆಸಿ, ಅಲ್ಲಿಗೆ ಆ ವಿಚಾರವನ್ನು ಮುಗಿಸಿದ್ದೇನೆ. ಆದಾಗ್ಯೂ, ದೃಶ್ಯ ಮಾಧ್ಯಮದಲ್ಲಿ ವೀಕ್ಷಣೆ ಮಾಡಿ, ಸಾಬೀತಾದರೆ ಪರಿಶೀಲಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ನವೀನ್‌ರವರು ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಸದನದಲ್ಲಿದ್ದು, ನಾನು ಮಾತನಾಡುತ್ತೇನೆ. ಮಾನ್ಯ ಪುಟ್ಟಣ್ಣನವರು ನನ್ನ ಹತ್ತಿರ ಏನು ಬೇಕಾದರೂ ಪ್ರಶ್ನೆ ಕೇಳಲಿ. ನಮ್ಮಪ್ಪ ಬಂದು ಅವರು ಕೇಳುವ ಪ್ರಶ್ನೆಗೆ ಉತ್ತರ ನೀಡುತ್ತಾರೆಯೇ? ನಾಳೆ ದಿವಸ ನನ್ನ ಅಮ್ಮನ್ನ ಹೆಸರು ಬರುತ್ತದೆ. ಅವರು ಬಂದು ಉತ್ತರ ನೀಡುತ್ತಾರೆಯೇ? ಇದು ಸರಿಯಾದ ಕ್ರಮವಾಗಿಲ್ಲ.

**ಸಭಾಪತಿಯವರು:-** ಈಗಾಗಲೇ ನಾನು ಅದರ ಬಗ್ಗೆ ಹೇಳಿದ್ದೇನೆ ಅಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಯಾರಾದರೂ ಅಪ್ಪಿತಪ್ಪಿ ಮಾತನಾಡಿದರೆ ನಾವೇ ಕ್ಷಮಿಸಿಬಿಡುತ್ತೇವೆ. ಏಕೆಂದರೆ, ನಾವು ಒಂದೊಂದು ಸಲ ಮಾತನಾಡಿರಬಹುದು. ಆದರೆ, ಇದು habitual ಆಗಿದ್ದು, ಇಲ್ಲಿಗೆ ಈ ವಿಚಾರವನ್ನು ಬಿಡಲು ಸಾಧ್ಯವಿಲ್ಲ.

**ಶ್ರೀ ಸುನೀಲ್ ವಲ್ಯಾಪೂರ್:-** ಮಾನ್ಯ ಸಭಾಪತಿಯವರೇ, ಕೆಲವೊಮ್ಮೆ tongue slip ಆಗಬಹುದು.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೇ ಈ ರೀತಿ ಧಮ್ಕಿ ಹಾಕುತ್ತಿದ್ದಾರೆ. ಹಾಗೆಯೇ ವಿಧಾನ ಪರಿಷತ್ತಿನ ಕಾರ್ಯಾಲಯದ ಅಧಿಕಾರಿಗಳ ಮೇಲೆಯೂ ಧಮ್ಕಿ ಹಾಕುತ್ತಿದ್ದಾರೆ ಎಂದರೆ ಅಂತಹ ಸದಸ್ಯರು ಈ ಮನೆಯಲ್ಲಿ ಕೂರಲು ಅರ್ಹತೆ ಇಲ್ಲ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಧಮ್ಕಿ ಹಾಕಿಲ್ಲ. ನಿಜವಾಗಿಯೂ ದಾರಿತಪ್ಪಿಸುವಂಥ ಕೆಲಸ ಮಾಡುತ್ತಿದ್ದಾರೆ. ಇದು ಸರಿಯಲ್ಲ. ದಯವಿಟ್ಟು, ಈಗಾಗಲೇ ಮಾನ್ಯ ಸಭಾಪತಿಯವರು ಈ ಬಗ್ಗೆ ಹೇಳಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಿಯಮ 303 ರ (11)ನೇ ಅಂಶದಲ್ಲಿ ಸದನದಲ್ಲಿ ಘೋಷಣೆ ಕೂಗತಕ್ಕದ್ದಲ್ಲ ಎಂದು ಇದೆ.

**ಸಭಾಪತಿಯವರು:-** ಘೋಷಣೆ ಕೂಗಬಾರದು, ಭಿತ್ತಿ ಪತ್ರವನ್ನು ಪ್ರಕಟಿಸಬಾರದು ಎಂದೆಲ್ಲಾ ಇದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹಾಗೆಯೇ ನಿಯಮ 326 ರಲ್ಲಿ ಏನಿದೆ ಎಂಬುದನ್ನು ತಾವೇ ಈಗಾಗಲೇ ಹೇಳಿದ್ದೀರಿ.

(ಮುಂದು)

**(569) 21.03.2025/1.20/ಎಸ್‌ಕೆ-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಘೋಷಣೆ ಕೂಗಬಾರದು ಎಂಬ ಬಗ್ಗೆ ಈಗಾಗಲೇ ನಿಯಮಾವಳಿಗಳಲ್ಲಿ ಎಲ್ಲವೂ ಇವೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ತಾವು ಸ್ಪಷ್ಟವಾಗಿ ಹೇಳಿದ್ದೀರಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಕಾಂಗ್ರೆಸ್‌ನವರು ಯಾವತ್ತು ಘೋಷಣೆ ಕೂಗೇ ಇಲ್ಲ ಪಾಪ!

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ನಾನು Point of Order ನ ರೈಸ್ ಮಾಡಿದ್ದೇನೆ. ನಿಮಗೆ ಮಾನಮಾರ್ಯಾದೆ ಇದೆ ಏನ್ರಿ?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಎಲ್ಲಾ ಮಾಡಿ ಆದ ಮೇಲೆ ಪಾಯಿಂಟ್ ಆಫ್ ಆರ್ಡರ್ ಬರುತ್ತದೆ. ನಮಗೂ ಮಾನಮಾರ್ಯದೆ ಇದೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ನೀವು ಆಗ ಕೇಳಿ.

**ಶ್ರೀ ಕೆ.ಎಸ್. ನವೀನ್:-** ನೀವು ವಿರೋಧ ಪಕ್ಷದ ನಾಯಕರಾಗಿ ಬಂದಿದ್ದೀರಿ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಅದು ನಮ್ಮ ಹಕ್ಕು. ನಾನು ನಿಯಮವನ್ನು ಹೇಳುತ್ತಿದ್ದೇನೆ. ನಾನು ನಿಯಮ ಹೇಳುವುದಕ್ಕೆ ಯಾರಿಗೂ ಅಭ್ಯಂತರವೇನಿಲ್ಲ. ನಿಯಮದಲ್ಲಿ ಏನಿದೆಯೋ, ಅದನ್ನೇ ಹೇಳುತ್ತೇನೆ. ಅದಕ್ಕೆ ಮಾನ್ಯ ಸಭಾಪತಿಯವರು ಉತ್ತರ ಕೊಡುತ್ತಾರೆ. ತಾವು ದಯವಿಟ್ಟು, ಸ್ವಲ್ಪ ಕೇಳಿ. ನಾನು ತಮಗೆ ಹೇಳುತ್ತಿಲ್ಲ ಮಾನ್ಯ ಸಭಾಪತಿಯವರಿಗೆ ಹೇಳುತ್ತಿದ್ದೇನೆ. ಈಗಾಗಲೇ ruling ಕೊಟ್ಟಾಗಿದೆ. ನಿಯಮವನ್ನು ಮೀರಿ, ನಿಯಮಾವಳಿಯಲ್ಲಿ silent ಇದೆ. ನಿಯಮ 326 ಅನ್ನು use ಮಾಡಕೊಳ್ಳಬೇಕು. ಮಾನ್ಯ ಪುಟ್ಟಣ್ಣನವರು ಸಿಬ್ಬಂದಿಗೆ ಧಮ್ಕಿ ಹಾಕಿದ್ದಾರೆ ಎಂದು ಹೇಳಿದಿರಿ. ಅವರೇನಾದರೂ ದೂರು ನೀಡಿದ್ದಾರೆಯೇ?

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಅವರಿಗೆ ಧಮ್ಕಿ ಹಾಕಿರುವುದನ್ನು ನಮ್ಮ ಕಣ್ಣು ಮುಂದೆ ನಾವೇ ನೋಡಿದ್ದೇವೆ ಮತ್ತು ಕೇಳಿಸಿಕೊಂಡಿದ್ದೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ನಿಮ್ಮ ಕಣ್ಣು ಮುಂದೆ ಸಾವಿರಾರು ನಡೆಯುತ್ತದೆ.

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ನಮ್ಮ ಕಣ್ಮುಂದೆ ನಾವು ಕೇಳಿಸಿಕೊಂಡಿದ್ದೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ನೀವು ಧಮ್ಕಿ ಕೊಟ್ಟರಿ ಎಂದು ನಾನು ಹೇಳುತ್ತೇನೆ. **(ಗೊಂದಲ)** ನೀವು ಮಾನ್ಯ ಸಭಾಪತಿಯವರಿಗೆ ಧಮ್ಕಿ ಹಾಕುತ್ತಿದ್ದೀರಾ. ಇವೆಲ್ಲಾ ಮಾತನಾಡಬೇಡಿ. ನಿಯಮದ ಪ್ರಕಾರ ಮಾತನಾಡಿ. ಮಾನ್ಯ ಸಭಾಪತಿಯವರೇ, ತಾವು ನಿಯಮಾನುಸಾರದ ಪ್ರಕಾರ ದಯವಿಟ್ಟು ಹೋಗಬೇಕಾಗುತ್ತದೆ.

**ಶ್ರೀ ಕೆ.ಎಸ್. ನವೀನ್:-** ಆಡಳಿತ ಪಕ್ಷದವರು ಹಿಂದುಳಿದ ವರ್ಗದ ವಿರೋಧ ಪಕ್ಷದವರಿಗೆ ಏನೂ ಬೇಕಾದರೂ ಮಾತನಾಡಬಹುದಾ?

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಹಾಗೂ ಮಾನ್ಯ ಸದಸ್ಯರುಗಳಾದ ಶ್ರೀ ಸುನೀಲ್ ವಲ್ಯಾಪುರ್, ಶ್ರೀ ಕೆ.ಎಸ್. ನವೀನ್‌ರವರನ್ನು ಹೊರತುಪಡಿಸಿ, ಬಿ.ಜೆ.ಪಿ., ಮತ್ತು ಜೆ.ಡಿ.(ಎಸ್) ಪಕ್ಷಗಳ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅಧಿಕಾರಿಗಳಿಗೆ ಏನಾದರೂ ದೂರು ಕೊಟ್ಟಿದ್ದರೆ ಹೇಳಿ, ಅವರು ಕೊಟ್ಟಿಲ್ಲ ಎಂದು ಹೇಳಲಿಲ್ಲ. ಇವರೇ ಊಹೆ ಮಾಡಿಕೊಂಡು ಹೇಳುತ್ತಿದ್ದಾರೆ. ನಾನು ಊಹೆ ಮಾಡಿಕೊಂಡು ಹೇಳುತ್ತೇನೆ. ನಾನು ಮಾತನಾಡುವುದಕ್ಕೆ ಬಿಡಬಾರದೆಂದು ಭಾರತೀಯ ಜನತಾ ಪಕ್ಷದ ಅಧ್ಯಕ್ಷರ ಕಛೇರಿಯಲ್ಲಿ ತೀರ್ಮಾನವನ್ನು ಇವರು ತೆಗೆದುಕೊಳ್ಳಲಿ. ನಾನೇದರೂ ಅದರ ಬಗ್ಗೆ ಕೇಳಿದ್ದೇನೆಯೇ? ಅದ್ದರಿಂದ ದಯವಿಟ್ಟು, ಸದನವನ್ನು adjourn ಮಾಡಿ ಅಥವಾ ಮಾನ್ಯ ಸುಧಾಮ್ ದಾಸ್ ರವರಿಗೆ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:-** ಯಾರೂ complaint ಕೊಟ್ಟಿಲ್ಲ. **(ಗೊಂದಲ)** ನಾನು ಇನ್ನೊಮ್ಮೆ ಹೇಳುತ್ತೇನೆ. ಸದನದ ಬಾವಿಯೊಳಗಿರುವ ಮಾನ್ಯ ಸದಸ್ಯರೆಲ್ಲರೂ ಸುಮ್ಮನೆ ನಿಂತುಕೊಳ್ಳಿ. ನಾನು ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಲಿ. ಮಾನ್ಯ ಸದಸ್ಯರು ಹೊಸದಾಗಿ ಸದನಕ್ಕೆ ಬಂದಿದ್ದಾರೆ.

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಎಸ್.ಸಿ. ಹಾಗೂ ಎಸ್.ಟಿ. ಸದಸ್ಯರುಗಳಿಗೆ ಹಾಗೂ ಅಧಿಕಾರಿಗಳಿಗೂ ಅವಮಾನ ಮಾಡಿರುವಂತಹ, ಈ ಕಾಂಗ್ರೆಸ್ ಸರ್ಕಾರದ ವರ್ತನೆ ಸರಿಯೇ?

**(ಗೊಂದಲ)**

**ಸಭಾಪತಿಯವರು:-** ನನಗೆ ಯಾರೂ ದೂರು ನೀಡಿಲ್ಲ. ಅವರನ್ನು ಮತ್ತು ಸಿಬ್ಬಂದಿಯನ್ನು ನೋಡಿಕೊಳ್ಳುವಂತಹ ಜವಾಬ್ದಾರಿ ನನಗಿದೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ನಮ್ಮ ಮೇಲೆ ತಮಗೆ ಜವಾಬ್ದಾರಿ ಇಲ್ಲವೇ? ನಮ್ಮ ಕಣ್ಮುಂದೆ ಆಗಿರುವುದನ್ನು ನಾವು ನೋಡಿದ್ದೇವೆ.

**ಸಭಾಪತಿಯವರು:-** ಆಯಿತು. ನೀವು ಕುಳಿತುಕೊಳ್ಳಿ.

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಭಾಪತಿಯವರೇ, ತಾವು ವಿಡಿಯೋ ನೋಡಿ.

**ಸಭಾಪತಿಯವರು:–** ನೀವು writing ನಲ್ಲಿ ಕೊಡಿ. ನಾನು ನೋಡಿ ಮಾಡುತ್ತೇನೆ.

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಭಾಪತಿಯವರೇ, ನಾವು ಎಷ್ಟು ಬಾರಿ ಕೊಡಬೇಕು ಹೇಳಿ. ಇದು ಒಂದೇ ಸಾರಿ ನಡೆದಿಲ್ಲ. ಎರಡು ಬಾರಿ ನಡೆದಿದೆ.

**ಸಭಾಪತಿಯವರು:–** ನೀವು ಹೇಳಿದನ್ನು ನಾನು ನಂಬುವುದಿಲ್ಲ, ಅವರು ಹೇಳಿದನ್ನು ನಂಬುವುದಿಲ್ಲ. ನಾನು ನೋಡಿದನ್ನು ಮಾತ್ರ ನಂಬುತ್ತೇನೆ. ಆಯಿತು ತಾವು ಕುಳಿತುಕೊಳ್ಳಿ.

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೂ ಮತ್ತು ಅಧಿಕಾರಿಗಳಿಗೂ ಗೌರವ ಇಲ್ಲ ಹಾಗೂ ಪೀಠಕ್ಕೆ ಗೌರವವಿಲ್ಲ. ವಿಪಕ್ಷದ ನಾಯಕರಿಗೂ ಕೂಡ ಗೌರವ ವಿಲ್ಲ.

**ಸಭಾಪತಿಯವರು:–** ಮಾನ್ಯ ಸುಧಾಮ್ ದಾಸ್‌ರವರೇ, ತಾವು ಮಾತನಾಡಿ ಮುಗಿಸಿ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ ಒಂದೇ ಒಂದು ನಿಮಿಷ. ನಾನು ಹೆಚ್ಚಿನ ಸಮಯ ತೆಗೆದುಕೊಂಡು ಮಾತನಾಡುವುದಕ್ಕೆ ಹೋಗುವುದಿಲ್ಲ. ದಯವಿಟ್ಟು, ನಾನು ಮತ್ತೊಮ್ಮೆ ಸ್ಪಷ್ಟಪಡಿಸುವುದೇನೆಂದರೆ, ತಾವು ದೃಶ್ಯ ಮಾಧ್ಯಮವನ್ನು ನೋಡಿ ಹೇಳುತ್ತೇನೆಂದು ತಾವು ಹೇಳಿದ್ದೀರಿ. ಅದನ್ನು ನೋಡಿ ಹೇಳಿ. ಖಂಡಿತವಾಗಿಯೂ ನಾನು ಏನಾದರೂ ಹೇಳಿದ್ದರೆ, ಈ ಸದನದಲ್ಲಿ ಕ್ಷಮೆ ಕೇಳುತ್ತೇನೆ. ಆದರೆ ಈಗ ನಾನು ಯಾವುದೇ ಕಾರಣಕ್ಕೂ ಇವರ ಸುಳ್ಳನ್ನು ನಾನು ಒಪ್ಪಿಕೊಳ್ಳುವುದಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–:–** ಈಗಾಗಲೇ ಕಡತ ತಯಾರಾಗಿದ್ದು, ಅದರಲ್ಲಿ ಹೇಳಿರುವುದು prove ಆಗಿದೆ. ಇದು ಸಾಬೀತಾದ ಮೇಲೆ ಇದರ ಮೇಲೆ ಕ್ರಮವಾಗಬೇಕು ಅಷ್ಟೆ.

**(ಗೊಂದಲ)**

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಿ.ಟಿ. ರವಿಯವರು ಬೆಳಗಾವಿಯಲ್ಲಿ ಮಾತನಾಡಿದ್ದರಲ್ಲ, ಆ ಪದಕ್ಕಿಂತ ಬೇಕೇ? ಸಾಕ್ಷಿ ಇಲ್ಲದೆಯೇ ಮಾತನಾಡುವುದಕ್ಕೆ ಬರುತ್ತೀರಾ, ಸುಮ್ಮನೆ ಕುಳಿತುಕೊಳ್ಳಿ. ಅದಕ್ಕೆ ಸಾಕ್ಷಿ ಇಲ್ಲದೇ ತಾವು ಮಾತನಾಡುತ್ತೀರಾ. ನಿಮಗೆ ನೈತಿಕತೆ ಇದ್ದರೆ ಹೇಳಿ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಹಾಗೂ ಮಾನ್ಯ ಸದಸ್ಯರುಗಳಾದ ಶ್ರೀ ಸುನೀಲ್ ವಲ್ಯಾಪುರ್, ಶ್ರೀ ಕೆ.ಎಸ್. ನವೀನ್‌ರವರನ್ನು ಹೊರತುಪಡಿಸಿ, ಬಿ.ಜೆ.ಪಿ., ಮತ್ತು ಜೆ.ಡಿ.(ಎಸ್) ಪಕ್ಷಗಳ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದನ್ನು ಅವರು ಕೇಳುವುದಕ್ಕೆ ತಯಾರಿಲ್ಲ, ನಮ್ಮ ಮಾನ್ಯ ಸದಸ್ಯರು ಹೇಳಿದ್ದನ್ನು ಕೇಳುವುದಕ್ಕೂ ತಯಾರಿಲ್ಲ.

**ಸಭಾಪತಿಯವರು:–** ಎಲ್ಲರೂ ಒಂದು ನಿಮಿಷ ಕೇಳಿ. ನಾನು ಮತ್ತೊಮ್ಮೆ ಹೇಳುತ್ತೇನೆ.

**ಶ್ರೀ ಸಂತೋಷ್ ಎಸ್. ಲಾಡ್:–** ಮಾನ್ಯ ಪುಟ್ಟಣ್ಣನವರು ಗಲಾಟೆ ಮಾಡಿರುವ...

**ಸಭಾಪತಿಯವರು:–** ನಾನು ಹೇಳಿದ್ದೇನೆ....

**ಶ್ರೀ ಪುಟ್ಟಣ್ಣ:–** ಇದನ್ನು ಅವರು continue ಮಾಡುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಹಾಗೂ ಮಾನ್ಯ ಸದಸ್ಯರುಗಳಾದ ಶ್ರೀ ಸುನೀಲ್ ವಲ್ಯಾಪುರ್, ಶ್ರೀ ಕೆ.ಎಸ್. ನವೀನ್‌ರವರನ್ನು ಹೊರತುಪಡಿಸಿ, ಬಿ.ಜೆ.ಪಿ., ಮತ್ತು ಜೆ.ಡಿ.(ಎಸ್) ಪಕ್ಷಗಳ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಸಭಾಪತಿಯವರು:–** ನಾನು ತಮಗೆ ಹೇಳುವುದೇನೆಂದರೆ, ಸದನಕ್ಕೆ ಹೊಸದಾಗಿ ಬಂದಿರುವ ಸದಸ್ಯರಿಗೆ ಐದು ನಿಮಿಷ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಎಂದು ನಾನು ಅಂದುಕೊಂಡಿದ್ದೆ.

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಭಾಪತಿಯವರೇ, ಕ್ರಮ ತೆಗೆದುಕೊಳ್ಳಿ.

**ಸಭಾಪತಿಯವರು:–** Action ತೆಗೆದುಕೊಳ್ಳುವುದಕ್ಕೆ writing ನಲ್ಲಿ ಕೊಡಿ. ನಾನು ಏನು ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಈಗಾಗಲೇ ಹೇಳಿರುವಂತೆ, ಮತ್ತೊಮ್ಮೆ ಪರೀಕ್ಷೆ ಮಾಡಿ ಬಂದು ಹೇಳುತ್ತೇನೆ. ಮತ್ತೆ ಯಾರಾದರೂ ಇದನ್ನು ಮುಂದುವರೆಸಿದರೆ, ಸದನವನ್ನು ಬಹಳ ದಿನ ಮುಂದೂಡಬೇಕಾಗುತ್ತದೆ. ಆಗ ಯಾರಿಗೂ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ. ದಯವಿಟ್ಟು, ನಿಮ್ಮ ಸಲುವಾಗಿ ಬೇರೆಯವರಿಗೆ ಅನ್ಯಾಯವಾಗಬಾರದು ಎನ್ನುವ ಮಾತನ್ನು ಹೇಳುತ್ತೇನೆ.

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಭಾಪತಿಯವರೇ, ನಮಗೆ ಅನ್ಯಾಯವಾಗಿರುವ ಬಗ್ಗೆ ಪೀಠದ ಮುಖಾಂತರ ನ್ಯಾಯವನ್ನು ಒದಗಿಸಿಕೊಡಬೇಕು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ತರಹವಾದರೆ ನಾವು ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಸದನದಿಂದ ಆಡಳಿತ ಪಕ್ಷದವರನ್ನು ಹೊರಗೆ ಹಾಕಿ ಇಲ್ಲವೆಂದರೆ, ನಮ್ಮನ್ನಾದರೂ ಹೊರಗೆ ಹಾಕಿ. ತಾವು ತೀರ್ಮಾನ ತೆಗೆದುಕೊಳ್ಳಿ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಒಟ್ಟು ಸದನ ನಡೆಸಬಾರದು ವಿರೋಧ ಪಕ್ಷದವರ ನಿರ್ಧಾರ ಏನೆಂಬುದು ತಮಗೆ ಗೊತ್ತಾಯಿತಲ್ಲವೇ? ಅವರಿಗೆ ನಿಯಮಾವಳಿ ಬೇಕಾಗಿಲ್ಲ.

**ಶ್ರೀ ಸುನೀಲ್ ವಲ್ಯಾಪುರ್:–** ಈ ರೀತಿ ಮಾತನಾಡುವುದಕ್ಕೆ ತಮಗೆ ನೈತಿಕತೆ ಇಲ್ಲ

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ನೀವು ಈ ಸಮಯದಲ್ಲಿ ಈ ತರಹ ನಿರ್ಧಾರ ತೆಗೆದುಕೊಂಡು ದಬ್ಬಾಳಿಕೆ ಮಾಡುತ್ತೀರಾ? ಇದು ಬಹಳ ದಬ್ಬಾಳಿಕೆ ಆಯಿತು.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಹಾಗೂ ಮಾನ್ಯ ಸದಸ್ಯರುಗಳಾದ ಶ್ರೀ ಸುನೀಲ್ ವಲ್ಯಾಪುರ್, ಶ್ರೀ ಕೆ.ಎಸ್. ನವೀನ್‌ರವರನ್ನು ಹೊರತುಪಡಿಸಿ, ಬಿ.ಜೆ.ಪಿ., ಮತ್ತು ಜೆ.ಡಿ.(ಎಸ್) ಪಕ್ಷಗಳ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಸಭಾಪತಿಯವರು:–** ಒಂದು ಪ್ರಕಟಣೆ ಇದೆ. ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ನೀವು ಧರಣಿಯನ್ನು ಮುಂದುವರೆಸುತ್ತೀರಾ ಎಂಬುದು ನನಗೆ ಹೇಳಿ.

4) **ಪ್ರಕಟಣೆ**

**ವಿಧಾನಸಭೆಯು ಅಂಗೀಕರಿಸಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಕುರಿತು.**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ಅಂಗೀಕರಿಸಿರುತ್ತದೆಂದು ಮತ್ತು ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಧನವಿನಿಯೋಗ ವಿಧೇಯಕ, 2025 (ವಿಧೇಯಕ ಸಂಖ್ಯೆ 10)
2. ಕರ್ನಾಟಕ ಧನವಿನಿಯೋಗ (ಸಂಖ್ಯೆ2) ವಿಧೇಯಕ, 2025 (ವಿಧೇಯಕ ಸಂಖ್ಯೆ 22)
3. ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂಖ್ಯೆ 25)

4. ಕರ್ನಾಟಕ ಮಂತ್ರಿಗಳು ಸಂಬಳಗಳು ಮತ್ತು ಭತ್ಯೆಗಳು (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂಖ್ಯೆ 26)

5. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂಖ್ಯೆ 20)

**೫. ಆಡಳಿತ ಪಕ್ಷದ ಸದಸ್ಯರ ಪದಬಳಕೆಯ ಬಗ್ಗೆ ವಿರೋಧಪಕ್ಷದ ಸದಸ್ಯರಿಂದ ಆಕ್ಷೇಪ ಮತ್ತು ಧರಣಿ.**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ಸದಸ್ಯರುಗಳಾದ ಶ್ರೀ ಸುನೀಲ್ ವಲ್ಯಾಪುರ್, ಶ್ರೀ ಕೆ.ಎಸ್. ನವೀನ್‌ರವರನ್ನು ಹೊರತುಪಡಿಸಿ, ಬಿ.ಜೆ.ಪಿ., ಮತ್ತು ಜೆ.ಡಿ.(ಎಸ್) ಪಕ್ಷಗಳ ಮಾನ್ಯ ಸದಸ್ಯರು ಸದನದ ಬಾವಿಯೊಳಗೆ ಧರಣಿಯಲ್ಲಿ ನಿರತರಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಸಭಾಪತಿಯವರು:–** ಒಂದು ನಿಮಿಷ ಕೇಳಿ. ನಾನು ಹೇಳುವುದೇನೆಂದರೆ, ಇನ್ನು ಮುಂದೆ ಈ ರೀತಿ ಆಗದೇ ಇರುವ ರೀತಿಯಲ್ಲಿ ನೋಡುವ ಜವಾಬ್ದಾರಿ ನನ್ನದು ಎಂದು ಹೇಳುತ್ತೇನೆ. ನಿಯಮಗಳೂ ಕೂಡ ಇವೆ. ಈಗಾಗಲೇ ಆಗಿರುವ record ನಲ್ಲಿ ಏನಿದೆ ಎಂಬುದನ್ನು ನಾನು ನೋಡುವುದಕ್ಕೆ ಹೇಳಿದ್ದೇನೆ.

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಭಾಪತಿಯವರೇ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

**ಸಭಾಪತಿಯವರು:–** ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಹೇಳಿ.

**ಶ್ರೀ ಸುನೀಲ್ ವಲ್ಯಾಪುರ್:–**ಮಾನ್ಯ ಸಭಾಪತಿಯವರೇ, ನಿಯಮದ ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

**ಸಭಾಪತಿಯವರು:–** ತಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕು. ತಾವು ಏನೂ ಬೇಕಾದರೂ ಮಾತನಾಡುತ್ತೀರಾ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರಿಗೆ ತಾಯಿ ತಂದೆ ಏನೂ ಬೇಕಾದರೂ ಮಾತನಾಡಬಹುದಾ? ಅವರು ಅಂದಿದ್ದನ್ನು ನಾವು ಅನ್ನಿಸಿಕೊಳ್ಳಬೇಕೆ?

**(ಗೊಂದಲ)**

**ಸಭಾಪತಿಯವರು:–** ತಾವು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುತ್ತದೆ. ಅವರು ಏನು ಮಾತನಾಡಿದ್ದಾರೆ ಎಂದು ನಾನು ದಾಖಲೆ ನೋಡಿದ ನಂತರ ಹೇಳುತ್ತೇನೆ.

**ಶ್ರೀ ಸುನೀಲ್ ವಲ್ಯಾಪುರ್;–** ಮಾನ್ಯ ಸಭಾಪತಿಯವರೇ, ನೀವು record ನೋಡಿಯೇ ಇವರಿಗೆ ruling ಕೊಟ್ಟಿದ್ದೀರಿ. ನಾವು ತಮಗೆ ಕೈಜೋಡಿಸಿ ವಿನಂತಿ ಮಾಡುವುದೇನೆಂದರೆ, ಎಸ್.ಸಿ. ಹಾಗೂ ಎಸ್.ಟಿ ಯವರಿಗೆ ದಯವಿಟ್ಟು ಅಪಮಾನ ಮಾಡಬೇಡಿ. ತಮ್ಮ ಮುಖಾಂತರ ಸರ್ಕಾರಕ್ಕೆ ಕೂಡ ಹೇಳುತ್ತೇನೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ.ಯವರೇ, ಅಪಮಾನ ಮಾಡಿರುವುದು. ನಿಮಗೆ ಆತ್ಮ ಸಾಕ್ಷಿ ಇದ್ದರೆ ಹೇಳಿ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ಸದಸ್ಯರುಗಳಾದ ಶ್ರೀ ಸುನೀಲ್ ವಲ್ಯಾಪುರ್, ಶ್ರೀ ಕೆ.ಎಸ್. ನವೀನ್‌ರವರನ್ನು ಹೊರತುಪಡಿಸಿ, ಬಿ.ಜೆ.ಪಿ., ಮತ್ತು ಜೆ.ಡಿ.(ಎಸ್) ಪಕ್ಷಗಳ ಮಾನ್ಯ ಸದಸ್ಯರು ಸದನದ ಬಾವಿಯೊಳಗೆ ಧರಣಿಯಲ್ಲಿ ನಿರತರಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಸಭಾಪತಿಯವರು:–** ಸದನವನ್ನು 2 ಗಂಟೆ 45 ನಿಮಿಷಕ್ಕೆ ಮುಂದೂಡಲಾಗಿದೆ.

**(ಸದನವು ಭೋಜನಕ್ಕಾಗಿ ಮಧ್ಯಾಹ್ನ 1 ಗಂಟೆ 29 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 2 ಗಂಟೆ 45 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

(570)21.3.2025/3.00/ಎಂ.ಎಂ–ಎಂ.ಡಿ.

**(ಭೋಜನ ವಿರಾಮಕ್ಕೆ ಮುಂದೂಡಲ್ಪಟ್ಟ ಸದನವು ಮಧ್ಯಾಹ್ನ 3 ಗಂಟೆ 7 ನಿಮಿಷಕ್ಕೆ ಸಮಾವೇಶಗೊಂಡಿತು)**
**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಬಿ.ಜೆ.ಪಿ. ಮತ್ತು ಜೆ.ಡಿ(ಎಸ್) ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಆಗಮಿಸಿದರು ಜೊತೆಗೆ ಘೋಷಣೆ ಕೂಗುತ್ತಿದ್ದರು)**

**ಸಭಾಪತಿಯವರು:–** ಒಂದು ನಿಮಿಷ ಕೇಳಿ. ಈಗ ಮನಿ ಬಿಲ್ ಇದೆ. ಮುಖ್ಯಮಂತ್ರಿಗಳು ಬರುತ್ತಾರೆ. ಮನಿ ಬಿಲ್ ಅನ್ನು ಪಾಸ್ ಮಾಡಿಕೊಡಬೇಕು. ಬಿಲ್ ಪಾಸ್ ಆಗದಿದ್ದರೆ ರಾಜ್ಯದಲ್ಲಿ ದೊಡ್ಡ ಸಮಸ್ಯೆಯಾಗುತ್ತದೆ. ದಯಮಾಡಿ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಯಿಂದ ತೆರಳಿ ನಿಮ್ಮ ನಿಮ್ಮ ಸ್ಥಳದಲ್ಲಿ ಕುಳಿತುಕೊಳ್ಳಿ. ಬಿಲ್ ಪಾಸ್ ಆದ ನಂತರ ನೀವು ಏನು ಹೇಳುತ್ತೀರೋ ಅದನ್ನು ಮಾಡೋಣ. ಈಗ ನನಗೆ ಏನು ಮಾಡಲು ಹೇಳುತ್ತೀರಿ?

**ಶ್ರೀ ಎಸ್.ಎಲ್. ಭೋಜೇಗೌಡ (ಬಾವಿಯಿಂದ):–** ನಮ್ಮ ಸಮಸ್ಯೆಯನ್ನು ಬಗೆಹರಿಸಿ.

**ಸಭಾಪತಿಯವರು:–** ನಾನು ಅದನ್ನು ಕಡತದಿಂದ ತೆಗೆದು ಹಾಕಿದ್ದೇನೆ. ಅವರನ್ನು ಹೊರಗೆ ಹಾಕುವುದಕ್ಕೆ ನಿಯಮಗಳಿರುತ್ತವೆ. ನಿಯಮದ ಪ್ರಕಾರ ಮಾಡಬೇಕಾಗುತ್ತದೆ. ಈಗ ನೋಡುತ್ತಿದ್ದೇವೆ. ಅದು ಸರಿಯಾಗಿ ಬಂದಿಲ್ಲ. ಚೆಕ್ ಮಾಡಲು FSL (Forensic Science Laboratory) ಗೆ ಕಳುಹಿಸಿದ್ದೇನೆ. ರಿಪೋರ್ಟ್ ಬರುವವರೆಗೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ರಿಪೋರ್ಟ್ ಬಂದ ನಂತರ ಹೇಳುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ತಾವೇ ಈಗ ಕಡತದಿಂದ ತೆಗೆದು ಹಾಕಿದ್ದೇನೆ ಎಂದು ಹೇಳಿದಿರಿ. ಇನ್ನೇನು ಬೇಕಾಗಿದೆ? ಕಡತದಿಂದ ತೆಗೆದ ಮೇಲೆ FSL ಏತಕ್ಕೆ? ಕಣ್ಣು ಮುಂದೆ ನಡೆದಿದ್ದಲ್ಲವೇ?

**ಸಭಾಪತಿಯವರು:-** ಮುಗಿದಿದೆಯಲ್ಲವೇ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ತಾವು ಸಹ ಇಲ್ಲಿಯೇ ಇದ್ದಿರಿ. ಇದು ತಮ್ಮ ಕಣ್ಣು ಮುಂದೆ ನಡೆದಿರುವುದು. ಆ ಸಂದರ್ಭಕ್ಕೆ ನಾವು ಹೇಳಿದ್ದೇವೆ. ಹಾಗಿದ್ದಮೇಲೆ ;

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಸದನದಲ್ಲಿ ಇಂತಹ ಅನೇಕ ವಿಷಯಗಳನ್ನು ಕಡತದಿಂದ ತೆಗೆದ ಮೇಲೆ ಆ ವಿಷಯ ಅಲ್ಲಿಗೇ ಮುಕ್ತಾಯವಾಯಿತು.

**ಸಭಾಪತಿಯವರು:-** ಕಡತದಿಂದ ತೆಗೆದು ಹಾಕಿದ್ದೇನೆ, ಸಮಸ್ಯೆ ಮುಗಿಯಿತು. ಈಗ ಸದನದ ಬಾವಿಯಿಂದ ನಿಮ್ಮ ನಿಮ್ಮ ಜಾಗಕ್ಕೆ ಹೋಗಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕಡತದ ಸಮಸ್ಯೆ ಮುಗಿಯಿತು. ಈಗ ನಮಗೆ ಆಗಿರುವಂತಹ . . .

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಇವರು ಎಲ್ಲಾ ಹೋಟೆಲ್‌ಗಳಲ್ಲಿ ನಿಂತುಕೊಂಡು ಏನೇನು ಮಾಡುತ್ತಿದ್ದರು ಎಂದು ಎಲ್ಲವನ್ನೂ ಹೇಳಿದೆನಲ್ಲಾ ಅದು ಇವರಿಗೆ ಉರಿಯುತ್ತದೆ. ಅದಕ್ಕೇ ಇದೆಲ್ಲಾ ನಡೆಯುತ್ತಿದೆ. ಇವರು ಮಾತನಾಡುತ್ತಿರುವುದೆಲ್ಲಾ ಅದರ effect, ಇದರ effect ಅಲ್ಲ. (**ಗೊಂದಲ**) ಹೌದು ನಿಮ್ಮ ಬಂಡವಾಳವನ್ನೆಲ್ಲಾ ಬಿಚ್ಚಿಡುತ್ತಿದ್ದೇವಲ್ಲಾ ಇದು ಅದರ effect.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಿಮ್ಮ ಮುಂದೆಯೇ ಹೇಗೆ ಮಾತನಾಡುತ್ತಾರೆ ನೋಡಿ.

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್):-** ಮಾನ್ಯ ಸಭಾಪತಿಯವರೇ, ನಾವು ಸದನಕ್ಕೆ ಮೊದಲನೇ ಬಾರಿಗೆ ಬಂದಿದ್ದೇವೆ. ಇದು ನಮ್ಮ ಮೊದಲನೇ ಬಜೆಟ್. ನಮಗೆ ಬಜೆಟ್ ಮೇಲೆ ಮಾತನಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಿ. ನಿಮ್ಮಲ್ಲಿ ಹೊಸಬರಿದ್ದಾರೆ. ನಾವು ಸಹ ಸುಮಾರು ಒಂದು ವಾರದಿಂದಲೂ preparation ಮಾಡಿ ಬಂದಿದ್ದೇವೆ.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಬಿ.ಜೆ.ಪಿ. ಮತ್ತು ಜೆ.ಡಿ(ಎಸ್) ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಘೋಷಣೆ ಕೂಗುತ್ತಿದ್ದರು)**

**ಶ್ರೀ ಪುಟ್ಟಣ್ಣ:-** ನಾನು ನಿಮ್ಮ ಗಲಾಟೆಗಳಿಗೆ ಹೆದರುವುದಿಲ್ಲ.

**(ಗೊಂದಲ)**

(ಮುಂದು)

(571) 21.3.2025 3.00 ಹೆಚ್‌ವಿ(ಪಿಕೆ)ಎಕೆ (ಸಭಾಪತಿಗಳ ಉಪಸ್ಥಿತಿ)

**(ಗೊಂದಲ)**

**ಶ್ರೀ ಪುಟ್ಟಣ್ಣ :-** ಇಂಥದ್ದಕ್ಕೆಲ್ಲಾ ನಾನು ಹೆದರುವುದಿಲ್ಲ. **(ಗೊಂದಲ)** ಮಾನ್ಯ ಸಭಾಪತಿಗಳೇ, ನೀವು ತೀರ್ಪು ಕೊಟ್ಟಿದ್ದರೂ ಮತ್ತೆ ಅವರು ಮಾತನಾಡುತ್ತಿದ್ದಾರೆ. ಅವರನ್ನು ಆಚೆ ಹಾಕಿ.

(ಈ ಹಂತದಲ್ಲೂ ಬಾವಿಯ ಒಳಗಿದ್ದ ಮಾನ್ಯ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಗಳೇ, ತಾವು 3ನೇ ಸಲ ಹೇಳುತ್ತಿದ್ದೀರಿ. ರಿಪೋರ್ಟ್ ತರಿಸುತ್ತೇನೆ, ತನಿಖೆ ಮಾಡಿಸುತ್ತೇನೆ, ಕ್ಯಾಮೆರಾದಲ್ಲಿ ನೋಡಿ ತೀರ್ಮಾನ ಮಾಡುತ್ತೇನೆ ಎಂದು ಹೇಳುತ್ತಿದ್ದೀರಿ. ಮುಖ್ಯಮಂತ್ರಿಗಳು ಬಜೆಟ್‌ನ ಮೇಲೆ ಉತ್ತರಿಸಲು ಸದನಕ್ಕೆ ಬಂದಿದ್ದಾರೆ. ಮಾನ್ಯ ಸಭಾಪತಿಗಳು ತಮ್ಮ ವಿಚಾರವನ್ನು ಇಟ್ಟಿದ್ದಾರೆ. ಅವರು ಇನ್ನೇನು ಮಾಡುವುದಕ್ಕೆ ಆಗುತ್ತದೆ?

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೇ, ಈ ರೀತಿ ದಬ್ಬಾಳಿಕೆ ಮಾಡಬಾರದು, ಈ ರೀತಿ ಒತ್ತಡ ತರಬಾರದು.

**(ಗೊಂದಲ)**

**ಸಭಾಪತಿಯವರು:-** ನಮ್ಮ ಸದನದಲ್ಲಿ ಕೆಲವು ನಿಯಮಗಳಿವೆ. ಮಾನ್ಯ ಪುಟ್ಟಣ್ಣನವರು ಇಂಥದ್ದನ್ನು ಮಾತನಾಡಿದ್ದಾರೆ ಎಂದು ಹೇಳಿದಿರಿ. ಅದಕ್ಕೆ ಸಂಬಂಧಪಟ್ಟ ಕಡತವನ್ನು ತರಿಸಿದ್ದೇನೆ. ಕಡತದಿಂದ ಅದನ್ನು ತೆಗೆಸಿಹಾಕಿದ್ದೇನೆ. ಅಲ್ಲಿಗೆ ಆ ವಿಚಾಯ ಮುಗಿಯಿತು.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೇ, ಮೊದಲನೆಯ ಬಾರಿ ತಪ್ಪಾಗುತ್ತದೆ ಸರಿ. ನಾವು ಅದನ್ನು ಒಪ್ಪುತ್ತೇವೆ. ಆದರೆ ಎರಡನೆಯ ಬಾರಿ ಈ ರೀತಿ ಆಗಿದೆ. ಅವರು ಈಗಲೂ, ನಾನು ಹೆದರುವುದಿಲ್ಲ ಎಂದು ಹೇಳುತ್ತಿದ್ದಾರೆ. ಅಂದರೆ, ಇಂಥದ್ದಕ್ಕೆ ಕುಮ್ಮಕ್ಕು ಕೊಟ್ಟ ಹಾಗೆ ಆಗುವುದಿಲ್ಲವೇ?

**(ಗೊಂದಲ)**

**6) ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕ.ವಿ.ಪ:-** ಮಾನ್ಯ ಸಭಾಪತಿಗಳೇ, ಈ ಕೆಳಕಂಡ ವಿಧೇಯಕಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

1. ಕರ್ನಾಟಕ ಧನವಿನಿಯೋಗ ವಿಧೇಯಕ, 2025
2. ಕರ್ನಾಟಕ ಧನವಿನಿಯೋಗ (ಸಂಖ್ಯೆ-2) ವಿಧೇಯಕ, 2025
3. ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2025
4. ನೋಟರಿಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025
5. ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2025
6. ಡಾ: ಎಚ್.ನರಸಿಂಹಯ್ಯ ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2025
7. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2025

**7) ಆಡಳಿತ ಪಕ್ಷದ ಸದಸ್ಯರ ಪದಬಳಕೆಯ ಬಗ್ಗೆ ವಿರೋಧಪಕ್ಷದ ಸದಸ್ಯರಿಂದ ಆಕ್ಷೇಪ ಮತ್ತು ಮುಂದುವರೆದ ಧರಣಿ.**

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೇ, ಪೀಠ ಏನು ಹೇಳುತ್ತದೆಯೋ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಎಂದು ಈಗಾಗಲೇ ಹೇಳಿದ್ದೇನೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಗಳೇ, ತಾವು ಈಗಾಗಲೇ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಆದರೂ ಇವರು ದಬ್ಬಾಳಿಕೆ ಮಾಡುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ನಾನು ಆ ವಿಷಯವನ್ನು ಮುಕ್ತಾಯ ಮಾಡಿದ್ದೇನೆ. ಇನ್ನು ಮುಂದೆ, ಯಾರೇ ಸದಸ್ಯರು ಈ ರೀತಿಯ ವರ್ತನೆ ಮಾಡಬಾರದೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಈ ಸದನದ ಗೌರವಕ್ಕೆ ಧಕ್ಕೆ ತರಬಾರದು. ಸಮಾಧಾನದಿಂದ ಮಾತನಾಡಬೇಕೆಂದು ಮಾನ್ಯ ಪುಟ್ಟಣ್ಣನವರಿಗೂ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದಿದ್ದಾರೆ. ಅಂಗೀಕರಿಸಬೇಕಾದ ವಿಧೇಯಕಗಳೂ ಸಹ ಇವೆ. ಎಲ್ಲರೂ ಸಹಕರಿಸಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ಒಂದು ಸಲ ತಪ್ಪು ಆದಾಗ ನೀವು ಕ್ಷಮಿಸಿಬಿಡಿ. ನಾವು ಕ್ಷಮಿಸಿ ಬಿಡುತ್ತೇವೆ. ಎರಡನೆಯ ಸಲ ಆದಾಗ, ಆ ಕುರಿತು ನ್ಯಾಯ ಕೊಡಿ ಎಂದು ಕೇಳುತ್ತಿದ್ದೇವೆ. ಈಗ ನಮ್ಮ ಮುಂದೆಯೇ ನಿಂತು, ನಿಮಗೆ ಹೆದರುವುದಿಲ್ಲ ಎಂದು ಹೇಳುತ್ತಾರೆ. ಇದನ್ನು ನೀವು ನೋಡಿದ್ದೀರಿ. ಪೀಠಕ್ಕೆ ಹೆದರಬೇಕೋ ಬೇಡವೋ? ಅಲ್ಲದೇ ಅವರು ಬಂದು ಸಿಬ್ಬಂದಿಗಳನ್ನೂ ಸಹ ಹೆದರಿಸಿದರು.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು) :-** ಮಾನ್ಯ ಸಭಾಪತಿಗಳೇ, ಇವರು ತುಂಬಾ ಎಳೆದುಕೊಂಡು ಹೋಗುತ್ತಿದ್ದಾರೆ. ಬಜೆಟ್ ಮೇಲೆ ಉತ್ತರ ಕೊಡಲು ಮುಖ್ಯಮಂತ್ರಿಗಳು ಬಂದಿದ್ದಾರೆ.

**(ಗೊಂದಲ)**

**೮) ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಪಶು ಆಹಾರ (ಉತ್ಪಾದನೆ ಮತ್ತು ಗುಣಮಟ್ಟ ನಿಯಂತ್ರಣದ ವಿನಿಯಮನ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೆ.ವೆಂಕಟೇಶ್ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಪಶು ಆಹಾರ (ಉತ್ಪಾದನೆ ಮತ್ತು ಗುಣಮಟ್ಟ ನಿಯಂತ್ರಣದ ವಿನಿಯಮನ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

(ಗೊಂದಲ)

**(ಈ ಹಂತದಲ್ಲಿ ಮಾನ್ಯ ವಿರೋಧಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಪಶು ಆಹಾರ (ಉತ್ಪಾದನೆ ಮತ್ತು ಗುಣಮಟ್ಟ ನಿಯಂತ್ರಣದ ವಿನಿಯಮನ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 31 ರವರೆಗೆ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 31 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 31 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೆ.ವೆಂಕಟೇಶ್ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):–** ಮಾನ್ಯ ಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಪಶು ಆಹಾರ (ಉತ್ಪಾದನೆ ಮತ್ತು ಗುಣಮಟ್ಟ ನಿಯಂತ್ರಣದ ವಿನಿಯಮನ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಪಶು ಆಹಾರ (ಉತ್ಪಾದನೆ ಮತ್ತು ಗುಣಮಟ್ಟ ನಿಯಂತ್ರಣದ ವಿನಿಯಮನ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಆ) ಡಾ.ಹೆಚ್.ನರಸಿಂಹಯ್ಯ ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಡಾ.ಹೆಚ್.ನರಸಿಂಹಯ್ಯ ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಚಿಕ್ಕಬಳ್ಳಾಪುರ ಜಿಲ್ಲೆಯ, ಗೌರಿಬಿದನೂರು ತಾಲ್ಲೂಕಿನ ಹೊಸೂರು, ವಿದುರಾಶ್ವತ್ಥ ಮತ್ತು ಅವುಗಳ ಸುತ್ತಮುತ್ತಲಿನ ಪರಂಪರಾ ತಾಣಗಳು ಅಭಿವೃದ್ಧಿ ಮತ್ತು ನಿರ್ವಹಣೆಗೆ ಡಾ.ಎಚ್.ನರಸಿಂಹಯ್ಯ ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಿ ಅದರ ಅಭಿವೃದ್ಧಿಗೆ ಸರ್ಕಾರ 132 ಎಕರೆ ಜಾಗವನ್ನು ಕೊಟ್ಟಿದೆ ಮತ್ತು ಇದಕ್ಕೆಂದು ಸರ್ಕಾರದಿಂದ ರೂ. 10 ಕೋಟಿ ಹಣವನ್ನು ಬಿಡುಗಡೆ ಮಾಡಲಾಗಿದೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಡಾ.ಹೆಚ್.ನರಸಿಂಹಯ್ಯ ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

ಖಂಡ 2 ರಿಂದ 46 ರವರೆಗೆ

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "ಖಂಡ 2 ರಿಂದ 46 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 46ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

ಸಭಾಪತಿಯವರು:- ಪ್ರಸ್ತಾವ ಏನೆಂದರೆ;

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):–** ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಡಾ.ಹೆಚ್.ನರಸಿಂಹಯ್ಯ ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ಡಾ.ಹೆಚ್.ನರಸಿಂಹಯ್ಯ ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸುವುದು.”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(ಮುಂದು)

(572) 21.3.2025 3.10 ಪಿಕೆ:ಎಕೆ (ಸಭಾಪತಿಗಳ ಉಪಸ್ಥಿತಿ)

**ಸಭಾಪತಿಯವರು:–** ದಯಮಾಡಿ ಎಲ್ಲರೂ ನನ್ನ ಮಾತನ್ನು ಕೇಳಿ. ನಾನು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಅಂಗೀಕಾರವಾಗಬೇಕಾಗಿರುವ ಇನ್ನೂ ಅನೇಕ ವಿಧೇಯಕಗಳು ಬಾಕಿ ಇವೆ. ಸುಮ್ಮನೆ ಹಾಗೆಯೇ ಪಾಸ್ ಮಾಡಿ ಕೊಡುವುದಕ್ಕೆ ನನಗೂ ಮನಸ್ಸಿಲ್ಲ. ಹಾಗಾಗಿ ಎಲ್ಲರೂ ತಮ್ಮ ಸ್ಥಳಕ್ಕೆ ತೆರಳಬೇಕು ಎಂದು ಕೇಳಿಕೊಳ್ಳುತ್ತೇನೆ.

**೯. ಆಡಳಿತ ಪಕ್ಷದ ಸದಸ್ಯರ ಆಕ್ಷೇಪಾರ್ಹ ಪದಬಳಕೆಯ ಬಗ್ಗೆ ವಿರೋಧಪಕ್ಷದ ಸದಸ್ಯರಿಂದ ಮುಂದುವರೆದ ಧರಣಿ ಮತ್ತು ಸಂಬಂಧಪಟ್ಟ ಸದಸ್ಯರನ್ನು ಸದನದಿಂದ ಹೊರಗೆ ಹಾಕಬೇಕೆಂಬ ಒತ್ತಾಯ.**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೇ, ನೀವು ಅವರ ಮೇಲೆ ಕ್ರಮ ಕೈಗೊಳ್ಳಿ. ಅವರನ್ನು ಹೊರಗೆ ಹಾಕಿ. ನಾವು ಎಲ್ಲದಕ್ಕೂ ಸಹಕಾರ ಕೊಡುತ್ತೇವೆ.

**(ಗೊಂದಲ)**

**ಸಭಾಪತಿಯವರು:–** ಯಾರನ್ನು ಹೊರಗಡೆ ಕಳುಹಿಸಬೇಕು?

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಆದ ಪ್ರಕರಣವನ್ನು ಮುಖ್ಯಮಂತ್ರಿಗಳಿಗೆ ಹೇಳಿ. "ನಿಮ್ಮಪ್ಪ" ಎಂದು ಹೇಳಿದರಲ್ಲವೇ, ಆ ಕುರಿತು ಮುಖ್ಯಮಂತ್ರಿಗಳಿಗೆ ಹೇಳಿ. ಅವರು ನಮಗೆ ನ್ಯಾಯ ಕೊಡಿಸಲಿ.

**ಸಭಾಪತಿಯವರು:–** ಅವರೇನು ಮಾತನಾಡಿದರೋ ಅದನ್ನು ಕಡತದಿಂದ ತೆಗೆದು ಹಾಕಿದ ನಂತರ, ಸಭೆಯಲ್ಲಿ ಏನು ತೀರ್ಮಾನವಾಯಿತು ಎಂದರೆ, ಯಾವುದೇ ಒಂದು ಅಸಂವಿಧಾನಿಕ ಶಬ್ದ ಇದ್ದು ಅದನ್ನು ತೆಗೆದು ಹಾಕಿದರೆ ಅಲ್ಲಿಗೆ ಆ ವಿಚಾರ ಮುಕ್ತಾಯವಾಗುತ್ತದೆ. ಎಲ್ಲಾ ಮುಗಿದ ಮೇಲೆ ಮತ್ತೆ ಹೊಸದೇನಿದೆ? ಯಾರೋ ಒಬ್ಬರು ಬಾಯಿಂದ ಒಂದು ಶಬ್ದವನ್ನು ಹೇಳಿಬಿಡುತ್ತಾರೆ. ಅಂತಹ ಸಂದರ್ಭದಲ್ಲಿ, ಸದನದ ಪದ್ಧತಿಯಂತೆ, ಕಡತವನ್ನು ತರಿಸಿಕೊಂಡು, ಅದು ಅಸಂವಿಧಾನಿಕವಾಗಿದ್ದರೆ ಅದನ್ನು ತೆಗೆದು ಹಾಕಲಾಗುತ್ತದೆ. ಹಾಗಾಗಿ ಆ ಶಬ್ದವನ್ನು ತೆಗೆದು ಹಾಕಿದ್ದೇವೆ. ಮತ್ತೆ, ಅದೇರೀತಿಯದ್ದೇನಾದರೂ ರಿಪೀಟ್ ಮಾಡಿದರೆ ಅದರ ಬಗ್ಗೆ ನಾವು ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೇ, ಪ್ರತಿ ಬಾರಿ ಅವರು ಹೀಗೆಯೇ ಮಾಡುತ್ತಾರೆ. ಅವರು habitual offender ಆಗಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಈ ರೀತಿ ಮಾಡಿದರೆ ಹೇಗೆ? ಈ ರೀತಿ ದಬ್ಬಾಳಿಕೆ ಮಾಡುತ್ತಿರುವುದನ್ನು ನಾವು ಎಂದೂ ನೋಡಿಲ್ಲ. ಮಾನ್ಯ ಸಭಾಪತಿಗಳೇ, ಅವರನ್ನು ಹೊರಗೆ ಹಾಕಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ನನ್ನನ್ನು ಏಕೆ ಹೊರಗೆ ಹಾಕಬೇಕು? ಬೇಕಾದರೆ ಅವರನ್ನು ಹೊರಗೆ ಹಾಕಲಿ. ಬೈಸಿಕೊಂಡವನು ನಾನು, ಆದರೂ ನನ್ನನ್ನೇ ಹೊರಗೆ ಹಾಕಬೇಕೆ?

**(ಗೊಂದಲ)**

**ಸಭಾಪತಿಯವರು:–** ಇಲ್ಲ, ಅದನ್ನು ನಾನು ಒಪ್ಪುವುದಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೇ, ಬೈದವರು ಇಲ್ಲೇ ಇರಬೇಕು, ಬೈಸಿಕೊಂಡವರು ಹೊರಗೆ ಹೋಗಬೇಕೆ? ಆಯಿತು, ನನಗೆ ಶಿಕ್ಷೆ ಕೊಡುತ್ತೀರಾ? ಕೊಡಿ, ನಾನು ತಯಾರಾಗಿದ್ದೇನೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಗಳೇ, ಪೀಠದಿಂದ ಅಷ್ಟೊಂದು ಸೂಚನೆ ಕೊಟ್ಟಿದ್ದರೂ ಅವರು ದಬ್ಬಾಳಿಕೆ ಮಾಡುತ್ತಿದ್ದಾರೆ. ನಮ್ಮನ್ನು ಹೊರಗೆ ಹಾಕಿ ಎಂದು ಹೇಳುತ್ತೀರಾ? ಅಂತಿಮವಾಗಿ ಪೀಠ ಏನು ಹೇಳುತ್ತದೆಯೋ ಅದನ್ನು ನಾವು ಕೇಳಬೇಕು. ನಿಯಮಾವಳಿಗಳ ಪ್ರಕಾರ ಸೂಚನೆ ಕೊಟ್ಟಮೇಲೆ ನಾವು ಅದನ್ನು ಪಾಲಿಸಬೇಕಾಗುತ್ತದೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ:** ಪೀಠ ರೂಲಿಂಗ್ ಕೊಟ್ಟಮೇಲೆ...

**(ಗೊಂದಲ)**

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಗಳೇ, ಸಭಾನಾಯಕರು ಹೇಳಿಕೆಯನ್ನು ಕೊಡಬಾರದು ಎನ್ನುವುದು ಅವರ ಉದ್ದೇಶವಾಗಿದೆ. ಅವರಿಗೆ ಬೇರೆ ಯಾವ ಒಳ್ಳೆಯ ಉದ್ದೇಶವಿಲ್ಲ. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಹಿಂದೆ ಇಂತಹ ಅನೇಕ ಪ್ರಕರಣಗಳು ನಡೆದಿವೆ. ದುರುದ್ದೇಶದಿಂದ ಇವರು ಹೀಗೆ ಮಾಡುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಯಾರು ಏನೇ ಹೇಳಿದರೂ ನಿಮಗೆ ಹೊರ ಹಾಕುವಂಥದ್ದನ್ನು ನಾನು ಒಪ್ಪುವುದಿಲ್ಲ. ವಿರೋಧ ಪಕ್ಷದ ನಾಯಕರೂ ಸಹ Shadow of the Chief Minister ಇದ್ದಹಾಗೆ. ಸಭಾನಾಯಕರಿಗೆ equal ಆಗಿ ಇರುತ್ತೀರಿ. ನಿಮ್ಮ ಎಲ್ಲಾ ಮಾತಿಗೆ ಗೌರವ ಕೊಡುತ್ತಾ ಬಂದಿದ್ದೇವೆ. ನನ್ನ ವಿನಂತಿ ಏನೆಂದರೆ, ಏನೋ ಒಂದು ಘಟನೆ ನಡೆದು ಅದು ಮುಗಿದು ಹೋಯಿತು, ಸದನದಲ್ಲಿ ನೀವು–ಅವರು ಜಗಳ ಆಡುವುದೂ ಇದ್ದೇ ಇರುತ್ತದೆ. ಎಲ್ಲಾ ಮುಗಿದ ನಂತರ ಒಂದು ಹಂತಕ್ಕೆ ಬಂದರೆ ನಾವೆಲ್ಲರೂ ಕೂಡ ಮಾತನಾಡಿ, ಕೊನೆಯ ದಿನ ಸದನವನ್ನು ಉತ್ತಮ ರೀತಿಯಲ್ಲಿ ನಡೆಸೋಣ. ಎಲ್ಲಾ ಸದಸ್ಯರು ತಮ್ಮ ಸ್ಥಾನಕ್ಕೆ ತೆರಳಿ. ನೀವೇನಾದರೂ ಮಾತನಾಡಬಯಸಿದರೆ ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಚರ್ಚೆ ಮಾಡೋಣ. ನೀವು ಏನಾದರೂ ಹೇಳುವುದಿದ್ದರೆ ಹೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ರಿಪೋರ್ಟ್ ಯಾವಾಗ ತರಿಸುತ್ತೀರಿ?

**ಸಭಾಪತಿಯವರು:–** ಅದಕ್ಕೆ ಸಮಯ ಬೇಕಾಗುತ್ತದೆ ಅಲ್ಲವೇ?

**(ಗೊಂದಲ)**

**ಡಾ:ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಗಳೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ "habitual offender" ಎಂದು ಹೇಳಿದರು. ದಯವಿಟ್ಟು ಅದನ್ನು ಕಡತದಿಂದ ತೆಗೆಸಬೇಕು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೇ, "habitual offender" ಎಂದು ಅವರು ಹೇಳಬಹುದೇ?

**(ಗೊಂದಲ)**

**ಡಾ:ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಗಳೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ನಮ್ಮ ಸದಸ್ಯರ ವಿರುದ್ಧ "habitual offender" ಎಂದು ಪದೇ ಪದೇ ಹೇಳಿದರು. ಅದನ್ನು ದಯವಿಟ್ಟು ಕಡತದಿಂದ ತೆಗೆಸಬೇಕು.

**(ಗೊಂದಲ)**

**ಸಭಾಪತಿಯವರು:-** ಆಯಿತು, ಅದನ್ನು ನಾನು ನೋಡುತ್ತೇನೆ. ಅದು ಬೇರೆ ರೀತಿಯಲ್ಲಿ ಅರ್ಥ ಬರುತ್ತದೆ. ಅದು ಒಂದು ವೇಳೆ ಸಂಸದೀಯವಾಗಿದ್ದರೆ ಸರಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ನನ್ನ ಘನತೆ-ಗೌರವಕ್ಕೆ ಧಕ್ಕೆಯಾಗಿದೆ. ನಾನು ಹೇಳಿದ್ದು ಅಸಂಸದೀಯ ಪದವಲ್ಲ. ಪದೇ ಪದೇ ಹಾಗೆಯೇ ಮಾಡುತ್ತಿದ್ದಾರೆ ಎಂದರ್ಥ. ಅದು ಹೇಗೆ ಅಸಂಸದೀಯ ಪದವಾಗುತ್ತದೆ?

**(ಗೊಂದಲ)**

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಗಳೇ, ನಾನು ಪ್ರಥಮ ಬಾರಿಗೆ ಬಂದಿದ್ದೇನೆ. ಬೆಳಗಾವಿ ಅಧಿವೇಶನದಲ್ಲಿ ನಮ್ಮ ಸದಸ್ಯರೊಬ್ಬರು ಇದೇ ರೀತಿ ಮಾತನಾಡಿದರು. ಅದರ ಬಗ್ಗೆ ಏಕೆ ಕ್ರಮ ಕೈಗೊಳ್ಳುತ್ತಿಲ್ಲ? ಏಕೆ ಆ ಕುರಿತು ಕೇಳುತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:-** ಅದು ಮುಗಿದು ಹೋದ ವಿಚಾರವಾಗಿದೆ.

**(ಗೊಂದಲ)**

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಗಳೇ, ನಾನು ಪ್ರಥಮ ಬಾರಿಗೆ ಸದಸ್ಯನಾಗಿ ಬಂದಿದ್ದೇನೆ. ಹೊಸಬರಾಗಿದ್ದೇವೆ. ಒಬ್ಬರಿಗೆ ಒಂದು ನ್ಯಾಯ; ಇನ್ನೊಬ್ಬರಿಗೆ ಇನ್ನೊಂದು ನ್ಯಾಯ ಎನ್ನುವುದಿದೆಯೇ? ನ್ಯಾಯ ಎಲ್ಲರಿಗೂ ಒಂದೇ ಅಲ್ಲವೇ? ನಾನು ಕೇಳಿಸಿಕೊಂಡಿದ್ದೇನೆ, ನಾನು ಅದಕ್ಕೆ ಸಾಕ್ಷಿಯಾಗಿದ್ದೇನೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದ ಮೇಲೆ ಇವರ ಮೇಲೆ ಏಕೆ ಕ್ರಮ ಕೈಗೊಳ್ಳಬೇಕು?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೇ ಅವೆಲ್ಲಾ ಮುಗಿದಿದೆ. The matter is pending before the Ethics Committee. ಆ ಕಮಿಟಿ ರಿಪೋರ್ಟ್ ಬರುವ ತನಕ ಅದರ ಬಗ್ಗೆ ಮಾತನಾಡಲು ಅಧಿಕಾರ ಇಲ್ಲ. ಸಮಿತಿಯ ವರದಿ ಬಂದಮೇಲೆ ಮುಂದಿನ ಕ್ರಮ ಕೈಗೊಳ್ಳುತ್ತೇನೆ.

**(ಗೊಂದಲ)**

**ಶ್ರೀ ರಾಮೋಜಿಗೌಡ:–** ತಾವು, ರೆಕಾರ್ಡ್ ತೆಗೆಸಬೇಕು ಎಂದು ಹೇಳುತ್ತಿದ್ದೀರಿ. FSL (Forensic Science Laboratory) ಗೆ ಕಳುಹಿಸಿದ್ದೇನೆ ಎಂದು ಹೇಳುತ್ತಿದ್ದೀರಿ. ನೀವೇ ಈ ರೀತಿ ಹೇಳಿದ ಮೇಲೆ ವಿರೋಧ ಪಕ್ಷದವರು ಏಕೆ ಅಡ್ಡಿ ಪಡಿಸುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮುಖ್ಯಮಂತ್ರಿಗಳು ಬಂದಿದ್ದಾರೆ ಎಂದು ಜಿಗಿದು ಮಾತನಾಡುವುದಕ್ಕೆ ಹೋಗಬೇಡಿ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಗಳೇ, ನಿಯಮ 331ರಲ್ಲಿ, ಸದನ ಸರಿಯಾಗಿ ನಡೆಯದೇ ಇದ್ದಾಗ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮಗಳನ್ನು ದಯವಿಟ್ಟು ತೆಗೆದುಕೊಳ್ಳಿ. ಆ ಅಧಿಕಾರ ನಿಮಗೆ ಇದೆ. **(ಗೊಂದಲ)**

**10. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಇ) ನೋಟರಿಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) (ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರಾಸೋದ್ಯಮ ಸಚಿವರ ಪರವಾಗಿ):–** ಮಾನ್ಯ ಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ನೋಟರಿಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ನೋಟರಿಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

<u>ಪ್ರಸ್ತಾವದ ಅಂಗೀಕಾರ</u>

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರಾಸೋದ್ಯಮ ಸಚಿವರ ಪರವಾಗಿ):–** ಮಾನ್ಯ ಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ನೋಟರಿಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ನೋಟರಿಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು</u>

**(ಮುಂದು)**

(573) 21-3-2025 3.20 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

**11. ಆಡಳಿತ ಪಕ್ಷದ ಸದಸ್ಯರ ಆಕ್ಷೇಪಾರ್ಹ ಪದಬಳಕೆಯ ಬಗ್ಗೆ ವಿರೋಧಪಕ್ಷದ ಸದಸ್ಯರಿಂದ ಮುಂದುವರೆದ ಧರಣಿ ಮತ್ತು ಸಂಬಂಧಪಟ್ಟ ಸದಸ್ಯರನ್ನು ಸದನದಿಂದ ಹೊರಗೆ ಹಾಕಬೇಕೆಂಬ ಒತ್ತಾಯ.**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ತಮಗೆ ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ಕೊನೆ ದಿವಸ ಈ ರೀತಿ ಆಗುವುದು ಬೇಡ. ಈ ವಿಷಯ ಮುಗಿದಿದೆ. ಮತ್ತೆ ಏನಾದರೂ ಇದ್ದರೆ ನಾನು ನೋಡಿ ನಿಮಗೆ ಹೇಳುತ್ತೇನೆ. ದಯಮಾಡಿ ಎಲ್ಲರೂ ನಿಮ್ಮ ನಿಮ್ಮ ಸ್ಥಾನಗಳಿಗೆ ತೆರಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಕೈಮುಗಿದು ತಮಗೆ ಕೇಳಿಕೊಳ್ಳುತ್ತೇನೆ. ಅವರೊಬ್ಬರ ವಿಷಯಕ್ಕಾಗಿ ಈ ಸದನ ಬಲಿಯಾಗುವುದು ಬೇಡ. ಅದಕ್ಕೆ ತಾವು ತೀರ್ಮಾನ ಕೊಡಿ. ಅವರನ್ನು ಹೊರಗಡೆ ಕಳುಹಿಸಿ, ನಾವು ಸಹಕಾರ ಮಾಡುತ್ತೇವೆ. ಆಗ ಯಾವುದೇ ಸಮಸ್ಯೆ ಇರುವುದಿಲ್ಲ.

**ಸಭಾಪತಿಯವರು:–** ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಿ ಎಂದು ಅವರಿಗೆ ಸೂಚನೆಯನ್ನು ಕೊಟ್ಟಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಆದರೂ ಅವರಲ್ಲಿ ವ್ಯತ್ಯಾಸವಾಗಿಲ್ಲ. ಅವರು ಎದೆ ಉಬ್ಬಿಸಿ ಹೆದರುವುದಿಲ್ಲ, ಬೆದರುವುದಿಲ್ಲ ಎಂದು ಹೇಳುತ್ತಿದ್ದಾರೆ. ಅಂದರೆ

ಅವರು ಆ ರೀತಿ ಗೂಂಡಾಗಿರಿ ಮಾಡುತ್ತಿದ್ದಾರೆ. ಇದು ಸರಿಯಿದೆಯೇ? ಮೊನ್ನೆ ತಾನೇ **[XXX]** ಎಂದು ನಮ್ಮನ್ನು ಬೈಯ್ದರು, ಆದರೂ ನಾವು ಒಪ್ಪಿಕೊಂಡಿದ್ದೇವೆ. ಎಲ್ಲರಿಗೂ ಬೈಯ್ದರು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇವತ್ತಿನ ವಿಷಯವನ್ನು ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂದು ತಾವು ಹೇಳಿದ್ದೀರಿ. ಆ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ ಎಂದು ಹೇಳಿದ್ದೇವೆ. ಆದರೂ ಇವರು ಗೂಂಡಾಗಿರಿ ಮಾಡುತ್ತಿದ್ದಾರೆ ಎಂದು ಹೇಳುವುದು ಸರಿಯಿಲ್ಲ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನೀವು ಮಂತ್ರಿಗಳಾಗಿ ಈ ರೀತಿ ಮಾತನಾಡುತ್ತಿದ್ದೀರಲ್ಲಾ? ನಾನು ಮಾತನಾಡುವುದನ್ನು ಕೇಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಅವರನ್ನು ತಣ್ಣಗಾಗುವ ಹಾಗೆ ಮಾಡಿ, ನಮ್ಮನ್ನು ಹೊರಗೆ ಹಾಕಿ ಎಂದು ಹೇಳುತ್ತಿದ್ದಾರೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾವು ಹತ್ತಾರು ಸಲ ಹೇಳುತ್ತಿದ್ದೇವೆ, ಮನವಿ ಮಾಡುತ್ತಿದ್ದೇವೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಮನವಿ ಮಾಡುತ್ತಿದ್ದೇವೆ. ನಮಗೆ ನ್ಯಾಯ ಕೊಡಿ, ಅವರು ನಮಗೇನು ಬೈಯ್ದರು ನಾವು ಬಯ್ಯಿಸಿಕೊಳ್ಳಬೇಕೇ? ನಮ್ಮನ್ನು ಹೊರಗೆ ಹಾಕಬೇಕೇ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮತ್ತೊಂದು ಸಲ ಪರಿಶೀಲನೆ ಮಾಡಿ ನಾನು ನಿರ್ಧಾರ ತೆಗೆದುಕೊಳ್ಳುತ್ತೇನೆ ಎಂದು ತಾವು ಹೇಳಿದ್ದೀರಿ. ತಾವೇನು ನಿರ್ಧಾರ ತೆಗೆದುಕೊಳ್ಳುತ್ತೀರಿ, ಅದಕ್ಕೆ ನಾನು ಬದ್ಧನಾಗಿದ್ದೇನೆ ಎಂದು ಮಾನ್ಯ ಸದಸ್ಯರು ಹೇಳಿದರು. ಇನ್ನೇನು ಹೇಳಬೇಕು?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪದೇಪದೇ ಅದನ್ನೇ ಹೇಳಬೇಕಾಗಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಹೇಳುವುದನ್ನು ಕೇಳಿ. ಮುಂದೆ ನಿಮ್ಮ ನಡವಳಿಕೆಯನ್ನು ಸುಧಾರಿಸಿಕೊಳ್ಳಿ, ಈ ರೀತಿ ಮಾತನಾಡಬೇಡಿ. ಸದನದಲ್ಲಿ ಎಲ್ಲರೂ ಸೇರಿ ಕಾರ್ಯಕಲಾಪವನ್ನು ನಡೆಸೋಣವೆಂದು ನಾನು ಹೇಳಿದ್ದೇನೆ. ಒಂದು ಸಲ ಅಲ್ಲ, ಹತ್ತು ಸಲ ನಿಮಗೆ ನಾನು ಮನವಿ ಮಾಡಿದ್ದೇನೆ. ಇವತ್ತು ಕೊನೆ ದಿವಸ, ಪಟ್ಟಿಯಲ್ಲಿ ಇನ್ನು ಮಾತನಾಡುವವರು ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದಿದ್ದಾರೆ. ಧನವಿನಿಯೋಗ ವಿಧೇಯಕವನ್ನು ಪಾಸ್ ಮಾಡಿ ಕೊಡಬೇಕಾಗಿದೆ. ಮಾನ್ಯ ಸದಸ್ಯರುಗಳು ನಿಮ್ಮ ನಿಮ್ಮ ಸ್ಥಳದಲ್ಲಿ ಕುಳಿತುಕೊಂಡು ಚರ್ಚೆ ಮಾಡಿ, ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಕೇಳಿ. ನಾನು ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ದಯಮಾಡಿ ಸದನವನ್ನು ನಡೆಸುವುದಕ್ಕೆ ಅನುಮತಿ ಕೊಡಿ ಎಂದು ನಾನು ಮನವಿ ಮಾಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಒಪ್ಪುತ್ತೇನೆ. ಆದರೆ, ತಾವು ಹೇಳಿದಾಗ ನಾವು ಕೇಳಿದ್ದೇವೆ. ಅವರು ಸಿ.ಟಿ.ರವಿಯವರ ವಿಷಯಕ್ಕೆ ಬಂದರು. ಅದು ಇದಕ್ಕೆ ಸಂಬಂಧವಿದೆಯೇ?

**ಸಭಾಪತಿಯವರು:-** ಆ ವಿಷಯದ ಬಗ್ಗೆ ನಾನು ತೀರ್ಮಾನ ಮಾಡಿ ಹೇಳಿದ್ದೇನೆ. The matter is pending before the Ethics Committee. ಸಮಿತಿಯ ವರದಿ ಬರುವವರೆಗೂ ಯಾರೂ ಮಾತನಾಡುವ ಹಾಗಿಲ್ಲ ಎಂದು ಹೇಳಿದ್ದೇನೆ. ಅಲ್ಲಿಗೆ ಆ ವಿಷಯ ಮುಕ್ತಾಯವಾಗಿದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೊನೆಗೆ ನನಗೆ ಪಶ್ಚಾತಾಪವಾದರೂ ಬಂದು ಬಿಡುತ್ತದೆ. ಆದರೆ ಇಲ್ಲಿ ಏನಾಯಿತು? ಅವರು ಎದ್ದು 'ಹೆದರುವುದಿಲ್ಲ, ಬೆದರುವುದಿಲ್ಲ' ಎಂದು ಹೇಳುತ್ತಾರೆ. ಆ ರೀತಿ ಹೇಳಿದರೆ ಹೇಗೆ? ಇದನ್ನು ನೀವು ಸಹಿಸಿಕೊಂಡಿರಿ ಎಂದು ತಾವು ಹೇಳುತ್ತೀರಾ? ಅವರೇನಾದರೂ ಹೇಳಿಕೊಳ್ಳಲಿ, ನಿಮ್ಮ ಪಾಡಿಗೆ ನೀವು ಕುಳಿತುಕೊಳ್ಳಿ ಎಂದು ಹೇಳುತ್ತೀರಾ?

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನೇನು ಆ ರೀತಿ ಹೇಳುವುದಿಲ್ಲ. ಎಲ್ಲಾ ಸದಸ್ಯರಿಗೂ ಗೌರವವಿರುತ್ತದೆ. ನಿಯಮದ ಪ್ರಕಾರ ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ. ಮುಂದಿನದು ಅವರಿಗೆ ಬಿಟ್ಟದ್ದು, ನಿಮಗೆ ಬಿಟ್ಟದ್ದು. ನಾನು ಹೇಳುವುದೇನೆಂದರೆ, ಸದನವನ್ನು ನಡೆಸುವುದಕ್ಕೆ ಅನುಮತಿ ಕೊಡಿ ಎಂದು ನಾನು ಕೇಳುತ್ತಿದ್ದೇನೆ. ಇವತ್ತು ಕೊನೆ ದಿವಸವಾಗಿರುವುದರಿಂದ ಸೌಹಾರ್ದಯುತವಾಗಿ ಸದನವನ್ನು ಮುಗಿಸೋಣವೆಂದು ನಾನು ಪದೇಪದೇ ನಿಮಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ವಿರೋಧ ಪಕ್ಷದ ನಾಯಕರಿಗೆ ಎಲ್ಲಾ ರೀತಿ... Leader of Opposition is a shadow Chief Minister. ನಿಮಗೆ ಮಾತನಾಡುವುದಕ್ಕೆ ಎಲ್ಲಾ ಅಧಿಕಾರವಿದೆ. ನಿಮಗೆ ಎಲ್ಲಾ ರೀತಿಯ ಗೌರವ ಕೊಡುತ್ತೇನೆಂದು ನಾನು ಹೇಳಿದ್ದೇನೆ. ನಾನು ಇನ್ನೂ ಗೌರವ ಕೊಡುತ್ತೇನೆ. ಅದರ ಬಗ್ಗೆ ಎರಡು ಮಾತಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಮ್ಮ ಸ್ಥಾನ ಸರ್ವೋಚ್ಛ ಸ್ಥಾನ. ನಮಗೆ ನ್ಯಾಯ ಕೊಡಿ ಎಂದು ನಾವು ನಿಮ್ಮನ್ನೇ ಕೇಳಬೇಕಾಗಿರುವುದು. ನೀವು ಅವರಿಗೆ ಬಿಟ್ಟದ್ದು, ನಿಮಗೆ ಬಿಟ್ಟದ್ದು ಎಂದು ತಾವು ಆ ಸ್ಥಾನದಿಂದ ಹೇಳಬಾರದು. ನಾವು ನಿಮ್ಮನ್ನು ಗೌರವಿಸುತ್ತೇವೆ. ನಮಗೆ ಇದೇನು ಅವಶ್ಯಕತೆ ಇದೆಯೇ? ನಾವೇನಾದರೂ ಬೇಕೆಂದೂ ಮಾಡಿದ್ದೇವೆಯೇ? ನಮ್ಮನ್ನು ಅವರೇ ಮೇಲೆ ಬಿದ್ದು ಸ್ವರ್ಗದಲ್ಲಿರುವ ನಮ್ಮಪ್ಪನನ್ನೂ ಏಕೆ ಇಲ್ಲಿ ಕರೆಯಬೇಕು? ನಾನು ಇಲ್ಲಿ ಸದನದಲ್ಲಿದ್ದೇನೆ, ನನ್ನ ಬಗ್ಗೆ ಅವರೇನು ಬೇಕಾದರೂ ಮಾತನಾಡಲಿ. **[XXX]** ಎಂದು ಹೇಳಿದರೆ **[XXX]**? ನಾವೆಲ್ಲರೂ ಇಲ್ಲಿ ಒಂದೇ, ನಾವೆಲ್ಲರೂ ಇಲ್ಲಿಗೆ ಬಂದಿದ್ದೇವೆ. ನಮಗೂ ಜವಾಬ್ದಾರಿ ಇದೆ, ಆ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋಗಬೇಕು ಅಷ್ಟೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, 7ನೇ ಸಲ ಹೇಳುತ್ತಿದ್ದೀರಿ. ನೀವು ಅವರಿಗೆ ಮನವಿ ಕೂಡ ಮಾಡಿದ್ದೀರಿ, ಅವರಿಗೆ ಅಷ್ಟು ಅರ್ಥವಾಗುವುದಿಲ್ಲವೇ? ಅವರಿಗೆ ಇನ್ನೇನು ಮಾಡಬೇಕು? ನಮಗೆ ಅರ್ಥವಾಗುತ್ತಿಲ್ಲ.

---

**[XXX]ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣರವರೇ, ದಯಮಾಡಿ ತಾವೇನಾದರೂ ಹೇಳುವುದಿದ್ದರೆ ಹೇಳಿ?

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನೇನು ಹೇಳಲಿ?

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣರವರೇ, ಸಮಾಧಾನದಿಂದ ಮಾತನಾಡಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ಸಮಾಧಾನದಿಂದ ಮಾತನಾಡುತ್ತೇನೆ. ನನಗೆ ಖಂಡಿತವಾಗಿಯೂ ನನ್ನ conscious ಗೆ ಗೊತ್ತಿದೆ. ನಾನು ಆ ರೀತಿ ಮಾತನಾಡಿಲ್ಲ. ನಾನು ನಿಮಗೆ ಹೇಳಿದ್ದೇನೆ, ಎಲ್ಲವೂ ನಮ್ಮಲ್ಲಿ ರೆಕಾರ್ಡ್ ಆಗುತ್ತದೆ. ಆ ರೆಕಾರ್ಡ್‌ನ್ನು ತಾವು ನೋಡಿ ಹೇಳಿ. ನಿಮ್ಮ ಎದುರಿಗೆ ನಿಂತಿದ್ದೇನೆ,

ನೀವೇನು ಆದೇಶ ಕೊಡುತ್ತೀರೋ ಅದನ್ನು ನಾನು ಪಾಲನೆ ಮಾಡುತ್ತೇನೆ. ಕ್ಷಮೆ ಕೇಳಬೇಕು ಎಂದರೆ ಕ್ಷಮೆಯನ್ನು ಕೇಳುತ್ತೇನೆ. ನೀವೇನು ಹೇಳುತ್ತೀರೋ ಅದಕ್ಕೆ ನಾನು ಬದ್ಧನಾಗಿದ್ದೇನೆ. ನಿಮಗಿಂತ ಈ ಪೀಠಕ್ಕಿಂತ ನಾನು ದೊಡ್ಡವನಲ್ಲ. ಆದರೆ ನನ್ನ conscious ಗೆ ನಾನು ಹೇಳದೆ ಇರುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಆದ್ದರಿಂದ ನೀವು ನೋಡಿಬಿಟ್ಟು ನನಗೆ ಹೇಳಿ. ಪುಟ್ಟಣ್ಣ ನಾನು ನೋಡಿದ್ದೇನೆ, ಇದೆ ಎಂದು ಹೇಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇನ್ನೇನು ನೋಡುವುದಿದೆ, ನೀವು ಕಡತದಲ್ಲಿರುವುದನ್ನು ತೆಗೆದಿದ್ದೀರಿ. ತೆಗೆದ ಮೇಲೆ ಇನ್ನೊಂದು ಸಲ ಎಲ್ಲಿ ನೋಡಬೇಕು? ಆಕಾಶದಲ್ಲಿ ನೋಡಬೇಕೇ, ಸೂರ್ಯ–ಚಂದ್ರರನ್ನು ಕೇಳಬೇಕೇ ಹೇಳಿ?

**ಡಾ|| ಎಂ.ಆರ್.ಸೀತಾರಾಂ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಪರವಾಗಿಲ್ಲ, ಈಗ ಆಡಳಿತ ಪಕ್ಷದವರು ಕುಳಿತುಕೊಳ್ಳಲಿ. ಈಗ ಸದನದ ಕಲಾಪವನ್ನು ಈ ರೀತಿ ಕಳೆಯುತ್ತಿರುವಂಥದ್ದು ನಮ್ಮೆಲ್ಲರಿಗೂ ನೋವು ಇದೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮೇಲೆ ಉತ್ತರ ಕೊಡುವುದಕ್ಕೆ ಇಲ್ಲಿ ಬಂದಿದ್ದಾರೆ. ಕೆಳಮನೆಯಲ್ಲಿ ಬೇರೆ ಬೇರೆ ಗಂಭೀರವಾದಂತಹ ಅನೇಕ ವಿಚಾರಗಳು ಕೂಡ ಚರ್ಚೆಯಾಗಿವೆ. ಗಂಭೀರವಾದ ವಿಧೇಯಕಗಳನ್ನು ಪಾಸ್ ಮಾಡತಕ್ಕಂಥ ಸಂದರ್ಭದಲ್ಲಿ ಸದನದ ಸಮಯ ಬಹಳ ಮುಖ್ಯವಾಗಿದೆ. ಎರಡನೇ ಬಾರಿ ಸದಸ್ಯರು ಆ ರೀತಿ ಹೇಳಿರುವಂಥದ್ದು ಅವರು ಪಶ್ಚಾತಾಪ ಪಟ್ಟುಕೊಂಡು ಹೇಳಬೇಕಾಗುತ್ತದೆ. ಅದು ಅವರ ಕರ್ತವ್ಯವಾಗಿದೆ. ಸಮಾಜದಲ್ಲಿ ತಪ್ಪು ಮಾಡಿದಾಗ ಪ್ರಾಯಶ್ಚಿತಕ್ಕಿಂತ ಪರಿಹಾರ ಬೇರೆ ಇನ್ನೊಂದು ಯಾವುದು ಇಲ್ಲ ಎಂದು ನಮ್ಮಲ್ಲಿ ಹಿರಿಯರು ಹೇಳಿದ್ದಾರೆ. ಹಾಗಾಗಿ ಇವತ್ತು ಅವರು ಸದನದ ಹಿರಿಯ ಸದಸ್ಯರಾಗಿದ್ದಾರೆ. ಕೆಲವೊಂದು ಸಲ ವಿಚಾರಗಳು ಬರುತ್ತದೆ, ಹೋಗುತ್ತದೆ. ಆದರೆ, ಇಲ್ಲಿ ಅಗೌರವದ ಮಾತುಗಳಿಂದ ನೋವು ಆಗಿರುವಂತಹ ಸಂದರ್ಭದಲ್ಲಿ, ಅವರು ಹೇಳಿರುವಂಥ ವಿಚಾರವನ್ನು ತಾವು ಕಡತದಿಂದ ತೆಗೆಸಿದ್ದೀರಿ. ಅದು ರೆಕಾರ್ಡ್ ಆಗಿದೆಯಲ್ಲಾ ಅದನ್ನು ಯಾರು ಹೇಳಿರುವುದು? ಹೇಳಿದ್ದಾರೆ ಎನ್ನುವ ವಿಚಾರ ಕೂಡ ಆಗಿದೆ. ಇನ್ನು ಕೂಡ ಬೇರೆ ವಿಚಾರಗಳಲ್ಲಿ ಪರಾಮರ್ಶಿಸಬೇಕು, ಅವರನ್ನು ಸದನದಿಂದ ಹೊರಗೆ ಹಾಕಬೇಕೆಂದು ಹೇಳುತ್ತಾರೆ. ಅದಕ್ಕೆ ಕೆಲವು ನಿಯಮಗಳಿವೆ ಎಂದು ಹೇಳಿದ್ದಾರೆ, ಅದನ್ನು ನಾವು ಕೂಡ ಒಪ್ಪುತ್ತೇವೆ. ಆ ನಿಯಮಗಳ ಪ್ರಕಾರ ಸದನ ಹೋಗಬೇಕಾಗುತ್ತದೆ. ಆ ನಿಯಮದ ಪ್ರಕಾರ

ಪೂರ್ವಪರ ಪರಿಶೀಲಿಸಿ ನಂತರ ಅದರಲ್ಲಿ ಬರುವಂತಹ ವಿಚಾರಗಳ ಸಾಧಕ-ಬಾಧಕಗಳೇನು ಎಂಬುದನ್ನು ನೋಡಿ, ಅವರಿಗೆ ನೋಟೀಸ್ ಕೊಡಬೇಕು, ಮತ್ತೊಂದು ಕೊಡಬೇಕು. ಆ ವ್ಯವಸ್ಥೆಯಲ್ಲಿಯೇ ಹೋಗಬೇಕಾಗುತ್ತದೆ. ಅದರ ಬಗ್ಗೆ ನಮಗೂ ಅರಿವು ಇದೆ. ಆದರೆ ನಾವೆಲ್ಲಾ ಕಿವಿಯಲ್ಲಿ ಕೇಳಿರುವುದರಿಂದ ಬಹಳಷ್ಟು ಸದಸ್ಯರುಗಳು ನೋವಿನಿಂದ ಒತ್ತಾಯ ಮಾಡುತ್ತಿದ್ದಾರೆ. ಅವರಾದರೂ ಪಶ್ಚಾತಾಪದ ಮಾತುಗಳನ್ನಾಡಬೇಕಾಗುತ್ತದೆ. ನಾನು ಇರಲಿ, ಯಾರೇ ಇರಲಿ, ಇವೆಲ್ಲ ಆಗುವಂಥದ್ದು ಸಹಜ. ಕೆಲವೊಂದು ಸಲ spur of the moment ಆಗುತ್ತದೆ. Spur of the moment ಆಗಿದ್ದಕ್ಕೆ ನಾನು ಕೂಡ ಪಶ್ಚಾತಾಪ ಪಡಬೇಕು. ಯಾರೇ ಹಿರಿಯ ಸದಸ್ಯರಾಗಿದ್ದರೂ ಪಶ್ಚಾತಾಪ ಪಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮೇಲೆ ಉತ್ತರ ಕೊಡಬೇಕಾಗಿರುವುದರಿಂದ ಮತ್ತು ಕೆಳಮನೆಯಲ್ಲಿ ಬೇರೆ ಬೇರೆ ವಿಚಾರಗಳಿರುವುದರಿಂದ ನಾವು ಸ್ವಲ್ಪ ತಗ್ಗಿ ಹೋಗುತ್ತೇವೆ. ದಯಮಾಡಿ ಮಾನ್ಯ ಸದಸ್ಯರು ಈಗ ಪಶ್ಚಾತಾಪದ ಮಾತುಗಳನ್ನಾಡಬೇಕಾಗುತ್ತದೆ. ಈಗ ಅವರು ಇನ್ನೊಂದು ಸಲ ಹೇಳಿದರೆ ಅವರು ಬಹಳ ದೊಡ್ಡವರಾಗುತ್ತಾರೆ. ಅವರೇನು ಸಣ್ಣವರಾಗುವುದಿಲ್ಲ.

**ಡಾ|| ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರವರು ಹೇಳುವುದು ಸರಿಯಾಗಿದೆ. ತಪ್ಪು ಮಾಡಿದಾಗ ಪಶ್ಚಾತಾಪ ಪಡುವುದರಲ್ಲಿ ತಪ್ಪೇನೂ ಇಲ್ಲ. ಆದರೆ ನಾನು ತಪ್ಪು ಮಾಡಿಲ್ಲ ಎಂದು ಹೇಳುತ್ತಿದ್ದೇನೆ. (ಗೊಂದಲ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಕಡತವನ್ನು ಸುಳ್ಳು ಮಾಡಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ತಾವು ದೃಶ್ಯ ಮಾಧ್ಯಮಗಳನ್ನು ನೋಡಿ, ಪುಟ್ಟಣ್ಣ ನೀನು ಈ ರೀತಿ ಮಾತನಾಡಿದ್ದೀಯಾ ಎಂದು ಹೇಳಿದರೆ ಅದಕ್ಕೆ ನಾನು ಬದ್ಧನಾಗಿದ್ದೇನೆ ಎಂದು ನಾನು ಒಪ್ಪಿಕೊಂಡಿದ್ದೇನೆ. ಈ ಮಾತನ್ನು ನಾನು 2-3 ಸಲ ಹೇಳಿದ್ದೇನೆ. ನಾನು ಎಲ್ಲರ ಎದುರಿಗೂ ಕ್ಷಮೆಯನ್ನು ಕೇಳುತ್ತೇನೆ. ಕ್ಷಮೆ ಕೇಳುವುದಕ್ಕೆ ನಾನು ಹಿಂದೆ ಮುಂದೆ ನೋಡುವುದಿಲ್ಲ. ಈ ಸದನಕ್ಕಿಂತ ನಾನು ದೊಡ್ಡವನೇನಲ್ಲ.

(ಮುಂದು)

(574) 21/03/2025 3:40 ಎಸ್‌ಪಿಆರ್/ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೆ, ದಯವಿಟ್ಟು ಅರ್ಥಮಾಡಿಕೊಳ್ಳಿ ಅವರು ಹೇಳುತ್ತಿದ್ದಾರೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಸದನಕ್ಕಿಂತ ನಾನು ದೊಡ್ಡವನೇನಲ್ಲ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೆ, ನೀವು ಪದೇ ಪದೇ ಅದರ ಬಗ್ಗೆ...

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ನಾನು ಆ ರೀತಿಯಾಗಿ ಮಾತನಾಡದಿದ್ದರೆ ನಾನು ಏಕೆ ಕೇಳಲಿ?

**ಸಭಾಪತಿಯವರು:–** ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2025 ನಮ್ಮ ಸದನಕ್ಕೆ ಬಂದಿದೆ. ಇದನ್ನು ತೆಗೆದುಕೊಂಡರೆ, ನಾಳೆಯ ದಿನ ಮಾಧ್ಯಮಗಳಲ್ಲಿ ಚರ್ಚೆ ಮಾಡದೇ ಅನುಮೋದಿಸಲಾಗಿದೆ ಎಂಬ ಅಪವಾದ ಬರುತ್ತದೆ. ಹೀಗಾಗಿ ದಯಮಾಡಿ ವಿರೋಧ ಪಕ್ಷದವರು ಇದರಲ್ಲಿ ಭಾಗವಹಿಸಿ. ಇದರ ಬಗ್ಗೆ ಮಾತನಾಡಿದ ನಂತರ ನಾವು ಮುಂದೆ ವಿಚಾರ ಮಾಡೋಣ. ಇದನ್ನು ಇಲ್ಲಿಗೆ ಮುಗಿಸಿ ಎಂದು ನಾನು ಪದೇ ಪದೇ ಹೇಳುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ತಾವು ಆದಷ್ಟು ಬೇಗನೇ ಅದನ್ನು ತರಿಸಿಕೊಂಡು, ಅದರ ಬಗ್ಗೆ ನೀವು ಕ್ರಮ ವಹಿಸಬೇಕು.

**ಸಭಾಪತಿಯವರು:–** ಆಯಿತು, ನಾನು ನೋಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಅವರು ನನ್ನನ್ನು ಅಂದಿದ್ದಾರೆ. ಈಗ ನೀವು ಅದನ್ನು ಕಡತದಿಂದ ತೆಗೆದು ಬಿಡಿ ಎಂದು ಕಡತದಿಂದ ತೆಗೆಸಿದ್ದೀರಿ. ಅದನ್ನು ತೆಗೆದ ಮೇಲೆ ಅವರು ಅದನ್ನು ತಾವು ಅಂದೇ ಇಲ್ಲ ಎಂದು ಈಗ ಶುರು ಮಾಡಿದರು.

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಅಂದರೆ ಈಗ ಕಡತದಲ್ಲಿ ಇದ್ದದ್ದು ಸುಳ್ಳೇ?

**ಸಭಾಪತಿಯವರು:–** ಅವರು ಸಾವಿರ ಹೇಳಲಿ. ನಾನು ಕಡತವನ್ನು ನೋಡಿ, ಅದನ್ನು ತೆಗೆಸಿದ ಮೇಲೆ, ಅದು ಮುಗಿದು ಹೋಯಿತು. ಅವರು ಸಾವಿರ ಹೇಳುತ್ತಾರೆ, ನಾನು ಅದರ ಬಗ್ಗೆ ಏಕೆ ತಲೆ ಕೆಡಿಸಿಕೊಳ್ಳಲಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಕಡತದಿಂದ ತೆಗೆಸಿದ ಮೇಲೆ ಅದು ಬಂದಿದೆ ಎಂದರ್ಥವಲ್ಲವೇ?

**ಸಭಾಪತಿಯವರು:–** ಅದು ಮುಗಿದು ಹೋಯಿತು. ಕಡತದಿಂದ ತೆಗೆದಿದೆ ಎಂದ ಮೇಲೆ ಮುಗಿದು ಹೋಯಿತು; ಆಮೇಲೆ ಬೇಕಾದ್ದು ಆಗಲಿ. ನಾನು ಅದನ್ನು ನೋಡಿ, ಪರಿಶೀಲಿಸಿ, ಪರಾಮರ್ಶಿಸಿ ಕಡತದಿಂದ ತೆಗೆದ ಮೇಲೆ ಅಲ್ಲಿಗೆ ವಿಷಯ ಮುಕ್ತಾಯವಾಯಿತು. ಅವರು ಬೇಕಾದ್ದು ಹೇಳಲಿ. ಅದರ ಬಗ್ಗೆ ಇಲ್ಲಿ ಬರುವುದಿಲ್ಲ. ಅದನ್ನು ನೋಡಿಯೇ ನಾನು ಮಾಡಿದ್ದೇನೆ ಎಂದಾಗ ಅಲ್ಲಿಗೆ ಮುಗಿದು ಹೋಯಿತು. ಅದರ ಬಗ್ಗೆ....

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಅವರು ಕ್ಷಮೆಯನ್ನು ಕೇಳಲಿ; ನಾನು ಒಂದು ಮಾತನ್ನೂ ಸಹ ಆಡುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ..,

**ಶ್ರೀ ಎಂ.ಆರ್.ಸೀತಾರಾಂ:–** ಮಾನ್ಯ ಸಭಾಪತಿಯವರೆ, ಅವರು ಏನೂ ತಪ್ಪು ಮಾಡಿಲ್ಲ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ನಾನು ತಪ್ಪು ಮಾಡಿಲ್ಲ. ದಯಮಾಡಿ ತಾವು ನಮ್ಮ ರಕ್ಷಣೆಗೂ ಸಹ ಬರಬೇಕು. ನಾನು ಕೇಳುವುದು ಇಷ್ಟೇ. ವಿಷಾದ ವ್ಯಕ್ತಪಡಿಸುವುದಕ್ಕೆ ನಾನು ಹಿಂದೆ ಮುಂದೆ ನೋಡುವುದಿಲ್ಲ. ಆದರೆ ಇದರಲ್ಲಿ ಒಂದು ಷರತ್ತು ಇದೆ. ನೀವು ದೃಶ್ಯ ಮಾಧ್ಯಮಗಳನ್ನು ನೋಡಿಕೊಂಡು ನಾನು ಆ ರೀತಿಯಾಗಿ ಮಾತನಾಡಿದ್ದೇನೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ನೀವು ಸದನದಲ್ಲಿ ಅನೌನ್ಸ್ ಮಾಡಬೇಕು. ದಯವಿಟ್ಟು....

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ..,

**ಸಭಾಪತಿಯವರು:-** ತಡೆಯಿರಿ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಕೇವಲ ಅವರೇ ಮಾತನಾಡಬೇಕೇ. ಆ ಷರತ್ತಿನ ಮೇಲೆ ..., ನೀವು ದೃಶ್ಯಗಳನ್ನು ನೋಡಿ ನಾನು ಮಾತನಾಡಿದ್ದೇನೆಯೇ ಎಂದು ತಾವು ಹೇಳಬೇಕು. ಖಂಡಿತವಾಗಿಯೂ ಸಹ ನಾನು ಆ ಷರತ್ತಿಗೆ ಬದ್ಧನಾಗಿರುತ್ತೇನೆ. ಅವರಿಗೆ ಏನಾದರೂ ಅಷ್ಟೊಂದು ನೋವಾಗಿದೆ ಎಂದರೆ, ನಾನು ಆ ರೀತಿಯಾಗಿ ಹೇಳಿದ್ದೇನೆ ಎಂದು ಅವರು ಹೇಳುತ್ತಿದ್ದಾರೆ. ಅವರಿಗೆ ಆ ರೀತಿಯಾಗಿ ಏನಾದರೂ ಭಾರಿ ನೋವು ಆಗಿದ್ದರೂ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಇದರಲ್ಲಿ ನನ್ನದೇನೂ ತಕರಾರು ಇಲ್ಲ. ಆದರೆ ನಾನು ಮತ್ತೊಮ್ಮೆ ಹೇಳುತ್ತೇನೆ, ಆ ಷರತ್ತು ಏನೆಂದರೆ, ನೀವು ದೃಶ್ಯ ಮಾಧ್ಯಮವನ್ನು ನೋಡಿ ಅದನ್ನು ಅನೌನ್ಸ್ ಮಾಡಬೇಕು.

**ಸಭಾಪತಿಯವರು:-** ನಾನು ನೋಡುತ್ತೇನೆ. ಅವರು ವಿಷಾದ ವ್ಯಕ್ತಪಡಿಸಿದ್ದಾರೆ; ಅಲ್ಲಿಗೆ ಮುಗಿಯಿತು. ಸಾಕು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಅವರು ಕ್ಷಮೆಯನ್ನು ಕೇಳಬೇಕು.

**ಸಭಾಪತಿಯವರು:-** ವಿಷಾದ ಅಂದ್ರೆ ಏನ್ರೀ? ಸದಸ್ಯರು ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಅದಕ್ಕೆ ಷರತ್ತು ಏಕೆ? **(ಗೊಂದಲ)** ಕ್ಷಮೆಗೂ ಒಂದು ಷರತ್ತು ಇದೆಯೇ? ತಾವು ಕಡತದಿಂದ ತೆಗೆಯಿರಿ ಎಂದು ಹೇಳಿದ್ದು ಯಾವುದಕ್ಕೆ?

**ಸಭಾಪತಿಯವರು:-** ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ಅವರು ಈಗ ಏನು ಹೇಳಿದರು? ಕಡತದಿಂದ ನೋಡಿ ತೆಗೆದಿದ್ದೀರಾ ಎಂದು ಕೇಳಿದ್ದಾರೆ; ಅದಕ್ಕೆ ನಾನು ತೆಗೆದಿದ್ದೇನೆ ಎಂದು ಹೇಳಿದ್ದೇನೆ. ಕಡತವನ್ನು ನೋಡಿಯೇ ನಾನು ಅದನ್ನು ತೆಗೆದಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನೀವು ರೂಲಿಂಗ್ ಅನ್ನು ಕೊಟ್ಟಾಗಿದೆ.

**ಸಭಾಪತಿಯವರು:-** ಹೌದು ನಾನು ಹೇಳುವುದನ್ನು ಕೇಳಿ. ನಾನು ರೂಲಿಂಗ್ ಕೊಟ್ಟಿದ್ದು ಮುಗಿದಿದೆ. ಕಡತದಿಂದ ಅದನ್ನು ತೆಗೆದು ಹಾಕಿದ ಮೇಲೆ, that is the end of the matter. ಈಗ ಅವರು ಏನು ಹೇಳಿದ್ದಾರೆ ಎಂದರೆ, ಇನ್ನೂ ಹೆಚ್ಚಿನದು ಬೇಕಾಗಿತ್ತು ಎಂದರೆ, ಅದನ್ನು ಟಿ.ವಿ.ಯಲ್ಲಿ ನೋಡುವಂತೆ ಹೇಳಿದ್ದಾರೆ.

ಟಿ.ವಿ.ಯಲ್ಲಿ ನೋಡಿದರೆ ಇನ್ನೂ ಸ್ಪಷ್ಟವಾಗಿ ಸಿಗುತ್ತದೆ. ಹೀಗಾಗಿ ಎರಡ್ಮೂರು ಟಿ.ವಿ. ಚಾನೆಲ್‌ಗಳಿಂದ ಅದನ್ನು ತರಿಸಿ ನಾನು ಮತ್ತು ಕಾರ್ಯದರ್ಶಿ ಆದಿಯಾಗಿ ನನ್ನ ಸಿಬ್ಬಂದಿಗಳು ನೋಡಿದ್ದೇವೆ. ನಾವು ಇನ್ನೂ ನೋಡುತ್ತಿದ್ದೇವೆ. ಅದನ್ನು ನೋಡಿದ ನಂತರ ಅಲ್ಲಿ ಏನಿದೆ ಎನ್ನುವುದನ್ನು ತಿಳಿಸುವ ಜವಾಬ್ದಾರಿ ನನ್ನದು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಷರತ್ತು ಹಾಕಿ ಕ್ಷಮೆಯನ್ನು ಕೇಳುವುದು ಏಕೆ?

**ಸಭಾಪತಿಯವರು:–** ಅದು ಷರತ್ತು ಅಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಿಮಗೆ ಅವರು ಷರತ್ತನ್ನು ವಿಧಿಸುತ್ತಿದ್ದಾರೆ.

**ಸಭಾಪತಿಯವರು:–** ಆ ರೀತಿಯಾಗಿ ಇಲ್ಲ. ಒಂದು ವೇಳೆ ನಾನು ಅವುಗಳನ್ನು ನೋಡುವುದಾದರೆ ನೋಡಿ. ಆಗ ನಾನು ಏನನ್ನು ಹೇಳುತ್ತೇನೆಯೋ, ಅವರು ಅದಕ್ಕೆ ಬದ್ಧರಾಗಿರುತ್ತಾರೆ ಎಂಬುದಾಗಿ ಅವರು ಹೇಳಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನೀವು ಕಡತದಿಂದ ತೆಗೆದಾಗಲೇ ಅದು ಖಾತ್ರಿಯಾಯಿತು. ಖಾತ್ರಿಯಾದ ಮೇಲೆ ಅವರು ವಿಷಾದವನ್ನು ವ್ಯಕ್ತಪಡಿಸುತ್ತೇವೆ ಎಂದು ತಿಳಿಸಿದ್ದು, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ.

**ಸಭಾಪತಿಯವರು:–** ಅವರು ಅದನ್ನು ಹೇಳಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾಳೆಯ ದಿನ ನೀವು ದೃಶ್ಯಾವಳಿಗಳನ್ನು ನೋಡಿ ನಂತರ ನೀವು ಹೇಳುವವರೆಗೂ ಅದನ್ನು ಪೆಂಡಿಂಗ್‌ನಲ್ಲಿಡಲಿ ಅಂತಲೇ ಅಥವಾ ಅವರು ಇದಕ್ಕೆ ತಡೆಯಾಜ್ಞೆಯನ್ನು ಪಡೆದುಕೊಂಡಿದ್ದಾರೆಯೇ?

**ಸಭಾಪತಿಯವರು:–** ಅವರು ಇದಕ್ಕೆ ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಸದ್ಯಕ್ಕೆ ಇದಕ್ಕೆ ನೀವೇನಾದರೂ ತಡೆಯಾಜ್ಞೆಯನ್ನು ನೀಡುತ್ತಿದ್ದೀರೇ?

**ಸಭಾಪತಿಯವರು:–** ವಿಷಾದ ವ್ಯಕ್ತಪಡಿಸುವುದಾಗಿ ಅವರು ಈಗಾಗಲೇ ಹೇಳಿದ್ದಾರೆ. ಅಲ್ಲಿಗೆ ಮುಗಿಯಿತು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಷರತ್ತು ಇಲ್ಲದೇ ಕೇಳುವಂತೆ ಅವರಿಗೆ ತಿಳಿಸಿ.

**ಸಭಾಪತಿಯವರು:–** ಅವರು ಯಾವುದೇ ಷರತ್ತನ್ನು ಹೇಳಿಲ್ಲ. ಅವರು ಸಾವಿರ ಷರತ್ತನ್ನು ಹಾಕಿದರೂ ಅದನ್ನು ನಾನು ಕೇಳಬೇಕಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಅವರು ಹೇಳುವ ಷರತ್ತುಗಳು ಬೇಡ.

**ಸಭಾಪತಿಯವರು:-** ಆ ವಿಷಯ ಈಗ ಮುಗಿದು ಹೋಗಿದೆ. ಈಗಾಗಾಲೇ ಅದು ಮುಕ್ತಾಯಗೊಂಡಿರುವುದರಿಂದ ಅದು ಇದಕ್ಕೆ ಸಂಬಂಧವಿಲ್ಲ. ಈಗ ನಿಮ್ಮ ಸಲುವಾಗಿ ಹಾಗೂ ನೀವು ಹೇಳುವ ವಿಚಾರವನ್ನಿಟ್ಟುಕೊಂಡು ನಾನು ಅದನ್ನು ಪರಿಶೀಲನೆ ಮಾಡುತ್ತಿದ್ದೇನೆ. ನಾನು ಈಗಾಗಲೇ ಒಂದು ನಿರ್ಣಯವನ್ನು ನೀಡಿದ್ದೇನೆ. ಕಡತದಲ್ಲಿ ಅವರು ಮಾತನಾಡಿರುವುದು ಅರ್ಥ ಆಗುತ್ತದೆ. ನಾನು ಅದನ್ನು ಕಡತದಿಂದ ತೆಗೆದಿದ್ದೇನೆ ಎಂದರೆ ಅಲ್ಲಿಗೆ ಅದು ಮುಗಿದು ಹೋಯಿತು; ಹೀಗಾಗಿ ಅದು ಮುಗಿದು ಹೋಯಿತು.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ನಾವು ಸಭಾಪತಿಗಳ ಮಾತಿನಲ್ಲಿ ಮೇಲೆ ವಿಶ್ವಾಸವಿಡೋಣ. ಅವರು ಪೂರ್ಣ ಮನಸ್ಸಿನಿಂದ ಅಲ್ಲದಿದ್ದರೂ ಅರ್ಧ ಮನಸ್ಸಿನಿಂದ ಹೇಳುತ್ತಿದ್ದಾರೆ. ತಮ್ಮ ಮೇಲೆ ನಮಗೆ ವಿಶ್ವಾಸವಿದೆ. ಮುಂದಿನ ದಿನಗಳಲ್ಲಿ ಇದನ್ನು ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಬೇಕೆಂದು ನಾನು ಹೇಳುತ್ತಿದ್ದೇನೆ. ಮುಂದಿನ ದಿನಗಳಲ್ಲಿ ನೀವು ನಮಗೆ ನ್ಯಾಯವನ್ನು ಕೊಡಿಸಬೇಕು. ಇದನ್ನು ಮುಕ್ತಾಯಗೊಳಿಸಿ.

**ಸಭಾಪತಿಯವರು:-** ಖಂಡಿತ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಮೊದಲು ಈಗ ಅವರು ಹೇಳಿರುವ ಷರತ್ತನ್ನು ವಾಪಸ್ಸು ತೆಗೆದುಕೊಳ್ಳುವಂತೆ ಹೇಳಿ. ಯಾವುದೇ ಷರತ್ತು ಬೇಕಾಗಿಲ್ಲ. ಹೀಗಾಗಿ ಅವರು ಷರತ್ತನ್ನು ವಾಪಸ್ಸು ತೆಗೆದುಕೊಳ್ಳಲಿ. ಅವರು ಯಾವುದೇ ಷರತ್ತನ್ನು ಹೇಳುವುದು ಬೇಡ; ಆಗ ನಮ್ಮದೂ ಸಹ ಯಾವುದೇ ಷರತ್ತನ್ನು ಇರುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮುಖ್ಯಮಂತ್ರಿಗಳೇ, ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚನೆಗಾಗಿ ಮಂಡಿಸಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಅವರು ನಿಮಗೆ ಷರತ್ತನ್ನು ವಿಧಿಸುತ್ತಾರೆ ಎಂದರೆ..., **(ಗೊಂದಲ)** ಇದು ಯಾಕೋ ಸರಿಯಾಗುತ್ತಿಲ್ಲ.

**(ಗೊಂದಲ)**

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ದಯಮಾಡಿ ಅವರಿಗೆ ಷರತ್ತನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೇಳಿ.

**ಸಭಾಪತಿಯವರು:–** ಏನು ಷರತ್ತು?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಅವರು ನಿಮಗೆ ಷರತ್ತನ್ನು ಹಾಕಿದ್ದಾರೆ.

**ಸಭಾಪತಿಯವರು:–** ಅದನ್ನು ಇನ್ನೊಮ್ಮೆ ನೋಡಿ ಹೇಳುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಅಲ್ಲಿಯವರೆಗೆ ಅದಕ್ಕೆ ತಡೆಯಾಜ್ಞೆ ಇರಲೇ?

**ಸಭಾಪತಿಯವರು:–** ಆ ವಿಷಯ ಈಗಾಗಲೇ ಮುಗಿದಿದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನೋಡಿ ಹೇಳಿ ಎಂದರೆ ಏನರ್ಥ?

**ಸಭಾಪತಿಯವರು:–** ಅವರು ಸಾವಿರ ಹೇಳಲಿ, ನಾನು ಅದನ್ನು ವಿಚಾರ ಮಾಡಬೇಕಲ್ಲವೇ? ಅದನ್ನು ಕಡತದಿಂದ ತೆಗೆಯಲಾಗಿದೆ ಎಂದರೆ ಅಲ್ಲಿಗೆ ಅದು ಮುಗಿಯಿತು. ನಾನು ಅದರ ಬಗ್ಗೆ ವಿಚಾರ ಮಾಡುತ್ತೇನೆ. ಅವರು ಏನು ಬೇಕಾದರೂ ಹೇಳಲಿ. ಹಾಗೆ ಹೇಳುವುದಕ್ಕೆ ಅವರಿಗೆ ಸ್ವತಂತ್ರವಿದೆ. ಅದನ್ನು ನಾನು ಆಮೇಲೆ ನೋಡುತ್ತೇನೆ; ನಿಮಗೆಲ್ಲರಿಗೂ ತಿಳಿಸುತ್ತೇನೆ. ಅದರಲ್ಲಿ ಏನಾದರೂ ಇದ್ದರೆ ಅದನ್ನು ನಿಮ್ಮ ಮುಂದೆ ತಿಳಿಸುತ್ತೇನೆ. ಇದನ್ನು ಇಲ್ಲಿಗೆ ಮುಗಿಸಿ ಎಂದು ನಾನು ನಿಮಗೆ ಹೇಳುತ್ತಿದ್ದೇನೆ. ಅವರು ಈಗಾಗಲೇ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ದೃಶ್ಯಾವಳಿಗಳಲ್ಲಿ ನನ್ನದು ಏನಾದರೂ ತಪ್ಪು ಸಿಕ್ಕಿದರೆ ಅವರು ಪುನಃ ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ನಿಮಗೆ ತಿಳಿಸುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಇದನ್ನು ಮತ್ತೆ ಮಾಡುವುದಕ್ಕೆ ನಾಳೆಯ ದಿನ ಅಧಿವೇಶನ ಇರುವುದಿಲ್ಲ. ಇವತ್ತಿಗೆ ಅಧಿವೇಶನ ಮುಗಿಯಿತಲ್ಲವೇ?

**ಸಭಾಪತಿಯವರು:–** ಇದರ ಬಗ್ಗೆ ನಾನು ಎಲ್ಲಾ ಸದಸ್ಯರಿಗೆ ತಿಳಿಸುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಇದು ಹೇಗಿದೆ ಎಂದರೆ, ನಮ್ಮ ಊರಿನಲ್ಲಿ ಗಾದೆ ಮಾತೊಂದನ್ನು ಹೇಳುತ್ತಿದ್ದರು. "ಬೀದಿಯಲ್ಲಿ ಚಪ್ಪಲಿಯಲ್ಲಿ ಹೊಡೆದುಬಿಟ್ಟು, ಮನೆಗೆ ಬಂದು ಕಾಲು ಹಿಡಿದುಕೊಂಡರಂತೆ" ಎಂಬಂತಾಗಿದೆ. ಅವರು ನಮ್ಮನ್ನು ಅಂದಿದ್ದು ಇಡೀ ದೇಶಕ್ಕೆ ಗೊತ್ತಾಗಿ ಹೋಯಿತು.

**ಸಭಾಪತಿಯವರು:–** ಈಗ ನಾನು ಏನು ಮಾಡಬೇಕೆಂದು ನೀವು ಹೇಳುತ್ತೀರಿ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಅವರು ಕ್ಷಮೆಯನ್ನು ಕೇಳಲಿ ಆದರೆ ಅದಕ್ಕೆ ಷರತ್ತು ಬೇಡ.

**ಸಭಾಪತಿಯವರು:–** ಅವರು ಈ ಬಗ್ಗೆ ಈಗಾಗಲೇ ಹೇಳಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ತಾವು ನೀಡಿರುವ ರೂಲಿಂಗ್‌ಗೆ ಅವರು ಏನು ಷರತ್ತು ಹಾಕುವುದು?

**ಡಾ: ಎಂ.ಆರ್.ಸೀತಾರಾಂ:–** ಮಾನ್ಯ ಸಭಾಪತಿಯವರೆ, ಇಲ್ಲಿಗೆ ಮೂರು ಬಾರಿ ಕೇಳಿದ್ದು ಆಯಿತು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ತಾವು ರೂಲಿಂಗ್ ಅನ್ನು ನೀಡಿದ ಮೇಲೆ ಇದನ್ನು ನಾವುಗಳೆಲ್ಲರೂ ಕೇಳಬೇಕು. ನಂತರದಲ್ಲಿ ತಾವು ಏನೇ ಸೂಚನೆಯನ್ನು ನೀಡಿದರೂ ಸಹ ಅದನ್ನು ನಾವು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ. ಅವರು ಈ ರೀತಿಯಾಗಿ ಒತ್ತಡಗಳನ್ನು ತರುವುದಕ್ಕೆ ....

**ಸಭಾಪತಿಯವರು:–** "ಈ ಸದನಕ್ಕಿಂತ ನಾನು ದೊಡ್ಡವನಲ್ಲ; ನಾನು ವಿಷಾದ ವ್ಯಕ್ತಪಡಿಸುತ್ತೇನೆ; ಆದರೂ ಸಹ ನೀವು ಇದನ್ನು ಪರಿಶೀಲಿಸಿ. ಪರಿಶೀಲನೆಯ ನಂತರ ತಾವು ನನಗೆ ಏನಾದರೂ ಹೇಳಿದರೆ ಅದಕ್ಕೆ ನಾನು ತಯಾರಿದ್ದೇನೆ" ಎಂಬುದಾಗಿ ಅವರು ಈಗಾಗಲೇ ಹೇಳಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾವು ಇದನ್ನೇ ಹೇಳಿದ್ದೇವೆ. ಈ ರೀತಿಯಾಗಿ ...

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬರ್:–** ಮಾನ್ಯ ಸಭಾಪತಿಯವರೆ, ಅವರು ಹತ್ತು ಬಾರಿಯಿಂದ ಹೇಳುತ್ತಿದ್ದಾರೆ. ಅಲ್ಲಿಗೆ ಮುಗಿದು ಹೋಯಿತು. ಆದರೆ, ಅವರು ನಿಮ್ಮ ಮಾತುಗಳನ್ನೇ ಕೇಳುವುದಕ್ಕೆ ತಯಾರಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನೀವು ರೂಲಿಂಗ್ ಅನ್ನು ಕೊಟ್ಟ ಮೇಲೆ, ಮತ್ತೇನು?

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಅವರು ಏನು ಹೇಳಿದ್ದಾರೆ ಎಂದರೆ,

**ಶ್ರೀ ಸುನೀಲ್ ವಲ್ಯಾಪುರ್ (ಸದನದ ಬಾವಿಯಿಂದ):–** ಮಾನ್ಯ ಸಭಾಪತಿಯವರೆ, ತಾವು ರೂಲಿಂಗ್ ಅನ್ನು ಕೊಟ್ಟ ಮೇಲೆ ಅದನ್ನು ...

**(ಗೊಂದಲ)**

**ಸಭಾಪತಿಯವರು:–** ನಾನು ಹೇಳುವುದನ್ನು ಒಂದು ನಿಮಿಷ ಕೇಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಅದನ್ನು ಪುನರ್‌ವಿಮರ್ಶೆ ಮಾಡುವುದು ಇಲ್ಲ.

**(ಗೊಂದಲ)**

**ಸಭಾಪತಿಯವರು:–** ನಾನು ಹೇಳುವುದನ್ನು ಕೇಳಿ. ಈ ವಿಷಯ ಇಲ್ಲಿಗೆ ಮುಗಿಯಿತು. ದೃಶ್ಯ ಮಾಧ್ಯಮಗಳನ್ನು ನೋಡಿದ ನಂತರ, ಏನಾದರೂ ಇದ್ದರೆ ಅದನ್ನು ಅವರಿಗೆ ಹೇಳಿದ ನಂತರ ಅದಕ್ಕೆ ಅವರು ಬದ್ಧರಾಗಿರುತ್ತಾರೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಅಕಸ್ಮಾತ್ತಾಗಿ ಇನ್ನೂ ಹೆಚ್ಚಾಗಿ ಏನಾದರೂ ಇದ್ದರೆ...,

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಗಳ ಭಾಷಣ ಮತ್ತು ಅವರು ನೀಡುವ ಉತ್ತರವನ್ನು ಕೇಳಬಾರದು ಎಂಬುದಾಗಿ ವಿರೋಧ ಪಕ್ಷದವರು ಮನಸ್ಸಿನಲ್ಲಿಯೇ ತೀರ್ಮಾನ ಮಾಡಿಕೊಂಡಿದ್ದಾರೆ. ಇಷ್ಟೇ. ನಾನೂ ಸಹ ಒಬ್ಬ ಸದಸ್ಯನಾಗಿ ಇಲ್ಲಿ ಕುಳಿತುಕೊಂಡು ನೋಡುತ್ತಿದ್ದೇನೆ. ಅವರು ಎಷ್ಟು ಬೆಂಡ್ ಆಗಬೇಕಾಗಿತ್ತೋ ಅಷ್ಟು ಬೆಂಡ್ ಆಗಿದ್ದಾರೆ. **(ಗೊಂದಲ)** ಅವರಿಗೂ ಸಹ ಪೀಠದಲ್ಲಿ ಕುಳಿತ ಅನುಭವವಿದೆ; ಅನುಭವವಿಲ್ಲವೆಂತಲ್ಲ.

**ಸಭಾಪತಿಯವರು:–** ನಾನು ಇದರ ಬಗ್ಗೆ ಈಗಾಗಲೇ ಹೇಳಿದ್ದೇನೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ಈ ಹಿಂದೆ ಅವರು ಉಪಸಭಾಪತಿಗಳಾಗಿ ಕರ್ತವ್ಯ ನಿರ್ವಹಿಸಿದ್ದರು. ಇವರುಗಳೆಲ್ಲಾ ಒಟ್ಟಿಗೆ ಜೊತೆಯಲ್ಲಿ ಇದ್ದವರು. ಈಗ ಮುಖ್ಯಮಂತ್ರಿಗಳು ಇಲ್ಲಿಗೆ ಬಂದಿದ್ದಾರೆ. ಈ ಮನೆಯಲ್ಲಿ ವಿಧೇಯಕಗಳ ಅನುಮೋದನೆಯನ್ನು ಪಡೆದುಕೊಂಡ ನಂತರ ಅವರು ಕೆಳಮನೆಗೂ ಸಹ ಹೋಗಬೇಕಾಗಿದೆ. ಹೀಗಾಗಿ ನಾನು ಸರ್ಕಾರದ ಪರವಾಗಿ ವಿರೋಧ ಪಕ್ಷದವರಲ್ಲಿ ದಯಮಾಡಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಬೇಕಾದಲ್ಲಿ ಇನ್ನೂ ಬೇಕಾದಷ್ಟು ಸ್ಪಷ್ಟೀಕರಣಗಳನ್ನು ತೆಗೆದುಕೊಳ್ಳಬಹುದು.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಉಪ ಮುಖ್ಯಮಂತ್ರಿಗಳು...

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ಷರತ್ತು ಸದಸ್ಯರಿಗೂ ಹಾಗೂ ಸಭಾಪತಿಯವರಿಗೂ ಬಿಟ್ಟಿದ್ದು ಹೊರತು ನಿಮಗೆ ಅಲ್ಲ. The condition is between the Hon'ble Chairman and him. It is not between you two. ಸಭಾಪತಿಯವರು ನೀಡಿದ ರೂಲಿಂಗ್ ಅನ್ನು ಸದಸ್ಯರು ಒಪ್ಪಿಕೊಂಡಿದ್ದಾರೆ. He has accepted the Hon'ble Chairman's ruling. ಆ ಕಾರಣಕ್ಕಾಗಿ ವಿರೋಧ ಪಕ್ಷದವರು ಏತಕ್ಕೆ ಯೋಚನೆ ಮಾಡುತ್ತಿದ್ದಾರೆ? ಸದಸ್ಯರು ಹೇಳಿರುವ ಮಾತಿಗೆ ನಾವುಗಳೆಲ್ಲರೂ ಸಮ್ಮತಿಸಿದ್ದೇವೆ. ಸಭಾಪತಿಯವರು ಹೇಳಿದ್ದಕ್ಕೆ ನೀವು ತಡೆಯಲೇ ಬೇಕೆಂದರೆ, we can't stop it.

**ಸಭಾಪತಿಯವರು:–** ಅವರು ಏನು ಹೇಳಿದ್ದಾರೆ ಎಂದರೆ, ನೀವು ಕಡತದಿಂದ ಅದನ್ನು ತೆಗೆದಿದ್ದೀರಿ; ಅದನ್ನು ನಾನು ಒಪ್ಪಿಕೊಂಡಿದ್ದೇನೆ. ಅಲ್ಲಿಗೆ ಮುಗಿಯಿತು. ಸದನಕ್ಕಿಂತ ನಾನು ದೊಡ್ಡವನಲ್ಲ. ನಾನು ಹೇಳಿದ ಮಾತಿಗೆ ಇದಕ್ಕಿಂತಲೂ ಏನಾದರೂ ಹೆಚ್ಚಿನದು ಸಿಕ್ಕಿದರೆ..., ಸದಸ್ಯರು ಮೈ ಉಬ್ಬಿಸಿ ಮಾತನಾಡುತ್ತಾರೆ; ಹಾಗೆ ಮಾತನಾಡುತ್ತಾರೆ; ಹೀಗೆ ಮಾತನಾಡುತ್ತಾರೆ ಎಂದು ವಿರೋಧ ಪಕ್ಷದ ನಾಯಕರು ನಿನ್ನೆಯ ದಿನ ಹೇಳಿದರು. ಇಂತಹವುಗಳು ಏನಾದರೂ ಇದ್ದರೆ, ನೀವು ನೋಡಿ ಹೇಳಿ, ನೀವು ಏನು ಹೇಳುತ್ತೀರೋ ಆ ತೀರ್ಮಾನಕ್ಕೆ ನಾನು ಬದ್ಧನಾಗಿರುತ್ತೇನೆ ಎಂದು ಅವರು ಹೇಳಿದ್ದಾರೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ಸರಿಯಾಗಿದೆ, ಇದಕ್ಕಿಂತ ಇನ್ನೇನು ಹೇಳಬೇಕು?

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾನು ಇನ್ನೊಂದರ ಬಗ್ಗೆ ಈಗ ಮಾತನಾಡುವುದಿಲ್ಲ. ಇಲ್ಲಿಗೆ ಇದನ್ನು ಮುಕ್ತಾಯಗೊಳಸೋಣ. ಆದರೆ ನನಗೆ ಬೇಕಾಗಿರುವುದು ಅದನ್ನು ನೋಡಿ ಇನ್ನೊಂದು ಬಾರಿ ಹೇಳದರೆ, ಅವರು ಮತ್ತೊಂದು ಬಾರಿ ಕ್ಷಮೆಯನ್ನು ಕೇಳಬೇಕು.

**ಸಭಾಪತಿಯವರು:–** ಬೇಡ ಬಿಡಿ. ಹೇಳುವುದು ಬೇಡ. ಮುಗಿತು ಬಿಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಹಾಗಿದ್ದಲ್ಲಿ ಅವರು ಯಾವ ಷರತ್ತಿನ ಮೇಲೆ ವಿಷಾದವನ್ನು ವ್ಯಕ್ತಪಡಿಸಿದರು?

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ಅವರು ಅಷ್ಟು ಹೇಳದ ಮೇಲೂ ಸಹ ನೀವು ಸದನವನ್ನು ಬ್ಲಾಕ್ ಮಾಡಬೇಕೆಂದು ನೀವು ಮಾನಸಿಕವಾಗಿ ...

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಇಲ್ಲ, ದಯಮಾಡಿ ತಾವು ತಪ್ಪು ತಿಳದುಕೊಳ್ಳಬೇಡಿ. ನಮಗೇನೂ ಇಲ್ಲ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ಈ ಮನೆಯಲ್ಲಿ ಎಂತೆಂತಹ ಘಟನೆಗಳು....

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳ. ವಿರೋಧ ಪಕ್ಷದ ನಾಯಕರು ಹೇಳದಂತೆ, ಅದನ್ನು ನೋಡುವುದು ಬೇಡ; ಅದನ್ನು ಕಡತದಿಂದ ತೆಗೆದು ಹಾಕಲಾಗಿದೆ. ಅದು ಮುಗಿದು ಹೋಗಿದೆ. ಅವರು ವಿಷಾದವನ್ನು ವ್ಯಕ್ತಪಡಿಸಿದ್ದಾರೆ; ಇಲ್ಲಿಗೆ ಮುಗಿಸಿ ಬಿಡಿ, ಸಾಕು.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಯಾವುದೇ ಷರತ್ತು ಇಲ್ಲದೇ ಕೇಳಬೇಕು.

**ಸಭಾಪತಿಯವರು:–** ಆ ಷರತ್ತು ಬೇಡ. ಅವರು ಹೇಳರುವ ಷರತ್ತನ್ನು ನಾನು ಕೇಳುವುದಿಲ್ಲ.

**(ಗೊಂದಲ)**

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ಶ್ರೀ ಶರವಣರವರನ್ನು ಅವರ ಸ್ಥಾನಕ್ಕೆ ತೆರಳಲು ತಿಳಸಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಟಿ.ಎ.ಶರವಣರವರು ಸದನದ ಬಾವಿಯಲ್ಲಿದ್ದರು)**

(ಮುಂದು)

(575)21-03-2025(3-50) bkp-bns (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಇಲ್ಲಿ ಏನು ನಡೆಯಿತು ಎನ್ನುವುದು ತಿಳಿಯದ ವಿಚಾರ ಏನಿಲ್ಲ, ಸರ್ಕಾರಕ್ಕೆ 100ಕ್ಕೆ 100 ರಷ್ಟು ವಿಷಯ ತಿಳಿದಿದೆ. ಮಾನ್ಯ ಮುಖ್ಯಮಂತ್ರಿಗಳಿಗೂ ಸಹ ವಿಷಯ ಏನಿದೆ ಎನ್ನುವುದು ಗೊತ್ತಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಸರ್ಕಾರದವರು ಇದರ ಬಗ್ಗೆ interfere ಆಗಿದ್ದಾರೆ. ಈ interfere ಆಗಿರುವಂತಹ ಸಂದರ್ಭದಲ್ಲಿ ತಮ್ಮ ನಿರ್ಣಯವೇ ಅಂತಿಮವಾಗಿದ್ದು, ಅದರ ಬಗ್ಗೆ ನಮಗೆ ಗೌರವ ಇದೆ.

**ಸಭಾಪತಿಯವರು:-** ದಯಮಾಡಿ ಬಾವಿಯಲ್ಲಿರುವ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಉಪ ಮುಖ್ಯಮಂತ್ರಿಗಳು ಈ ವಿಚಾರವಾಗಿ ಹೇಳಿದ್ದಾರೆ. ಈಗ ಅವರು ವಿಷಾದ ವ್ಯಕ್ತಪಡಿಸಿಯಾಗಿದೆ. ಷರತ್ತುಗಳ ವಿಚಾರ ನಿಮಗೆ ಬಿಟ್ಟ ವಿಚಾರ. ಆದರೆ, ಆ ರೀತಿಯ ಷರತ್ತುಗಳು ಮತ್ತೊಂದು ಏನೂ ಇರಬಾರದು ಎನ್ನುವುದು ನಮ್ಮ ವಿಚಾರ.

**ಸಭಾಪತಿಯವರು:-** ಇಲ್ಲ ಏನು ಕಂಡೀಷನ್‌ಗಳಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಎರಡನೆಯದಾಗಿ, ಯಾವತ್ತೂ ಕೂಡ ಸದಸ್ಯರುಗಳಾದ ನಾವುಗಳು ಈ ರೀತಿಯಲ್ಲಿ ನಡೆದುಕೊಳ್ಳಬಾರದು.

**ಸಭಾಪತಿಯವರು:-** ಅದನ್ನು ಎಲ್ಲರೂ ತಿಳಿದುಕೊಳ್ಳಬೇಕು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಆದರೆ, ನೋವು ಆದಂತಹ ಸಂದರ್ಭದಲ್ಲಿ ಕೇಳುವಂತಹದ್ದು ನಮ್ಮ ಹಕ್ಕು ಆಗಿದೆ. ಈಗ ತಾವು ಹೇಳಿದ್ದೀರಿ. ಈಗ ಮಾನ್ಯ ಮುಖ್ಯಮಂತ್ರಿಗಳಿಗೂ ಇದು ಏನು ಎನ್ನುವುದು ಅರಿವಾಗಿದೆ. ಈಗ ಪದೇ ಪದೇ ಏನು ಹೇಳುತ್ತಾರೆಂದರೆ ನಾವು ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುತ್ತೇವೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ರಕ್ಷಣೆ ಕೊಡುತ್ತೇವೆಂದು ಹೇಳುತ್ತಾರೆ.

**ಸಭಾಪತಿಯವರು:-** ಈಗ ಆ ವಿಚಾರಕ್ಕೆ ಹೋಗುವುದು ಬೇಡ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಈ ರೀತಿಯಾದಾಗ ರಕ್ಷಣೆಗೆ ಸರ್ಕಾರ ಬರಬೇಕಾ ಅಥವಾ ನಾವೇ ಬರಬೇಕಾ? ಈಗ ಅವರ ಗಮನಕ್ಕೆ ಬಂದಿದೆ. ಈಗ ಅವರಿಗೂ ಅರ್ಥವಾಗಿದೆ. ಹೀಗಾಗಿ, ಪರವಾಗಿಲ್ಲ. ತಮ್ಮ ಪೀಠಕ್ಕೆ ಗೌರವ ಕೊಟ್ಟು ನಾವು ಇದನ್ನು ಮುಕ್ತಾಯ ಮಾಡುತ್ತೇವೆ.

**ಸಭಾಪತಿಯವರು:-** ಎಲ್ಲರಿಗೂ ಧನ್ಯವಾದಗಳು.

**(ಈ ಹಂತದಲ್ಲಿ ಧರಣಿನಿರತ ಮಾನ್ಯ ಸದಸ್ಯರೆಲ್ಲರೂ ಸದನದ ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)**

**12) ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಈ) ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ದಿನೇಶ್ ಗುಂಡೂರಾವ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ಪ್ರಸ್ತುತ ಜೀವನ ನಿರ್ವಹಣಾ ವೆಚ್ಚದಲ್ಲಿ ಸಾಕಷ್ಟು ಹೆಚ್ಚಳವಾಗಿದೆ. ಮುಖ್ಯಮಂತ್ರಿಗಳ, ಮಂತ್ರಿಗಳ, ರಾಜ್ಯಮಂತ್ರಿಗಳ ಮತ್ತು ಉಪ ಮುಖ್ಯಮಂತ್ರಿಗಳ ಸಂಬಳ ಮತ್ತು ಭತ್ಯೆಗಳನ್ನು ದೀರ್ಘ ಕಾಲದಿಂದ ಪರಿಷ್ಕರಿಸಿರುವುದಿಲ್ಲ. ಆದ್ದರಿಂದ ಸಂಬಳ, ಮನೆಬಾಡಿಗೆ ಭತ್ಯೆ, ಆತಿಥ್ಯ ಭತ್ಯೆ, ವಾಹನ ಭತ್ಯೆಗಳು ಇತ್ಯಾದಿಗಳ ಪರಿಷ್ಕರಣೆಗಾಗಿ ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ 1956ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಆದ್ದರಿಂದ, ಈ ವಿಧೇಯಕವನ್ನು ಈ ಸಭೆಯ ಮುಂದೆ ತರಲಾಗಿದೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 6 ರವರೆಗೆ**

**ಸಭಾಪತಿಯವರು:–**"ಖಂಡ 2 ರಿಂದ 6 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 6 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ–1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಉ) ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೆ, ಜೀವನ ವೆಚ್ಚದಲ್ಲಿ ಗಣನೀಯ ಹೆಚ್ಚಳವಾಗಿದೆ. ಆದ್ದರಿಂದ, ಕರ್ನಾಟಕ ವಿಧಾನಮಂಡಲದವರ ಸಂಬಳ, ನಿವೃತ್ತಿ ವೇತನಗಳ ಮತ್ತು ಭತ್ಯೆಗಳ ಅಧಿನಿಯಮ, 1956ನ್ನು (1957ರ ಕರ್ನಾಟಕ ಅಧಿನಿಯಮ 2) ತಿದ್ದುಪಡಿ ಮಾಡುವ ಮೂಲಕ ಸಂಸದೀಯ ಕಾರ್ಯನಿರ್ವಾಹಕರ ಮತ್ತು ಶಾಸಕರ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಹಾಗೂ ಕೆಲವು ಇತರ ಪ್ರಯೋಜನಗಳನ್ನು ಹೆಚ್ಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಆದ್ದರಿಂದ, ಈ ವಿಧೇಯಕವನ್ನು ಈ ಸಭೆಯ ಮುಂದೆ ತರಲಾಗಿದೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 13** ರವರೆಗೆ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

**"ಖಂಡ 2 ರಿಂದ 13 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 13 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ–1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**13) ವಿತ್ತೀಯ ಕಾರ್ಯಕಲಾಪಗಳು**

**2024–25ನೇ ಸಾಲಿನ ಪೂರಕ ಅಂದಾಜುಗಳನ್ನು ಒಪ್ಪಿಸುವುದು**

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ತಮ್ಮ ಅನುಮತಿಯೊಡನೆ ಪೂರಕ ಅಂದಾಜು 2024–25ನೇ ಸಾಲಿನ ಆರ್ಥಿಕ ವರ್ಷದಲ್ಲಿ ಮೂರನೇ ಮತ್ತು ಅಂತಿಮ ಕಂತನ್ನು ಮಂಡಿಸುತ್ತಿದ್ದೇನೆ ಮತ್ತು ಸದನ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳುತ್ತಿದ್ದೇನೆ. ಪ್ರತಿ ವರ್ಷವೂ ಕೂಡ ಪೂರಕ ಅಂದಾಜುಗಳನ್ನು ಮಂಡಿಸುತ್ತೇವೆ. ನಾವು ಬಜೆಟ್ ಅನ್ನು ಮೊದಲನೆಯ ಬಾರಿಗೆ ಮಂಡಿಸಿದಾಗ ಅನೇಕ ಯೋಜನೆಗಳಿಗೆ, ಅನೇಕ ಕಾರ್ಯಕ್ರಮಗಳಿಗೆ ಹಣವನ್ನು ನಿಗದಿ ಮಾಡಿರುತ್ತೇವೆ. ಅದು ಸಾಲದೇ ಹೋದಾಗ ಪೂರಕ ಅಂದಾಜುಗಳನ್ನು

ಮಂಡಿಸಬೇಕಾಗುತ್ತದೆ. ಆದ್ದರಿಂದ, ಇಲ್ಲಿಯೂ ಕೂಡ ಎರಡು ಕಂತುಗಳನ್ನು ಮಂಡಿಸಿದ್ದೇವೆ. ಈಗ ಮೂರನೇ ಕಂತನ್ನು ಮಂಡಿಸುತ್ತಿದ್ದೇವೆ. ಇದಕ್ಕೆ ಸಂವಿಧಾನದಲ್ಲಿ ಅವಕಾಶವನ್ನು ಕೊಟ್ಟಿದೆ. Article 205 clause (1) sub clause (a) ಅದರ ಪ್ರಕಾರ ಮಾಡುವಂತಹದ್ದು ಇದೆ. ಈ ಮೂರನೇ ಕಂತಿನಲ್ಲಿ 13,823 ಕೋಟಿ 46 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಇದರಲ್ಲಿ ರಾಜಸ್ವ ವೆಚ್ಚ 3,723.79 ಕೋಟಿ ರೂಪಾಯಿಗಳು ಮತ್ತು ಬಂಡವಾಳ ವೆಚ್ಚ 10,099.67 ಕೋಟಿ ರೂಪಾಯಿಗಳಾಗಿರುತ್ತದೆ. (ಮುಂದು)

**(576) 21.03.2025 04.00 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿಗಳು) (ಮುಂದು):**

ಅಂದರೆ ಬಂಡವಾಳ ವೆಚ್ಚಕ್ಕಾಗಿ ಹೆಚ್ಚು ಖರ್ಚು ಮಾಡುತ್ತಿದ್ದೇವೆ. ಅದಕ್ಕೆ revenue expenditure ಗೆ ರೂ.3,723 ಕೋಟಿ ಖರ್ಚು ಮಾಡಿದರೆ capital expenditure ಗೆ ರೂ.10,000 ಕೋಟಿ ಖರ್ಚು ಮಾಡುತ್ತಿದ್ದೇವೆ. ಪೂರಕ ಅಂದಾಜಿನ ಒಟ್ಟು ವೆಚ್ಚದಲ್ಲಿ ಸಂಚಿತ ನಿಧಿಯಿಂದ ಅಂದರೆ consolidated fund ನಿಂದ ರೂ.12,311.25 ಕೋಟಿಗಳಾಗಿರುತ್ತವೆ. ಇದರಲ್ಲಿ ರೂ.1,187.72 ಕೋಟಿಗಳು ಕೇಂದ್ರ ಸರ್ಕಾರದ ಸಹಾಯದಿಂದ ಭರಿಸಲಾಗುತ್ತದೆ. ಒಟ್ಟು net flow ರೂ.11,123.53 ಕೋಟಿಗಳು. ಇದನ್ನು ಹೇಗೆ ಭರಿಸುತ್ತೇವೆ ಎಂದರೆ ರಾಜಸ್ವ ಸ್ವೀಕೃತಿಗಳಿಂದ, revenue receipts ನಿಂದ, ಅಗತ್ಯವಿದ್ದಲ್ಲಿ reappropriation ಮಾಡುವ ಮೂಲಕ, ಸಾಲದೆ ಹೋದರೆ ಸಾಲ ಪಡೆದುಕೊಳ್ಳುವ ಮೂಲಕ ಇದನ್ನು ಭರಿಸತಕ್ಕಂಥ ಕೆಲಸ ಮಾಡುತ್ತೇವೆ. ಈ ಪೂರಕ ಅಂದಾಜಿನಲ್ಲಿ ಸುಮಾರು 150 ಕೋಟಿಗೂ ಮೇಲ್ಪಟ್ಟಿದ್ದನ್ನು ಮಾತ್ರ ಇಲ್ಲಿ mention ಮಾಡಲಾಗಿದೆ.

1) ವಿದ್ಯುತ್ ಖರೀದಿ ಬಾಕಿ ಮೊತ್ತವನ್ನು ವಿದ್ಯುತ್ ಕಂಪನಿಗೆ ಒದಗಿಸಲು ಆರ್ಥಿಕ ನೆರವು – ರೂ.4,000 ಕೋಟಿ

2) ವಿಶೇಷ ಬಂಡವಾಳ ನೆರವು ಮತ್ತು ನಬಾರ್ಡ್ ಕಾಮಗಾರಿ – ರೂ.700 ಕೋಟಿ

3) ಕಾವೇರಿ ನೀರಾವರಿ ನಿಗಮ ನಿಯಮಿತದಿಂದ ನೀರಾವರಿ ಕಾಮಗಾರಿಗಳು – ರೂ.600 ಕೋಟಿ.

4) ಕರ್ನಾಟಕ ನೀರಾವರಿ ನಿಗಮಕ್ಕೆ ಅನುದಾನ – ರೂ.600 ಕೋಟಿ.

5) ಜಿಲ್ಲಾ ರಸ್ತೆಗಳು – ರೂ.600 ಕೋಟಿ

6) ಸಾಲ ಮರುಪಾವತಿಗಾಗಿ ಬಿಎಂಆರ್‌ಸಿಎಲ್‌ಗೆ ನೆರವು – ರೂ.500 ಕೋಟಿ

7) ವಿಶ್ವೇಶ್ವರಯ್ಯ ಜಲ ನಿಗಮಕ್ಕೆ ಅನುದಾನ – ರೂ.400 ಕೋಟಿ

8) ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಅನುದಾನ – ರೂ.400 ಕೋಟಿ

9) ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳು – ರೂ.400 ಕೋಟಿ

10) ಪ್ರಧಾನ್ ಮಂತ್ರಿ ಗ್ರಾಮೀಣ ಆವಾಸ್ ಯೋಜನೆ ರಾಜ್ಯದ ಪಾಲು – ರೂ.393 ಕೋಟಿ

11) ಜಿಲ್ಲಾ ಆಸ್ಪತ್ರೆಗಳು ಮತ್ತು ವೈದ್ಯಕೀಯ ಕಾಲೇಜುಗಳನ್ನು ಮೇಲ್ದರ್ಜೆಗೇರಿಸುವುದು – ರೂ.300 ಕೋಟಿ

12) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ – ರೂ.283 ಕೋಟಿ

13) ಅಣೆಕಟ್ಟುಗಳ ನಿರ್ಮಾಣಕ್ಕೆ – ರೂ. 250 ಕೋಟಿ

14) ಪ್ರಧಾನ್ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಕೇಂದ್ರದ ಪಾಲು – ರೂ.214 ಕೋಟಿ

15) ನಗರ ಸ್ಥಳೀಯ ಸಂಸ್ಥೆಗಳಿಗೆ ಅಮೃತ ನಗರೋತ್ಥಾನ 4 – ರೂ.200 ಕೋಟಿ

16) ಹಾಲು ಉತ್ಪಾದಕರಿಗೆ ಉತ್ತೇಜನ (incentives) - ರೂ.200 ಕೋಟಿ

17) ಸಾಮಾಜಿಕ ಭದ್ರತಾ ಪಿಂಚಣಿ ಸಂಧ್ಯಾ ಸುರಕ್ಷಾ ಯೋಜನೆಗೆ – ರೂ.171 ಕೋಟಿ

18) ವಸತಿ ಶಾಲೆಗಳ ನಿರ್ವಹಣೆ – ರೂ.170 ಕೋಟಿ

19) ಅಮೃತ ಯೋಜನೆ – 2 ಕೇಂದ್ರದ ಪಾಲು – ರೂ.152 ಕೋಟಿ

20) ಇತರೆ ಅಂದರೆ ರೂ.150 ಕೋಟಿಗಿಂತಲೂ ಕಡಿಮೆ ಇರುವುದು – ರೂ.3,289 ಕೋಟಿ

ಒಟ್ಟು ರೂ.13,823 ಲಕ್ಷ ಕೋಟಿ. ಇದಕ್ಕೆ ರಾಜ್ಯಪಾಲರು ಅನುಮೋದನೆಯನ್ನು ಕೊಟ್ಟಿರುತ್ತಾರೆ. ಅನುಮೋದನೆ ಕೊಟ್ಟ ಮೇಲೆ ಸದನದ ಒಪ್ಪಿಗೆಯನ್ನು ಪಡೆಯಬೇಕು. ಅದಕ್ಕಾಗಿ ಕೆಳಮನೆಯಲ್ಲಿ, ಇಲ್ಲಿ ಮಂಡಿಸಿ ಮಾನ್ಯ ಸದಸ್ಯರ ಅನುಮೋದನೆಯನ್ನು ಪಡೆದುಕೊಳ್ಳಲು ನಾನು ಮಂಡಿಸಿದ್ದೇನೆ. ಎಲ್ಲಾ ಸೇರಿ ಒಟ್ಟಿಗೆ 2024-25ನೇ ಇಸವಿಯಲ್ಲಿ ಮೊದಲನೆಯ ಕಂತು ರೂ.2574 ಕೋಟಿ – 2.3%, ರೂ.5,318 ಕೋಟಿ – 1.4%, ರೂ.13,823 ಕೋಟಿ – 3.6% ಎಲ್ಲಾ ಸೇರಿಸಿ ಒಟ್ಟು ರೂ.27,715 ಕೋಟಿಗಳ ಪೂರಕ ಅಂದಾಜನ್ನು ಮೂರು ಕಂತುಗಳಲ್ಲಿ ಮಂಡಿಸಿ ಒಪ್ಪಿಗೆಯನ್ನು ಪಡೆದುಕೊಂಡಿದ್ದೇವೆ. ಇದು ಮೂರನೆಯ ಕಂತು ರೂ.13,823.46 ಲಕ್ಷ ಕೋಟಿಗಳು. ಇದಕ್ಕೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಅವರಲ್ಲಿ ಕೋರುತ್ತೇನೆ.

**ಸಭಾಪತಿಯವರು:-** ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಧನ ವಿನಿಯೋಗ ವಿಧೇಯಕ....

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಅನೇಕ ವಿಚಾರಗಳನ್ನು ನಾವೆಲ್ಲಾ ಪ್ರಸ್ತಾಪ ಮಾಡಿದ್ದೇವೆ. ಈಗ SCSP/TSP ಇರಬಹುದು, ಬೇರೆ ಬೇರೆ ವಿಚಾರಗಳಿರಬಹುದು; ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರ ಕೊಡಬೇಕು. ಅದರ ಬದಲು ಅವರು ಈಗಾಗಲೇ ವಿಧೇಯಕವನ್ನು move ಮಾಡಿದ್ದಾರೆ. ಹಾಗಾದರೆ ನಮಗೆ ಉತ್ತರ ಕೊಡುವವರು ಯಾರು?

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೆ, ಇದು ಪೂರಕ ಅಂದಾಜು ಬಿಲ್. Money Bill ಬಂದಾಗ ಉತ್ತರ ಕೊಡುತ್ತಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಆಯಿತು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ನಾರಾಯಣಸ್ವಾಮಿಯವರೆ, ಇದು Supplementary Estimate & Bill. Money Bill ಆಮೇಲೆ ಬರುತ್ತದೆ.

**ಸಭಾಪತಿಯವರು:-** ನನಗೂ confuse ಮಾಡಿಬಿಡುತ್ತೀರಿ.

**14) ಶಾಸನ ರಚನೆ**

**ಮುಂದುವರಿದ ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಊ) ಕರ್ನಾಟಕ ಧನ ವಿನಿಯೋಗ (ಸಂಖ್ಯೆ – 2) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ–2) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ – 2) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:– "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ–1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ –2) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ –2) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**15) ವಿತ್ತೀಯ ಕಾರ್ಯಕಲಾಪ**

**2025-26ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ**

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೆ, ಬಜೆಟ್ ಮೇಲೆ 13 ಜನ ಮಾತನಾಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಇಲ್ಲಿ 29 ಜನರ ಹೆಸರನ್ನು ಕೊಟ್ಟಿದ್ದಾರೆ.

**ಸಭಾಪತಿಯವರು:-** 29 ಜನ ಹೆಸರು ಕೊಟ್ಟಿದ್ದರು. 14 ಜನ ಮಾತನಾಡಿದ್ದಾರೆ. ತಾವು ಈಗ ಉತ್ತರವನ್ನು ಹೇಳಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನಾನು ಈ ತಿಂಗಳು 7ನೇ ತಾರೀಖು....

**ಸಭಾಪತಿಯವರು:-** ಮಾನ್ಯ ಭಾರತಿ ಶೆಟ್ಟಿಯವರೆ, ನಿಮ್ಮದೇ ಹೆಸರಿತ್ತು. ನಾನು ಕರೆಯಬೇಕೆಂದಿದ್ದಾಗ ಗದ್ದಲ ಆಯಿತು. ನಾನೇನು ಮಾಡಲಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಮುಖ್ಯಮಂತ್ರಿಯವರೆ, ನಿಮ್ಮ ಕಡೆಯಿಂದ ಒಬ್ಬರೇ ಒಬ್ಬರು ಮಹಿಳೆ ಮಾತನಾಡಿರುವುದು, ನಮ್ಮ ಕಡೆಯಿಂದ ಇನ್ನೂ ಯಾರೂ ಹೆಣ್ಣುಮಕ್ಕಳು ಮಾತನಾಡಿರುವುದಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಭಾರತಿ ಶೆಟ್ಟಿಯವರೆ, ಅದಕ್ಕೇನಮ್ಮ, ಕೇಳಿಬಿಟ್ಟು ಮಾತನಾಡಬೇಕಿತ್ತು. ನಮ್ಮದೇನೂ ತಕರಾರು, ವಿರೋಧ ಇಲ್ಲ.

**ಸಭಾಪತಿಯವರು:-** ಸ್ಪಷ್ಟೀಕರಣವನ್ನು ಕೇಳಿ.

**ಶ್ರೀ ಸಿದ್ದರಾಮಯ್ಯ:-** ಸ್ಪಷ್ಟೀಕರಣವನ್ನು ಕೇಳಿಬಿಡಿ ಅಷ್ಟೆ.

**ಶ್ರೀಮತಿ ಭಾರತಿ ಶೆಟ್ಟಿ:-** ನಾನೇನು ಜಾಸ್ತಿ ಮಾತನಾಡುವುದಿಲ್ಲ. ಒಂದೆರಡು ನಿಮಿಷ ಅಷ್ಟೆ. ತಯಾರಿ ಬಹಳ ಇತ್ತು. ಸಮಯದ ಅಭಾವದಿಂದಾಗಿ ಒಂದೆರಡು clarification ಮಾತ್ರ.

**(ಮುಂದು)**

(577) 21-03-2025/4.10/ಎಂವಿ-ಕೆಎಸ್ (ಬಿಎನ್‌ಎಸ್) (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ದಯಮಾಡಿ clarification ಕೇಳಬೇಕು. ಈಗ 29 ಜನ ಸದಸ್ಯರು ಹೆಸರನ್ನು ಕೊಟ್ಟಿದ್ದಾರೆ. ಆಗ ತಾವು ಎಲ್ಲರಿಗೂ ಅವಕಾಶ ಮಾಡಿಕೊಡಬೇಕು.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು clarification ಕೇಳಲಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ತಾವು ಒಂದು ನಿಮಿಷ ಕುಳಿತುಕೊಳ್ಳಿ. ಶ್ರೀಮತಿ ಭಾರತಿ ಶೆಟ್ಟಿಯವರೆ, ತಾವು ತಮ್ಮ ಮಾತನ್ನು ಎರಡು ನಿಮಿಷದಲ್ಲಿ ಮುಗಿಸಿ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಬಗ್ಗೆ ಅನೇಕ ವಿಷಯಗಳನ್ನು ಉಲ್ಲೇಖ ಮಾಡಿದರು. ನಾನು ಅದರ ಬಗ್ಗೆ ಮಾತನಾಡಬೇಕೆಂದರೆ, ಈಗ ಸಮಯದ ಅಭಾವವಿದೆ. ಈಗ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದಿದ್ದಾರೆ. ಅವರು ಬಜೆಟ್ ಪುಸ್ತಕದಲ್ಲಿ ಏನು ಬರೆದಿದ್ದಾರೆಂದರೆ;

‘ನಮ್ಮ ಕೈಬುಟ್ಟಿಯಲ್ಲಿ
ಸಿಡಿಲ ಗೂಡಿಹುದು
ಹುಡುಕಿ ನೋಡಿದರಲ್ಲಿ
ಸುಮದ ಬೀಡಿಹುದು’

ಎಂದು ರಾಷ್ಟ್ರಕವಿ ಕುವೆಂಪುರವರ ಹೆಸರನ್ನು ಉಲ್ಲೇಖ ಮಾಡಿದ್ದಾರೆ. ನಾನು ಈ ಬಜೆಟ್ ಪುಸ್ತಕವನ್ನು ಓದಿದ್ದೇನೆ. ಈ ಬಜೆಟ್ ಪುಸ್ತಕವನ್ನು ಓದುವಾಗ ನನಗೆ ಅನಿಸಿದ್ದು ಏನೆಂದರೆ, ‘ನನ್ನ ಕೈಯಲ್ಲಿ ಈ ಬುಟ್ಟಿಯಲ್ಲಿ ಸಿಡಿಲ ಬೀಡಿಹುದು ಹುಡುಕಿ ನೋಡಿದರಲ್ಲಿ ಸುಮದ ಗೂಡಿಹುದು.’ ಅಂದರೆ, ಒಳ್ಳೆಯದು ಇದೆ. ಮತ್ತೆ ಕೆಟ್ಟದು ಸಹ ಇದೆ. ನಾನು ಅದೆಲ್ಲವನ್ನೂ ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ಮಹಿಳೆಯರಿಗೆ ಸಂಬಂಧಪಟ್ಟಂತೆ ಎರಡು ಯೋಜನೆಗಳ ಬಗ್ಗೆ ಬೆಳಕನ್ನು ಚೆಲ್ಲುವುದಕ್ಕೆ ಇಚ್ಚೆಪಡುತ್ತೇನೆ. ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಅವರು ಯಾವಾಗಲೂ ಹೇಳುವುದು ಏನೆಂದರೆ, ಗೃಹಲಕ್ಷ್ಮಿ ಯೋಜನೆಯಿಂದ ಸುಮಾರು 1.22 ಕೋಟಿ ಹೆಣ್ಣು ಮಕ್ಕಳಿಗೆ ಗೃಹಲಕ್ಷ್ಮಿ ಯೋಜನೆಗೆ ಸುಮಾರು 28,608/– ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆಂದು ಹೇಳಿದ್ದಾರೆ. ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೃದಯಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮತ್ತೆ ಗೃಹಲಕ್ಷ್ಮಿ ಯೋಜನೆಯನ್ನು ಸ್ವಾಗತ ಕೂಡ ಮಾಡುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಅದೇ ರೀತಿ ಡಾ:ಬಿ.ಆರ್.ಅಂಬೇಡ್ಕರ್‌ರವರ ವಾಕ್ಯವನ್ನು ಸಹ ಉಲ್ಲೇಖ ಮಾಡಿದ್ದಾರೆ. ಅದು ಏನೆಂದರೆ, “ರಾಷ್ಟ್ರವು ತನ್ನ ಅರ್ಧದಷ್ಟು ಮಹಿಳೆಯರನ್ನು ಆರ್ಥಿಕವಾಗಿ ನಿಷ್ಕ್ರೀಯವಾಗಿಸಿ ಅಭಿವೃದ್ಧಿ ಸಾಧಿಸಲು ಸಾಧ್ಯವಿಲ್ಲ. ಅವರನ್ನು ಆರ್ಥಿಕವಾಗಿ ಸ್ವತಂತ್ರರನ್ನಾಗಿಸದೆ ಮಾಡುವ ಎಲ್ಲಾ ಅಭಿವೃದ್ಧಿ ಮಾದರಿಗಳು ಟೊಳ್ಳಾಗಿರುತ್ತವೆ” ಎಂದು

ಉಲ್ಲೇಖ ಮಾಡಿದ್ದಾರೆ. ಈಗ ಅವರು ಚಾಕೊಲೇಟ್ ಕೊಟ್ಟಿದ್ದಾರೆ. ಅದೇ ರೀತಿ ಗೃಹಲಕ್ಷ್ಮಿ ಯೋಜನೆ ಮತ್ತು ಶಕ್ತಿಯೋಜನೆ ಈ ಎಲ್ಲಾ ಯೋಜನೆಗಳನ್ನು ಹೆಣ್ಣುಮಕ್ಕಳಿಗೆ ಕೊಟ್ಟಿದ್ದಾರೆ. ಅದೇ ರೀತಿ ಮಹಿಳಾ ಸಬಲೀಕರಣ ಮಾಡಬೇಕಾಗಿದೆ. ನಾವು ಅವರಿಗೆ ಮೀನು ಕೊಡುವುದಲ್ಲ. ನಾವು ಅವರಿಗೆ ಮೀನು ಹಿಡಿದು ತಿನ್ನುವುದನ್ನು ಕಲಿಸಿಕೊಡಬೇಕು. ಅವರು ಕೆಲವು ಯೋಜನೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕೊಟ್ಟಿದ್ದಾರೆ. ಅಂದರೆ, ಅವರು ಹಸುಗಳನ್ನು ತೆಗೆದುಕೊಳ್ಳುವುದಕ್ಕೆ 1.25 ಲಕ್ಷ ರೂಪಾಯಿಗಳ ಸಹಾಯಧನವನ್ನು ನಿಗಮದ ಮೂಲಕ ಕೊಡುತ್ತಿದ್ದಾರೆ. ಅದೇ ರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಹಿಳಾ ಸ್ವಸಹಾಯ ಸಂಘಗಳಿಗೆ ನೀಡುತ್ತಿರುವ ಒಂದು ಲಕ್ಷ ರೂಪಾಯಿಗಳ ಸಾಲ ಮತ್ತು 1.50 ಲಕ್ಷ ರೂಪಾಯಿಗಳ ಸಹಾಯಧನವನ್ನು 2.50 ಲಕ್ಷ ರೂಪಾಯಿಗಳ ಸಾಲವನ್ನು ಕೊಡುವಂಥದ್ದಕ್ಕೆ ಹೆಚ್ಚಿಸಲಾಗಿದೆ. ಈ ರೀತಿ ಎಲ್ಲಾ ಸ್ತ್ರೀ ಶಕ್ತಿ ಗುಂಪುಗಳಿಗೆ ಮಾಡಿದರೆ, ಮಹಿಳೆಯರು ಬಹಳ ಸ್ವಾವಲಂಬಿಗಳಾಗುತ್ತಾರೆ. ಅದೇ ರೀತಿ ಇನ್ನು ಮಹಿಳಾ ಯೋಜನೆಗಳನ್ನು ಕೊಟ್ಟಿದ್ದಾರೆ. ಅಂಗನವಾಡಿಯ ಕಾರ್ಯಕರ್ತೆಯರಿಗೆ 15,000/- ರೂಪಾಯಿಗಳ ಮಾಸಾಶನವನ್ನು ನೀಡುತ್ತೇವೆಂದು ಹೇಳಿದ್ದರು. ಆದರೆ, ಇವತ್ತು ಅಷ್ಟನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಈಗ ನಾನು ಎಲ್ಲವನ್ನು ಸಹ ಓದುವುದಕ್ಕೆ ಇಷ್ಟಪಡುವುದಿಲ್ಲ. ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುವುದೇನೆಂದರೆ, ಬಜೆಟ್ ಪುಸ್ತಕದಲ್ಲಿರುವಂತೆ ರಾಷ್ಟ್ರೀಯ ಜೀವನೋಪಾಯ ಅಭಿಯಾನ ಸ್ವಸಹಾಯ ಗುಂಪುಗಳಿಗೆ ಮಹಿಳೆಯರಿಗೆ ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ತ್ವರಿತ ಸಾಲಸೌಲಭ್ಯ ಒದಗಿಸಿ, ಆರ್ಥಿಕ ಅಗತ್ಯತೆಗಳ ಪೂರೈಕೆ ಮತ್ತು ಭದ್ರತೆ ಒದಗಿಸಿ, ಉಳಿತಾಯ ಮತ್ತು ಉದ್ಯಮಶೀಲತೆಯನ್ನು ಹೆಚ್ಚಿಸುವ ಉದ್ದೇಶದಿಂದ ರಾಜ್ಯಮಟ್ಟದಲ್ಲಿ ‘ಅಕ್ಕ ಕೋ-ಆಪರೇಟಿವ್ ಸೊಸೈಟಿ’ ಯನ್ನು ಪ್ರಾರಂಭ ಮಾಡುತ್ತೇವೆಂದು ತಿಳಿಸಿದ್ದಾರೆ. ಆದರೆ, ಈಗಾಗಲೇ ‘ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಂಡಳಿ’ ಇದೆ. ನಾನು ಇನ್ನು ಎರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಅವರು ಅದಕ್ಕೆ ಅನುಕೂಲ ಮಾಡಿಕೊಟ್ಟರೆ ಸಾಕು. ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಂಡಳಿ, Women Federation ಇದೆ. ಅದನ್ನು ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ಸ್ಥಾಪನೆ ಮಾಡಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿರತಕ್ಕಂತಹ ಎಲ್ಲಾ ಮಹಿಳಾ ಬ್ಯಾಂಕುಗಳ ಸದಸ್ಯರು ಈ ಸೊಸೈಟಿಯ ಅಧ್ಯಕ್ಷರು ಮತ್ತು ಸದಸ್ಯರಾಗಿರುತ್ತಾರೆ. ಅವರು ಕೊಡುವಂತಹ ಒಂದೊಂದು ಸಾವಿರ ರೂಪಾಯಿಗಳಿಂದ ಅದು ನಡೆಯುತ್ತಿದೆ. ಅಲ್ಲಿ ತರಬೇತಿ ಕೊಡುತ್ತಾರೆ. ಅಲ್ಲಿ ಸಣ್ಣ ಮಹಿಳಾ ಹಾಸ್ಟೆಲ್ ಅನ್ನು ನಡೆಸುತ್ತಿದ್ದಾರೆ. ಮೊದಲು ಅವರಿಗೆ food supply ಗೆ ಅವಕಾಶ ಸಿಗುತ್ತಿತ್ತು. ಈಗ ಅದನ್ನು ಕೂಡ ನಿಲ್ಲಿಸಿದ್ದಾರೆ. ಆ ಕಛೇರಿ ಎಲ್ಲಿದೆ ಎಂದು ಹೇಳಿದರೆ, ಸಹಕಾರ ಮಹಾಮಂಡಳಿಯ basement ನಲ್ಲಿ ಕಾರು ನಿಲ್ಲಿಸುವಂತಹ ಪಾರ್ಕಿಂಗ್ ಜಾಗದಲ್ಲಿ ಒಂದು ಸಣ್ಣ ರೂಮ್‌ನಲ್ಲಿದೆ. ನಾವು ಅಲ್ಲಿಗೆ ಹೋಗುವುದಕ್ಕೆ ಬಹಳ ಬೇಸರವಾಯಿತು. ಈಗ ಅದಕ್ಕೆ ಒಂದು ಸ್ವಂತ ಕಟ್ಟಡ ಅದು ಇರಲಿ. ಆದರೆ, ಆ ಮಹಾಮಂಡಳಿಯಲ್ಲಿ ಒಂದು ರೂಮ್ ಕೊಡುವಂತೆ ಕಳೆದ ಬಾರಿ ನಮ್ಮ ಸರ್ಕಾರ ಇದ್ದಾಗಲೂ ಸಹ ಕೇಳಿದ್ದೆ. ಮೊದಲು ರೂಮ್ ಇರಲಿಲ್ಲ. ಕೊನೆಗೆ ಅದನ್ನು ಕಾರ್ ಪಾರ್ಕಿಂಗ್ ಮಾಡುವಂತಹ basement ನಲ್ಲಿ ಒಂದು ಶೆಡ್ ರೀತಿಯಲ್ಲಿ ಕೊಟ್ಟಿದ್ದಾರೆ. ಅದನ್ನು ಮಾಡುವುದಕ್ಕೆ

ಇದರಲ್ಲಿ ಅವಕಾಶವಿಲ್ಲ. ಅದಕ್ಕೆ ಹಣ ಇಟ್ಟಿಲ್ಲ. ಆದರೆ, ಅದನ್ನು ವ್ಯಾಪ್ತಿಗೆ ತರಲಾಗುವುದು ಎಂದು ಹೇಳಿದ್ದಾರೆ. ಆದರೆ, ಅದು ಬರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈಗ ಇರುವುದನ್ನು ಸರಿ ಮಾಡಬೇಕೆಂಬ ವಿನಂತಿಯನ್ನು ಮಾಡುತ್ತೇನೆ. ಏಕೆಂದರೆ, ನಾನು ಬಜೆಟ್ ಪುಸ್ತಕವನ್ನು ಓದುವಾಗ ಒಳ್ಳೆಯದು ಮತ್ತು ಕೆಟ್ಟದು ಎರಡೂ ಕೂಡ ಇದೆ. ಮತ್ತೆ ಎಲ್ಲಾ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ಮತ್ತೆ ಕ್ರಮ ಕೈಗೊಳ್ಳಲಾಗುವುದು. ಸಾಮರ್ಥ್ಯವನ್ನು ಕಲ್ಪಿಸಲಾಗುವುದು. ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು. ಕೇಂದ್ರ ಸರ್ಕಾರದ ಪ್ರಾಧಿಕಾರದ ತೀರುವಳಿ ದೊರೆತ ಕೂಡಲೇ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಕೇಂದ್ರ ಸರ್ಕಾರದ ಅನುಮತಿ ದೊರೆತ ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಪ್ರಸಕ್ತ ಸಾಲಿನ ವರ್ಷದಲ್ಲಿ ಕ್ರಮವಹಿಸಲಾಗುವುದು. ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. ಮಾನದಂಡಗಳನ್ನು ಜಾರಿಗೊಳಿಸಲಾಗುವುದು. ನೆರೆ ರಾಜ್ಯಗಳೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನಗಳನ್ನು ಕೈಗೊಳ್ಳಲಾಗುವುದು. ಆದ್ಯತೆಯ ಮೇರೆಗೆ ಕ್ರಮವಹಿಸಲಾಗುವುದು ಎಂದು ಇದೇ ರೀತಿ ಇದೆ ವಿನಃ, ಇದರಲ್ಲಿ ಒಳ್ಳೆಯದು ಇದೆ. ಈ ರೀತಿ ಕೂಡ ಇದೆ.

ಈಗ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ 500 ಶಾಲೆಗಳನ್ನು ನಿರ್ಮಾಣ ಮಾಡಿದ್ದಾರೆ. ಒಂದು ಕಡೆ 500 ಶಾಲೆಗಳು ಪ್ರಾರಂಭವಾಗುತ್ತವೆ. ನಮ್ಮ ಕಲ್ಪನೆ ಇರುವುದು ಅಲ್ಪಸಂಖ್ಯಾತ ಮಹಿಳೆಯರಿಗೆ ಅಲ್ಲಲ್ಲಿ ಕಾಲೇಜುಗಳನ್ನು ಪ್ರಾರಂಭ ಮಾಡುವುದು ಎಂದು ಇದೆ. ಈಗ ನಾವೆಲ್ಲರೂ ಸಹ ಏಕೆ ಒಟ್ಟಿಗೆ ಓದಬಾರದು? ಈಗ ಅಲ್ಪಸಂಖ್ಯಾತರ ಮಹಿಳೆಯರಿಗೆ ಮಾತ್ರ ಬೇರೆ ಕಾಲೇಜು, ಬೇರೆ ಮಹಿಳೆಯರಿಗೆ ಬೇರೆ ಕಾಲೇಜು ಏಕೆ? ಈಗ ಎಲ್ಲರೂ ಕೂಡ ಒಟ್ಟಾಗಿ ಓದಿದರೆ, ಸಮಾಜದಲ್ಲಿ ಒಳ್ಳೆಯ ವಾತಾವರಣ ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅವರನ್ನು ಮಾತ್ರ ಏಕೆ ಪ್ರತ್ಯೇಕವಾಗಿ ಇಡಬೇಕು ಎಂಬುದರ ಬಗ್ಗೆಯೂ ಸಹ ಮಾನ್ಯ ಮುಖ್ಯಮಂತ್ರಿಗಳು ಚಿಂತನೆ ಮಾಡಬೇಕು.

ಕೊನೆಯದಾಗಿ, ಅಲ್ಪಸಂಖ್ಯಾತ ಮಹಿಳೆಯರು ಮದುವೆಯಾದರೆ ಅವರಿಗೆ 50,000/- ರೂಪಾಯಿಗಳನ್ನು ಕೊಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಅದೇ ಸೀಟ್‌ನಲ್ಲಿ ಕುಳಿತುಕೊಂಡಿದ್ದರು, ನಾನು ಆ ಕಡೆ ಸೀಟ್‌ನಲ್ಲಿ ಕುಳಿತುಕೊಂಡಿದ್ದೆ. ಆಗ ಅವರು ಶಾದಿಭಾಗ್ಯ ಯೋಜನೆಯನ್ನು ಜಾರಿಗೆ ತಂದರು. ಆಗ ನಾನು ಬಹಳ ವಿನಂತಿ ಮಾಡಿದ್ದೆ. ಅಂದರೆ, ಒಂದೇ ಸಮುದಾಯಕ್ಕೆ ಶಾದಿಭಾಗ್ಯ ಕೊಡುವುದು ಬೇಡ. ಏಕೆಂದರೆ, ಹಿಂದೂಗಳಲ್ಲೂ ಕೂಡ ಬಡವರು ಇದ್ದಾರೆ. ಅವರಿಗೂ ಕೂಡ ಶಾದಿಭಾಗ್ಯವನ್ನು ಕೊಡಿ ಎಂದು. ಆಗ ಮಾನ್ಯ ಮುಖ್ಯಮಂತ್ರಿಗಳು ನೋಡುತ್ತೇನೆ ಅಮ್ಮ, ಯೋಚನೆ ಮಾಡುತ್ತೇನೆ ಮತ್ತೆ ಅದನ್ನು ಮಾಡೋಣವೆಂದು ಹೇಳಿದರು. ಆದರೆ, ಅವರು ಅದನ್ನು ಮಾಡಿಲ್ಲ. ಇವತ್ತು ಅವರು ಅದನ್ನು ಯೋಚನೆ ಮಾಡುವುದು ಬೇಡ. ನಾನು ಅವರಿಗೆ ಕೈಮುಗಿದು ಕೇಳುವುದು, ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಜನಾಂಗಕ್ಕೂ ಮುಖ್ಯಮಂತ್ರಿಗಳು. ಅವರು ಕೇವಲ ಒಂದು ಜನಾಂಗಕ್ಕೆ ಮುಖ್ಯಮಂತ್ರಿಗಳಲ್ಲ. ಇಡೀ ಜನಾಂಗದಲ್ಲಿ ಹಿಂದೂಗಳಲ್ಲೂ ಕೂಡ, ಬಡ ಹೆಣ್ಣು ಮಕ್ಕಳಿದ್ದಾರೆ. ತಮಗೆ ಗೊತ್ತಿದೆ ಇವತ್ತು ಕೂಡ ಅನೇಕ ಕಡೆಗಳಲ್ಲಿ ಸಾಮೂಹಿಕ ವಿವಾಹಗಳು ನಡೆಯುತ್ತಿವೆ. ಬನಶಂಕರಿ ದೇವಸ್ಥಾನದಲ್ಲಿ ವರ್ಷ ವರ್ಷ ಸಾಮೂಹಿಕ ವಿವಾಹ

ನಡೆಯುತ್ತದೆ. ಅಲ್ಲಿಗೆ ಹೆಣ್ಣು-ಗಂಡು ಮಕ್ಕಳು ಬಂದು ಕೂರುತ್ತಾರೆ. ಅವರು ಸರ್ಕಾರದಿಂದ ಎಲ್ಲರಿಗೂ ಕೂಡ ಆರ್ಥಿಕವಾಗಿ ದುರ್ಬಲರಾದಂತಹ ಎಲ್ಲಾ ಜನಾಂಗದ ಜೋಡಿಗಳಿಗೆ 50,000/- ರೂಪಾಯಿಗಳನ್ನು ಕೊಡಬೇಕು. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಈ ಭೇದಭಾವವನ್ನು ಮಾಡುವುದು ಬೇಡವೆಂದು ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಮುಖ್ಯಮಂತ್ರಿಯವರಿಗೆ ವಿನಂತಿ ಮಾಡುತ್ತೇನೆ. ಅವರು ಈ ಬಜೆಟ್‌ನಲ್ಲಿ ಒಂದೇ ಸಮುದಾಯಗಳಿಗೆ ನೀಡಿದ್ದಾರೆ. ಇದಕ್ಕೆ ಏನು ಬಹಳ ದೊಡ್ಡ ಖರ್ಚು ಮಾಡಬೇಕಾಗಿಲ್ಲ. ಅವರು ಇಷ್ಟೆಲ್ಲಾ ಕೊಟ್ಟು ಎಲ್ಲರಿಗೂ ಕೂಡ ಭಾಗ್ಯಲಕ್ಷ್ಮಿ ಯೋಜನೆಯನ್ನು ಕೊಟ್ಟಿದ್ದಾರೆ. ನಾನು ಅದಕ್ಕೆ ಅವರಿಗೆ ಕೈಮುಗಿದು ವಿನಂತಿ ಮಾಡುವುದೇನೆಂದರೆ, ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಈ ಭೇದಭಾವವನ್ನು ಮಾಡಬಾರದು. ಈ ಬಾರಿಯೂ ಸಹ ಕಳೆದ ಬಾರಿಯಂತೆ ಆಗಬಾರದು. ಮಾನ್ಯ ಮುಖ್ಯಮಂತ್ರಿಗಳು ಈ ಸಮಾಜದ ಎಲ್ಲಾ ಮಹಿಳೆಯರಿಗೆ ಎಲ್ಲಾ ಜೋಡಿಗಳಿಗೆ ನ್ಯಾಯ ಒದಗಿಸಿಕೊಡಬೇಕೆಂದು ಕೈಮುಗಿದು ವಿನಂತಿ ಮಾಡುತ್ತೇನೆ. ಇದು ಕೇವಲ ಒಂದೇ ಸಮುದಾಯಕ್ಕೆ ಅಲ್ಲ. ಎಲ್ಲಾ ಸಮುದಾಯದವರಿಗೂ ಕೂಡ 50,000/- ರೂಪಾಯಿಗಳನ್ನು ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ನಿರೀಕ್ಷೆಯನ್ನು ಮಾಡುತ್ತೇನೆ. ಅವಕಾಶಕ್ಕಾಗಿ ನಮಸ್ಕಾರಗಳು.

**ಸಭಾಪತಿಯವರು:-** ಮಾನ್ಯ ಟಿ.ಎನ್.ಜವರಾಯಿ ಗೌಡರವರು ಮಾತನಾಡಿ. ಈಗ ಬೇರೆ ಸದಸ್ಯರಿಗೆ ಯಾರಿಗೂ ಅವಕಾಶವಿಲ್ಲ.

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ನನ್ನ ಹೆಸರನ್ನು ನೀಡಿಲ್ಲ. ಆದುದರಿಂದ, ನಾನು ಮಾತನಾಡುವುದಕ್ಕೆ prepare ಆಗಿಲ್ಲ.

**ಸಭಾಪತಿಯವರು:-** ಆಯಿತು, ಈಗ ಶ್ರೀಮತಿ ಹೇಮಲತಾ ನಾಯಕ್‌ರವರು ಮಾತನಾಡಿ. ಈಗ ಮಾತನಾಡುವುದಕ್ಕೆ ಅವರೇ ಕೊನೆಯವರು.

(ಮುಂದು)

**(578) 21.03.2025 04.20 LL-KS** **(ಸಭಾಪತಿಯವರ ಉಪಸ್ಥಿತಿ)**

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾನು ಆಯವ್ಯಯದ ಮೇಲೆ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿ ಸಂವಿಧಾನದ ಅಡಿಯಲ್ಲಿ ಬದುಕುತ್ತಿರುತ್ತಾರೆ. ನಾನು ಮೊನ್ನೆಯ ದಿವಸ ಡಾ॥ ಹೆಚ್.ಸಿ. ಮಹದೇವಪ್ಪನವರಿಗೆ ಮನವಿ ಪತ್ರವನ್ನು ಸಹ ಕೊಟ್ಟಿರುತ್ತೇನೆ. ಅದೇನೆಂದರೆ, ಮಾದಿಗ ದಾಸರು ಎನ್ನುವಂತಹ ಒಂದು ಸಮುದಾಯ ಇದೆ. ಅವರು ಕುಲಶಾಸ್ತ್ರ ಅಧ್ಯಯನ ಮಾಡಿದ್ದಾರೆ. ಆ ಜನಾಂಗ ರಾಯಚೂರು ಭಾಗದಲ್ಲಿ ಬಹಳಷ್ಟು ಇದ್ದಾರೆ. ಆ ಜನಾಂಗಕ್ಕೆ ಸರ್ಕಾರದ ಯಾವುದೇ ಯೋಜನೆಗಳು ಇರುವುದಿಲ್ಲ. ದಯವಿಟ್ಟು ಆ ಜನಾಂಗವನ್ನು ಪರಿಗಣಿಸಬೇಕೆಂದು ವಿನಂತಿ ಮಾಡುತ್ತೇನೆ. ಜೊತೆಗೆ, ಸ್ಮಶಾನ ಕಾರ್ಮಿಕರು. ಈ ಜನಾಂಗದ ಕಾರ್ಮಿಕರು ಬಹಳಷ್ಟು ಕಠಿಣ ಪರಿಸ್ಥಿತಿಯಲ್ಲಿದ್ದಾರೆ. ಆ ಜನಾಂಗಕ್ಕೆ ಯಾವುದೇ ಸೌಲಭ್ಯಗಳು ಇರುವುದಿಲ್ಲ. ಇತ್ತೀಚೆಗೆ ಅವರು ರಾಯಚೂರಿನಲ್ಲಿ ಪ್ರತಿಭಟನೆ ಮಾಡಿರುತ್ತಾರೆ. ಈ ಸ್ಮಶಾನ

ಕಾರ್ಮಿಕರಿಗೆ ಯಾವುದೇ ವೇತನ ಕೂಡ ಇರುವುದಿಲ್ಲ ಮತ್ತು ಸರ್ಕಾರಿ ಸೌಲಭ್ಯಗಳು ಸಹ ಇರುವುದಿಲ್ಲ. ಹಾಗಾಗಿ, ಈ ಎರಡೂ ಜನಾಂಗಗಳನ್ನು ಪರಿಗಣಿಸಿ ಅವರಿಗೆ ಅಗತ್ಯವಾದಂತಹ ಯೋಜನೆಗಳನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳುತ್ತೇನೆ. ಅದಲ್ಲದೇ, ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಬಹಳಷ್ಟು ಬ್ಯಾಕ್‌ಲಾಗ್ ಹುದ್ದೆಗಳು ಬಾಕಿ ಇರುವುದರಿಂದ ಅವುಗಳನ್ನು ಈ ವರ್ಷವೇ ತುಂಬುವಂತಹ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರನ್ನು ಮನವಿ ಮಾಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಗೌರವಾನ್ವಿತ ಮುಖ್ಯಮಂತ್ರಿಗಳು ಒಂದು ಒಳ್ಳೆಯ ಬಜೆಟ್ ಅನ್ನು ಮಂಡನೆ ಮಾಡುವ ಮುಖಾಂತರ ಜನರಿಗೆ ತಮ್ಮ ಹಕ್ಕುಗಳನ್ನು ಸರ್ಕಾರದ ರೆವಿನ್ಯೂ ಏನಿದೆ, ಅದನ್ನು ಎಲ್ಲರಿಗೂ ಹಂಚುವಂತಹ ಮತ್ತು ಸಮಾಜದ ಒಟ್ಟಾರೆ ಅಭಿವೃದ್ಧಿ ಮಾಡುವ ರೀತಿಯಲ್ಲಿ ಇವೊತ್ತಿನ ದಿವಸ ತಮ್ಮ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಅದಕ್ಕಾಗಿ, ನಾನು ಮುಖ್ಯಮಂತ್ರಿಗಳನ್ನು ಅಭಿನಂದಿಸಲೇಬೇಕು. ಏಕೆಂದರೆ, ಒಂದು ಬಜೆಟ್ ಕೊಡುವುದು ಎಂದರೆ, ಆ ಬಜೆಟ್ ಅನುಷ್ಠಾನವಾಗುವಂತಹ ಬಜೆಟ್ ಅನ್ನು ಕೊಡಬೇಕು. ನಾವು ಅನೇಕ ಬಾರಿ ನಮ್ಮ ಬಾಲ್ಯದಿಂದಲೂ ಕೂಡ, ರಾಜಕಾರಣದಲ್ಲಿ ಸ್ವಲ್ಪ ಅಭಿರುಚಿ ಪ್ರತಿ ವರ್ಷದ ಬಜೆಟ್ ಅನ್ನು ಒಂದಲ್ಲಾ ಒಂದು ರೀತಿಯಲ್ಲಿ ವಿಶ್ಲೇಷಣೆ ಮಾಡುತ್ತಾ ಬಂದಿದ್ದೇವೆ. ಪ್ರತಿ ಬಾರಿ ಬಜೆಟ್‌ನಲ್ಲಿ ಅನೇಕ ಯೋಜನೆಗಳ ಘೋಷಣೆಗಳಾಗುತ್ತವೆ. ಆದರೆ, ಆ ಕೆಲಸ-ಕಾರ್ಯಗಳು ಎಷ್ಟೋ ವರ್ಷಗಳಾದರೂ ಅವು ಅನುಷ್ಠಾನವಾಗುವುದಿಲ್ಲ. ಉದಾಹರಣೆಗೆ, ನಮ್ಮ ಊರಿನಲ್ಲಿ ಒಂದು ಸ್ವಯಂಚಾಲಿತ ಡ್ರೈವಿಂಗ್ ಟ್ರ್ಯಾಕ್ ಎಂದು ಮಾಡಿದರು. ಅದು ಅನುಷ್ಠಾನವಾಗುವುದಕ್ಕೆ ಸುಮಾರು ಹತ್ತು ವರ್ಷಗಳು ಸಮಯ ಆಗಿರುತ್ತದೆ. ಹಾಗಾಗಿ, ಈ ವರ್ಷದ ಬಜೆಟ್‌ನಲ್ಲಿ ಏನೆಲ್ಲಾ ಯೋಜನೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ, ಆ ಎಲ್ಲಾ ಘೋಷಣೆಗಳು ಅನುಷ್ಠಾನವಾಗುವಂಥದ್ದಾಗಿವೆ. ಅಂದರೆ, ಆ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುವಂತಹ ಬಜೆಟ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ಸಾಲಿನ ಆಯವ್ಯಯದ ಮೇಲೆ ಹಲವಾರು ಮುಖ್ಯ ಅಂಶಗಳು ಚರ್ಚೆಯಾಗಿವೆ. ಅದರಲ್ಲಿ ಪ್ರಮುಖವಾಗಿ ಚರ್ಚೆಯಾಗಿರುವುದೇನೆಂದರೆ, ಎಸ್.ಸಿ./ಎಸ್.ಟಿ. ಸಮುದಾಯಕ್ಕೆ ಶೇಕಡ 24.1 ರಷ್ಟು ಅನುದಾನವನ್ನು ಜನಸಂಖ್ಯೆಗೆ ಅನುಗುಣವಾಗಿ ಮೀಸಲಿಟ್ಟಿರುತ್ತಾರೆ. ಅದರಂತೆ, ಸುಮಾರು 42,000/- ಕೋಟಿ ರೂಪಾಯಿಗಳನ್ನು ಒಂದು ಕೋಟಿ ಜನಸಂಖ್ಯೆಗೆ ಅನುಗುಣವಾಗಿ ಈ ಬಜೆಟ್‌ನಲ್ಲಿ ಮೀಸಲಿಟ್ಟಿದ್ದಾರೆ. ಅದೇ ರೀತಿ ಜನಸಂಖ್ಯೆಯ ಆಧಾರದಲ್ಲಿ ಅನುದಾನವನ್ನು ಮೀಸಲಿಡಬೇಕಾದ ಸಂದರ್ಭ ಬಂದಾಗ, ಅಲ್ಪಸಂಖ್ಯಾತರಿಗೂ ಕೂಡ ಜನಸಂಖ್ಯೆ ಆಧಾರದಲ್ಲಿ ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕು ಎನ್ನುವಂತಹ ನಮ್ಮ ಬೇಡಿಕೆ ಕೂಡ ಸರ್ಕಾರಕ್ಕೆ ಇತ್ತು. ಆ ಸಂದರ್ಭದಲ್ಲಿ ನಮ್ಮ ಜನಸಂಖ್ಯೆ ಆಧಾರವಾಗಿ ಕೊಡಬೇಕಾಗಿದರೆ, ಇವೊತ್ತಿನ ದಿವಸ ಶೇಕಡ 14.1 ರಷ್ಟು ಮುಸಲ್ಮಾನರು, ಶೇಕಡ 3 ರಷ್ಟು ಕ್ರಿಶ್ಚಿಯನ್ನರು, ಸಿಖ್ಖರು, ಪಾರ್ಸಿಗಳು ಮತ್ತು ಜೈನರು ಇದ್ದಾರೆ. ಇದು ಒಟ್ಟು ಸೇರಿದರೆ, ಸುಮಾರು ಶೇಕಡ 15 ರಷ್ಟು ಜನಸಂಖ್ಯೆ ಅಲ್ಪಸಂಖ್ಯಾತರು ಆಗುತ್ತಾರೆ. ಆದರೆ, proportionate ಆಗಿ ಕೊಡುವಾಗ ಅವರಿಗೆ

ಕೊಡಬೇಕಾದಂತಹ ಬಜೆಟ್ ಎಷ್ಟು ಎಂದು ಹೇಳಿದರೆ, ಸುಮಾರು 80,000/- ಕೋಟಿ ರೂಪಾಯಿಗಳ ಅನುದಾನ ಮೀಸಲಿಡಬೇಕಾದ ಅನಿವಾರ್ಯತೆ ಇತ್ತು. ಆದರೆ, ಅದನ್ನು ಇವೊತ್ತಿನ ದಿವಸ ಕೊಟ್ಟಿರುವುದಿಲ್ಲ. ಅದರ ಬದಲಾಗಿ, ಇವೊತ್ತಿನ ದಿವಸ ಕೇವಲ 34,000/- ಕೋಟಿ ರೂಪಾಯಿಗಳನ್ನು ಈ ಬಜೆಟ್‌ನಲ್ಲಿ ಮೀಸಲಿಟ್ಟಿರುತ್ತಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, there should be no disparity. ಇವೊತ್ತಿನ ದಿವಸ ಎಸ್.ಸಿ./ಎಸ್.ಟಿ. ಸಮುದಾಯಕ್ಕೆ ಅನುದಾನ ಕೊಡುವಂಥದ್ದರಲ್ಲಿ ನಮಗೆ ಸಂತೋಷವಿದೆ. ಅಂದರೆ, ಒಂದು ಕೋಟಿ ಜನಸಂಖ್ಯೆ ಇರುವಂತಹ ಸಮುದಾಯಕ್ಕೆ 42,000/- ಕೋಟಿ ರೂಪಾಯಿಗಳ ಅನುದಾನವನ್ನು ಮೀಸಲಿಟ್ಟಿದ್ದಾರೆ. ಅದೇ ರೀತಿ, ಕೇಂದ್ರ ಬಜೆಟ್ ಅನ್ನು ತೆಗೆದುಕೊಂಡರೆ (**ಗೊಂದಲ)** ಕೇಂದ್ರದಲ್ಲಿ ಇಪ್ಪತ್ತೆಂಟು ಕೋಟಿಯಿಂದ ಮೂವತ್ತು ಕೋಟಿ ಈ ಸಮುದಾಯದ ಜನಸಂಖ್ಯೆ ಇದೆ. ಈ ಜನಸಂಖ್ಯೆ ಇರುವಂತಹ ಸಮುದಾಯಕ್ಕೆ ಕೇವಲ 52,000/- ಕೋಟಿ ರೂಪಾಯಿಗಳ ಅನುದಾನವನ್ನು ಮೀಸಲಿಡಲಾಗಿದೆ. ಇದು ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಮೀಸಲಿಡಬೇಕಾಗಿದ್ದರೆ, ಸುಮಾರು ಹತ್ತು ಲಕ್ಷ ಕೋಟಿ ಜನಸಂಖ್ಯೆಗೆ ಇಡಬೇಕಾದಂತಹ ಅನುದಾನವನ್ನು ಮೀಸಲಿಡಬೇಕಾಗಿತ್ತು. ಆದರೆ, ಐವತ್ತೆರಡು ಸಾವಿರ ಕೋಟಿ ರೂಪಾಯಿಗಳ ಅನುದಾನವನ್ನು ಮಾತ್ರ ಕೇಂದ್ರದ ಬಜೆಟ್‌ನಲ್ಲಿ ಮೀಸಲಿಟ್ಟಿದ್ದಾರೆ. ಅದು ಹತ್ತು ಲಕ್ಷ ಕೋಟಿ ರೂಪಾಯಿಗಳ ಅನುದಾನ ಮೀಸಲಿಡಬೇಕಾಗಿತ್ತು. ಅಂದರೆ, there is a disparity between the State and Central Governments. ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಬಗ್ಗೆ ಬಹಳಷ್ಟು ಚರ್ಚೆಗಳಾಗಿರುತ್ತವೆ. ಕೇಂದ್ರ ಸರ್ಕಾರ ಅನೇಕ ಯೋಜನೆಗಳು ಉದಾಹರಣೆಗೆ, ನಾವು ಹೋರಾಟ ಮಾಡಿದಂತಹ ಮೇಕೆದಾಟು ಯೋಜನೆ ಇರಬಹುದು ಅಥವಾ ಬೇರೆ ನೀರಾವರಿ ಯೋಜನೆ ಇರಬಹುದು ಅಥವಾ ರೈಲು ಯೋಜನೆಗಳು ಇರಬಹುದು, ರಾಜ್ಯದ ಇಂತಿಂಥ ಯೋಜನೆಗಳಿಗೆ ಕೇಂದ್ರ ಸರ್ಕಾರದಲ್ಲಿ ಮೀಸಲಿಟ್ಟಂತಹ ಬಜೆಟ್‌ನ ಗಾತ್ರವನ್ನು ನಾವು ಅದು ಬಹಳ ಕಡಿಮೆಯಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ಇವೊತ್ತಿನ ದಿವಸ ಕೇಂದ್ರ ಸರ್ಕಾರ ಸಾಕಷ್ಟು ಹಣವನ್ನು ರಾಜ್ಯ ಸರ್ಕಾರಕ್ಕೆ ಕೊಡಬೇಕಾಗಿರುತ್ತದೆ. ಅದನ್ನು ಕೊಡುತ್ತಿಲ್ಲ ಎನ್ನುವುದು ನನ್ನ ಅನಿಸಿಕೆಯಾಗಿದೆ. ಏಕೆಂದರೆ, ಕೇಂದ್ರ ಮತ್ತು ರಾಜ್ಯ ಫೆಡರಲ್ ಸಿಸ್ಟಮ್‌ನಲ್ಲಿ ಏನು ಹಣ ಅಥವಾ ರಾಜಸ್ವ ಬರುತ್ತದೆ, ಅದರಲ್ಲಿ ಶೇಕಡ ಇಂತಿಷ್ಟು ಹಣವನ್ನು ರಾಜ್ಯ ಸರ್ಕಾರಗಳಿಗೆ ಕೊಡುವಂಥದ್ದು ಮತ್ತು ರಾಜ್ಯ ಸರ್ಕಾರಗಳ ಬೆಳವಣಿಗೆಗೆ ಕೊಡಬೇಕಾಗಿರುವುದು ಕೂಡ ಕೇಂದ್ರ ಸರ್ಕಾರದ ಕರ್ತವ್ಯವಾಗಿರುತ್ತದೆ. ಹಾಗಾಗಿ, ಇವೊತ್ತಿನ ದಿವಸ ಕೇಂದ್ರ ಸರ್ಕಾರಕ್ಕೆ ನಮ್ಮ ರಾಜ್ಯದಿಂದ ತೆರಿಗೆ ಪಾವತಿ ವರ್ಷಕ್ಕೆ ಸುಮಾರು ಐದು ಲಕ್ಷ ಕೋಟಿ ರೂಪಾಯಿಗಳಾಗಿರುತ್ತದೆ. ಆದರೆ, ನಮ್ಮ ರಾಜ್ಯಕ್ಕೆ ಬರುವುದು ಕೇವಲ ಐವತ್ತೊಂದು ಸಾವಿರ ಕೋಟಿ ರೂಪಾಯಿಗಳು ಮಾತ್ರ. ಹಾಗಾಗಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ರಾಜ್ಯ ಸರ್ಕಾರಕ್ಕೆ ಬರಬೇಕಾದಂತಹ ಅನುದಾನವನ್ನು ಕೊಡದೇ ಇದ್ದುದರಿಂದ, ರಾಜ್ಯದ ಅಭಿವೃದ್ಧಿಯಲ್ಲಿ ಕುಂಠಿತವಾಗುತ್ತದೆ ಮತ್ತು ರಾಜ್ಯದ ಕಾರ್ಯಕ್ರಮಗಳನ್ನು ಸರಿಯಾಗಿ ನಿರ್ವಹಣೆ ಮಾಡುವುದಕ್ಕೆ ಆಗುತ್ತಿಲ್ಲ ಎಂದು ಹೇಳುವುದು ನನ್ನ ಒಂದು ಭಿನ್ನಹ. ನಮ್ಮ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಸುಮಾರು

2,70,695/- ಕೋಟಿ ರೂಪಾಯಿಗಳ ಕಾಮಗಾರಿಗಳಿಗೆ ಅನುದಾನ ಒದಗಿಸದೇ ಅವುಗಳಿಗೆ ಮಂಜೂರಾತಿ ಕೊಟ್ಟಿರುತ್ತದೆ. ಆ ದುಡ್ಡನ್ನು ಇವೊತ್ತಿನ ದಿವಸ ರಾಜ್ಯ ಸರ್ಕಾರಕ್ಕೆ ಪಾವತಿ ಮಾಡಬೇಕಾಗಿರುತ್ತದೆ. ಹಾಗಾಗಿ ಗುತ್ತಿಗೆದಾರರು, "ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಸುಮಾರು ಮೂವತ್ತು ಸಾವಿರ ಕೋಟಿ ರೂಪಾಯಿಗಳ ಹಣ ಬಾಕಿ ಇದೆ. ಹಾಗಾಗಿ, ಸದರಿ ಹಣವನ್ನು ಬಿಡುಗಡೆ ಮಾಡಬೇಕು" ಎಂದು ಹೇಳಿರುತ್ತಾರೆ. ಇದಕ್ಕೆಲ್ಲಾ ಕಾರಣ ಎಲ್ಲಿಯೋ ಒಂದು ಕಡೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಸಹಕಾರ ನೀಡುತ್ತಿಲ್ಲವೆನ್ನುವುದಾಗಿದೆ.

**ಸಭಾಪತಿಯವರು:-** ಆಯಿತು, ಸಾಕು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಬಹಳ ದೊಡ್ಡ ರೀತಿಯ ಅಭಿವೃದ್ಧಿಯ ಪಥ ಪ್ರಾರಂಭವಾಗಿದೆ. ಇವೊತ್ತಿನ ದಿವಸ ನಮ್ಮ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮೊದಲು, ನಾವು ಜನರಿಗೆ ಏನು ಆಶ್ವಾಸನೆಗಳನ್ನು ಕೊಟ್ಟಿದ್ದೇವೆ ಅದರ ಪ್ರಕಾರ ನಾವು ನಡೆದುಕೊಂಡಿದ್ದೇವೆ. ಗ್ಯಾರಂಟಿ ಯೋಜನೆಗಳನ್ನು ಏತಕ್ಕೆ ಕೊಡುತ್ತೀರಿ? ಗ್ಯಾರಂಟಿ ಯೋಜನೆಗಳಿಗೆ ಏತಕ್ಕಾಗಿ ಹಣ ವ್ಯಯ ಮಾಡುತ್ತೀರಿ? ಗ್ಯಾರಂಟಿ ಯೋಜನೆಗಳಿಗೆ ಹಣ ಕೊಟ್ಟಿರುವುದರಿಂದ ಅಭಿವೃದ್ಧಿ ಆಗುತ್ತಿಲ್ಲ ಎಂದು ಹೇಳುವುದನ್ನು ಒಪ್ಪತಕ್ಕದ್ದಲ್ಲ. ನಾವು ಅಧಿಕಾರಕ್ಕೆ ಬರುವುದಕ್ಕೆ ಮೊದಲೇ ಈ ಗ್ಯಾರಂಟಿ ಯೋಜನೆಗಳನ್ನು ಒಪ್ಪಿಕೊಂಡು ಬಂದಿರುತ್ತೇವೆ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ, ಸಾಕು ಕುಳಿತುಕೊಳ್ಳಿ.

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಸನ್ಮಾನ್ಯ ಮುಖ್ಯಮಂತ್ರಿಗಳಾದಂತಹ ಶ್ರೀ ಸಿದ್ದರಾಮಯ್ಯನವರು ಇಡೀ ದೇಶದಲ್ಲಿ ತಮ್ಮದೇ ಆದಂತಹ ಛಾಪನ್ನು ಮೂಡಿಸಿರುವಂಥವರು. ಹದಿನಾರು ಬಜೆಟ್‌ಗಳನ್ನು ಮಂಡಿಸಿ, ತಮ್ಮ ಬಜೆಟ್‌ನಲ್ಲಿ ಬುದ್ಧ, ಬಸವಣ್ಣ ಮತ್ತು ಡಾ॥ ಬಿ.ಆರ್. ಅಂಬೇಡ್ಕರ್‌ರವರ ಸಿದ್ಧಾಂತವನ್ನು ಅಳವಡಿಸಿರುತ್ತಾರೆ. ಅವರ ಅವಧಿಯಲ್ಲಿ ನಾನು ಒಬ್ಬ ಮಹಿಳೆಯಾಗಿ, 'Sri Siddaramaiah's regime is a women's era' ಎಂದು ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಹಿಳೆಯರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಬದಲಾವಣೆ ಮತ್ತು ಪ್ರಗತಿಗೆ ಅನ್ವಯವಾಗಿರುವಂತಹ ಉತ್ತಮವಾದ ಬಜೆಟ್ ಎಂದು ಇಡೀ ರಾಜ್ಯದ ಮಹಿಳೆಯರು ಮತ್ತು ಅಲ್ಪಸಂಖ್ಯಾತರು ಹಾಗೂ ದೀನದಲಿತರ ಪರವಾಗಿ ಧನ್ಯವಾದಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಹಾತ್ಮ ಗಾಂಧೀಜಿಯವರು ಹೇಳುವ ಹಾಗೆ, ನಮ್ಮ ಎಲ್ಲಾ ಪ್ರಯತ್ನಗಳು ಹೇಗಿರಬೇಕು ಎಂದರೆ, ಕಟ್ಟಕಡೆಯಲ್ಲಿರುವಂತಹ ಮನುಷ್ಯನಿಗೆ ಅದು ತಲುಪುವಂತಿರಬೇಕು. ಬಡವನ ಬಗ್ಗೆ ಚಿಂತನೆ ಮಾಡಬೇಕು. ಅವನು ಸಾಮಾಜಿಕವಾಗಿ, ಆರ್ಥಿಕವಾಗಿ ಮುಖ್ಯ ವಾಹಿನಿಗೆ ಬರಬೇಕು. ತನ್ನ ಜೀವನವನ್ನು ಸುಧಾರಿಸಬೇಕಾದರೆ, ಯಾವುದೇ ಸರ್ಕಾರ ಇಲ್ಲಿ ಅವರ ಬಗ್ಗೆ ಚಿಂತನೆ ಮಾಡಬೇಕಾಗಿರುತ್ತದೆ. ನಮ್ಮ ಮುಖ್ಯಮಂತ್ರಿಯವರು ಮಂಡಿಸಿರುವಂತಹ ಬಜೆಟ್ ಕಟ್ಟಕಡೆಯಲ್ಲಿರುವಂತಹ ಬಡವನಿಗೆ ಪೂರಕವಾಗಿರುವಂತಹ ಬಜೆಟ್ ಆಗಿದೆ. ಇದು ಕೇವಲ ಮಾತಿಗೋಸ್ಕರ ಅಲ್ಲ, ಎಲ್ಲಾ ಕ್ಷೇತ್ರದಲ್ಲಿ, ಎಲ್ಲಾ ಜನಾಂಗಕ್ಕೆ ಅದು ಅಲ್ಪಸಂಖ್ಯಾತರು ಇರಬಹುದು,

ದೀನದಲಿತರು ಇರಬಹುದು, ಮಹಿಳೆಯರು ಇರಬಹುದು, ಇವೆರಲ್ಲರ ಪರವಾಗಿ ಇದೊಂದು ಉತ್ತಮವಾದ ಬಜೆಟ್ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹಳಷ್ಟು ಮಾನ್ಯ ಸದಸ್ಯರು ಮಾತನಾಡುತ್ತಾ, ಇದು ಅಲ್ಪಸಂಖ್ಯಾತರ ಪರವಾಗಿರುವಂತಹ ಹಾಗೂ ಅವರ ಮನವೊಲಿಸಲು ಮಂಡಿಸಿರುವಂತಹ ಬಜೆಟ್ ಇದಾಗಿದೆ ಎಂದು ಹೇಳಿರುತ್ತಾರೆ.

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಿಲ್‌ಗಳನ್ನು ತೆಗೆದುಕೊಳ್ಳಿ.

**ಸಭಾಪತಿಯವರು:–** ಬಿಲ್ ತೆಗೆದುಕೊಳ್ಳುತ್ತೇವೆ. ಆದರೆ, ಬಜೆಟ್ ಮೇಲೆ ಅವರು ಮಾತನಾಡಲಿ.

**ಶ್ರೀಮತಿ ಬಲ್ಕೀಸ್ ಬಾನು:–** ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಶೇಕಡ 14 ರಷ್ಟು ಇರುವಂತಹ ಅಲ್ಪಸಂಖ್ಯಾತರಿಗೆ ಶೇಕಡ 1 ರಷ್ಟು ಅನುದಾನವನ್ನು ಮೀಸಲಿಟ್ಟಿರುವಂತಹ ಬಜೆಟ್‌ಗೆ ನಾವು ಆ ಇಲಾಖೆಯಿಂದ ನಮ್ಮ ಮುಖ್ಯಮಂತ್ರಿಯವರು ಏನೇನು ಯೋಜನೆಗಳು ಮಾಡಿದರೆ, ಈ ಜನಾಂಗಕ್ಕೆ ಸೇರಿರುವಂತಹ ಜನ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮುಂದೆ ಬರುತ್ತಾರೆ ಎನ್ನುವುದನ್ನು ತಲೆಯಲ್ಲಿ ಇಟ್ಟುಕೊಂಡು ಅವರ ಎಲ್ಲಾ ಅಧಿಕಾರಿ ಮಿತ್ರರ ಜೊತೆ ಸಮಾಲೋಚನೆ ಮಾಡಿ, ಈ ಜನಾಂಗವನ್ನು ಮುಖ್ಯವಾಹಿನಿಗೆ ತರಬೇಕೆಂದು ಈ ಬಜೆಟ್ ಅನ್ನು ಮಂಡಿಸಿರುತ್ತಾರೆ.

(ಮುಂದು)

(579) 21.03.2025 4.30 ವೈಎಲ್–ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಬಲ್ಕೀಸ್ ಬಾನು (ಮುಂದು):**

ಬಹಳಷ್ಟು ಜನ ಮನವೊಲಿಸುವ ಸಲುವಾಗಿ 'ಟೈರ್ ಪಂಚರ್ ಶಾಪ್‌ನವರಿಗೆ, ಗುಜರಿ ಅಂಗಡಿಯವರಿಗೆ, ಹಣ್ಣು ಮಾರಾಟ ಮಾಡುವವರಿಗೆ ತಂದಿರುವಂಥ ಬಜೆಟ್' ಎಂದು ಹೇಳುತ್ತಾರೆ. ಸಾಮಾಜಿಕ ವ್ಯವಸ್ಥೆಯಲ್ಲಿರುವ ಜನಾಂಗದ ಬಗ್ಗೆ ಸರ್ಕಾರ ಅರ್ಥಮಾಡಿಕೊಂಡು ಬೇಕಾದ ಯೋಜನೆ ಜಾರಿಗೆ ತಂದರೆ, ಅದನ್ನು ಟೀಕೆ–ಟಿಪ್ಪಣಿ ಮೂಲಕ ಬಹಿರಂಗವಾಗಿ ಚರ್ಚೆ ಮಾಡುತ್ತಾರೆ. ಪಂಚರ್ ಶಾಪ್‌ನವರು ಇಲ್ಲವೆಂದರೆ, ವಾಹನಗಳಿಗೆ ಪಂಚರ್ ಹಾಕುವವರು ಯಾರು ಇರುವುದಿಲ್ಲ ಮತ್ತು ಗ್ಯಾರೇಜ್‌ನಲ್ಲಿ ಕೆಲಸ ಮಾಡುವವರು ಇಲ್ಲವೆಂದರೆ, ವಾಹನವನ್ನು ರಿಪೇರಿ ಮಾಡುವವರು ಯಾರು ಇರುವುದಿಲ್ಲ. ಹಣ್ಣು ಮಾರಾಟ ಮಾಡುವವರು ಇಲ್ಲವೆಂದರೆ, ದೇಹಕ್ಕೆ ಪೌಷ್ಟಿಕಾಂಶ ಸಿಗುವುದಿಲ್ಲ. ಹಾಗಾಗಿ, ಚುಚ್ಚಿ ಮಾತನಾಡುವುದನ್ನು ಬಿಟ್ಟು, ಸಮಾಜದಲ್ಲಿ ಯಾರು ತುಳಿತಕ್ಕೆ, ಶೋಷಣೆಗೆ ಒಳಗಾಗಿದ್ದಾರೆ, ಅವರನ್ನು ಮುಖ್ಯವಾಹಿನಿಗೆ ತರುವ ಚಿಂತನೆ ಮಾಡಿದ ಮಹಾನ್ ವ್ಯಕ್ತಿ ಈ ದೇಶದಲ್ಲಿ ಯಾರೆಂದರೆ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ಎನ್ನುವುದನ್ನು ಘಂಟಾಘೋಷವಾಗಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ನನ್ನ ಸಹೋದರಿಯಾದ ಶ್ರೀಮತಿ ಭಾರತಿ ಶೆಟ್ಟಿರವರು ಕೇವಲ ಅಲ್ಪಸಂಖ್ಯಾತರಿಗೆ ಮಾತ್ರ ಏತಕ್ಕೆ ಕಾಲೇಜುಗಳನ್ನು ತೆರೆಯಬೇಕೆಂದು ಹೇಳಿದ್ದರು. ನಾನು ಸಹ ಹೇಳುವುದೇನೆಂದರೆ, ಬೇರೆ ಜನಾಂಗದವರು ಬರಬೇಕು. ಹಿಂದೂ, ಮುಸ್ಲಿಂ, ಸಿಖ್ ಎಲ್ಲರೂ ಕೂಡ ಈ ದೇಶದ ಪ್ರಜೆಗಳು ಎನ್ನುವ ಭಾವನೆಯನ್ನು ಹೊಂದಿ, ಪ್ರೀತಿ–

ವಿಶ್ವಾಸದಿಂದ ಎಲ್ಲರ ಜೊತೆ ಒಂದಾಗಿರಬೇಕು ಎಂದಿರುತ್ತೇವೆ. ಆದರೆ, ಹಿಜಾಬ್, ಹಲಾಲ್‌ಕಟ್ ಎಂದು ಹೇಳುವ ಮೂಲಕ ಒಂದಲ್ಲಾ ಒಂದು ವಿಚಾರವನ್ನು ತೆಗೆದು, ನಾವು ಧರಿಸುವ ಬಟ್ಟೆಯ ಸಮೇತ ನಮ್ಮನ್ನು ನೋಡಿ ವಿಂಗಡಿಸುತ್ತಾರೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು ಹೇಳಿದ ವಿಚಾರವೇ ಬೇರೆಯಾಗಿದ್ದು, ಈ ರೀತಿ ಮಾನ್ಯ ಬಲ್ಕೀಸ್ ಬಾನುರವರು ಮಾತನಾಡುವುದು ಸರಿಯಾಗಿಲ್ಲ.

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, 'ಸರ್ವರಿಗೂ ಸಮಪಾಲು; ಸರ್ವರಿಗೂ ಸಮಬಾಳು' ಕೊಡುವಂಥದಾಗಬೇಕು. ಯಾರಿಗೂ ಟೀಕೆ ಮಾಡಲು ಮಾತನಾಡುತ್ತಿಲ್ಲ.

**ಶ್ರೀಮತಿ ಬಲ್ಕೀಸ್ ಬಾನು:–** ಮಾನ್ಯ ಸಭಾಪತಿಯವರೇ, ಮಕ್ಕಳಿಗೆ ಪರೀಕ್ಷೆಯ ಬರೆಯಲು ಶಾಲಾ–ಕಾಲೇಜಿಗೆ ಹೋದರೆ 'ಹಿಜಾಬ್ ಹಾಕಿಕೊಂಡಿದ್ದೀರಿ' ಎಂದು ವಾಪಸ್ಸು ಕಳುಹಿಸುತ್ತಾರೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಕುಂಬಳಕಾಯಿ ಕಳ್ಳ ಎಂದರೆ, ಹೆಗಲು ಮುಟ್ಟಿ ನೋಡಿಕೊಳ್ಳಬಾರದು. **(ಗೊಂದಲ)** ಏನೇನೋ ಮಾತನಾಡಬಾರದು. ಈ ರೀತಿ ಎಲ್ಲಾ ಮಾನ್ಯ ಸದಸ್ಯರು ಮಾತನಾಡಬಾರದು.

**ಶ್ರೀಮತಿ ಬಲ್ಕೀಸ್ ಬಾನು:–** ಮಾನ್ಯ ಸಭಾಪತಿಯವರೇ, ಈ ಜನಾಂಗದ ಹೆಣ್ಣು ಮಕ್ಕಳಿಗೋಸ್ಕರ, ಈ ಜನಾಂಗದ ಆರ್ಥಿಕ ಸಬಲೀಕರಣಕ್ಕಾಗಿ ವಿದ್ಯಾಭ್ಯಾಸದಲ್ಲಿ ಕೊರತೆಯಾಗಬಾರದು. ಒಳ್ಳೆಯ ವಾತಾವರಣ ಕೊಡುವುದರ ಮೂಲಕ ಪಾಠವನ್ನು ಮಾಡಬೇಕಾದರೆ,...

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ಇಬ್ಬರೂ ಕುಳಿತುಕೊಳ್ಳಿ.

**ಶ್ರೀಮತಿ ಬಲ್ಕೀಸ್ ಬಾನು:–** ಮಾನ್ಯ ಸಭಾಪತಿಯವರೇ, ಒಬ್ಬ ಶಿಕ್ಷಕಿಯಾಗಿ ಹೇಳುವುದಾದರೆ, all are equal. ಈ ಸಮಾಜದಲ್ಲಿ ಎಲ್ಲರೂ ಸಮಾನರು. 'ಸಾರೇ ಜಹಾ ಸೆ ಅಚ್ಛಾ ಹಿಂದೂಸ್ಥಾನ್ ಹಮಾರಾ ಹಮ್ ಬುಲ್‌ಬುಲೇನ್ ಹೈ ಇಸ್ ಕಿ ಯೇ ಗುಲ್‌ಸಿತಾ ಹಮಾರಾ' ಎಂದು ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಪಂಡಿತ್ ಜವಾಹರಲಾಲ್ ನೆಹರೂರವರು ಹೇಳಿದ್ದಾರೆ. ಈ ದೇಶವನ್ನು ಯಾವ ರೀತಿ ವಿಂಗಡಣೆ ಮಾಡಿದ್ದಾರೆ ಎಂದರೆ, ಒಂದು ಹೂವಿನ ಗುಚ್ಛದಂತೆ ಹಿಂದೂ, ಮುಸಲ್ಮಾನರು, ಕ್ರೈಸ್ತರು ಎಲ್ಲರೂ ಒಳಗೊಂಡಂತೆ ವಿಭಿನ್ನವಾಗಿರುವ ಹೂವುಗಳನ್ನು ಕಟ್ಟಿದ್ದರೆ ಹೇಗೆ ಬಿಂದಾಸ್ ಆಗಿರುತ್ತದೆ, ಆ ರೀತಿ ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಪಂಡಿತ್ ಜವಾಹರಲಾಲ್ ನೆಹರೂರವರು ತೋರಿಸಿರುವ ಸಿದ್ಧಾಂತದ ಹಾಗೆ ಈ ಆಯವ್ಯಯವು ಎಲ್ಲಾ ಜನಾಂಗದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಪೂರಕವಾಗಿರುವ ಆಯವ್ಯಯ ಎಂದು ಹೇಳುತ್ತಾ, ಇಡೀ ರಾಜ್ಯದ ಹೆಣ್ಣುಮಕ್ಕಳ ಪರವಾಗಿ ಮನಸ್ಫೂರ್ತಿಯಾಗಿ ಸ್ವಾಗತಿಸುತ್ತೇನೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಾನು ಆಯವ್ಯಯದ ಮೇಲೆ ಮಾತನಾಡಲು ಹೆಚ್ಚು ಸಮಯ ತೆಗೆದುಕೊಳ್ಳಲು ಹೋಗುವುದಿಲ್ಲ. 2025ರ ಆಯವ್ಯಯ ಸಾಕಷ್ಟು ಪ್ರಥಮಗಳಿಗೆ ಸಾಕ್ಷಿಯಾಗಿರುವ ಆಯವ್ಯಯ ಎಂದು ಹೇಳಿ ಮಂಡಿಸಲು ಇಚ್ಛಿಸುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಸದನಕ್ಕೆ ಆಗಮಿಸಿರುವುದರಿಂದ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳಿ.

**ಸಭಾಪತಿಯವರು:–** ನನ್ನ ಹತ್ತಿರ ಆಯವ್ಯಯದ ಮೇಲೆ ಮಾತನಾಡುವವರ ಪಟ್ಟಿ ಇದೆ. ಹಾಗಾಗಿ, ಅದರಂತೆ ಮಾನ್ಯ ಡಿ.ಟಿ.ಶ್ರೀನಿವಾಸ್‌ರವರಿಗೆ ಆಯವ್ಯಯದ ಮೇಲೆ ಮಾತನಾಡಲು ಅವಕಾಶ ಕಲ್ಪಿಸಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವೆಲ್ಲರೂ ನಿನ್ನೆ ದಿವಸ ಅರ್ಧ ರಾತ್ರಿವರೆಗೂ ಬಜೆಟ್ ಮೇಲೆ ಚರ್ಚೆ ಮಾಡಿ, ಕೇಳಿದ್ದೇವೆ. ಆಡಳಿತ ಪಕ್ಷದವರಿಗೆ ಇವಾಗ ಬಜೆಟ್ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್):–** ಮಾನ್ಯ ಸಭಾಪತಿಯವರೇ, 2025–26ನೇ ಸಾಲಿನ ಆಯವ್ಯಯವು ಸಾಕಷ್ಟು ಪ್ರಥಮಗಳಿಗೆ ಸಾಕ್ಷಿಯಾಗಿರುವ ಆಯವ್ಯಯವಾಗಿದ್ದು, 2.0 ಕಾಂಗ್ರೆಸ್ ಸರ್ಕಾರ ಎಂದು ಹೇಳಲು ಇಷ್ಟಪಡುತ್ತೇನೆ. ರೂ.4,09,549 ಕೋಟಿಗಳಷ್ಟು ಅನುದಾನ ಒಳಗೊಂಡಿರುವ ಬೃಹತ್ ಬಜೆಟ್‌ನಲ್ಲಿ ಮೂಲಸೌಕರ್ಯ ಅಭಿವೃದ್ಧಿಗಾಗಿ ರೂ.8,000 ಕೋಟಿ ಮೀಸಲಿಟ್ಟಿರುವುದರಲ್ಲಿ ವಿರೋಧ ಪಕ್ಷದವರು ಸೇರಿರುತ್ತಾರೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಮಾತನಾಡುವ ಸಂದರ್ಭದಲ್ಲಿ ಹೇಳಿದ್ದರು. ಭಾರತದ GDP (Gross Domestic Product) ಕೊಡುಗೆ ಏನು, ಅದೇ ರೀತಿ asset creation ನಲ್ಲಿ ಏನೇನು ಆಗಿದೆ ಎಂಬುದರ ಬಗ್ಗೆ ಉಲ್ಲೇಖ ಮಾಡಲು ಹೋಗುವುದಿಲ್ಲ. ಮಾನ್ಯ ಎನ್.ರವಿಕುಮಾರ್ ಹಾಗೂ ಮಾನ್ಯ ತಳವಾರ್ ಸಾಬಣ್ಣನವರು ಈಗಾಗಲೇ ಮಾತನಾಡಿದ್ದು, ಈ ಆಯವ್ಯಯವು ಸಾಕಷ್ಟು ಪ್ರಥಮಗಳಿಗೆ ಸಾಕ್ಷಿಯಾಗಿದೆ ಎಂಬುದನ್ನು ಹೇಳಲಿಚ್ಛಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಡಿ.ಟಿ.ಶ್ರೀನಿವಾಸ್‌ರವರೇ, ತಾವು ಆಯವ್ಯಯದ ಮೇಲೆ ಮಾತನಾಡಿ, ಅದನ್ನು ಬಿಟ್ಟು ಮಾನ್ಯ ಸದಸ್ಯರ ಹೆಸರುಗಳನ್ನು ಏತಕ್ಕೆ ಉಲ್ಲೇಖ ಮಾಡುತ್ತೀರಿ?

**ಶ್ರೀ ಡಿ.ಟಿ.ಶ್ರೀನಿವಾಸ್:–** ಮಾನ್ಯ ಸಭಾಪತಿಯವರೇ, ಅವರಿಗೂ ಕೆಲವೊಂದು ವಿಚಾರಗಳನ್ನು ಹೇಳಲೇಬೇಕಾಗುತ್ತದೆ. ಏಕೆಂದರೆ, 7 ವರ್ಷಗಳ ಹಿಂದೆ ಅತೀ ಹಿಂದುಳಿದ ವರ್ಗಗಳ,...

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ನಾವು ಆಯವ್ಯಯದ ಮೇಲೆ ಮಾತನಾಡುವಾಗ ಎರಡೇ ಎರಡು ಸ್ಪಷ್ಟೀರಣಕ್ಕೆ ಅಷ್ಟೇ ಅವಕಾಶ ಕಲ್ಪಿಸಲಾಗಿದ್ದು, ಆಡಳಿತ ಪಕ್ಷದವರು ಉದ್ದವಾಗಿ ಭಾಷಣ ಮಾಡುತ್ತಾರೆ. ನಾವು ಆಯವ್ಯಯ ಭಾಷಣದ ಮೇಲೆ ಚರ್ಚೆ ಮಾಡಲು ತಯಾರಾಗಿ ಬಂದಿಲ್ಲವೇ?

**ಶ್ರೀ ಡಿ.ಟಿ.ಶ್ರೀನಿವಾಸ್:–** ಮಾನ್ಯ ಸಭಾಪತಿಯವರೇ, ನಾನು ಭಾಷಣ ಮಾಡುತ್ತಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಸದನಕ್ಕೆ ಆಗಮಿಸಿದ್ದು, ಒಂದೆರಡು ಸ್ಪಷ್ಟೀಕರಣವನ್ನು ನೀಡೋಣ ಎಂದುಕೊಂಡರೆ, ಆಡಳಿತ ಪಕ್ಷದವರು ಉದ್ದವಾಗಿ ಭಾಷಣ ಮಾಡುತ್ತಾರೆ. ಇದು ಯಾವ ನ್ಯಾಯ?

**ಸಭಾಪತಿಯವರು:–** ಮಾನ್ಯ ಭಾರತಿ ಶೆಟ್ಟಿರವರೇ, ಆಡಳಿತ ಪಕ್ಷದವರು ಸ್ಪಷ್ಟೀಕರಣ ನೀಡುವ ಸಲುವಾಗಿಯೇ ಮಾತನಾಡುತ್ತಿರುವುದು.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಈ ಸರ್ಕಾರದಲ್ಲಿ ನ್ಯಾಯ ಎಂಬುದು ಕುಗ್ಗಿ ಹೋಗಿದೆ.

**ಶ್ರೀ ಡಿ.ಟಿ.ಶ್ರೀನಿವಾಸ್:–** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲು ಸದನಕ್ಕೆ ಬಂದಿರುವಾಗ ಏತಕ್ಕೆ ಬಜೆಟ್ ಮೇಲೆ ಮಾತನಾಡಲು ಅವಕಾಶ ಕಲ್ಪಿಸಬೇಕು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಅವರ ಮುಖ್ಯಮಂತ್ರಿಗಳೇ ನಮ್ಮ ಮುಖ್ಯಮಂತ್ರಿಗಳು. ಹಾಗಾಗಿ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಸದನಕ್ಕೆ ಬಂದಾಗ ಮಾನ್ಯ ಡಿ.ಟಿ.ಶ್ರೀನಿವಾಸ್‌ರವರು ಸುಮ್ಮನೆ ಇರಬೇಕು.

**ಶ್ರೀ ಡಿ.ಟಿ.ಶ್ರೀನಿವಾಸ್:–** ಮಾನ್ಯ ಸಭಾಪತಿಯವರೇ, ಆಯವ್ಯಯದ ಮೇಲೆ ಮಾತನಾಡಲು ಯಾರಿಗೂ ಅವಕಾಶ ಕಲ್ಪಿಸಿರಲಿಲ್ಲವೆಂದರೆ, ನಾನು ಸಹ ಮಾತನಾಡುತ್ತಿರಲಿಲ್ಲ. ಈಗಾಗಲೇ ಪಟ್ಟಿಯಲ್ಲಿರುವಂತೆ ಎಲ್ಲರಿಗೂ ಮಾತನಾಡಲು ಅವಕಾಶ ಕಲ್ಪಿಸಿದ್ದು, ನನ್ನ ಹೆಸರು ಕೂಡ ಪಟ್ಟಿಯಲ್ಲಿರುವುದರಿಂದ ದಯವಿಟ್ಟು ನನ್ನ ಮಾತನ್ನು ತಡೆಯಬೇಡಿ. 7 ವರ್ಷಗಳ ಹಿಂದೆ ಅತೀ ಹಿಂದೂಳಿದ ಜನಾಂಗದವರನ್ನು ಮುಂದಕ್ಕೆ ತರಬೇಕೆಂದು ಒಂದು ಸಂಘಟನೆ ಮಾಡಿ, ರಾಜ್ಯ ಪೂರ್ತಿ ಸುತ್ತಿದ್ದೆವು. 20 ಅಂಶಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಮೂಲಕ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಸಂಘಟನೆ ಮಾಡಿದ್ದೆವು. ಅದರ ಸಂಪೂರ್ಣ ಅರಿವು ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರಿಗೆ ಇದೆ. ಈ ಹಿಂದೆ ಅಧಿಕಾರದಲ್ಲಿದ್ದ ಬಿ.ಜೆ.ಪಿ. ಸರ್ಕಾರದ ಮುಂದೆ ಹೋಗಿ ಈ 20 ಅಂಶಗಳ ಕಾರ್ಯಕ್ರಮವನ್ನು ಮುಂದಿಟ್ಟು ‘ಪ್ರವರ್ಗ–1 ರ ಜಾತಿಗಳಿಗೆ ನೀವುಗಳು ಗುತ್ತಿಗೆಯಲ್ಲಿ ಅವಕಾಶ ಕೊಡಿ’ ಎಂದು ಪರಿಪರಿಯಾಗಿ ಕೇಳಿಕೊಂಡೆವು. ಆದರೆ, ಅವಕಾಶ ಕೊಡಲಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಆಯವ್ಯಯ ಭಾಷಣದ ಮೇಲೆ ಎಲ್ಲವನ್ನೂ ಕೇಳಿದ್ದು, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಸದನಕ್ಕೆ ಆಗಮಿಸಿರುವುದರಿಂದ

ವಿಧೇಯಕವನ್ನು ತೆಗೆದುಕೊಳ್ಳಿ, ನಾವು ವಿಧೇಯಕದ ಮೇಲೆ ಚರ್ಚೆ ಮಾಡಲು ತಯಾರಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಿದ ಮೇಲೆ ಮತ್ತೆ ಮಾಡನಾಡಲು ಇನ್ನೇನು ಉಳಿದಿದೆ?

**ಸಭಾಪತಿಯವರು:–** ಮಾನ್ಯ ಡಿ.ಟಿ.ಶ್ರೀನಿವಾಸ್‌ರವರಿಗೆ ಮಾತನಾಡಲು ಈಗಾಗಲೇ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಡಿ.ಟಿ.ಶ್ರೀನಿವಾಸ್:–** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ. ನಾನು ಸಂಪೂರ್ಣವಾಗಿ ಮಾತನಾಡುವಾಗ ಅಡ್ಡಿಪಡಿಸುವುದು ಬೇಡ. ವಿರೋಧ ಪಕ್ಷದವರು ಮಾತನಾಡುವಾಗ ನಾನು ಅಡ್ಡಿಪಡಿಸಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡಲಿ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳಿ.

**ಶ್ರೀ ಡಿ.ಟಿ.ಶ್ರೀನಿವಾಸ್:–** ಮಾನ್ಯ ಸಭಾಪತಿಯವರೇ, ಅತೀ ಹಿಂದುಳಿದ ವರ್ಗವಾದ ಪ್ರವರ್ಗ–1 ರವರಿಗೆ industrial reservation ಕೇಳಿದ್ದೆವು. ಸುಮಾರು 4 ವರ್ಷಗಳ ಕಾಲ ಸತತವಾಗಿ ಪ್ರತಿಭಟನೆ ಮಾಡಿದ್ದೆವು. ಆದರೆ, ನಮ್ಮ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ಅದನ್ನು 20 ಪರ್ಸೆಂಟ್ ಮಾಡಿಕೊಟ್ಟರು. ಭೂ ಒಡೆತನದ ಯೋಜನೆಯನ್ನು ಅಲೆಮಾರಿ ಜನಾಂಗದವರಿಗೆ ತಂದುಕೊಟ್ಟು, ಅವರಿಗೆ ರೂ.100 ಕೋಟಿಗಳನ್ನು ಅಭಿವೃದ್ಧಿಗಾಗಿ ಕೊಟ್ಟಿದ್ದಾರೆ. ಆದರೆ, ಅತೀ ಹಿಂದೂಳಿದ ವರ್ಗವಾದ ಪ್ರವರ್ಗ–1 ಅನ್ನು ಆಯವ್ಯಯ ಪುಸ್ತಕದಲ್ಲಿ ತರುವಂಥ ಪ್ರಾಮಾಣಿಕ ಪ್ರಯತ್ನ ಮಾಡಿದ್ದೆವು. ಹಾಗಾಗಿ, ಬಿ.ಜೆ.ಪಿ.ಯವರು failure ಆದ ಪ್ರಯುಕ್ತ ವಿರೋಧ ಪಕ್ಷದ ಕಡೆ ಕುಳಿತಿದ್ದಾರೆ. ನಾವು ಇಲ್ಲಿ ಬಂದು ಕೇಳಿಕೊಂಡಿರುವ ಕಾರಣ ನಮ್ಮ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರು 10 ಅಂಶಗಳ ಕಾರ್ಯಕ್ರಮವನ್ನು ಮಾಡಿಕೊಟ್ಟಿದ್ದಾರೆ. ಹಾಗಾಗಿ, ಅತೀ ಹಿಂದೂಳಿದ ವರ್ಗದಲ್ಲಿ ಸುಮಾರು 95 ಜಾತಿಗಳು ಹಾಗೂ 376 ಉಪ ಜಾತಿಗಳೇನಿವೆ, ಸದಾ ಅವರಿಗೆ ಚಿರಋಣಿಯಾಗಿರುತ್ತೇವೆ ಎಂದು ಹೇಳಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಡಿ.ಟಿ.ಶ್ರೀನಿವಾಸ್‌ರವರೇ ತಾವು ಮಾತನಾಡಿದ್ದು ಸಾಕು ಕುಳಿತುಕೊಳ್ಳಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಅವರು ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ 40 ಅಂಶಗಳ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ನನಗೆ ಗೊತ್ತಿದೆ. ಅವರು 10 ಅಂಶಗಳಿಗೆ ಸಂಬಂಧಿಸಿದಂತೆ ಹೇಳಿದರೆ, ನಾವು 40 ಅಂಶಗಳಿಗೆ ಸಂಬಂಧಿಸಿದಂತೆ ಹೇಳುತ್ತೇವೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಯಾರು ನಮಗೆ ಸಹಾಯ ಮಾಡಿದ್ದಾರೆ, ನಾವು ಅವರ ಜೊತೆಯಲ್ಲಿರುತ್ತೇವೆ, ಅದನ್ನು ಯಾರು ಕೂಡ ತಡೆಯಲಿಕ್ಕೆ ಆಗುವುದಿಲ್ಲ. ಆ ನಿಟ್ಟಿನಲ್ಲಿ ಮನಗಂಡು ಕೆ.ಟಿ.ಪಿ.ಪಿ. ಕಾಯ್ದೆಯೊಳಗೆ ಪಾರದರ್ಶಕವಾಗಿ ಸಪ್ಲೈಗೆ ಒಂದು ಕೋಟಿ ವರೆಗೂ ಅವಕಾಶ ಮಾಡಿಕೊಟ್ಟಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಡಿ.ಟಿ.ಶ್ರೀನಿವಾಸ್‌ರವರೇ, ತಮಗೆ ಎಷ್ಟು ಸಲ ಹೇಳಬೇಕು ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ಅಷ್ಟು ಸಲ ಹೇಳಿದ್ದರೂ ಮಾನ್ಯ ಡಿ.ಟಿ.ಶ್ರೀನಿವಾಸ್‌ರವರು ಪೀಠಕ್ಕೂ ಗೌರವ ಕೊಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಆಗಮಿಸಿದ್ದು, ಮಾನ್ಯ ಸದಸ್ಯರು ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ನೋಡಿ.

**ಶ್ರೀ ಡಿ.ಟಿ.ಶ್ರೀನಿವಾಸ್:–** ಮಾನ್ಯ ಸಭಾಪತಿಯವರೇ, ಸಾಕಷ್ಟು ಪ್ರಥಮಗಳಿಗೆ ಸಾಕ್ಷಿಯಾಗಿರುವ ಆಯವ್ಯಯವಾಗಿದ್ದು, ಅದರ ಕೀರ್ತಿ ನಮ್ಮ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರಿಗೆ ಸಲ್ಲುತ್ತದೆ. ಯಾರು ಮಾಡದೇ ಇರುವಂಥ ಕೆಲಸವನ್ನು ನಮ್ಮ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ಮಾಡಿರುವುದರಿಂದ ಧನ್ಯವಾದ ಮತ್ತು ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ಖಂಡಿತವಾಗಿ ಸಮಾಜದಲ್ಲಿ ನುಡಿದಂತೆ ನಡೆದ ಬಜೆಟ್ ಎಂದು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**16. "ಕೆಳಮನೆಯಲ್ಲಿ ಸಚಿವ ಸಂಪುಟದ ಸದಸ್ಯರೊಬ್ಬರು ಹನಿಟ್ರ್ಯಾಪ್‌ಗೆ ಒಳಗಾಗಿರುವ ವಿಚಾರ ಪ್ರಸ್ತಾಪಿಸಿದ್ದು, ಈ ಕುರಿತು ಸರ್ಕಾರ ಉತ್ತರಿಸಬೇಕೆನ್ನುವ ಬಗ್ಗೆ."**

---

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ಪ್ರಸ್ತಾಪ ಇದೆ. ಬೆಳಗ್ಗೆ ನಾವು ಒಂದು ವಿಚಾರವನ್ನು ಪೀಠಕ್ಕೆ ಅರ್ಪಿಸಿದ್ದೇವೆ. ಅದೇನೆಂದರೆ, ಇಡೀ ರಾಜ್ಯದಲ್ಲಿ ಒಂದು ಗೊಂದಲದ ವಾತಾವರಣ ಇದೆ.

**ಸಭಾಪತಿಯವರು:–** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ಮೊದಲು ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಲಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಿದ ಮೇಲೆ ಮಾತನಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರೇ, ತಾವು ಉತ್ತರವನ್ನು ನೀಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟು ಹೊರಟು ಹೋಗುತ್ತಾರೆ. ಆದರೆ, ನಮಗೆ ರಿಪ್ಲೈ ಬೇಕಲ್ಲವೇ? ಇಡೀ ರಾಜ್ಯದಲ್ಲಿ,...

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ವಿರೋಧ ಪಕ್ಷದ ಸದಸ್ಯರು ಬೆಳಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ. ಮತ್ತೆ ಈಗ ಇವರಿಗೆ ಮಾತನಾಡಲು ಅವಕಾಶ ನೀಡಿದರೆ ಬೆಳಗಿನ ವಿಚಾರವನ್ನು ಪ್ರಸ್ತಾಪ ಮಾಡಿ, ಮತ್ತೆ ವಿರೋಧ ಪಕ್ಷದ ಸದಸ್ಯರೆಲ್ಲರೂ ಬಾವಿಗೆ ಬಂದು ಧರಣಿ ನಿರತರಾಗುತ್ತಾರೆ.

**ಸಭಾಪತಿಯವರು:–** ಈಗಾಗಲೇ 18 ಸದಸ್ಯರು ಆಯವ್ಯಯದ ಮೇಲೆ ಭಾಷಣ ಮಾಡಿದ್ದು, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಉತ್ತರ ಕೊಡಬೇಕಾಗಿದೆ. ಹಾಗಾಗಿ, ಅವರು ಉತ್ತರ ಕೊಟ್ಟ ಮೇಲೆ ನೋಡೋಣ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಸದನಕ್ಕೆ ಬಂದ ತಕ್ಷಣ ಉತ್ತರ ಕೊಡಿಸುತ್ತೇನೆ ಎಂದು ತಾವೇ ಹೇಳಿದ್ದೀರಿ. ಇಡೀ ರಾಜ್ಯದಲ್ಲಿ ಚುನಾಯಿತ ಪ್ರತಿನಿಧಿಗಳು ತಲೆತಗ್ಗಿಸುವಂಥ ಪರಿಸ್ಥಿತಿ ನಿರ್ಮಾಣವಾಗಿದೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಉತ್ತರ ನೀಡಿದ ಮೇಲೆ ಮಾತನಾಡಲಿ.

**ಸಭಾಪತಿಯವರು:–** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿರವರೇ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಉತ್ತರ ನೀಡುತ್ತಾರೆ ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ನಡೆಸುವಂಥ ಸಚಿವರ ಮೇಲೆ ಹನಿಟ್ರ್ಯಾಪ್ ವಿಚಾರ ಇದ್ದು, ಅದಕ್ಕೆ ಉತ್ತರ ಕೊಡಿಸುತ್ತೇನೆ ಎಂದು ತಾವೇ ಹೇಳಿದ್ದೀರಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉತ್ತರ ನೀಡಲಿ ಎಂದು ಇಷ್ಟು ಹೊತ್ತು ಹೇಳಿ. ಇವಾಗ ಅವರು ಕೂರಿಸಿ ಬೇರೆ ವಿಚಾರವನ್ನು ತೆಗೆಯುತ್ತಿದ್ದಾರೆ ಏನು ಕಥೆ?

**ಸಭಾಪತಿಯವರು:–** ದಯವಿಟ್ಟು ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿರವರೇ ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಹೇಳುವುದೇನೆಂದರೆ, sitting Judge ನಿಂದ enquiry ಮಾಡಿಸಿ. ಇಲ್ಲದಿದ್ದರೆ ಸಿ.ಬಿ.ಐ. ನವರಿಗೆ ವಹಿಸಿ ಸದಸ್ಯರಿಗೆ ನ್ಯಾಯ ಕೊಡಿಸಿ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಸದನಕ್ಕೆ ಆಗಮಿಸಿರುವುದರಿಂದ ಉತ್ತರವನ್ನು ಕೊಡಿಸಿ, ನಮ್ಮ ಪ್ರಶ್ನೆ ಏನಿಲ್ಲ.

(ಮುಂದು)

**(580) 21.03.2025/4.20/ಎಸ್‌ಕೆ-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ. ಈಗ ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರೇ ತಾವು ಉತ್ತರ ಕೊಡಿ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ,

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವೇ ಸದನದಲ್ಲಿ ಹೇಳಿದ್ದೀರಿ. ಮಾನ್ಯ ಸಭಾನಾಯಕರು ಕೂಡ ಹೇಳಿದ್ದಾರೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ವಿಷಯವನ್ನು ಇಲ್ಲಿಗೆ ಬಿಡಿ. ನಿಮಗೆ ಉತ್ತರ ಬೇಕೋ ಬೇಡವೋ ಹೇಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮಗೆ ಉತ್ತರ ಬೇಕು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವುದು ಮುಗಿಯಲಿ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಅನಗತ್ಯವಾಗಿ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಇಲ್ಲ ಮಾನ್ಯ ಮುಖ್ಯಮಂತ್ರಿಗಳೇ. ಇದು ಬೆಳಗ್ಗೆಯೇ ಪ್ರಸ್ತಾಪವಾಗಿದೆ. ಮಾನ್ಯ ಸಭಾಪತಿಯವರು ಉತ್ತರ ಕೊಡಿಸುತ್ತೇವೆಂದು ಪೀಠದಿಂದ ಹೇಳಿದ್ದಾರೆ ಮತ್ತು ಸಭಾನಾಯಕರು ಕೂಡ ಹೇಳಿದ್ದಾರೆ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):–** ಒಬ್ಬ Senior Minister ಸದನದಲ್ಲಿ ಆರೋಪ ಮಾಡುವುದು ಸಮಂಜಸವಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಮುಖ್ಯಮಂತ್ರಿಗಳು ಬಂದ ಕೂಡಲೇ ಉತ್ತರ ಕೊಡಿಸುತ್ತೇನೆಂದು ಮಾನ್ಯ ಸಭಾನಾಯಕರು ಹೇಳಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮೇಲೆ ಉತ್ತರ ಕೊಡುವುದು ಮುಗಿಯಲಿ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಒಬ್ಬ Senior Cabinet Colleague ಸದನದಲ್ಲಿ ಆರೋಪ ಮಾಡಿರುವುದು ಸರಿಯೇ?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಮೇಲೆ ಉತ್ತರ ಕೊಟ್ಟ ತಕ್ಷಣವೇ ಹೊರಟು ಹೋಗುತ್ತಾರೆ. ಇದು ಆಗುವುದಿಲ್ಲ. ಮಾನ್ಯ ಸಭಾಪತಿಯವರೇ, ದಯವಿಟ್ಟು, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸಬೇಕು.

**(ಗೊಂದಲ)**

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಮೇಲೆ ಉತ್ತರ ಕೊಡಬಾರದು ಎಂಬುದು ಇವರ ಉದ್ದೇಶ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಸಿ.ಡಿಗೆ ಉತ್ತರ ಕೊಡಿಸಿ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದು ತುಂಬಾ ಅತಿಯಾಯಿತು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಈ ವಿಷಯ ರಂಪವಾಗುತ್ತಿದೆ. ಇದಕ್ಕೆ ಉತ್ತರ ಕೊಡಿಸಿ.

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು, ಎಲ್ಲರೂ ಕುಳಿತುಕೊಳ್ಳಿ. ನಿಮಗೆಲ್ಲರಿಗೂ ಏನಾದರೂ ಸ್ವಲ್ಪ ಗೌರವ ಇದೆಯೋ ಇಲ್ಲವೋ?

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ತಮ್ಮ ಪೀಠದಿಂದ ಎದ್ದುನಿಂತು ಎಲ್ಲರನ್ನೂ ಕುಳಿತುಕೊಳ್ಳುವುದಕ್ಕೆ ಹೇಳಿದರು)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಮಗೆ ಗೌರವವಿದೆ. ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುತ್ತೇನೆಂದು ತಾವೇ ಹೇಳಿದ್ದೀರಿ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ಸದಸ್ಯರಿಗೆ ನಾನು ಹೇಳುವುದೇನೆಂದರೆ, ಬಜೆಟ್ ಮೇಲೆ ತುಂಬಾ ಜನ ಸದಸ್ಯರು ಮಾತನಾಡಿದ ಮೇಲೆ ಸರ್ಕಾರದಿಂದ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಇದನ್ನು ಸೌಜನ್ಯವಾಗಿ ಕೇಳುವಂತಹ ಕೆಲಸ ಮಾಡಿ. ಇದಾದ ನಂತರ ನನಗೆ ಹೇಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಸಿ.ಡಿ.ಗೆ ಇದಕ್ಕೆ ಉತ್ತರ ಕೊಡಲಿ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಿಗೆ ಉತ್ತರ ಬೇಕಾಗಿಲ್ಲ. ಅವರು ಹೊರಗಡೆ ಹೋಗಬೇಕು ಅಷ್ಟೆ.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬರ್:–** ಅವರು ಬೇಕಂತಲೇ ಈ ರೀತಿ ಮಾಡುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಿಗೆ ಬಜೆಟ್ ಮೇಲೆ ಉತ್ತರ ಬೇಕಾಗಿಲ್ಲ. ನಾನು ಉತ್ತರ ಕೊಟ್ಟರೆ ಅವರು expose ಆಗುತ್ತಾರೆ ಎನ್ನುವ ಭಯ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ಎಲ್ಲರೂ ಕೇಳಿ. ಈಗ ಎಲ್ಲರೂ ಬಜೆಟ್ ಮೇಲೆ ಭಾಷಣ ಮಾಡಿದ್ದಾರೆ. ಸರ್ಕಾರದಿಂದ ಮಾನ್ಯ ಮುಖ್ಯಮಂತ್ರಿಗಳೇ, ಉತ್ತರ ಕೊಡುತ್ತಾರೆ. ಅದರ ಉತ್ತರವನ್ನು ಕೇಳಿದ ನಂತರ ತಾವು ಆಗ ಮಾತನಾಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಸಿ.ಡಿ.ಗೆ ಉತ್ತರ ಕೊಡಬೇಕು. ನಾವೆಲ್ಲರೂ ಬಜೆಟ್‌ಗೆ ಒಪ್ಪುತ್ತೇವೆ. ಇದಕ್ಕೆ ಉತ್ತರ ಕೊಡಲಿ.

**ಸಭಾಪತಿಯವರು:–** ಒಂದು ನಿಮಿಷ ಎಲ್ಲರೂ ಕೇಳಿ. ಮಾನ್ಯ ಮುಖ್ಯಮಂತ್ರಿಗಳೇ, ತಾವು ಬಜೆಟ್ ಮೇಲೆ ಮಾತನಾಡಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಸುಮಾರು ಮೂವತ್ನಾಲ್ಕು ಜನ ಸದಸ್ಯರಲ್ಲಿ ಹದಿನೆಂಟು ಜನ ಸದಸ್ಯರು ಬಜೆಟ್ ಮೇಲೆ ಮಾತನಾಡಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ಉತ್ತರ ಕೊಡಿಸಬೇಕು. ಸತ್ಯ ಹೊರಗಡೆ ಬರುವುದಿಲ್ಲ ಎಂದರೆ **(ಗೊಂದಲ)** ಮಾನ್ಯ ಸಚಿವರಿಗೆ ರಕ್ಷಣೆ ಇಲ್ಲವೆಂದರೆ ಹೇಗೆ? ಇದು ಸರ್ಕಾರದ ಜವಾಬ್ದಾರಿಯಾಗಿದೆ. ಅದರಲ್ಲೂ ಪರಿಶಿಷ್ಟ ಜಾತಿ ವರ್ಗದ ಸಚಿವರು.

**ಶ್ರೀ ಸಿದ್ದರಾಮಯ್ಯ:–** 2025–26ನೇ ಸಾಲಿನಲ್ಲಿ ಆಯವ್ಯಯ ಮುಂಗಡ ಪತ್ರವನ್ನು ಮಂಡಿಸಿದ್ದೇನೆ. ಈ ಸಾರಿ ಬಜೆಟ್ ಗಾತ್ರ ರೂ. 4,09,549 ಕೋಟಿಗಳು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಕೂಡ ಸರ್ಕಾರದ ಜವಾಬ್ದಾರಿಯಿದೆ. ಮಂತ್ರಿಗಳಿಗೆ ರಕ್ಷಣೆ ಇಲ್ಲವೆಂದರೆ, ಅದರಲ್ಲೂ ಕೂಡ ಪರಿಶಿಷ್ಟ ಜಾತಿ ವರ್ಗದ ಸಚಿವರು.

**ಸಭಾಪತಿಯವರು:–** ಒಂದು ನಿಮಿಷ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ್ದನ್ನು ಹೊರತುಪಡಿಸಿ, ಇನ್ಯಾರು ಮಾತನಾಡಿದ್ದು ಕಡತಕ್ಕೆ ಹೋಗಬಾರದು

**(ಮಾನ್ಯ ಸಭಾಪತಿಯವರ ನಿರ್ದೇಶನದ ಮೇರೆಗೆ ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ್ದನ್ನು ಹೊರತುಪಡಿಸಿ, ಇನ್ನುಳಿದ ಮಾನ್ಯ ಸದಸ್ಯರು ಮಾತನಾಡಿದ್ದನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**17) 2025-26ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆಗೆ ಸರ್ಕಾರದಿಂದ ಉತ್ತರ**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ 2024-25ನೇ ಸಾಲಿನಲ್ಲಿ ಮಂಡಿಸಿರುವಂತಹ ಬಜೆಟ್ ರೂ.3,71,383 ಕೋಟಿಗಳು. ಈ ವರ್ಷದ ಬಜೆಟ್ 2024-25 ಗಿಂತ 2025-26ನೇ ಸಾಲಿನಲ್ಲಿ ಮಂಡಿಸಿರತಕ್ಕಂತ ಬಜೆಟ್ ಗಾತ್ರ ಶೇಕಡಾ 10.3 ರಷ್ಟು ಬೆಳವಣಿಗೆ ಆಗಿದೆ. ಈ ಬಜೆಟ್‌ನ್ನು ಸಮಾಜದಲ್ಲಿ ಅನೇಕ ಮಾಧ್ಯಮಗಳು, ವಿಶ್ವವಿದ್ಯಾಲಯಗಳು ಹಾಗೂ ವಿದ್ವಾಂಸರು ಶ್ಲಾಘಿಸಿದ್ದಾರೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಬಾವಿಗೆ ಬಂದು, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು)**

ಅದಕ್ಕಾಗಿ ನಾನು ಎಲ್ಲಾ ಮಾಧ್ಯಮದವರಿಗೆ ಅಭಿನಂದನೆಗಳನ್ನು ಹೇಳಬಯಸುತ್ತಿದ್ದೇನೆ. ಮೂರು ಪಕ್ಷದ ಕಡೆಯ ಹದಿನೆಂಟು ಜನ ಸದಸ್ಯರು ಬಜೆಟ್ ಬಗ್ಗೆ ಮಾತನಾಡಿದ್ದಾರೆ. ಅವರೆಲ್ಲರಿಗೂ ಅಭಿನಂದನೆ ಸಲ್ಲಿಸಬಯಸುತ್ತೇನೆ. ಅನೇಕ ಜನರು ಟೀಕೆ ಮಾಡಿರುವ ಬಗ್ಗೆ ನಾನು ಕೇಳಿದ್ದೇನೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಸರ್ಕಾರ ವಿರುದ್ಧ ಘೋಷಣೆಗಳನ್ನು ಕೂಗಿದರು)**

ಅವರು ಹೇಳಿರುವ ಅಂಶಗಳ ಬಗ್ಗೆ ನಾನು ಕೇಳಿದ್ದೇನೆ ಮತ್ತು ಅವರ ಟೀಕೆಗಳು, ಸಲಹೆ ಸೂಚನೆಗಳು ಹಾಗೂ ಶ್ಲಾಘನೆಯನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಇವತ್ತು ಸಮಂಜಸವಾಗಿರುವಂತಹ ಉತ್ತರವನ್ನು ಕೊಡುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ನಮ್ಮಿಬ್ಬರನ್ನು ಹೊರತುಪಡಿಸಿ, ಬೇರೆಯವರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವ ಬಗ್ಗೆ ನಾನು ಸದನಕ್ಕೂ ಮತ್ತು ತಮ್ಮ ಗಮನಕ್ಕೂ ತರಬಯಸುತ್ತಿದ್ದೇನೆ. FKCCI (Federation of Karnataka Chambers of Commerce & Industry) ನ ಅಧ್ಯಕ್ಷರಾದ ಎಂ.ಜಿ. ಬಾಲಕೃಷ್ಣ ಇವರು "ಪ್ರಗತಿಗೆ ಪ್ರಾಯೋಗಿಕ ನೀಲನಕ್ಷೆ," ಇದು ಸಮತೋಲನ ಪ್ರಾದೇಶಿಕ ಅಭಿವೃದ್ಧಿಗೆ ಬಜೆಟ್" ಎಂದಿದ್ದಾರೆ. ರಾಜ್ಯಾದ್ಯಂತ ಮೂಲ ಸೌಕರ್ಯ, ಶಿಕ್ಷಣ, ಆರೋಗ್ಯ ರಕ್ಷಣೆಯಲ್ಲಿನ ಹೂಡಿಕೆಯಲ್ಲಿನ ಸಮಾನ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳಲು ಪ್ರಾದೇಶಿಕ ಅಸಮಾನತೆಯನ್ನು ಕಡಿಮೆ ಮಾಡಲು ಒಟ್ಟಾರೆ ಜೀವನ ಗುಣಮಟ್ಟವನ್ನು ಉತ್ತಮಪಡಿಸಲು ವಿಶ್ವಾಸ ಗಳಿಸಲಾಗಿದೆ. ಶಿಕ್ಷಣ ಸಮಗ್ರ ಅಭಿವೃದ್ಧಿಗೆ ಪ್ರತ್ಯೇಕ MSME (Micro, Small & Medium Enterprises) ನೀತಿ ರೂಪಿಸಲು FKCCI ಸ್ವಾಗತಿಸುತ್ತದೆ ಎಂದು ಹೇಳಿದ್ದಾರೆ. ಇದು ಅವರ ಅಭಿಪ್ರಾಯ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

ಮಾನ್ಯ ಸಭಾಪತಿಯವರೇ, CII (Confederation of Indian Industry) ಯ ಕರ್ನಾಟಕದ ಅಧ್ಯಕ್ಷರಾದ ಎನ್. ವೇಣು ಇವರು ಬಜೆಟ್ ಬಗ್ಗೆ ಹೇಳಿರುವುದನ್ನು ನಾನು ಇಲ್ಲಿ ಹೇಳಬಯಸುತ್ತೇನೆ. "ಇಂಧನ-ಸುರಕ್ಷಿತ ಭವಿಷ್ಯದತ್ತ ನಿರ್ಣಾಯಕ ಹೆಜ್ಜೆ ಇಡುವ ಜೊತೆಗೆ, ಆರ್ಥಿಕ ವಿಸ್ತರಣೆಯ ಸುಸ್ಥಿರತೆಗೆ ಆದ್ಯತೆ ನೀಡುವ ಮೂಲಕ ರಾಜ್ಯ ಸರ್ಕಾರದ ಈ ಬಜೆಟ್ ದೀರ್ಘಕಾಲೀನ ಸ್ಥಿತಿಸ್ಥಾಪಕತ್ವ ಮತ್ತು ಇಂಧನ ಸುರಕ್ಷತೆಗೆ ಅಡಿಪಾಯ ಹಾಕಿದೆ" ಎಂದಿದ್ದಾರೆ. ಚಿಕ್ಕಮಗಳೂರಿನ ಅಡಿಕೆ ಬೆಳೆಗಾರ ಶರಣು ಎಂಬುವವರು "ಮಲೆನಾಡು ಭಾಗದ ಅಡಿಕೆಗೆ ತಗುಲಿರುವ ರೋಗ ನಿಯಂತ್ರಿಸಲು 62 ಕೋಟಿ ರೂ. ಇಟ್ಟಿರುವುದು ಸಮಾಧಾನಕರ" ಎಂದಿದ್ದಾರೆ. ಆಮೇಲೆ Hitech Magnetics & Electronics Pvt Ltd, ನ Managing Director ಆದ ಶ್ರೀಮತಿ ಉಮಾರೆಡ್ಡಿಯವರು "ಆರ್ಥಿಕ ಪರಿವರ್ತನೆಗೆ ಊರುಗೋಲು" ಎಂದು ಹೇಳಿದ್ದಾರೆ. ವನ್ಯಜೀವಿ ತಜ್ಞರಾದ ಸಂಜಯ್ ಗುಬ್ಬಿ ಇವರು "ಮಾನವ ವನ್ಯಜೀವಿ ಸಂಘರ್ಷಕ್ಕೆ ಹೆಚ್ಚು ಆರ್ಥಿಕ ಒತ್ತು ಕೊಟ್ಟಿರುವುದು ಉತ್ತಮ ವಿಚಾರ" ಎಂದಿದ್ದಾರೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಸರ್ಕಾರ ವಿರುದ್ಧ ಘೋಷಣೆಗಳನ್ನು ಕೂಗಿದರು)**

ಅರ್ಚಕರ ಸಂಘದ ಕೆ.ಎಸ್.ಎನ್. ದೀಕ್ಷಿತ್ ಇವರು "ಅರ್ಚಕರಿಗೆ ಸಂತಸ ತಂದ ಬಜೆಟ್" ಎಂದಿದ್ದಾರೆ. ವ್ಯಾಪಾರಿ ಸಂಘದ ಮುಖಂಡ ಇ.ಸಿ. ರಂಗಸ್ವಾಮಿ ಇವರು "ಬೀದಿ ಬದಿ ವ್ಯಾಪಾರಿಗಳಿಗೆ ನೆಮ್ಮದಿಯ ಬಜೆಟ್" ಎಂದಿದ್ದಾರೆ. ಚಲನಚಿತ್ರ ನಟರಾದ ಶರಣ್ ಅವರು "ಈ ಬಾರಿಯ ಬಜೆಟ್ ಸಿನಿಮಾ ರಂಗಕ್ಕೆ ಕೊಟ್ಟಿರುವ ಕೊಡುಗೆಗಳನ್ನು ಗಮನಿಸಿದರೆ ಬಹಳ ಖುಷಿ" ಎಂದಿದ್ದಾರೆ.

(ಮುಂದು)

(581) 21.03.2025/4.50/ಟಿಸಿಹೆಚ್-ಎಕೆ (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಸಿದ್ದರಾಮಯ್ಯ (ಮುಂದು):**

ಬ್ರೇಕ್‌ಥ್ರೂ ಸೈನ್ಸ್ ಸೊಸೈಟಿಯ ಕಾರ್ಯದರ್ಶಿಯವರಾದ ಶ್ರೀಮತಿ ದೀಪ್ತಿ.ಬಿ ಅವರು ಕ್ವಾಂಟಮ್ ಕಂಪ್ಯೂಟರ್, ಎ.ಐ. ನಂತಹ ಬೆಳವಣಿಗೆಯ ಕ್ಷೇತ್ರದ ಕುರಿತು ಬಜೆಟ್‌ನಲ್ಲಿ ಉಲ್ಲೇಖಿಸಿರುವುದು ಸ್ಥಳೀಯ ಆರ್ಥಿಕ ಆಕ್ಸಿಲರೇಟರ್ (ಲೀಪ್) ಕುರಿತು ಘೋಷಣೆ ಮಾಡಿರುವುದು ಉತ್ತಮ ಹೆಜ್ಜೆ.

**(ಗೊಂದಲ)**

ಇದರಿಂದ ಐ.ಟಿ ಕ್ಷೇತ್ರ ಬೆಂಗಳೂರಿನ ಆಚೆ ಬೆಳೆಯಲು ಅನುಕೂಲವಾಗುತ್ತದೆ ಹಾಗೂ ಬೆಂಗಳೂರಿನ ಮೇಲೆ ಒತ್ತಡ ಕಡಿಮೆ ಆಗುತ್ತದೆ ಎಂದಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊಫೆಸರ್ ಎಸ್.ಆರ್.ಕೇಶವ್ ಅವರು " ಇದು ಸರ್ವಜನಾಂಗದ ಶಾಂತಿಯ ತೋಟವಾದ ಕರ್ನಾಟಕದ ಎಲ್ಲಾ ವರ್ಗಗಳ ಅಭಿವೃದ್ಧಿಗೆ ಆದ್ಯತೆ ಸಿಕ್ಕಿದಂತಾಗಿದೆ" ಎಂದಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಉಪಯೋಗಗಳಿಗೆ ಗರಿಷ್ಠ ಅನುದಾನ ನೀಡಲಾಗಿದೆ. ಅಲ್ಪಸಂಖ್ಯಾತ ಸಮುದಾಯ ಶಿಕ್ಷಣದಲ್ಲಿ ಹಿಂದುಳಿದಿದ್ದು, ಅದಕ್ಕೆ ಈ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ. ಧಾರ್ಮಿಕ ಮತ್ತು ಸಮುದಾಯದ ಕಲ್ಯಾಣಕ್ಕಾಗಿ ಜೈನ, ಭೌದ್ಧ ಮತ್ತು ಸಿಖ್ ಸಮುದಾಯಗಳಿಗೆ ರೂ.100 ಕೋಟಿಗಳ ಮೀಸಲಿಡಲಾಗಿದೆ. ಕ್ರಿಶ್ಚಿಯನ್ ಕಲ್ಯಾಣಕ್ಕೆ ರೂ. 250 ಕೋಟಿಗಳು ಮತ್ತು ಪುರೋಹಿತರ ಗೌರವಧನ ಹೆಚ್ಚಳವೂ ಕೂಡ ಸೇರಿದೆ.

**(ಗೊಂದಲ)**

ಉತ್ತಮ ವಿಶೇಷ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಜಾರಿಯಾಗಲು ಪ್ರಯತ್ನಿಸಬೇಕಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಕಾವೇರಿ ಆಸ್ಪತ್ರೆಯ ಸಮೂಹದ ಕಾರ್ಯಕಾರಿ ನಿರ್ದೇಶಕರಾದ ಶ್ರೀ ಎಸ್.ವಿಜಯಭಾಸ್ಕರನ್ ಅವರು "ಆರೋಗ್ಯ ಕ್ಷೇತ್ರದ ಅಭಿವೃದ್ಧಿಗೆ ಉತ್ತೇಜನ" ಎಂದಿದ್ದಾರೆ. ಮಣಿಪಾಲ್ ಆಸ್ಪತ್ರೆಯ ಅಧ್ಯಕ್ಷರಾದಂತಹ ಡಾ.ಹೆಚ್.ಸುದರ್ಶನ್ ಬಲ್ಲಾಳ್ ಅವರು "ಆರೋಗ್ಯ ಕ್ಷೇತ್ರದಲ್ಲಿ ತಾಯಂದಿರ ಮರಣ ಪ್ರಮಾಣ ತಡೆಗಟ್ಟುವುದು ಮಹತ್ವದ ಸೂಚಕವಾಗಿದೆ. ಜಿಲ್ಲೆಗಳಲ್ಲಿ ನಿಮ್ಹಾನ್ಸ್ ಮಾದರಿಯ ಕೇಂದ್ರಗಳ ಸ್ಥಾಪನೆ, ತಾಲ್ಲೂಕು ಮಟ್ಟದಲ್ಲಿ ಆಸ್ಪತ್ರೆಗಳ ಹೆಚ್ಚಳ, ಹೊಸ ವೈದ್ಯಕೀಯ ಕಾಲೇಜುಗಳ ಸ್ಥಾಪನೆ ಘೋಷಣೆ, ಆರೋಗ್ಯ ಕ್ಷೇತ್ರದ ಬಲ ಹೆಚ್ಚಿಸಲಿದೆ" ಎಂದಿದ್ದಾರೆ. ತುಮಕೂರು ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಶ್ರೀಮತಿ ಜ್ಯೋತಿ ಇವರು " ಬೆಂಗಳೂರು ಆರ್ಥಿಕ ಸ್ವಾತಂತ್ರ್ಯಕ್ಕೆ ಪೂರಕ ಬಜೆಟ್" ಎಂದಿದ್ದಾರೆ. ಗದಗ ಜಿಲ್ಲೆಯ ಶ್ರೀಮತಿ ಸುಮಾ ಎಸ್.ಚೋಟಗಲ್ ಇವರು "ಈ ಬಜೆಟ್ ಮಹಿಳೆಯರಿಗೆ ಆದ್ಯತೆ ನೀಡಿದೆ" ಎಂದಿದ್ದಾರೆ. ಹಲವು ನಾಡಿನ ದಿನ ಪತ್ರಿಕೆಗಳು ಸಂಪಾದಕೀಯಗಳನ್ನು ಬರೆದಿವೆ. 'ಪ್ರಜಾವಾಣಿ' ಪತ್ರಿಕೆಯು "ಬಂಡವಾಳ ವೆಚ್ಚಕ್ಕೆ ಗಣನೀಯ ಮೊತ್ತ; ಮೂಲಸೌಕರ್ಯಕ್ಕೆ ಆದ್ಯತೆ ಸಿಕ್ಕಿದೆ" ಎಂದು ಹೇಳಿದ್ದಾರೆ. 'ವಿಜಯ ಕರ್ನಾಟಕ' ಪತ್ರಿಕೆಯವರು "ಸಾಮಾಜಿಕ ನ್ಯಾಯಕ್ಕೆ ಮಣೆ"ಎಂದು ಹೇಳಿದ್ದಾರೆ. ನಾಡಿನ ವಿವಿಧ ವಲಯಗಳ ಜನರು ನಮ್ಮ ಬಜೆಟ್ ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇನ್ನಷ್ಟು ನಮಗೆ ಶಕ್ತಿ ತುಂಬಿಸಲಿವೆ. ಈ ಸಂದರ್ಭದಲ್ಲಿ ನಮ್ಮ ಬಜೆಟ್ ಅನ್ನು ಶ್ಲಾಘಿಸಿದ ಎಲ್ಲಾ ತಜ್ಞರು ಹಾಗೂ ಇತರ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಾಗೆಯೇ ಇಷ್ಟೊಂದು ಪ್ರಮಾಣದ ತೆರಿಗೆಯನ್ನು ಪಾವತಿಸುತ್ತಿರುವ ನಾಡಿನ ಜನರಿಗೂ ಕೂಡ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಪದೇಪದೇ ಹೇಳುವಂತೆ "ಜನರ ತೆರಿಗೆಯ ಹಣಕ್ಕೆ ನಾವು ಟ್ರಸ್ಟಿಗಳೇ ಹೊರತು ನಾವ್ಯಾರೂ ಕೂಡ ಮಾಲೀಕರಲ್ಲ". ಇವತ್ತಿನ ದಿವಸ ನಮ್ಮ ಸರ್ಕಾರಕ್ಕೆ ಜನ ನಮ್ಮನ್ನು ಆಶೀರ್ವಾದ ಮಾಡಿದ್ದಾರೆ. ಆದರೆ ನಾವು ಮಾತ್ರ ಟ್ರಸ್ಟಿಗಳೇ. ಆದ್ದರಿಂದ ಜನರ ತೆರಿಗೆ ಹಣವನ್ನು ನ್ಯಾಯಯುತ ರೀತಿಯಲ್ಲಿ ನಾಡಿನ ಅಭಿವೃದ್ಧಿಗೆ ವಿನಿಯೋಗಿಸಲು ಬದ್ಧರಾಗಿದ್ದೇವೆ. **(ಗೊಂದಲ)** . . .

**(ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರೂ ಒಳಗೊಂಡಂತೆ ವಿರೋಧ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಗೆ ಬಂದು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಈ ರೀತಿ ಆದಲ್ಲ ಏನು ಮಾಡುವುದು? This is not correct.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳೇ ನಾನು ಏನು ಮಾಡಲಿ? ಅವರು ನನ್ನ ಮಾತು ಕೇಳುತ್ತಿಲ್ಲ. ತಾವು ಮಾತನಾಡಿ ಮುಗಿಸಿ. ನಾನು ಹೇಳಿದರೂ ಕೂಡ ಅವರು ಕೇಳುತ್ತಿಲ್ಲ. ಮಾನ್ಯ ಎನ್.ರವಿಕುಮಾರ್‌ರವರೇ, ಒಂದು ನಿಮಿಷ ನನ್ನ ಮಾತು ಕೇಳಿ. . .

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ನಾನು ಆಮೇಲೆ ಉತ್ತರ ಕೊಡುತ್ತೇನೆ. ಅವರು ಸ್ವಲ್ಪ ನನ್ನ ಮಾತು ಕೇಳಲಿ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ **(ಗೊಂದಲ)** ...

**(ಗೊಂದಲ)**

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಜನರಿಗೆ ಬೇಕಾಗಿರತಕ್ಕಂಥ ಮೂಲಸೌಕರ್ಯಗಳ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಿದ್ದಾರೆ. ಅದನ್ನು ಗಮನಿಸುವುದು ಬಿಟ್ಟು ಸುಮ್ಮನೆ ವಿನಾಕಾರಣ strike ಮಾಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್‌ರವರೇ, ಒಂದು ನಿಮಿಷ. ಮಾನ್ಯ ಮುಖ್ಯಮಂತ್ರಿಗಳೇ ತಾವು ಮಾತನಾಡಿ ಮುಗಿಸಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಬಜೆಟ್ ಮೇಲಿನ ಚರ್ಚೆಗಳಿಗೆ ಸಂಬಂಧಿಸಿದಂತೆ ನನ್ನ ಈ written speech ಅನ್ನು ಸದನದ ಮುಂದೆ ಮಂಡಿಸುತ್ತಿದ್ದು ಇದನ್ನು ದಾಖಲೆಯ ಭಾಗವಾಗಿ ಪರಿಗಣಿಸಬೇಕೆಂದು ಕೋರುತ್ತೇನೆ.

“1. ಬಜೆಟ್ ಮೇಲಿನ ವಿಧಾನ ಪರಿಷತ್ತಿನ ವಿರೋಧ ಪಕ್ಷದವರ ಹಾಗೂ ಆಡಳಿತ ಪಕ್ಷದ ಮಾನ್ಯ ಸದಸ್ಯರ ಮಾತುಗಳನ್ನು ಕೇಳಿದ್ದೇನೆ ಮತ್ತು ಓದಿದ್ದೇನೆ. ಅನೇಕರು ಬಜೆಟ್‌ನ್ನು ಅಧ್ಯಯನ ಮಾಡಲು ಪ್ರಯತ್ನಿಸಿದ್ದಾರೆ. ಒಳ್ಳೆಯ ಪ್ರಯತ್ನ ಮಾಡಿದ್ದಾರೆ, ಅವರೆಲ್ಲರನ್ನೂ ನಾನು ಅಭಿನಂದಿಸುತ್ತೇನೆ.

2. ಸದನದಲ್ಲಿ ನಾನು ಗಮನಿಸಿದ ಹಾಗೆ 4-5 ವಿಚಾರಗಳನ್ನು ಪ್ರಮುಖವಾಗಿ ಇಟ್ಟುಕೊಂಡು ಚರ್ಚಿಸಲಾಗಿದೆ. ಮುಖ್ಯವಾಗಿ, 1) ರಾಜ್ಯದ ಸಾಲ ಹಾಗೂ ಆರ್ಥಿಕ ಪರಿಸ್ಥಿತಿ 2) ಗ್ಯಾರಂಟಿ ಯೋಜನೆಗಳು 3) ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ವಿಚಾರ 4) ಮುಸ್ಲಿಂ ಸಮುದಾಯಕ್ಕೆ ಗುತ್ತಿಗೆಯಲ್ಲಿ ಮೀಸಲಾತಿ 5) ಕ್ಷೇತ್ರಗಳಿಗೆ ಅಭಿವೃದ್ಧಿ ಅನುದಾನ ಹಾಗೂ ಪ್ರದೇಶವಾರು ಅಭಿವೃದ್ಧಿ ಕುರಿತಂತೆ ಚರ್ಚಿಸಲಾಗಿದೆ. ನಾನು ರಾಜ್ಯಪಾಲರ ಭಾಷಣದ ಮೇಲೆ ನಡೆದ ಚರ್ಚೆಗಳಿಗೆ ಉತ್ತರ ಕೊಡುವಾಗ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಅನುದಾನಗಳು, ಗ್ಯಾರಂಟಿ ಯೋಜನೆಗಳು ಮುಂತಾದ ವಿಚಾರಗಳ ಕುರಿತು ದೀರ್ಘವಾಗಿ ಉತ್ತರ ಕೊಟ್ಟಿದ್ದೇನೆ. ಹಾಗಾಗಿ ಅವುಗಳಿಗೆ ಕಡಿಮೆ ಸಮಯ ಮೀಸಲಿಟ್ಟು ಉಳಿದ ವಿಚಾರಗಳಿಗೆ ತುಸು ಹೆಚ್ಚು ಸಮಯ ಕೊಟ್ಟು ಇಂದು ಉತ್ತರ ನೀಡುತ್ತಿದ್ದೇನೆ.

3. ನಮ್ಮ ಬಜೆಟ್ ಬಗ್ಗೆ ವಿರೋಧ ಪಕ್ಷದವರು ಏನಂದರು? ಆಡಳಿತ ಪಕ್ಷದವರು ಏನಂದರು ಹಾಗೂ ಉಳಿದೆಲ್ಲಾ ಜನಪ್ರತಿನಿಧಿಗಳ ಪ್ರತಿಕ್ರಿಯೆ ಹೇಗಿತ್ತು ಎನ್ನುವ ಒಂದು ಆಯಾಮಕ್ಕೆ ಈ ಸದನ ಸಾಕ್ಷಿಯಾಗಿದೆ. ಸದನದ ದಾಖಲೆಗಳಲ್ಲಿದೆ.

4. ಎರಡನೆಯದಾಗಿ, ನಮ್ಮ ಬಜೆಟ್‌ನ್ನು ಈ ಬಾರಿ ಮಾಧ್ಯಮಗಳು ಅಭೂತಪೂರ್ವವಾಗಿ ಸ್ವಾಗತಿಸಿ ಶ್ಲಾಘನೆ ಮಾಡಿವೆ. ವಿಶ್ಲೇಷಣೆಗಳನ್ನು ಬರೆದಿವೆ. ನಮ್ಮ ಬಜೆಟ್‌ನ್ನು ಅರ್ಥ ಮಾಡಿಕೊಂಡು ಜನರಿಗೆ ತಲುಪಿಸಿದ್ದಕ್ಕಾಗಿ ಮಾಧ್ಯಮಗಳನ್ನು ಅಭಿನಂದಿಸುತ್ತೇನೆ.

5. ನಮ್ಮಿಬ್ಬರನ್ನು ಹೊರತುಪಡಿಸಿ ನಾಡಿನ ವಿವಿಧ ವಲಯಗಳ ಜನರು ಹೇಗೆ ಪ್ರತಿಕ್ರಿಯಿಸಿದ್ದಾರೆ ಎಂಬುದನ್ನೂ ಗಮನಿಸಬೇಕಾಗಿದೆ. ಕೆಲವು ಉದಾಹರಣೆಗಳನ್ನು ನೀಡಬಯಸುತ್ತೇನೆ. ಹಾಗೆ ಮಾಡಬೇಕಾದದ್ದು ನನ್ನ ಕರ್ತವ್ಯ.

1) ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್.ಕೆ.ಸಿ.ಸಿ.ಐ)ನ ಅಧ್ಯಕ್ಷರಾದ ಎಂ.ಜಿ. ಬಾಲಕೃಷ್ಣ ಇವರು “ಪ್ರಗತಿಗೆ ಪ್ರಾಯೋಗಿಕ ನೀಲನಕ್ಷೆ, ಇದು ಸಮತೋಲಿತ ಪ್ರಾದೇಶಿಕ ಅಭಿವೃದ್ಧಿಗೆ ಬಜೆಟ್” ಎಂದಿದ್ದಾರೆ.

2) ಕಾನ್ಫೆಡರೇಶನ್ ಆಫ್ ಇಂಡಿಯನ್ ಇಂಡಸ್ಟ್ರಿಯ (ಸಿ.ಐ.ಐ.) ಕರ್ನಾಟಕದ ಅಧ್ಯಕ್ಷರಾದ ಶ್ರೀ ಎನ್. ವೇಣು ಇವರು “ಇಂಧನ-ಸುರಕ್ಷಿತ ಭವಿಷ್ಯದತ್ತ ನಿರ್ಣಾಯಕ ಹೆಜ್ಜೆ ಇಡುವ ಜೊತೆಗೆ, ಆರ್ಥಿಕ ವಿಸ್ತರಣೆಯ ಸುಸ್ಥಿರತೆಗೆ ಆದ್ಯತೆ ನೀಡುತ್ತದೆ” ಎಂದಿದ್ದಾರೆ.

3) ಚಿಕ್ಕಮಗಳೂರಿನ ಅಡಕೆ ಬೆಳೆಗಾರರಾದ ಶ್ರೀ ಶರಣು ಎಂಬುವವರು “ಮಲೆನಾಡು ಭಾಗದ ಅಡಕೆಗೆ ತಗುಲಿರುವ ರೋಗ ನಿಯಂತ್ರಿಸಲು ರೂ. 62 ಕೋಟಿಗಳ ಇಟ್ಟಿರುವುದು ಸಮಾಧಾನಕರ” ಎಂದಿದ್ದಾರೆ.

4) ವನ್ಯಜೀವಿ ತಜ್ಞರಾದ ಶ್ರೀ ಸಂಜಯ್ ಗುಬ್ಬಿ ಇವರು "ಮಾನವ ವನ್ಯಜೀವಿ ಸಂಘರ್ಷಕ್ಕೆ ಹೆಚ್ಚು ಆರ್ಥಿಕ ಒತ್ತು ಕೊಟ್ಟಿರುವುದು ಉತ್ತಮ ವಿಚಾರ" ಎಂದಿದ್ದಾರೆ.

5) ಅರ್ಚಕರ ಸಂಘದವರಾದ ಶ್ರೀ ಕೆ.ಎಸ್.ಎನ್.ದೀಕ್ಷಿತ್ ಇವರು "ಅರ್ಚಕರಿಗೆ ಸಂತಸ ತಂದ ಬಜೆಟ್" ಎಂದಿದ್ದಾರೆ.

6) ವ್ಯಾಪಾರಿ ಸಂಘದ ಮುಖಂಡರಾದ ಶ್ರೀ ಇ.ಸಿ.ರಂಗಸ್ವಾಮಿ ಇವರು "ಬೀದಿ ಬದಿ ವ್ಯಾಪಾರಿಗಳಿಗೆ ನೆಮ್ಮದಿಯ ಬಜೆಟ್" ಎಂದಿದ್ದಾರೆ.

7) ಚಲನಚಿತ್ರ ನಟರಾದ ಶ್ರೀ ಶರಣ್ ಅವರು "ಈ ಬಾರಿಯ ಬಜೆಟ್ ಸಿನಿಮಾರಂಗಕ್ಕೆ ಕೊಟ್ಟಿರುವ ಕೊಡುಗೆಗಳನ್ನು ಗಮನಿಸಿದರೆ ಬಹಳ ಖುಷಿ" ಎಂದಿದ್ದಾರೆ.

8) ಬ್ರೇಕ್ ಥ್ರೂ ಸೈನ್ಸ್ ಸೊಸೈಟಿಯ ಕಾರ್ಯದರ್ಶಿಯವರಾದ ಶ್ರೀಮತಿ ದೀಪ್ತಿ ಬಿ., ಅವರು "ಕ್ವಾಂಟಮ್ ಕಂಪ್ಯೂಟರ್, ಎ.ಐ. ನಂತಹ ಬೆಳವಣಿಗೆಯ ಕ್ಷೇತ್ರದ ಕುರಿತು ಬಜೆಟ್‌ನಲ್ಲಿ ಉಲ್ಲೇಖಿಸಿರುವುದು ಸ್ಥಳೀಯ ಆರ್ಥಿಕ ಆಕ್ಸಿಲರೇಟರ್ (ಲೀಪ್) ಕುರಿತು ಘೋಷಣೆ ಮಾಡಿರುವುದು ಉತ್ತಮ ಹೆಜ್ಜೆ. ಇದರಿಂದ ಐ.ಟಿ. ಕ್ಷೇತ್ರ ಬೆಂಗಳೂರಿನ ಆಚೆ ಬೆಳೆಯಲು ಅನುಕೂಲವಾಗುತ್ತದೆ ಹಾಗೂ ಬೆಂಗಳೂರಿನ ಮೇಲೆ ಒತ್ತಡ ಕಡಿಮೆ ಆಗುತ್ತದೆ" ಎಂದಿದ್ದಾರೆ.

9) ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಎಸ್.ಆರ್. ಕೇಶವ್ ಇವರು "ಇದು ಸರ್ವಜನಾಂಗದ ಶಾಂತಿಯ ತೋಟವಾದ ಕರ್ನಾಟಕದ ಎಲ್ಲ ವರ್ಗಗಳ ಅಭಿವೃದ್ಧಿಗೆ ಆದ್ಯತೆ ಸಿಕ್ಕಿದಂತಾಗಿದೆ". ಎಂದಿದ್ದಾರೆ.

10) ಕಾವೇರಿ ಆಸ್ಪತ್ರೆ ಸಮೂಹದ ಕಾರ್ಯಕಾರಿ ನಿರ್ದೇಶಕರಾದ ಶ್ರೀ ಎಸ್. ವಿಜಯಭಾಸ್ಕರನ್ ಅವರು "ಆರೋಗ್ಯ ಕ್ಷೇತ್ರದ ಅಭಿವೃದ್ಧಿಗೆ ಉತ್ತೇಜನ" ಎಂದಿದ್ದಾರೆ.

11) ತುಮಕೂರು ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಶ್ರೀಮತಿ ಜ್ಯೋತಿ ಇವರು "ಮಹಿಳಾ ಆರ್ಥಿಕ ಸ್ವಾತಂತ್ರಕ್ಕೆ ಪೂರಕ ಬಜೆಟ್" ಎಂದಿದ್ದಾರೆ.

12) ಗದಗ ಜಿಲ್ಲೆಯ ಶ್ರೀಮತಿ ಸುಮಾ ಎಸ್. ಚೋಟಗಲ್ ಇವರು "ಈ ಬಜೆಟ್ ಮಹಿಳೆಯರಿಗೆ ಆದ್ಯತೆ ನೀಡಿದೆ" ಎಂದಿದ್ದಾರೆ.

13) ನಾಡಿನ ಹಲವು ಪ್ರಮುಖ ದಿನಪತ್ರಿಕೆಗಳು ಸಂಪಾದಕೀಯಗಳನ್ನು ಬರೆದಿವೆ. ಪ್ರಜಾವಾಣಿ ಪತ್ರಿಕೆಯು "ಬಂಡವಾಳ ವೆಚ್ಚಕ್ಕೆ ಗಣನೀಯ ಮೊತ್ತ; ಮೂಲಸೌಕರ್ಯಕ್ಕೆ ಆದ್ಯತೆ ಸಿಕ್ಕಿದೆ" ಎಂದಿದೆ. ವಿಜಯ ಕರ್ನಾಟಕ ಪತ್ರಿಕೆಯವರು "ಸಾಮಾಜಿಕ ನ್ಯಾಯಕ್ಕೆ ಮಣೆ" ಎಂದಿದ್ದಾರೆ.

6. ನಾಡಿನ ವಿವಿಧ ವಲಯಗಳ ಜನರು ನಮ್ಮ ಬಜೆಟ್ ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯಗಳು ನಮಗೆ ಇನ್ನಷ್ಟು ಶಕ್ತಿ ತುಂಬಲಿವೆ.

7. ಈ ಸಂದರ್ಭದಲ್ಲಿ ನಮ್ಮ ಬಜೆಟ್‌ನ್ನು ಶ್ಲಾಘಿಸಿದ ಎಲ್ಲಾ ತಜ್ಞರು ಹಾಗೂ ಇತರ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಾಗೆಯೇ, ಇಷ್ಟೊಂದು ಪ್ರಮಾಣದ ತೆರಿಗೆಯನ್ನು ಪಾವತಿಸುತ್ತಿರುವ ನಾಡಿನ ಜನರಿಗೂ ಕೂಡ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

8. ಇಂತಹ ಬಜೆಟ್‌ನ್ನು ರೂಪಿಸಲು ನಾಡಿನ ವಿವಿಧ ಸಂಘ-ಸಂಸ್ಥೆಗಳು ಬಂದು ಭಾಗವಹಿಸಿ ತಮ್ಮ ಸಲಹೆ-ಸೂಚನೆಗಳನ್ನು ನೀಡಿರುತ್ತಾರೆ. ಹಾಗಾಗಿ, ಅವರೆಲ್ಲರಿಗೂ ಕೂಡ ಧನ್ಯವಾದಗಳನ್ನು ತಿಳಿಸಬಯಸುತ್ತೇನೆ.

9. ನಾನು ಏಕೆ ವಿವಿಧ ಕ್ಷೇತ್ರಗಳ ತಜ್ಞರ ಮಾತುಗಳನ್ನು ಉಲ್ಲೇಖಿಸಿದ್ದೇನೆಂದರೆ, ಮಾನ್ಯ ವಿರೋಧ ಪಕ್ಷಗಳ ಬಹುಪಾಲು ಟೀಕೆಗಳಿಗೆ ಈ ತಜ್ಞರ ಅಭಿಪ್ರಾಯಗಳೇ ಉತ್ತರ.

10. ನಾನು ಪದೇ ಪದೇ ಹೇಳುವಂತೆ "ನಾವು ಜನರ ತೆರಿಗೆ ಹಣಕ್ಕೆ ಟ್ರಸ್ಟಿಗಳೇ ಹೊರತು, ಮಾಲೀಕರಲ್ಲ." ನಾವು ಜನರ ತೆರಿಗೆ ಹಣವನ್ನು ನ್ಯಾಯಯುತ ರೀತಿಯಲ್ಲಿ ನಾಡಿನ ಅಭಿವೃದ್ಧಿಗೆ ವಿನಿಯೋಗಿಸಲು ಬದ್ಧರಾಗಿದ್ದೇವೆ.

11. ಬಲಿಷ್ಠವಾದವು ಮಾತ್ರ ಬದುಕುತ್ತವೆ [Survival of the fittest] ಎನ್ನುವುದು ಡಾರ್ವಿನ್ ಸಿದ್ಧಾಂತ. ಅದಕ್ಕೆ ವಿರುದ್ಧವಾಗಿ ಸಂವಿಧಾನವು ಅಸಹಾಯಕರಿಗೆ, ದುರ್ಬಲ ವರ್ಗಗಳಿಗೆ ಶಕ್ತಿ ತುಂಬಿ ಸಮಾಜವನ್ನು ಸಮಗ್ರ ರೀತಿಯಲ್ಲಿ ಹಾಗೂ ಮಾನವೀಯ ನೆಲೆಯಲ್ಲಿ ಮುನ್ನಡೆಸಬೇಕು ಎನ್ನುವ ಕಾಳಜಿಯಿಂದ ನಾವು ಈ ಬಜೆಟ್‌ನ್ನು ರೂಪಿಸಿದ್ದೇವೆ. ಹಾಗಾಗಿಯೇ, ನಾಡಿನ ವಿದ್ವಾಂಸರು, ಪರಿಣಿತರು, ಸಾಮಾನ್ಯ ಜನರು, ಮಾಧ್ಯಮಗಳು ನಮ್ಮ ಬಜೆಟ್ ಕುರಿತು ವ್ಯಾಪಕ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ.

## ಆಯವ್ಯಯ ಗಾತ್ರದ ಹೆಚ್ಚಳ

12. 2025-26ನೇ ಸಾಲಿನಲ್ಲಿ ರೂ. 4,09,549 ಕೋಟಿ ಗಾತ್ರದ ಬಜೆಟ್‌ನ್ನು ನಾನು ಮಂಡಿಸಿದ್ದೇನೆ. 2024-25ನೇ ಸಾಲಿನ ಆಯವ್ಯಯಕ್ಕೆ ಹೋಲಿಸಿದರೆ 2025-26ನೇ ಸಾಲಿನಲ್ಲಿ ನಮ್ಮ ರಾಜ್ಯದ ಬಜೆಟ್ ಗಾತ್ರ ಶೇ.10.3 ರಷ್ಟು ಹೆಚ್ಚಿನ ಬೆಳವಣಿಗೆ ಕಂಡಿದೆ. ಜನಸಂಖ್ಯೆಯ ಗಾತ್ರದಲ್ಲಿ ಕರ್ನಾಟಕವು 8ನೇ ಸ್ಥಾನದಲ್ಲಿದೆ. ತೆರಿಗೆ ಸಂಗ್ರಹಿಸಿಕೊಡುವ ವಿಚಾರದಲ್ಲಿ ಕರ್ನಾಟಕವು 2ನೇ ಸ್ಥಾನದಲ್ಲಿದೆ. ಜಿ.ಎಸ್.ಡಿ.ಪಿ.ಯಲ್ಲಿ ಕರ್ನಾಟಕವು ಮಹಾರಾಷ್ಟ್ರ, ತಮಿಳುನಾಡಿನ ನಂತರ 3ನೇ ಸ್ಥಾನದಲ್ಲಿದೆ. ಆದರೆ, 2025-26ನೇ ಸಾಲಿನ ನಮ್ಮ ಬಜೆಟ್ ಉತ್ತರ ಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ, ತಮಿಳುನಾಡಿನ ನಂತರ 5ನೇ ದೊಡ್ಡ ಬಜೆಟ್ ಆಗಿದೆ.

13. ಇದೇ ಸಂದರ್ಭದಲ್ಲಿ 2025-26ನೇ ಸಾಲಿಗೆ ಸಂಬಂಧಿಸಿದಂತೆ ಕೇಂದ್ರದ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು, ಮಂಡಿಸಿರುವ ಬಜೆಟ್ ಗಾತ್ರ ರೂ. 50.65 ಲಕ್ಷ ಕೋಟಿ 2024-25 ರಲ್ಲಿ ರೂ.48.21 ಲಕ್ಷ ಕೋಟಿಗಳಷ್ಟಿತ್ತು. ಕೇಂದ್ರದ ಬಜೆಟ್ ಬೆಳವಣಿಗೆ ಶೇ. 5.06 ರಷ್ಟು ಮಾತ್ರ. ಇದರಲ್ಲಿ ಹಣದುಬ್ಬರವನ್ನು ಕಳೆದರೆ, ಕೇಂದ್ರದ ಬಜೆಟ್‌ನ ಗಾತ್ರ ನಕಾರಾತ್ಮಕವಾಗುತ್ತದೆ.

14. ಶ್ರೀ ಸಿ.ಟಿ ರವಿಯವರು ಸೇರಿದಂತೆ ವಿರೋಧ ಪಕ್ಷಗಳವರು ತೆರಿಗೆ ಸಂಗ್ರಹ ಕಡಿಮೆಯಾಗಿದೆ, ಆಯವ್ಯಯದಲ್ಲಿ ಅಂದಾಜು ಮಾಡಿದ ತೆರಿಗೆ ಸಂಗ್ರಹಣೆ ಗುರಿಯನ್ನು ತಲುಪಿಲ್ಲ ಎಂದು ಪ್ರಸ್ತಾಪಿಸಿದ್ದಾರೆ. 2024-25ರಲ್ಲಿ

ರೂ.1,89,893 ಕೋಟಿಗಳಷ್ಟು ರಾಜ್ಯದ ಸ್ವಂತ ತೆರಿಗೆ ಸಂಗ್ರಹವಾಗಬಹುದೆಂದು ಅಂದಾಜು ಮಾಡಲಾಗಿತ್ತು. ಫೆಬ್ರವರಿ ಅಂತ್ಯದವರೆಗೆ ರೂ.1,57,111 ಕೋಟಿಗಳನ್ನು ಸಂಗ್ರಹಿಸಲಾಗಿದ್ದು, ಶೇ.82.7ರಷ್ಟಾಗಿದೆ. ಮಾರ್ಚ್ ತಿಂಗಳ ಅಂತ್ಯಕ್ಕೆ ಸುಮಾರು ರೂ.1,77,000 ಕೋಟಿಗಳಷ್ಟು ಸಂಗ್ರಹವಾಗಬಹುದು. ಇದು ನಾವು ನಿರೀಕ್ಷೆ ಮಾಡಿದ್ದಕ್ಕಿಂತ ತುಸು ಕಡಿಮೆ. ಇದು ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಇಡೀ ದೇಶದಲ್ಲಿಯೂ ಸಂಭವಿಸುತ್ತಿದೆ. ಕರ್ನಾಟಕವು ದೇಶದ ಒಂದು ಭಾಗ. ದೇಶದಲ್ಲಿ ನಡೆಯುವ ಬೆಳವಣಿಗೆಗಳು ರಾಜ್ಯದ ಮೇಲೂ ಪರಿಣಾಮ ಬೀರುತ್ತವೆ. ಇದು ದೇಶದ ಆರ್ಥಿಕ ಬೆಳವಣಿಗೆಯು ಸಮರ್ಪಕವಾಗಿಲ್ಲ ಎಂಬುದನ್ನು ತೋರಿಸುತ್ತದೆ.

15. ತಮಗೆಲ್ಲರಿಗೂ ತಿಳಿದಿರಲಿ, ನಾನು ಮೊದಲೇ ಹೇಳಿದ ಹಾಗೆ 2024-25 ರಲ್ಲಿ ಸನ್ಮಾನ್ಯ ನರೇಂದ್ರ ಮೋದಿಯವರ ಸರ್ಕಾರವು ರೂ. 48.21 ಲಕ್ಷ ಕೋಟಿಗಳ ಬಜೆಟ್ ಮಂಡಿಸಿತ್ತು. ಆದರೆ, ಪರಿಷ್ಕೃತ ಅಂದಾಜುಗಳ ಪ್ರಕಾರ, ರೂ.1.05 ಲಕ್ಷ ಕೋಟಿಗಳಷ್ಟು ತೆರಿಗೆ ಸಂಗ್ರಹಣೆ ಕಡಿಮೆಯಾಗುತ್ತದೆ ಎಂದು ಕೇಂದ್ರ ಸರ್ಕಾರ ಅಂದಾಜು ಮಾಡಿದೆ. ಹಾಗಾಗಿ 2024-25 ರ ಬಜೆಟ್‌ನ್ನು ರೂ. 47.16 ಲಕ್ಷ ಕೋಟಿಗೆ ಪರಿಷ್ಕರಣೆ ಮಾಡಿದೆ.

16. ರಾಜ್ಯವು ಅಭಿವೃದ್ಧಿ ಹೊಂದುತ್ತಿದೆ. 2022-23 ರಲ್ಲಿ ರೂ.2,65,720 ಕೋಟಿಗಳಷ್ಟಿದ್ದ ಆಯವ್ಯಯ ಗಾತ್ರ 2025-26ನೇ ಸಾಲಿಗೆ ರೂ. 4,09,549 ಕೋಟಿಗಳಿಗೆ ಏರಿಕೆ ಆಗುತ್ತದೆ. ವ್ಯತ್ಯಾಸ 2022-23ಕ್ಕೆ ಹೋಲಿಸಿದರೆ ರೂ. 1,43,829 ಕೋಟಿಗಳಷ್ಟಾಗುತ್ತದೆ. ನಮ್ಮ ಆಯವ್ಯಯ ಗಾತ್ರ ಶೇ.54.12 ರಷ್ಟು ಹೆಚ್ಚಾಗಿದೆ.

17. ಗ್ಯಾರಂಟಿ ಯೋಜನೆಗಳ ಕುರಿತು ರಾಜ್ಯಪಾಲರ ಭಾಷಣದ ಮೇಲೆ ನಾನು ವಿವರವಾಗಿ ಮಾತನಾಡಿದ್ದೇನೆ. ಈ ವರ್ಷ ಗ್ಯಾರಂಟಿ ಯೋಜನೆಗಳಿಗೆ ರೂ.51,034 ಕೋಟಿಗಳನ್ನು ನಾನು ಒದಗಿಸಿದ್ದೇನೆ. ನಾನು ಮೊದಲೇ ಹೇಳಿದ ಹಾಗೆ, ನಮ್ಮ ಸರ್ಕಾರ ಜನರ ಕಲ್ಯಾಣವನ್ನು ಹಾಗೂ ರಾಜ್ಯದ ಅಭಿವೃದ್ಧಿಯನ್ನು ಏಕಕಾಲದಲ್ಲಿ ಸರಿದೂಗಿಸಿಕೊಂಡು ಹೋಗಲು ಪ್ರಯತ್ನಿಸುತ್ತಿದೆ. ಅಭಿವೃದ್ಧಿ ಕುರಿತ ಜಗತ್ತಿನ ವ್ಯಾಖ್ಯಾನಗಳು ಬದಲಾಗುತ್ತಿವೆ. ಜನರ ಕೊಳ್ಳುವ ಶಕ್ತಿ ಹೆಚ್ಚಾದರೆ, ಆರ್ಥಿಕತೆಯ ಪ್ರಗತಿ ವೇಗವಾಗುತ್ತದೆ. ಜನರಲ್ಲಿ ಕೊಳ್ಳುವ ಶಕ್ತಿ ಇಲ್ಲದಿದ್ದರೆ ಆರ್ಥಿಕತೆ ಅಂಗವಿಕಲವಾಗುತ್ತದೆ. ಇದೇ ಗುಜರಾತಿನ ಮಾದರಿಗೂ ಕರ್ನಾಟಕದ ಮಾದರಿಗೂ ಇರುವ ವ್ಯತ್ಯಾಸ.

**<u>ವಿತ್ತೀಯ ಶಿಸ್ತು</u>**

18. ವಿತ್ತೀಯ ಕೊರತೆಯು ಜಿ.ಎಸ್.ಡಿ.ಪಿ.ಯ ಶೇ.3 ರಷ್ಟನ್ನು ಮೀರಬಾರದು ಎಂದಿದೆ. ಅದರಂತೆ ನಮ್ಮ ವಿತ್ತೀಯ ಕೊರತೆಯು ಶೇ.2.95 ರಷ್ಟಿದೆ. ಹಾಗೆಯೇ ಜಿ.ಎಸ್.ಡಿ.ಪಿ ಗೆ ಎದುರಾಗಿ ನಮ್ಮ ಹೊಣೆಗಾರಿಕೆಗಳು ಶೇ.25 ರಷ್ಟನ್ನು ಮೀರಬಾರದು ಎಂದಿದೆ. 2025-26ರ ಹೊಣೆಗಾರಿಕೆ ಶೇ.24.91 ರಷ್ಟಾಗುತ್ತದೆ.

19. ಕರ್ನಾಟಕವು 2021-22 ರಲ್ಲಿ ಶೇ.26.71 ರಷ್ಟು ಹೊಣೆಗಾರಿಕೆಯನ್ನು ಹೊಂದಿತ್ತು. 2021-22 ರಲ್ಲಿ ವಿತ್ತೀಯ ಕೊರತೆ ಶೇ. 3.03 ರಷ್ಟಿತ್ತು.

20. ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ರೂ. 51,000 ಕೋಟಿಗಳು ಸೇರಿದಂತೆ ಇತರೆ ಎಲ್ಲಾ ಕಲ್ಯಾಣ ಯೋಜನೆಗಳಿಗೆ ಹಾಗೂ ಸಹಾಯಧನಗಳಿಗೆ ಸುಮಾರು ರೂ. 1.00,000 ಕೋಟಿಗಳವರೆಗೆ ವಿನಿಯೋಗಿಸುತ್ತಿದೆ.

ಇವೆಲ್ಲವೂ ಮಧ್ಯವರ್ತಿಗಳಿಲ್ಲದೇ ಜನರಿಗೆ ನೇರವಾಗಿ ತಲುಪುವ ಕಾರ್ಯಕ್ರಮಗಳಾಗಿವೆ. (ಗ್ಯಾರಂಟಿ ಯೋಜನೆಗಳಿಗೆ ರೂ.51,000 ಕೋಟಿ, ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಲು ರೂ.18,000 ಕೋಟಿ, ವಿವಿಧ ಸಾಮಾಜಿಕ ಪಿಂಚಣಿ ಯೋಜನೆಗಳಿಗೆ ರೂ.10,835 ಕೋಟಿಗಳು ಹಾಗೂ ಮನೆ ನಿರ್ಮಾಣದ ಸಬ್ಸಿಡಿ, ವಿದ್ಯಾರ್ಥಿ ವೇತನ ಸೇರಿದಂತೆ ಇತರೆ ಎಲ್ಲಾ ಇಲಾಖೆಗಳ ಸಹಾಯಧನಗಳು, ಹಾಲಿನ ಉತ್ಪಾದಕರಿಗೆ ನೀಡುವ ಪ್ರೋತ್ಸಾಹ ಧನ, ಇತ್ಯಾದಿ ಎಲ್ಲವೂ ಸೇರಿ ಸುಮಾರು ರೂ. 20,000 ಕೋಟಿಗಳು) ಇವೆಲ್ಲಾ ಸೇರಿ ಒಟ್ಟಾರೆ 1 ಲಕ್ಷ ಕೋಟಿ ರೂಪಾಯಿಗಳಾಗುತ್ತದೆ.

21. 2024-25 ರಲ್ಲಿ ಸರ್ಕಾರಿ ನೌಕರರ ಸಂಬಳಕ್ಕಾಗಿ ರೂ.71,862 ಕೋಟಿಗಳು ಮತ್ತು ಪಿಂಚಣಿಗೆ ರೂ.30,907 ಕೋಟಿಗಳು ಸೇರಿ ಒಟ್ಟು ರೂ. 1,02,769 ಕೋಟಿಗಳು ವೆಚ್ಚವಾಗಬಹುದೆಂದು ಪರಿಷ್ಕೃತ ಅಂದಾಜಿನಲ್ಲಿ ಅಂದಾಜು ಮಾಡಲಾಗಿದೆ. 7ನೇ ವೇತನ ಆಯೋಗ ಜಾರಿ ಆಗಿರುವುದರಿಂದ 2025-26 ನೆ ಸಾಲಿಗೆ ಸರ್ಕಾರಿ ನೌಕರರ ಸಂಬಳಕ್ಕಾಗಿ ರೂ. 85,860 ಕೋಟಿಗಳು ಮತ್ತು ಪಿಂಚಣಿಗಾಗಿ ರೂ. 38,580 ಕೋಟಿಗಳು ಸೇರಿ ಒಟ್ಟು ವೇತನಗಳಿಗಾಗಿ ರೂ. 1,24,440 ಕೋಟಿಗಳ ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದೆ. ಬಡ್ಡಿ ಪಾವತಿಗಾಗಿ ರೂ. 45,600 ಕೋಟಿಗಳು ವೆಚ್ಚ ಮಾಡಬೇಕಾಗುತ್ತದೆ. ವೇತನ, ಪಿಂಚಣಿ ಮತ್ತು ಬಡ್ಡಿ ಪಾವತಿಗಳಿಗಾಗಿ ಒಟ್ಟು ರೂ. 1,70,040 ಕೋಟಿಗಳು ಬೇಕು.

22. 2025-26 ರಲ್ಲಿ ನಾನು 16ನೇ ಬಜೆಟ್ ಮಂಡಿಸಿದ್ದೇನೆ. ನನಗೆ ದಾಖಲೆಗಳನ್ನು ಮಾಡುವುದರಲ್ಲಿ ನಂಬಿಕೆಯಿಲ್ಲ. ನಾನು ಮಂಡಿಸಿದ ಬಜೆಟ್ ಬಡವರ, ಮಹಿಳೆಯರ, ಮಕ್ಕಳ, ಶೋಷಿತರ, ದುರ್ಬಲ ವರ್ಗದವರ, ಯುವಜನರ, ಕಾರ್ಮಿಕರ, ರೈತರ, ಹಿಂದುಳಿದವರ, ಅಲ್ಪಸಂಖ್ಯಾತರ ಏಳಿಗೆಯನ್ನು ಹಾಗೂ ಸಂಪತ್ತನ್ನು ಉತ್ಪಾದನೆ ಮಾಡುವವರ ಹಿತರಕ್ಷಣೆಯನ್ನು ಗಮನದಲ್ಲಿ ಇಟ್ಟುಕೊಂಡು ನಾಡಿನ ಮೂಲಭೂತ ಸೌಲಭ್ಯಗಳಿಗೆ ಆದ್ಯತೆ ನೀಡುವ ಮೂಲಕ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನ ಮಾಡುವ ಮೂಲಕ ಕರ್ನಾಟಕವನ್ನು ಸಮಗ್ರ ಹಾಗೂ ಸುಸ್ಥಿರ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಶ್ರಮಿಸುವ ನಿಟ್ಟಿನಲ್ಲಿ ನಾನು ಬಜೆಟ್‌ಗಳನ್ನು ರೂಪಿಸಿದ್ದೇನೆ. ಈ ಬಾರಿಯೂ ಅದೇ ಕೆಲಸವನ್ನು ಮಾಡಿದ್ದೇನೆ ಎಂಬುದು ನನ್ನ ಧೃಢವಾದ ನಂಬಿಕೆ.

23. ಈ ಬಾರಿ ನಮ್ಮ ಸರ್ಕಾರ ಮಂಡಿಸಿರುವ ಆಯವ್ಯಯವು ಗ್ಯಾರಂಟಿ ಯೋಜನೆಗಳ ಆಯವ್ಯಯ ಅಷ್ಟೇ ಅಲ್ಲ, ಇದು Welfare Beyond Guarantees ಎಂದು ನಾನು ಹೆಮ್ಮೆಯಿಂದ ಹೇಳಬಯಸುತ್ತೇನೆ. ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು, ಬಿಸಿಯೂಟ ತಯಾರಕರಿಗೆ ತಲಾ ರೂ. 1,000ಗಳು ಹೆಚ್ಚು ಮಾಡಿದ್ದೇವೆ. ಅತಿಥಿ ಉಪನ್ಯಾಸಕರು, ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ತಲಾ ರೂ. 2,000ಗಳು ಹೆಚ್ಚು ಮಾಡಿದ್ದೇವೆ. ಪತ್ರಕರ್ತರಿಗೆ ತಲಾ ರೂ.3,000ಗಳು ಕಲಾವಿದರಿಗೆ ತಲಾ ರೂ. 500 ಮತ್ತು ಕುಸ್ತಿ ಪಟುಗಳಿಗೆ ತಲಾ ರೂ. 1,000ಗಳು ಹೆಚ್ಚು ಮಾಡಿದ್ದೇವೆ.

24. ಎಲ್ಲಾ ಧರ್ಮದ ಪುರೋಹಿತರಿಗೆ ಸಮಾನವಾಗಿ ಮಾಸಿಕ ರೂ. 6,000ಗಳು ಗೌರವಧನ ನೀಡಲು ಉದ್ದೇಶಿಸಲಾಗಿದೆ.

25. ಇಷ್ಟರ ನಡುವೆ, ಬಂಡವಾಳ ವೆಚ್ಚಗಳಿಗೆ ಈ ವರ್ಷ ರೂ. 83,200 ಕೋಟಿಗಳನ್ನು ಒದಗಿಸಿದ್ದೇವೆ. ಇಷ್ಟಾದರೂ ಕೂಡ ನಮ್ಮ ವಿತ್ತೀಯ ಶಿಸ್ತು ನಿಯಮಗಳಿಗೆ ಅನುಗುಣವಾಗಿಯೇ ಇದೆ.

26. 2025-26ನೇ ಸಾಲಿಗೆ ಸಂಬಂಧಪಟ್ಟಂತೆ ಒಟ್ಟಾರೆ ರಾಜ್ಯದ ರಾಜಸ್ವ ಸ್ವೀಕೃತಿ ರೂ. 2,92,470 ಕೋಟಿಗಳಷ್ಟಾದರೆ ರಾಜಸ್ವ ವೆಚ್ಚ ರೂ. 3,11,739 ಕೋಟಿಗಳಾಗಬಹುದು. ಇದರಿಂದ ರೂ. 19,262 ಕೋಟಿಗಳಷ್ಟು ರಾಜಸ್ವ ಕೊರತೆ ಆಗಬಹುದೆಂದು ಅಂದಾಜಿಸಲಾಗಿದೆ. ಇದು ಕಡಿಮೆ ಕೂಡ ಆಗಲೂಬಹುದು. 2024-25ರ ಬಜೆಟ್ ಮಂಡಿಸಿದಾಗ ರೂ. 27,354 ಕೋಟಿಗಳಷ್ಟು ರೆವಿನ್ಯೂ ಡಿಫಿಸಿಟ್ ಆಗಬಹುದೆಂದು ಅಂದಾಜು ಮಾಡಲಾಗಿತ್ತು. ಆದರೆ ಪರಿಷ್ಕೃತ ಅಂದಾಜಿನಂತೆ ರೂ. 26,127 ಕೋಟಿಗಳಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ. ಒಟ್ಟಾರೆ 2024-25 ಕ್ಕೆ ಹೋಲಿಸಿದರೆ 2025-26 ರಲ್ಲಿ ಸುಮಾರು ರೂ. 8,000 ಕೋಟಿಗಳಷ್ಟು ರಾಜಸ್ವ ಕೊರತೆ ಕಡಿಮೆ ಆಗುತ್ತದೆ. 2024-25ರ ಆಯವ್ಯಯದ ಅಂದಾಜಿನಲ್ಲಿ ರಾಜಸ್ವ ಕೊರತೆಯು ಜಿ.ಎಸ್.ಡಿ.ಪಿ.ಯ ಶೇ.0.96 ರಿಂದ 2025-26ರ ಆಯವ್ಯಯದಲ್ಲಿ ಶೇ.0.63 ಕ್ಕೆ ಇಳಿಕೆಯಾಗಿದೆ. ರಾಜ್ಯಪಾಲರ ಭಾಷಣದ ಮೇಲೆ ನಡೆದ ಚರ್ಚೆಗಳಿಗೆ ಉತ್ತರ ನೀಡುವಾಗ ನಾನು ಹೇಳಿದಂತೆ, 2026-27ನೇ ಸಾಲಿಗೆ ರಾಜ್ಯದ ಬಜೆಟ್ ರಾಜಸ್ವ ಕೊರತೆಯಿಂದ ಹೊರಬರುತ್ತದೆ. ನಾವು ಉಳಿತಾಯ ಬಜೆಟ್‌ನ್ನು ಮಂಡಿಸುತ್ತೇನೆ ಎಂಬ ವಿಶ್ವಾಸ ನನಗಿದೆ.

**ಸಾಲ**

27. ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ, ಕೇಂದ್ರದಲ್ಲಿ ಸನ್ಮಾನ್ಯ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯಗಳ ಆರ್ಥಿಕ ಸ್ಥಿತಿ ಸಂಕಷ್ಟಕ್ಕೆ ಸಿಲುಕಿಕೊಂಡಿದೆ. 2013 ರಿಂದ 2017 ರವರೆಗೆ ಕೇವಲ 04 ರಾಜ್ಯಗಳ ವಿತ್ತೀಯ ಕೊರತೆ ಶೇ.3 ಕ್ಕಿಂತ ಹೆಚ್ಚಿತ್ತು. ಹಾಗೆಯೇ 5 ರಾಜ್ಯಗಳ ಒಟ್ಟು ಹೊಣೆಗಾರಿಕೆಗಳು ಶೇ.25 ಕ್ಕಿಂತ ಹೆಚ್ಚು ಇದ್ದವು. ಆದರೆ 2024-25 ರಲ್ಲಿ ದೇಶದ ಪ್ರಮುಖ 14 ರಾಜ್ಯಗಳ ಪೈಕಿ, 10 ರಾಜ್ಯಗಳ ಒಟ್ಟು ಹೊಣೆಗಾರಿಕೆಗಳು ಶೇ.25 ಕ್ಕಿಂತ ಹೆಚ್ಚಿಗೆ ಇವೆ. ಅದೇ ರೀತಿ, 6 ಕ್ಕಿಂತ ಹೆಚ್ಚು ರಾಜ್ಯಗಳ ವಿತ್ತೀಯ ಕೊರತೆ ಶೇ.3 ಕ್ಕಿಂತ ಹೆಚ್ಚಾಗಿದೆ.

28. ಭಾರತೀಯ ರಿಸರ್ವ್ ಬ್ಯಾಂಕ್ ಇತ್ತೀಚಿಗೆ ಬಿಡುಗಡೆ ಮಾಡಿರುವ ದಾಖಲೆಗಳಂತೆ 2014 ರಲ್ಲಿ ಡಾ.ಮನಮೋಹನ್ ಸಿಂಗ್ ಅವರು ಅಧಿಕಾರದಿಂದ ಇಳಿಯುವ ಸಂದರ್ಭದಲ್ಲಿ ದೇಶದ ಎಲ್ಲಾ ರಾಜ್ಯಗಳ ಒಟ್ಟು ಸಾಲ ರೂ. 25.1 ಲಕ್ಷ ಕೋಟಿಗಳಷ್ಟಿತ್ತು. (ಮಾರ್ಚ್ 31-2014) 2024 ರ ಮಾರ್ಚ್-31 ರ ವೇಳೆಗೆ ರೂ. 83.32 ಲಕ್ಷ ಕೋಟಿಳಷ್ಟು ಎಂದು ಆರ್.ಬಿ.ಐ ದಾಖಲೆ ಬಿಡುಗಡೆ ಮಾಡಿದೆ. ಈ ವರ್ಷದ ಕೊನೆಗೆ ಎಲ್ಲಾ ರಾಜ್ಯಗಳ ಸಾಲದ ಪ್ರಮಾಣ ರೂ. 95-100 ಲಕ್ಷ ಕೋಟಿಗಳಷ್ಟಾಗಬಹುದು.

29. ರಾಜ್ಯಗಳ ಪರಿಸ್ಥಿತಿ ಈ ರೀತಿ ಇದೆ. ಕೇಂದ್ರ ಸರ್ಕಾರವು ಕೂಡ ಸಾಲದಲ್ಲಿ ಮುಳುಗಿದೆ. 2014 ರಲ್ಲಿ ದೇಶದ ಸಾಲ ಸುಮಾರು ರೂ. 53.11 ಲಕ್ಷ ಕೋಟಿಗಳಷ್ಟಿತ್ತು. ಆದರೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು 2025-26 ನೇ ಸಾಲಿನ ಬಜೆಟ್ ಮಂಡಿಸಿ, ಕೇಂದ್ರ ಸರ್ಕಾರ ಮಾಡಿರುವ ಸಾಲದ ಪ್ರಮಾಣ ರೂ. 200.16 ಲಕ್ಷ ಕೋಟಿಗಳಷ್ಟಾಗಬಹುದೆಂದು ಪ್ರಸ್ತಾಪ ಮಾಡಿದ್ದಾರೆ.

30. ರಾಜ್ಯಗಳೂ ಹೆಚ್ಚು ಸಾಲ ಮಾಡುವಂತಾಗಿದೆ. ಕೇಂದ್ರವೂ ಹೆಚ್ಚು ಸಾಲ ಮಾಡುತ್ತಿದೆ. ಒಟ್ಟಾರೆ ವೆಚ್ಚದಲ್ಲಿ ರಾಜ್ಯಗಳ ಪಾಲು ಶೇ.60-65 ರಷ್ಟು ಇರಬೇಕು ಎಂಬುದು ಮೊದಲಿನಿಂದ ನಡೆದುಕೊಂಡು ಬಂದ ನಿಯಮ. ಆದರೆ ಈಗ ಅದು ವ್ಯತ್ಯಾಸವಾಗುತ್ತಿದೆ. ಕೇಂದ್ರವು ಸೆಸ್‌ಗಳ ನೆಪದಲ್ಲಿ ಸುಲಿಗೆ ಮಾಡುತ್ತಿದೆ. ಸೆಸ್‌ಗಳನ್ನು ತೆರಿಗೆ ಪಾಲಿನ ವ್ಯಾಪ್ತಿಗೆ ಒಳಪಡಿಸಬೇಕು ಎಂಬುದು ನಮ್ಮ ಒತ್ತಾಯವಾಗಿದೆ. 16ನೇ ಹಣಕಾಸು ಆಯೋಗದ ಮುಂದೆ ಇದೇ ಬೇಡಿಕೆಯನ್ನಿಟ್ಟಿದ್ದೇವೆ. ಇದರ ಜೊತೆಗೆ ತೆರಿಗೆ ಪಾಲಿನಲ್ಲೂ ಕೂಡ ನಮಗೆ ಶೇ. 50 ರಷ್ಟು ಕೊಡಬೇಕು ಎಂಬ ಬೇಡಿಕೆಯನ್ನು ಇಟ್ಟಿದ್ದೇವೆ.

31. ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರು ರಾಜ್ಯ ಸರ್ಕಾರವು ಈವರೆಗೆ ಪಡೆದಿರುವ ಒಟ್ಟು ಸಾಲದಲ್ಲಿ ಮಾನ್ಯ ಸಿದ್ದರಾಮಯ್ಯನವರ ಪಾಲು ಹೆಚ್ಚಿದ್ದು, ಇವರ ಅಧಿಕಾರಾವಧಿಯಲ್ಲಿ ರಾಜ್ಯವು ಸಾಲದ ಸುಳಿಯಲ್ಲಿ ಸಿಲುಕಿದೆ ಎಂದು ಆರೋಪಿಸಿದ್ದಾರೆ.

32. ವಾಸ್ತವ ಸಂಗತಿ ಏನೆಂದರೆ, 2013-14 ರಿಂದ 2017-18 ಹಾಗೂ 2023-24 ರಿಂದ 2024-25 (BE) ರವರೆಗೆ ನನ್ನ ಸರ್ಕಾರದ ಅವಧಿಯಲ್ಲಿ ರಾಜ್ಯ ಸರ್ಕಾರ ಪಡೆದಿರುವ ಒಟ್ಟು ಸಾಲವು ರೂ. 3,21,037 ಕೋಟಿಗಳು. ಈ ಅವಧಿಯಲ್ಲಿ ಹಿಂದಿನ ಸರ್ಕಾರಗಳು ಮಾಡಿದ ಸುಮಾರು ರೂ. 75,856 ಕೋಟಿಗಳನ್ನು ನಾನು ತೀರಿಸಿರುತ್ತೇನೆ. ಅಲ್ಲದೇ ಈ ಅವಧಿಯಲ್ಲಿ ನಾನು ರೂ. 2,37,524 ಕೋಟಿಗಳಷ್ಟು ಅನುದಾನವನ್ನು ಬಂಡವಾಳ ಕಾಮಗಾರಿಗಳಿಗೆ ನೀಡಿರುತ್ತೇನೆ.

33. ಅಲ್ಲದೇ ಬಂಡವಾಳ ಯೋಜನೆಗಳಿಗೆ ಅನುದಾನ ಒದಗಿಸುವ ಮೂಲಕ ರಾಜ್ಯದ ಮೂಲಸೌಕರ್ಯ ಅಭಿವೃದ್ಧಿಯಾಗಿರುತ್ತದೆ. ಮಾಹಿತಿ ತಂತ್ರಜ್ಞಾನ, ಕೈಗಾರಿಕೆ, ವಾಣಿಜ್ಯೋದ್ಯಮ ಕ್ಷೇತ್ರದಲ್ಲಿ ಮಹತ್ತರ ಬೆಳವಣಿಗೆಯಾಗಿರುತ್ತದೆ. ಇದರಿಂದ ರಾಜ್ಯದಲ್ಲಿ ಹೂಡಿಕೆಗಳು ಹೆಚ್ಚಳವಾಗಿದ್ದು ಆರ್ಥಿಕ ಚಟುವಟಿಕೆಗಳು ಹೆಚ್ಚಾಗಿರುತ್ತವೆ. ಇದರ ಪರಿಣಾಮವಾಗಿ ದೇಶದಲ್ಲಿ ಹೆಚ್ಚು ತೆರಿಗೆ ಸಂಗ್ರಹಿಸುವ ರಾಜ್ಯಗಳಲ್ಲಿ ಕರ್ನಾಟಕವು ಪ್ರಮುಖ ರಾಜ್ಯವಾಗಿದೆ. 2012-13 ರಲ್ಲಿ ರೂ. 57,720 ಕೋಟಿಗಳಿದ್ದ ರಾಜ್ಯದ ಸ್ವಂತ ರಾಜಸ್ವವು 2025-26 ರಲ್ಲಿ ರೂ. 2,24,600 ಕೋಟಿಗಳಿಗೆ ಹೆಚ್ಚಾಗಿರುತ್ತದೆ. ದೇಶದಲ್ಲಿ ಅತಿ ಹೆಚ್ಚು ಜಿ.ಎಸ್.ಟಿ. ತೆರಿಗೆ ಸಂಗ್ರಹಿಸುವ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವು ಎರಡನೇ ಸ್ಥಾನದಲ್ಲಿದೆ.

34. ನನ್ನ ಸರ್ಕಾರದ ಅವಧಿಯಲ್ಲಿ ರಾಜ್ಯ ಸರ್ಕಾರವು ರೂ. 3.12 ಲಕ್ಷ ಕೋಟಿಗಳು ಸಾಲ ಪಡೆದಿರುವುದು ನಿಜ. ಆದರೆ ಈ ಸಾಲವನ್ನು ಬಂಡವಾಳ ಯೋಜನೆಗಳಿಗೆ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಸಮರ್ಪಕವಾಗಿ ಬಳಕೆ

ಮಾಡುವ ಮೂಲಕ ರಾಜ್ಯದ ಆರ್ಥಿಕ ಪ್ರಗತಿಗೆ ವಿನಿಯೋಗಿಸಲಾಗಿರುತ್ತದೆ. ಅಲ್ಲದೇ, ನನ್ನ ಸರ್ಕಾರದ ಅವಧಿಯಲ್ಲಿ ಇದುವರೆಗೂ ಮಾಡಿರುವ ಸಾಲವು ಕೇಂದ್ರ ಸರ್ಕಾರ ವಿಧಿಸಿರುವ ಮಿತಿಯೊಳಗೇ ನಿರ್ವಹಿಸಲಾಗಿರುತ್ತದೆ ಹಾಗೂ ನಮ್ಮ ಅಧಿಕಾರಾವಧಿಯಲ್ಲಿ ವಿತ್ತೀಯ ಶಿಸ್ತನ್ನು ಕಡ್ಡಾಯವಾಗಿ ಪಾಲನೆ ಮಾಡಿರುತ್ತೇನೆ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ.

35. ನನ್ನ ಸರ್ಕಾರದ ಅವಧಿಯಲ್ಲಿ ಬಂಡವಾಳ ಯೋಜನೆಗಳಿಗೆ ಸಮರ್ಪಕ ಅನುದಾನ ನೀಡಿದ್ದ ಕಾರಣ, ರಾಜ್ಯದ ಜಿ.ಎಸ್.ಡಿ.ಪಿ.ಯು 2012-13 ರಲ್ಲಿ ರೂ. 6.95 ಲಕ್ಷ ಕೋಟಿಗಳಿಂದ 2025-26 ರಲ್ಲಿ ರೂ.30.70 ಲಕ್ಷ ಕೋಟಿಗಳಿಗೆ ಹೆಚ್ಚಾಗಿದೆ. ರಾಜ್ಯದ ಜಿ.ಎಸ್.ಡಿ.ಪಿ.ಯು ಈ ಅವಧಿಯಲ್ಲಿ 23.75 ಲಕ್ಷ ಕೋಟಿಗಳಷ್ಟು ಹೆಚ್ಚಾಗಿದೆ.

36. ಇದಿಷ್ಟೆ ಅಲ್ಲದೇ ಈ ಸದನಕ್ಕೆ ಇನ್ನೊಂದು ಮಾಹಿತಿ ತಿಳಿಸಬಯಸುತ್ತೇನೆ. ಕೋವಿಡ್-19 ಸಂದರ್ಭದಲ್ಲಿ ಕೇಂದ್ರ ಸರ್ಕಾರ ಒಂದು ಆಟ ಆಡಿತು. ಅದೇನಪ್ಪಾ ಅಂದರೆ, ನಾವು 2026 ರವರೆಗೆ ಜಿ.ಎಸ್.ಟಿ. ಪರಿಹಾರದ ಸೆಸ್ ಅನ್ನು ಸಂಗ್ರಹಿಸುತ್ತೇವೆ. ಅದರ ಬದಲಾಗಿ ನಾವೇ ಸಾಲ ತೆಗೆದು ನಿಮಗೆ ಕೊಡುತ್ತೇವೆ. ಆದ್ದರಿಂದ, ನೀವು ವಿದ್ಯುತ್ ಸುಧಾರಣೆ, ತೆರಿಗೆ ಸಂಗ್ರಹ ಇವುಗಳನ್ನು ಬಿಗಿಗೊಳಿಸಬೇಕು ಎಂದು ಹೇಳಿದ್ದಾರೆ. ನಮ್ಮ ಆರ್ಥಿಕ ಇಲಾಖೆಯವರು ಅದನ್ನು ರಾಜ್ಯದ ಸಾಲದ ವ್ಯಾಪ್ತಿಯಿಂದ ಹೊರಗಿಟ್ಟರು. ವಾಸ್ತವವಾಗಿ ಅಕೌಂಟೆಂಟ್ ಜನರಲ್ ಅವರ ಲೆಕ್ಕದ ಪ್ರಕಾರ ಅದು ರಾಜ್ಯದ ವ್ಯಾಪ್ತಿಗೆ ಬರುತ್ತದೆ. ಆದರೆ, ಕೇಂದ್ರ ಸರ್ಕಾರವು ಅದನ್ನು ಹೊರಗಿಡಬೇಕು ಎಂದು ವಿನಂತಿ ಮಾಡಿದ್ದರಿಂದ ಅಕೌಂಟೆಂಟೆ ಜನರಲ್ ರವರು ಮೌನವಾಗಿದ್ದಾರೆ.

37. 2020-21 ರಲ್ಲಿ ಆರ್ಥಿಕ ಇಲಾಖೆಯ ಪ್ರಕಾರ ರೂ. 72,121 ಕೋಟಿಗಳು. ಕೇಂದ್ರ ಸರ್ಕಾರದ ಜಿ.ಎಸ್.ಟಿ. ಪರಿಹಾರದ ಬದಲಾಗಿ ಪಡೆದುಕೊಟ್ಟ ಸಾಲ ರೂ.12,407 ಕೋಟಿಗಳು, ವಾಸ್ತವ ವಿತ್ತೀಯ ಕೊರತೆ ಸ್ಥಿತಿ ಶೇ.4.69 ಆಗುತ್ತದೆ. 2021-22 ರಲ್ಲಿ ಆರ್ಥಿಕ ಇಲಾಖೆಯ ಪ್ರಕಾರ ರೂ. 65,532 ಕೋಟಿಗಳು. ಆದರೆ ಕೇಂದ್ರ ಸರ್ಕಾರದ ಜಿ.ಎಸ್.ಟಿ. ಪರಿಹಾರದ ಬದಲಾಗಿ ಪಡೆದುಕೊಟ್ಟ ಸಾಲ ರೂ. 18,109 ಕೋಟಿಗಳು, ವಾಸ್ತವ ವಿತ್ತೀಯ ಕೊರತೆ ಸ್ಥಿತಿ ಶೇ. 4.86 ಆಗುತ್ತದೆ.

38. ಇದನ್ನು ನಮ್ಮ ಲೆಕ್ಕದಲ್ಲಿ ಸೇರಿಸಬೇಕು. ಏಕೆಂದರೆ, ನಮ್ಮ ಜನರಿಂದ 2026 ರವರೆಗೆ ಜಿ.ಎಸ್.ಟಿ. ಸೆಸ್ ಅನ್ನು ಕೇಂದ್ರ ಸರ್ಕಾರ ಸಂಗ್ರಹಿಸುತ್ತಿದೆ. ಅದರಲ್ಲಿ ನಮಗೆ ಪಾಲು ಕೊಡಿ ಎಂದರೆ ನಿಮಗೆ ಸಾಲ ಕೊಟ್ಟಿದೇವೆ ಅದನ್ನು ತೀರಿಸುತ್ತಿದ್ದೇವೆ ಎನ್ನುತ್ತಾರೆ. ನಮಗಿರುವ ಮಾಹಿತಿಯ ಪ್ರಕಾರ ಅವರು ಕೊಟ್ಟ ಸಾಲ ರೂ. 30,516 ಕೋಟಿಗಳು 2024ಕ್ಕೇ ಮುಗಿದು ಹೋಗಿದೆ.

39. ಇನ್ನೂ ಆಶ್ಚರ್ಯಕರ ವಿಚಾರವೆಂದರೆ, ಮಾನ್ಯ ವಿರೋಧ ಪಕ್ಷದವರು 2022-23 ರಲ್ಲಿ ರೂ. 44,549 ಕೋಟಿ ಸಾಲ ತೆಗೆದುಕೊಳ್ಳಲಾಗಿತ್ತು ಎಂದು ಹೇಳಿದ್ದಾರೆ. ವಾಸ್ತವ ಸ್ಥಿತಿ ಏನೆಂದರೆ, ಇಲ್ಲಿ ಕೇಂದ್ರ ಸರ್ಕಾರ ಚುನಾವಣಾ ರಾಜಕೀಯ ಮಾಡಿದೆ. 2023 ರಲ್ಲಿ ಚುನಾವಣೆ ಬರುತ್ತಿರುವುದನ್ನು ಗಮನಿಸಿದ ಕೇಂದ್ರ ಸರ್ಕಾರ ಮಹಾಲೇಖಪಾಲರ ಆಡಿಟ್ ಆಗುವುದಕ್ಕೆ ಮೊದಲೇ ಅಲ್ಲಿಯವರೆಗೂ ಬಾಕಿ ಇದ್ದ ಜಿ.ಎಸ್.ಟಿ. ಪರಿಹಾರವಾದ ರೂ. 20,288

ಕೋಟಿಗಳನ್ನು ಏಕಕಾಲಕ್ಕೆ ಬಿಡುಗಡೆ ಮಾಡಿತು. ಇದರಿಂದಾಗಿ ಆ ವರ್ಷ ಸಾಲದ ಪ್ರಮಾಣ ಸ್ವಲ್ಪ ಕಡಿಮೆ ಆಯಿತು. ಅದರ ಹೊರತಾಗಿ ಬೇರೆ ಇನ್ಯಾವ ಕಾರಣಗಳು ಇಲ್ಲ.

**ರಾಜ್ಯವು ಹಣಕಾಸಿನ ಕೊರತೆ ಎದುರಿಸಲು ಮುಖ್ಯ ಕಾರಣ**

40. ವಿರೋಧ ಪಕ್ಷದವರು ರಾಜ್ಯದ ಹಣಕಾಸಿನ ಸ್ಥಿತಿಯ ಬಗ್ಗೆ ಮಾತನಾಡುವಾಗ ಎರಡು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಮೊದಲನೆಯದಾಗಿ, ತೆರಿಗೆ ಸಂಗ್ರಹಣೆ ಸಮರ್ಪಕವಾಗಿಲ್ಲ. ಎರಡನೆಯದಾಗಿ ಪರೋಕ್ಷವಾಗಿ ಗ್ಯಾರಂಟಿ ಯೋಜನೆಗಳಿಂದಲೇ ರಾಜ್ಯದ ಹಣಕಾಸಿನ ಪರಿಸ್ಥಿತಿ ಕ್ಲಿಷ್ಟಕರವಾಗಿದೆ ಎಂದು ವ್ಯಾಖ್ಯಾನಿಸಲು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ.

41. ಆದರೆ ವಾಸ್ತವ ಸಂಗತಿಗಳು ಬೇರೆಯದೇ ಆಗಿವೆ. ಕೇಂದ್ರ ಸರ್ಕಾರವು ತೆರಿಗೆ ಹಂಚಿಕೆ ಹಾಗೂ ಸಂಪನ್ಮೂಲ ಹಂಚಿಕೆಯಲ್ಲಿ ಮಾಡಿದ ದ್ರೋಹ ಮೊದಲ ಕಾರಣವಾಗಿದೆ. ಎರಡನೆಯದಾಗಿ ಹಿಂದೆ ಆಡಳಿತ ನಡೆಸಿದ್ದ ಮಾನ್ಯ ಬಿ.ಎಸ್. ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರಗಳ ಆರ್ಥಿಕ ಅಶಿಸ್ತು ಹಾಗೂ ಅರಾಜಕ ಆಡಳಿತದಿಂದಾಗಿ ಸಮಸ್ಯೆಗಳು ಉದ್ಭವಿಸಿವೆ. ಈ ಎರಡನ್ನೂ ಬಚ್ಚಿಡಲು ವಿರೋಧ ಪಕ್ಷದವರು ಜನರಿಗೆ ನೀಡುತ್ತಿರುವ ಕಲ್ಯಾಣ ಕಾರ್ಯಕ್ರಮಗಳನ್ನು ಹಾಗೂ ಅದನ್ನು ಅನುಷ್ಠಾನ ಮಾಡುತ್ತಿರುವ ಸರ್ಕಾರವನ್ನು ಟೀಕಿಸುತ್ತಿದ್ದಾರೆ. ಇದು ಸರಿಯಾದ ಕ್ರಮ ಅಲ್ಲ. ರಾಜ್ಯದ ಆರ್ಥಿಕತೆಯ ಬಗ್ಗೆ ಕಿಂಚಿತ್ತಾದರೂ ತಿಳುವಳಿಕೆ ಇರುವವರು ವರ್ತಿಸುವ ರೀತಿ ಇದಲ್ಲ.

42. 2018-19ರಲ್ಲಿ ಕೇಂದ್ರದ ಬಜೆಟ್ ಗಾತ್ರ ರೂ. 24.42 ಲಕ್ಷ ಕೋಟಿಗಳು ಇದ್ದಾಗ ರಾಜ್ಯಕ್ಕೆ ತೆರಿಗೆ ಪಾಲು ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಿಂದ ರೂ. 46,288 ಕೋಟಿಗಳು ಬಂದಿತ್ತು. ಈಗ ಕೇಂದ್ರದ ಬಜೆಟ್ ಗಾತ್ರ ರೂ. 50.65 ಲಕ್ಷ ಕೋಟಿಗಳು ಮೀರಿದೆ. 2018-19 ಕ್ಕೆ ಹೋಲಿಸಿದರೆ ಶೇ.100 ರಷ್ಟು ಹೆಚ್ಚಾಗಿದೆ. ಆ ಲೆಕ್ಕಕ್ಕೆ ಹೋಲಿಸಿದರೆ 2025-26ನೇ ಸಾಲಿಗೆ ನಮಗೆ ಕನಿಷ್ಠ 1 ಲಕ್ಷ ಕೋಟಿ ರೂಪಾಯಿಗಳಷ್ಟು ತೆರಿಗೆ ಪಾಲು ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಿಂದ ಅನುದಾನ ಬರಬೇಕಾಗಿತ್ತು. ಆ ಅನುದಾನ ನಿರೀಕ್ಷಿತ ಪ್ರಮಾಣದಲ್ಲಿ ಬರಲಿಲ್ಲ. ನಮಗೆ ಸಮರ್ಪಕವಾಗಿ ತೆರಿಗೆ ಪಾಲೂ ಸಿಗುತ್ತಿಲ್ಲ. ಯೋಜನೆಗಳನ್ನೂ ಕೂಡ ತೆಗೆದುಕೊಳ್ಳುತ್ತಿಲ್ಲ.

43. ಕರ್ನಾಟಕಕ್ಕೆ 14 ನೇ ಹಣಕಾಸು ಆಯೋಗವು ಶೇ. 4.71 ರಷ್ಟು ತೆರಿಗೆ ಪಾಲು ನೀಡಿತ್ತು. ಆದರೆ 15 ನೇ ಹಣಕಾಸು ಆಯೋಗವು ಶೇ.3.64 ಕ್ಕೆ ಇಳಿಸಿದರು. ಅಂದರೆ ಶೇ.23 ರಷ್ಟು ಕುಸಿತವಾಯಿತು. ಇದರಿಂದ ಪ್ರತಿ ವರ್ಷ 12 ಸಾವಿರ ಕೋಟಿ ರೂಪಾಯಿ ರಾಜ್ಯಕ್ಕೆ ನಷ್ಟವಾಗುತ್ತಿದೆ. ಇದಷ್ಟೇ ಅಲ್ಲದೆ 15 ನೇ ಹಣಕಾಸು ಆಯೋಗವು ರೂ. 5,495 ಕೋಟಿ ವಿಶೇಷ ಅನುದಾನ ಕೊಡಲು ಶಿಫಾರಸ್ಸು ಮಾಡಿತ್ತು. ಕೆರೆಗಳ ಅಭಿವೃದ್ಧಿಗೆ ರೂ. 3,000 ಕೋಟಿ ಹಾಗೂ ಪೆರಿಫೆರಲ್ ರಿಂಗ್ ರಸ್ತೆ ಅಭಿವೃದ್ಧಿಗೆ ರೂ. 3,000 ಕೋಟಿಗಳು ಶಿಫಾರಸ್ಸು ಮಾಡಿತ್ತು. ಅದನ್ನೂ ಕೂಡ ಕೊಡಲಿಲ್ಲ. ಹಾಗೆಯೇ, ಭದ್ರಾ ಮೇಲ್ದಂಡೆ ಯೋಜನೆಗೆ ರೂ. 5,300 ಕೋಟಿಗಳನ್ನು ಕೊಡುತ್ತೇನೆ ಎಂದು ಹೇಳಿತ್ತು, ಅದನ್ನೂ ಕೊಡದೇ ದ್ರೋಹ ಮಾಡಿದೆ. ಈ ಕುರಿತು ಮಾನ್ಯ ವಿರೋಧ ಪಕ್ಷದವರು ತುಟಿಪಿಟಕ್ಕೆನ್ನುವುದಿಲ್ಲ. ಬದಲಾಗಿ ಸನ್ಮಾನ್ಯ ನರೇಂದ್ರ ಮೋದಿ ಸರ್ಕಾರದ ದ್ರೋಹವನ್ನು ಸಮರ್ಥಿಸಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ದೇಶದ ಪ್ರಮುಖ ರಾಜ್ಯಗಳ ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ವಿವರ**

44. ಮಾನ್ಯ ವಿರೋಧ ಪಕ್ಷದವರು ಕೇಂದ್ರದಿಂದ ವ್ಯಾಪಕ ಪ್ರಮಾಣದಲ್ಲಿ ಅನುದಾನಗಳನ್ನು ರಾಜ್ಯಕ್ಕೆ ತಂದು ರಾಜ್ಯದ ಹೆದ್ದಾರಿ ಹಾಗೂ ರೈಲ್ವೆ ಯೋಜನೆಗಳಿಗೆ ನೀಡಲಾಗಿದೆ ಎಂದು ಮಾನ್ಯ ನರೇಂದ್ರ ಮೋದಿ ಸರ್ಕಾರವನ್ನು ಸಮರ್ಥಿಸುತ್ತಾರೆ. ಆದರೆ ದಿನಾಂಕ 09.12.2024 ರಂದು ಭಾರತೀಯ ರಿಸರ್ವ್ ಬ್ಯಾಂಕ್ ಪ್ರಕಟಿಸಿರುವ ದಾಖಲೆಗಳ ಪ್ರಕಾರ ಸತ್ಯಾಂಶ ಈ ರೀತಿ ಇದೆ. 2004-05ರಲ್ಲಿ ನಿರ್ಮಿಸಿದ ರಸ್ತೆಯ ಕುರಿತು ಮಾಹಿತಿ ಆರ್.ಬಿ.ಐ. ದಾಖಲೆಗಳಲ್ಲಿಲ್ಲ. ಡಾ. ಮನಮೋಹನ್ ಸಿಂಗ್ ಅವರ ನೇತೃತ್ವದ ಸರ್ಕಾರ ಇದ್ದಾಗ 9 ವರ್ಷಗಳಲ್ಲಿ ಕರ್ನಾಟಕದಲ್ಲಿ ಸುಮಾರು 2,329 ಕಿ.ಮೀ. ರಸ್ತೆ ನಿರ್ಮಾಣ ಮಾಡಿತ್ತು. 2014 ರಿಂದ 2024 ರವರೆಗೆ 2,014 ಕಿಮೀ ರಸ್ತೆಯನ್ನು ನಿರ್ಮಿಸಲಾಗಿದೆ. 2005 ರಿಂದ 2014 ರವರೆಗೆ ಸುಮಾರು 9 ವರ್ಷಗಳಲ್ಲಿ 7 ವರ್ಷಗಳ ಕಾಲ ಕಾಂಗ್ರೆಸ್ಸೇತರ ಸರ್ಕಾರಗಳೇ ರಾಜ್ಯದಲ್ಲಿ ಆಡಳಿತ ನಡೆಸಿವೆ. ಆದರೂ ಕೂಡ ಡಾ.ಮನಮೋಹನ್ ಸಿಂಗ್ ಅವರ ಸರ್ಕಾರ ಕರ್ನಾಟಕದ ಅಭಿವೃದ್ಧಿಗೆ ಯಥೇಚ್ಛವಾಗಿ ಅನುದಾನಗಳನ್ನು ಕೊಟ್ಟು ಮೂಲಸೌಕರ್ಯ ನಿರ್ಮಾಣ ಮಾಡಲು ಶ್ರಮಿಸಿತ್ತು.

45. ಇರಲಿ, ಸನ್ಮಾನ್ಯ ನರೇಂದ್ರ ಮೋದಿಯವರು ಅಧಿಕಾರಕ್ಕೆ ಬಂದ ಮೇಲೆ, ಕಳೆದ 10 ವರ್ಷಗಳಲ್ಲಿ ಈ ಹಿಂದೆ ನಿರ್ಮಿಸಿದ್ದಕ್ಕಿಂತ ಕಡಿಮೆ ಉದ್ದದ ಹೆದ್ದಾರಿಯನ್ನು ನಿರ್ಮಿಸಲಾಗಿದೆ. ಆದರೆ, ಮಹಾರಾಷ್ಟ್ರದಲ್ಲಿ 12,210 ಕಿ.ಮೀ., ಉತ್ತರ ಪ್ರದೇಶದಲ್ಲಿ 4,306 ಕಿ.ಮೀ., ಗುಜರಾತ್ ನಲ್ಲಿ 3,405 ಕಿ.ಮೀ., ರಾಜಸ್ಥಾನದಲ್ಲಿ 3,060 ಕಿ.ಮೀ. ಉದ್ದದ ಹೆದ್ದಾರಿಗಳನ್ನು ನಿರ್ಮಾಣ ಮಾಡಲಾಗಿದೆ.

46. ಈ ವರ್ಷ ಇನ್ನೂ ಎಲ್ಲಾ ರಾಜ್ಯಗಳ ಬಜೆಟ್ ಆಗದಿರುವ ಕಾರಣಕ್ಕೆ ನಾನು 2024-25ರ ಬಜೆಟ್‌ಗಳಲ್ಲಿ ಕೇಂದ್ರ ಸರ್ಕಾರದಿಂದ ತೆರಿಗೆ ಪಾಲು ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ಎಷ್ಟೆಷ್ಟು ಅನುದಾನ ರಾಜ್ಯಗಳು ಪಡೆದಿವೆ ಎಂಬುದನ್ನು ಹೇಳುತ್ತೇನೆ.

**ವಿವಿಧ ರಾಜ್ಯಗಳಿಗೆ ಕೇಂದ್ರದಿಂದ ದೊರಕುತ್ತಿರುವ**
**ತೆರಿಗೆ ಪಾಲು ಹಾಗೂ ಸಹಾಯಾನುದಾನಗಳ ವಿವರ**

47. ಈ ಮಾಹಿತಿಯನ್ನೆಲ್ಲಾ ನೋಡಿದರೆ ಕರ್ನಾಟಕದ ಸ್ಥಿತಿ ಏನೆಂದು ಅರ್ಥವಾಗುತ್ತದೆ. ಈ ಮಾಹಿತಿ ಸದನಕ್ಕೆ ಇರಲಿ ಎಂಬ ಉದ್ದೇಶದಿಂದಲೇ ನಾನು ಬಿಜೆಪಿ ಆಡಳಿತದ ಪ್ರಮುಖ ರಾಜ್ಯಗಳು ಹಾಗೂ ಕರ್ನಾಟಕವನ್ನು ಹೋಲಿಕೆ ಮಾಡಿ ಈ ಮಾಹಿತಿಯನ್ನು ನಿಮ್ಮ ಮುಂದಿಡುತ್ತಿದ್ದೇನೆ.

48. ಬಜೆಟ್ ಗಾತ್ರದ ವಿಚಾರದಲ್ಲಿ ನಾವು ಉತ್ತರ ಪ್ರದೇಶ ಮುಂತಾದ ರಾಜ್ಯಗಳ ಜೊತೆಗೆ ಹೋಲಿಸಿಕೊಳ್ಳುವುದಿಲ್ಲ.

49. 2024-25ರ ಬಜೆಟ್‌ನ ಅಂಕಿ-ಅಂಶಗಳನ್ನು ಹೇಳುತ್ತೇನೆ. ನಾನು ಪರಿಷ್ಕೃತ ಅಂದಾಜಿಗೆ ಹೋಗುವುದಿಲ್ಲ. ಉತ್ತರ ಪ್ರದೇಶದ ಒಟ್ಟು ಬಜೆಟ್‌ನಲ್ಲಿ ಶೇ.45 ರವರೆಗೆ ಕೇಂದ್ರ ಸರ್ಕಾರದ ತೆರಿಗೆ ಪಾಲು ಮತ್ತು ಸಹಾಯಾನುದಾನಗಳು ಲಭಿಸುತ್ತವೆ. ಮಧ್ಯಪ್ರದೇಶಕ್ಕೆ ಶೇ.40 ರವರೆಗೆ, ರಾಜಸ್ಥಾನಕ್ಕೆ ಶೇ.24 ರಷ್ಟು ಕೇಂದ್ರ ಸರ್ಕಾರದ ತೆರಿಗೆ ಪಾಲು ಮತ್ತು ಸಹಾಯಾನುದಾನಗಳು ಲಭಿಸುತ್ತವೆ. ಆದರೆ ಅಭಿವೃದ್ಧಿಯಲ್ಲಿ ಪ್ರತಿಸ್ಪರ್ಧಿಗಳಾಗಿರುವ ಕರ್ನಾಟಕ,

ಮಹಾರಾಷ್ಟ್ರ, ಗುಜರಾತ್ ಈ ಮೂರು ರಾಜ್ಯಗಳ ಸ್ಥಿತಿ ಹೋಲಿಕೆ ಮಾಡಿದರೆ, ಮಹಾರಾಷ್ಟ್ರ ಶೇ.19.38 ರಷ್ಟಿದೆ, ಗುಜರಾತ್ ಶೇ.18.58 ರಷ್ಟಿದೆ, ಆದರೆ ಕರ್ನಾಟಕ ಮಾತ್ರ ಕೇವಲ ಶೇ.16 ರಷ್ಟು ತೆರಿಗೆ ಪಾಲು ಮತ್ತು ಕೇಂದ್ರ ಸಹಾಯಾನುದಾನಗಳನ್ನು ಪಡೆಯುತ್ತಿದೆ. ನಮಗೆ ಮಹಾರಾಷ್ಟ್ರಕ್ಕೆ ಕೊಟ್ಟಿರುವ ಶೇ.19.38 ರಷ್ಟು ಪಾಲು ಕೊಟ್ಟಿದ್ದರೂ ಕೂಡ ಸುಮಾರು ರೂ. 72,000 ಕೋಟಿಗಳು ಸಿಗುತ್ತಿತ್ತು. ನಮಗೆ ಹೆಚ್ಚುವರಿಯಾಗಿ ಸುಮಾರು ರೂ. 12,000 ಕೋಟಿಗಳಷ್ಟು ಅನುದಾನಗಳು ಲಭ್ಯವಾಗುತ್ತಿದ್ದವು. ಆದರೆ, ದುರುದ್ದೇಶಪೂರ್ವಕವಾಗಿ ಕರ್ನಾಟಕಕ್ಕೆ ಅನ್ಯಾಯ ಮಾಡಬೇಕಂತಲೇ ತೀರ್ಮಾನ ಮಾಡಿರುವುದರಿಂದ ಈ ರೀತಿ ಆಗುತ್ತಿದೆ.

1. ರಾಜ್ಯಕ್ಕೆ ರಸ್ತೆಗಳಲ್ಲಿ, ರೈಲ್ವೆ ಯೋಜನೆಗಳಲ್ಲಿ, ಬಂದರು ಮುಂತಾದ ಮೂಲಭೂತ ಸೌಕರ್ಯ ಯೋಜನೆಗಳಲ್ಲಿ ಮಹಾರಾಷ್ಟ್ರ, ಗುಜರಾತ್ ಮುಂತಾದ ರಾಜ್ಯಗಳಿಗೆ ಕೊಟ್ಟಷ್ಟು ಅನುದಾನಗಳನ್ನು ಕೊಡಲಿಲ್ಲ.
2. ನೇರವಾಗಿ ನ್ಯಾಯಯುತವಾಗಿ ಬರಬೇಕಾದ ತೆರಿಗೆ ಪಾಲು, ಕೇಂದ್ರ ಸಹಾಯಾನುದಾನಗಳನ್ನು ಕಡಿಮೆ ಮಾಡಲಾಗುತ್ತಿದೆ.

50. ಹಾಗಾಗಿ, ಕರ್ನಾಟಕಕ್ಕೆ ಕೇಂದ್ರದಿಂದ ಅನುದಾನಗಳು ಬರದೇ ರಾಜ್ಯದ ಆರ್ಥಿಕ ಸ್ಥಿತಿ ಕ್ಲಿಷ್ಟಕರವಾಗಿರುವುದು ಒಂದು ರೀತಿಯದಾದರೆ, ಎರಡನೆಯದಾಗಿ ಹಿಂದೆ ಬಿ.ಜೆ.ಪಿ ಸರ್ಕಾರ ಆಡಳಿತ ನಡೆಸಿದ್ದ ಅರಾಜಕ ಸ್ಥಿತಿಗಳಿಂದಾಗಿ ಇನ್ನೊಂದು ರೀತಿಯ ಸಮಸ್ಯೆಗಳು ಉದ್ಭವಿಸಿವೆ.

51. ಉದಾಹರಣೆಗೆ ಹೇಳುವುದಾದರೆ, ಪ್ರಮುಖ ಬಂಡವಾಳ ವೆಚ್ಚ ಮಾಡುವ ಇಲಾಖೆಗಳಲ್ಲಿ ರೂ. 2,70,695 ಕೋಟಿ ರೂಪಾಯಿಗಳಷ್ಟು ಕಾಮಗಾರಿಗಳನ್ನು ತೆಗೆದುಕೊಂಡು ಅನುದಾನ ಒದಗಿಸದೇ ಹೋಗಿದ್ದರು. ಮುಖ್ಯಮಂತ್ರಿಗಳ ವಿವೇಚನಾ ಕೋಟಾದ ಅಡಿಯಲ್ಲಿ 1,66,426 ಕೋಟಿ ರೂಪಾಯಿಗಳಷ್ಟು ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿತ್ತು. ಇಷ್ಟು ಬೃಹತ್ ಮೊತ್ತದ ಕಾಮಗಾರಿಗಳಿಗೆ ಹಣ ಒದಗಿಸದೇ ಕಾಮಗಾರಿಗಳನ್ನು ತೆಗೆದುಕೊಂಡರೆ ಅವುಗಳನ್ನು ನಿರ್ವಹಿಸಿದ ಗುತ್ತಿಗೆದಾರರಿಗೆ ಬಿಲ್ಲುಗಳನ್ನು ಪಾವತಿಸುವುದು ಹೇಗೆ? ಎಂಬ ಸಾಮಾನ್ಯ ತಿಳುವಳಿಕೆಯಾದರೂ ಇರಬೇಕಲ್ಲವೆ?

## ಬಂಡವಾಳ ವೆಚ್ಚಗಳು

52. ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಬಂಡವಾಳ ವೆಚ್ಚದ ಬಗ್ಗೆ ಮಾತನಾಡಿದ್ದಾರೆ. 2025-26 ನೇ ಸಾಲಿನಲ್ಲಿ ಬಂಡವಾಳ ಯೋಜನೆಗಳಿಗೆ ಒಟ್ಟು ರೂ. 83,200 ಕೋಟಿಗಳು ಒದಗಿಸಿದ್ದೇವೆ. ಇದರಲ್ಲಿ ರೂ.71,336 ಕೋಟಿಗಳ ಸಂಚಿತ ನಿಧಿಯಿಂದ ಹಾಗೂ ರೂ. 11,864 ಕೋಟಿಗಳ ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ಬಂಡವಾಳ ಯೋಜನೆಗಳಿಗೆ ಉದ್ದೇಶಿಸಿರುವ ರಿಸರ್ವ್ ಫಂಡ್‌ಗಳಿಂದ ಭರಿಸಲಾಗುತ್ತದೆ.

53. ಮಾನ್ಯ ಸದಸ್ಯರಾದ ಶ್ರೀ ಸಿ.ಟಿ. ರವಿ ಯವರು, ಶ್ರೀ ಎಸ್.ಎಲ್.ಭೋಜೇಗೌಡ ರವರು ಹಾಗೂ ವಿರೋಧ ಪಕ್ಷಗಳ ಇತರೆ ಮಾನ್ಯ ಸದಸ್ಯರುಗಳು ಶಿಕ್ಷಣ ಕ್ಷೇತ್ರಕ್ಕೆ ಅನುದಾನ ಕಡಿಮೆಯಾಗಿರುತ್ತದೆ ಎಂದಿದ್ದಾರೆ. ವಿರೋಧ ಪಕ್ಷದವರು ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಅನುದಾನಗಳನ್ನು ಮಾತ್ರ ಪರಿಗಣಿಸಿದ್ದಾರೆ. ಆದರೆ ನಮ್ಮ ಸರ್ಕಾರವು 2025-26 ರಲ್ಲಿ ಸಮಾಜ ಕಲ್ಯಾಣ ಇಲಾಖೆಗಳಲ್ಲಿನ ವಸತಿ ಶಾಲೆಗಳು, ವಿದ್ಯಾರ್ಥಿ ವೇತನ, ವೈದ್ಯಕೀಯ ಶಿಕ್ಷಣ, ಕೃಷಿ, ತೋಟಗಾರಿಕೆ ಕಾಲೇಜುಗಳು ಸೇರಿದಂತೆ ಒಟ್ಟು ರೂ. 65,043 ಕೋಟಿಗಳನ್ನು ಒದಗಿಸಿದೆ. ಒಟ್ಟು ವೆಚ್ಚದಲ್ಲಿ ಶೇ.16 ರಷ್ಟು ಶಿಕ್ಷಣ ಕ್ಷೇತ್ರಕ್ಕೆ ನೀಡಿದ್ದೇವೆ.

54. 2025-26ನೇ ಸಾಲಿಗೆ ಬಂಡವಾಳ ವೆಚ್ಚಗಳಿಗೆ ದಾಖಲೆ ಪ್ರಮಾಣದಲ್ಲಿ ರೂ. 83,200 ಕೋಟಿಗಳನ್ನು ಒದಗಿಸಿದೆ. ಇದು 2024-25ನೇ ಸಾಲಿನಲ್ಲಿ ಕೊಟ್ಟಿದ್ದ ರೂ. 56,495 ಕೋಟಿಗಳಿಗೆ ಹೋಲಿಸಿದರೆ ಶೇ.47.3ರಷ್ಟು ಹೆಚ್ಚಾಗುತ್ತದೆ. ಜಿ.ಎಸ್.ಡಿ.ಪಿ.ಯಲ್ಲಿ ಬಂಡವಾಳ ವೆಚ್ಚದ ಪಾಲು ಶೇ. 2.32 ರಷ್ಟು ಆಗುತ್ತದೆ.

| ಇಲಾಖೆ | ಒದಗಿಸಿದ ಅನುದಾನ | ಕಳೆದ ವರ್ಷಕ್ಕೆ ಹೋಲಿಸಿದರೆ |
|---|---|---|
| ಜಲ ಸಂಪನ್ಮೂಲ | 18,827 ಕೋಟಿ | ಶೇ.12 ರಷ್ಟು ಹೆಚ್ಚು |
| ಲೋಕೋಪಯೋಗಿ | 11,841 ಕೋಟಿ | ಶೇ.14 ರಷ್ಟು ಹೆಚ್ಚು |
| ಸಣ್ಣ ನೀರಾವರಿ | 2,945 ಕೋಟಿ | ಶೇ.50 ರಷ್ಟು ಹೆಚ್ಚು |

55. ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಗೆ ಮುಂದಿನ 3 ವರ್ಷಗಳಲ್ಲಿ 54,000 ಕೋಟಿ ಒದಗಿಸಿದೆ. 120 ಕಿ.ಮೀ. ಉದ್ದದ ಫ್ಲೈಓವರ್, ಗ್ರೇಡ್ ಸೆಪರೇಟರ್, 320 ಕಿಮೀ ಉದ್ದದ ಹೊಸ ರಸ್ತೆ, ಡಬಲ್ ಡೆಕ್ಕರ್ ರಸ್ತೆಗಳು, ರೂ. 27,000 ಕೋಟಿ ವೆಚ್ಚದಲ್ಲಿ ಬ್ಯುಸಿನೆಸ್ ಕಾರಿಡಾರ್, ಭೂ-ಸುರಂಗ ರಸ್ತೆ ಇತ್ಯಾದಿಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದ್ದೇವೆ. ರಾಜ್ಯ ಸರ್ಕಾರ ಈ ವರ್ಷ ರೂ. 3,000 ಕೋಟಿಗಳ ಜೊತೆಗೆ ಹೆಚ್ಚುವರಿಯಾಗಿ ರೂ. 4,000 ಕೋಟಿಗಳನ್ನು ಒದಗಿಸಿದೆ. ಒಟ್ಟಾರೆ ಬೆಂಗಳೂರಿನ ಅಭಿವೃದ್ಧಿಗೆ ನಮ್ಮ ಸರ್ಕಾರ ರೂ. 7,000 ಕೋಟಿಗಳ ಒದಗಿಸುತ್ತಿದೆ.

56. ಬೆಂಗಳೂರು ಹೊರತುಪಡಿಸಿ ಇತರೆ ನಗರಗಳಲ್ಲಿ ಉದ್ಯಮಶೀಲತೆ ಅಭಿವೃದ್ಧಿಪಡಿಸಲು ರೂ. 1,000 ಕೋಟಿಗಳ ಒದಗಿಸಲಾಗುತ್ತಿದೆ.

57. ರಾಜ್ಯದ ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗಾಗಿ ಮುಖ್ಯಮಂತ್ರಿ ಮೂಲಸೌಲಭ್ಯ ಅಭಿವೃದ್ಧಿ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ರಸ್ತೆ, ಮೂಲಸೌಕರ್ಯ ಒದಗಿಸಲು ರೂ. 8,000 ಕೋಟಿಗಳನ್ನು ನೀಡಲಾಗಿದೆ.

58. 2025-26 ರಲ್ಲಿ ಕೇಂದ್ರದ ಬಜೆಟ್‌ನಲ್ಲಿ ರೂ. 11.21 ಲಕ್ಷ ಕೋಟಿ ಬಂಡವಾಳ ವೆಚ್ಚಗಳಿಗೆ ಒದಗಿಸಿದ್ದಾರೆ. 2024-25 ರಲ್ಲಿ ರೂ. 11.11 ಲಕ್ಷ ಕೋಟಿಗಳ ನೀಡಿದ್ದರು. ಕಳೆದ ವರ್ಷಕ್ಕೆ ಹೋಲಿಸಿದರೆ ಕೇವಲ ರೂ. 9,979 ಕೋಟಿಗಳ ಅಥವಾ ಶೇ. 0.9 ರಷ್ಟನ್ನು ಮಾತ್ರ ಹೆಚ್ಚಿಸಿದ್ದಾರೆ.

59. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದ ಬಂಡವಾಳ ವೆಚ್ಚ ಹೆಚ್ಚಿದೆ. ಬಜೆಟ್ ಗಾತ್ರಕ್ಕೆ ಹೋಲಿಸಿದರೆ 2024-25 ನೇ ಸಾಲಿನಲ್ಲೂ ಕೂಡ ಮಹಾರಾಷ್ಟ್ರ, ತಮಿಳುನಾಡು ಹಾಗೂ ತೆಲಂಗಾಣ ರಾಜ್ಯಗಳಂತೆ ನಮ್ಮ ರಾಜ್ಯದ ಬಂಡವಾಳ ವೆಚ್ಚ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿತ್ತು. 2025-26 ನೇ ಸಾಲಿನಲ್ಲೂ ಕೂಡ ಅದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿದೆ.

**ಆಯ-ವ್ಯಯ ಅಂದಾಜು ಮತ್ತು ಬೇಡಿಕೆ (ಕೆಲವು ಮುಖ್ಯ ಇಲಾಖೆಗಳ ಬೇಡಿಕೆ ಮತ್ತು ವೆಚ್ಚದ ವಿವರ)**

**Budget Estimates and Demands**

**(ರೂ. ಕೋಟಿಗಳಲ್ಲಿ)**

| ಕ್ರ ಸಂ | ಇಲಾಖೆ | 2022-23 ರ ಪರಿಷ್ಕೃತ ಅನುದಾನ ಅಂದಾಜು | 2025-26 ರ ಆಯವ್ಯಯ ಅಂದಾಜು | ವ್ಯತ್ಯಾಸ |
|---|---|---|---|---|
| 1 | ಪಶು ಸಂಗೋಪನೆ | 2,616 | 3,342 | 726 |
| 2 | ಪರಿಶಿಷ್ಟ ಜಾತಿಗಳ ಕಲ್ಯಾಣ | 4,945 | 6,022 | 1,077 |
| 3 | ಪರಿಶಿಷ್ಟ ಪಂಗಡಗಳ ಕಲ್ಯಾಣ | 1,496 | 2,081 | 585 |
| 4 | ಹಿಂದುಳಿದ ವರ್ಗಗಳ ಕಲ್ಯಾಣ | 2,372 | 4,014 | 1,642 |
| 5 | ಅಲ್ಪಸಂಖ್ಯಾತರ ಕಲ್ಯಾಣ | 1,495 | 4,515 | 3,020 |
| 6 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 4,702 | 34,184 | 29,482 |
| 7 | ನಗರಾಭಿವೃದ್ಧಿ | 14,399 | 16,508 | 2,109 |
| 8 | ಲೋಕೋಪಯೋಗಿ | 9,624 | 9,840 | 216 |
| 9 | ಸಣ್ಣ ನೀರಾವರಿ | 2,568 | 3,344 | 776 |
| 10 | ಉನ್ನತ ಶಿಕ್ಷಣ | 5,526 | 5,858 | 332 |
| 11 | ಇಂಧನ | 12,655 | 26,896 | 14,241 |
| 12 | ಆರೋಗ್ಯ | 9,472 | 12,032 | 2,560 |
| 13 | ಒಳಾಡಳಿತ | 9,052 | 13,045 | 3,993 |
| 14 | ತೋಟಗಾರಿಕೆ | 1,240 | 1,532 | 292 |
| 15 | ಗ್ರಾಮೀಣಾಭಿವೃದ್ಧಿ | 17,243 | 25,440 | 8,197 |
| 16 | ಶಾಲಾ ಶಿಕ್ಷಣ ಮತ್ತು ಸಾಕ್ಷರತೆ | 25,856 | 34,438 | 8,582 |

2022-23ನೇ ಸಾಲಿಗೆ ಹೋಲಿಸಿದರೆ 2025-26ನೇ ಸಾಲಿನಲ್ಲಿ ನಾವು ಇಲಾಖೆಗಳಿಗೆ ಗಣನೀಯ ಪ್ರಮಾಣದಲ್ಲಿ ಅನುದಾನಗಳನ್ನು ಒದಗಿಸಿದ್ದೇವೆ ಎಂಬುದು ಅಂಕಿ ಅಂಶಗಳಿಂದ ಮತ್ತು ದಾಖಲೆಗಳಿಂದ ಸಾಬೀತಾಗುತ್ತದೆ.

ಇಷ್ಟಾದರೂ ವಿರೋಧ ಪಕ್ಷದವರು ನಮ್ಮ ಬಜೆಟ್‌ನಲ್ಲಿ ಯಾವುದೇ ದೂರದೃಷ್ಟಿ ಇಲ್ಲ; ತಕ್ಷಣದ ತಾತ್ಕಾಲಿಕ ಲಾಭಕ್ಕಾಗಿ ಘೋಷಿಸಲಾಗಿದೆ. ಆರ್ಥಿಕ ಬೇಜವಾಬ್ಧಾರಿಯಿಂದ ಕೂಡಿದೆ, ಅಭಿವೃದ್ಧಿಯತ್ತ ಗಮನಹರಿಸಿಲ್ಲ. ಆರ್ಥಿಕ ಬೆಳವಣಿಗೆಯನ್ನು ಸಂಪೂರ್ಣ ನಿರ್ಲಕ್ಷಿಸಲಾಗಿದೆ ಎಂದು ರಾಜಕೀಯವಾಗಿ ಮಾತನಾಡಿದ್ದಾರೆ. ನಿಮ್ಮ ಭಾಷಣವು ಪೂರ್ವಗ್ರಹ ಪೀಡಿತವಾದ ಅಜೆಂಡಾ ಪ್ರೇರಿತವಾಗಿರುವುದರಿಂದ ನಾವು ಒಳ್ಳೆಯ ಮಾತುಗಳನ್ನು ನಿರೀಕ್ಷಿಸಲು ಸಾಧ್ಯವಿಲ್ಲ.

60. ಬಜೆಟ್‌ನಲ್ಲಿ ನಮ್ಮ ಸರ್ಕಾರದ ಧ್ಯೇಯೋದ್ದೇಶಗಳ ಕುರಿತು ಬಜೆಟ್ ಭಾಷಣದ ಮೊದಲ ಪ್ಯಾರಾದಲ್ಲೇ ನಾವು ಸ್ಪಷ್ಟಪಡಿಸಿದ್ದೇವೆ. ಈ ಬಜೆಟ್ ಕೇವಲ ಅಂಕಿ-ಸಂಖ್ಯೆಗಳ ಆಟವಲ್ಲ. ಇದು 7 ಕೋಟಿಗಳ ಜನರ ಬದುಕಿನ, ಉಸಿರಿನ ಪ್ರತೀಕ ಎಂದು ಹೇಳಿದ್ದೇವೆ.

61. ವಿರೋಧ ಪಕ್ಷದ ನಾಯಕರಾಗಿ ಅವರು ಮಾಡಿರುವ ಭಾಷಣ ಅವರೊಬ್ಬರ ಅನ್ನಿಸಿಕೆಯಲ್ಲ. ಅದು ಇಡೀ ವಿರೋಧ ಪಕ್ಷದವರ ಅಭಿಪ್ರಾಯ ಎಂದು ನಾವು ಭಾವಿಸುತ್ತೇವೆ.

**ವಿವಿಧ ಕಲ್ಯಾಣ ಇಲಾಖೆಗಳಿಗೆ ಒದಗಿಸಿದ ಅನುದಾನಗಳ ವಿವರ**

_ವಿರೋಧ ಪಕ್ಷದವರು ಕಲ್ಯಾಣ ಇಲಾಖೆಗಳಿಗೆ ಈ ಸರ್ಕಾರ ಏನೂ ಕೊಟ್ಟಿಲ್ಲ ಎಂದಿದ್ದಾರೆ

**(ರೂ. ಕೋಟಿಗಳಲ್ಲಿ)**

| ಅನುದಾನ ಪಡೆದ ಇಲಾಖೆಗಳು | 2020-21 ರಿಂದ 2022-23 ರವರೆಗೆ ಕೊಟ್ಟ ಅನುದಾನ | 2023-24 ರಿಂದ 2025-26 ರವರೆಗೆ ನಮ್ಮ ಸರ್ಕಾರ ಕೊಟ್ಟ ಅನುದಾನ | ವ್ಯತ್ಯಾಸ [ಹೆಚ್ಚು] | ಶೇ.ವಾರು |
|---|---|---|---|---|
| ಸಮಾಜ ಕಲ್ಯಾಣ | 11,516 | 15,448 | 3,932 | 34 |
| ಪರಿಶಿಷ್ಟ ಪಂಗಡಗಳ ಕಲ್ಯಾಣ | 4,381 | 5,321 | 940 | 22 |
| ಹಿಂದುಳಿದ ವರ್ಗಗಳ ಕಲ್ಯಾಣ | 7,261 | 10,604 | 3,343 | 46 |
| ಅಲ್ಪ ಸಂಖ್ಯಾತರ ಕಲ್ಯಾಣ | 4,106 | 9,616 | 5,510 | 134 |

62. ವಿರೋಧ ಪಕ್ಷದವರು ನಮ್ಮ ಸರ್ಕಾರದ ಅವಧಿಯಲ್ಲಿ ವಿವಿಧ ಕಲ್ಯಾಣ ಇಲಾಖೆಗಳಿಗೆ ಹೆಚ್ಚು ಅನುದಾನ ಕೊಡುತ್ತಿದ್ದೆವು, ನಿಮ್ಮ ಸರ್ಕಾರ ಕಡಿಮೆ ಅನುದಾನ ಕೊಟ್ಟಿದೆ ಎಂದು ಹೇಳಿದ್ದಾರೆ. ಅದಕ್ಕೆ 2022-23 ರ ಬಜೆಟ್‌ನ

ದಾಖಲೆಗಳನ್ನು ಕೊಡುತ್ತಿದ್ದಾರೆ. ವಾಸ್ತವವಾಗಿ ನಮ್ಮ ಸರ್ಕಾರ 2017-18ರಲ್ಲಿ ಕೊಟ್ಟಿದ್ದ ಅನುದಾನಗಳಿಗಿಂತ ಕಡಿಮೆ ಅನುದಾನಗಳನ್ನು 2022-23ರ ಬಜೆಟ್‌ನಲ್ಲಿ ಕೊಡಲಾಗಿದೆ.

63. ವಿರೋಧ ಪಕ್ಷದವರಿಗೆ ನಾನು ಒಂದು ಮಾತು ಕೇಳಬಯಸುತ್ತೇನೆ. ಸರ್ಕಾರದ ಅಗತ್ಯ ಹೆಚ್ಚು ಬೀಳುವುದು ಯಾರಿಗೆ? ಸರ್ಕಾರಿ ಆಸ್ಪತ್ರೆಗಳಿಗೆ, ಶಾಲಾ-ಕಾಲೇಜುಗಳಿಗೆ, ಸರ್ಕಾರಿ ಬಸ್ಸುಗಳಿಗೆ, ಸರ್ಕಾರದಿಂದ ಒದಗಿಸಿರುವ ಸಾರ್ವಜನಿಕ ನೀರಿನ ನಲ್ಲಿಗಳ ಬಳಿಗೆ ಯಾರು ಬರುತ್ತಾರೆ? ಮನುವಾದದ ಕಾರಣಕ್ಕೆ ಸಮಾಜದ ದಮನಿತ ಸಮುದಾಯಗಳು ಎನ್ನಿಸಿಕೊಂಡವರು ತಾನೆ? ಹಾಗಿದ್ದಮೇಲೆ ಸರ್ಕಾರ ಆದ್ಯತೆ ಕೊಡಬೇಕಾದುದು ಯಾರಿಗೆ?

64. ದಲಿತರು, ಹಿಂದುಳಿದವರು, ಅಲ್ಪ ಸಂಖ್ಯಾತರು, ಮಹಿಳೆಯರು, ಮಕ್ಕಳ ಪಾಲಿಗೆ ಇಲ್ಲದ ಸರ್ಕಾರ ಯಾರಿಗೆ ಬೇಕು?

65. 2017-18 ರಲ್ಲಿ ಬಜೆಟ್ ಗಾತ್ರ 1,86,561 ಕೋಟಿ ರೂಪಾಯಿ, 2022-23 ರಲ್ಲಿ 2,65,720 ಕೋಟಿ ರೂಪಾಯಿಗಳು. 2017-18ಕ್ಕೆ ಹೋಲಿಸಿದರೆ 79,159 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಗಾತ್ರದ ಬಜೆಟ್ ಅನ್ನು ಮಾನ್ಯ ಬಸವರಾಜ ಬೊಮ್ಮಾಯಿಯವರು ಮಂಡಿಸಿದ್ದರು.

66. ಮಾನ್ಯ ವಿರೋಧ ಪಕ್ಷದವರು ಪದೇ ಪದೇ 2022-23 ಕ್ಕೆ ಹೋಲಿಸಿಕೊಂಡಿದ್ದಾರೆ. ಹಾಗಾಗಿ, ನಾನು 2017-18 ರ ಬಜೆಟ್ ಮತ್ತು 2025-26 ರ ಬಜೆಟ್ ಅನ್ನು 2022-23 ನೇ ಸಾಲಿನ ಬಜೆಟ್‌ಗೆ ಹೋಲಿಕೆ ಮಾಡಿ ನೋಡಿದ್ದೇನೆ. ಹೋಲಿಕೆ ಮಾಡಿದ ನಂತರ ಬಿ.ಜೆ.ಪಿ ಸರ್ಕಾರ ಸ್ಪಷ್ಟವಾಗಿ ಮಹಿಳೆಯರು, ಹಿಂದುಳಿದವರು, ದಲಿತರು ಮತ್ತು ಅಲ್ಪಸಂಖ್ಯಾತರ ವಿರೋಧಿಗಳು ಎಂಬುದು ಇನ್ನಷ್ಟು ಸ್ಪಷ್ಟವಾಯಿತು.

67. 2017-18 ರಲ್ಲಿ ಹಿಂದುಳಿದ ವರ್ಗಕ್ಕೆ ನಾವು ರೂ. 3,300 ಕೋಟಿಗಳನ್ನು ಕೊಟ್ಟಿದ್ದರೆ, 2022-23 ರಲ್ಲಿ ರೂ. 2,372 ಕೋಟಿಗಳನ್ನು ಕೊಡಲಾಯಿತು.

68. ಅಲ್ಪಸಂಖ್ಯಾತರ ಕಲ್ಯಾಣಕ್ಕೆ ನಾವು ರೂ. 2,221 ಕೋಟಿಗಳ ಅನುದಾನ ನೀಡಿದ್ದರೆ, ಮಾನ್ಯ ಬಸವರಾಜ ಬೊಮ್ಮಾಯಿಯವರ ಸರ್ಕಾರ ರೂ. 1,495 ಕೋಟಿಗಳ ನೀಡಿತ್ತು. ಮಾನ್ಯ ವಿರೋಧ ಪಕ್ಷದವರು ಈ ಬಾರಿ ಅಲ್ಪಸಂಖ್ಯಾತರ ಕಲ್ಯಾಣಕ್ಕೆ ರೂ. 4,500 ಕೋಟಿಗಳನ್ನು ಕೊಡಲಾಗಿದೆ ಎಂದು ಮಾತನಾಡಿದ್ದಾರೆ. ಆದರೆ ವಾಸ್ತವವಾಗಿ 2017-18 ರಲ್ಲಿ ಬಜೆಟ್ ಗಾತ್ರ 1.86 ಲಕ್ಷ ಕೋಟಿಗಳಷ್ಟಿತ್ತು. ಆಗ ನಾವು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ರೂ. 2,200 ಕೋಟಿಗಳನ್ನು ಒದಗಿಸಿದ್ದೆವು. ಆಗಲೂ ಬಜೆಟ್ ಗಾತ್ರಕ್ಕೆ ಹೋಲಿಸಿದರೆ ನಾವು ಶೇ.1.18 ರಷ್ಟು ಅನುದಾನವನ್ನು ನೀಡಿದ್ದೆವು. 2025-26ನೇ ಸಾಲಿನ ಬಜೆಟ್‌ನಲ್ಲಿ ಶೇ.1.1 ರಷ್ಟು ಮಾತ್ರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ನೀಡಲಾಗಿದೆ. ಆದರೂ ಕೂಡ ವಿರೋಧ ಪಕ್ಷದವರು ಆರೋಪ ಮಾಡುತ್ತಿದ್ದಾರೆ.

69. ಸಮಾಜ ಕಲ್ಯಾಣ ಇಲಾಖೆಗೆ 2017-18 ರಲ್ಲಿ ರೂ. 4,300 ಕೋಟಿ ಕೊಟ್ಟಿದ್ದೆವು. ಮಾನ್ಯ ಬಸವರಾಜ ಬೊಮ್ಮಾಯಿಯವರು ಆಗ ರೂ. 3,818 ಕೋಟಿಗಳನ್ನು ಕೊಟ್ಟರು. ಹಾಗೆಯೇ ನಾವು 2017-18 ರಲ್ಲಿ 5 ಕಲ್ಯಾಣ

ಇಲಾಖೆಗಳಿಗೆ ಒಟ್ಟು ರೂ. 16,358 ಕೋಟಿ ಕೊಟ್ಟಿದ್ದರೆ, ಮಾನ್ಯ ಬಸವರಾಜ ಬೊಮ್ಮಾಯಿಯವರು ರೂ. 13,883 ಕೋಟಿಗಳನ್ನು ಕೊಟ್ಟರು. ಅಂದರೆ ಅವರು ರೂ. 2475 ಕೋಟಿಗಳಷ್ಟು ಕಡಿಮೆ ಕೊಟ್ಟಿದ್ದಾರೆ.

70. 2022-23ರ ಬಜೆಟ್‌ನಲ್ಲಿ ಅವರು ಈ 5 ಕಲ್ಯಾಣ ಇಲಾಖೆಗಳಿಗೆ ಒಟ್ಟು ರೂ. 13,883 ಕೋಟಿಗಳನ್ನು ಕೊಟ್ಟಿದ್ದರೆ, ನಮ್ಮ ಸರ್ಕಾರ ಈ ಬಾರಿ ರೂ. 50,816 ಕೋಟಿಗಳನ್ನು ಕೊಟ್ಟಿದೆ. ಅಂದರೆ ರೂ. 36,993 ಕೋಟಿಗಳಷ್ಟು ಹೆಚ್ಚಿಗೆ ಕೊಟ್ಟಿದೆ.

71. ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ರೂ. 1,642 ಕೋಟಿಗಳು, ಸಮಾಜ ಕಲ್ಯಾಣ ಇಲಾಖೆಗೆ ರೂ. 2,204 ಕೋಟಿಗಳು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗೆ ರೂ. 585 ಕೋಟಿಗಳು ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ರೂ. 29,482 ಕೋಟಿಗಳನ್ನು 2022-23 ಕ್ಕಿಂತ ಹೆಚ್ಚಿಗೆ ನೀಡಲಾಗಿದೆ.

72. 2022-23 ರಲ್ಲಿ ಮಾನ್ಯ ಬಸವರಾಜ ಬೊಮ್ಮಾಯಿಯವರು ರೂ. 2,65,720 ಕೋಟಿ ಬಜೆಟ್ ಅನ್ನು ಮಂಡಿಸಿದ್ದರು. 2017-18 ಕ್ಕೆ ಹೋಲಿಸಿದರೆ ರೂ. 79,159 ಕೋಟಿಗಳಷ್ಟು ಹೆಚ್ಚಿನ ಹಾಗೂ ಶೇ.42.43 ರಷ್ಟು ಹೆಚ್ಚಿನ ಗಾತ್ರದ ಬಜೆಟ್ ಅನ್ನು ಅವರು ಮಂಡಿಸಿದ್ದರು. ಆದರೆ ಈ 5 ವರ್ಗಗಳಿಗೆ 13,883 ಕೋಟಿ ರೂಗಳನ್ನು ಮಾತ್ರ ಕೊಟ್ಟಿದ್ದರು. ಈ ಬಜೆಟ್ ಗಾತ್ರಕ್ಕೆ ಹೋಲಿಸಿದರೆ ಕೇವಲ ಶೇ.5.22 ರಷ್ಟು ಮಾತ್ರ. ಆದರೆ ಈ 5 ವರ್ಗಗಳಿಗೆ 2,475 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆ. ಅಂದರೆ ಅವರು ಶೇ.42 ರಷ್ಟು ಹೆಚ್ಚು ಕೊಡಬೇಕಾಗಿತ್ತಲ್ಲವೇ? ಏಕೆ ಕೊಡಲಿಲ್ಲ?

73. 2017-18 ನೇ ಸಾಲಿನಲ್ಲಿ ನಾನು ಮಂಡಿಸಿದ್ದ ಬಜೆಟ್ ಗಾತ್ರ ರೂ. 1,86,561 ಕೋಟಿಗಳು. ಆ ವರ್ಷ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ಮಕ್ಕಳ ಕಲ್ಯಾಣಕ್ಕೆಂದು ನಾವು ಮೀಸಲಿಟ್ಟಿದ್ದ ಅನುದಾನ ಒಟ್ಟು ರೂ. 16,358 ಕೋಟಿ. ಇದು ಬಜೆಟ್‌ನ ಶೇ. 8.77 ರಷ್ಟಾಗುತ್ತದೆ. ಇದು ನಮ್ಮ ಬದ್ಧತೆ.

74. 2017-18 ರ ನಂತರ ಮಹಿಳೆಯರ, ಮಕ್ಕಳ, ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ ಅಭಿವೃದ್ಧಿಯ ನಿಂತಿದ್ದ ರಥವನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಮುನ್ನಡೆಸಲು ಪ್ರಾರಂಭಿಸಿದ್ದೇವೆ. 2025-26 ನೇ ಸಾಲಿನ ಬಜೆಟ್‌ನಲ್ಲಿ ಈ 5 ವರ್ಗಗಳಿಗೆ ನಾವು ರೂ. 50,816 ಕೋಟಿಗಳನ್ನು ನೀಡಿದ್ದೇವೆ. ಇದು ಬಜೆಟ್‌ನ ಶೇ.12.41 ರಷ್ಟಾಗುತ್ತದೆ. ಇದೇ ನಮಗೂ ನಿಮಗೂ ಇರುವ ವ್ಯತ್ಯಾಸ.

75. ನಮ್ಮ ಸರ್ಕಾರ 2025-26 ನೇ ಸಾಲಿನಲ್ಲಿ ಆರೋಗ್ಯ ಕ್ಷೇತ್ರಕ್ಕೆ ರೂ. 17,019 ಕೋಟಿಗಳನ್ನು ಒದಗಿಸಿದೆ. ಒಟ್ಟು ವೆಚ್ಚದಲ್ಲಿ ಶೇ.4.2 ರಷ್ಟು ಅನುದಾನವನ್ನು ಆರೋಗ್ಯ ಕ್ಷೇತ್ರಕ್ಕೆ ನೀಡಿದ್ದೇವೆ. ಆದರೆ, ಕೇಂದ್ರ ಸರ್ಕಾರ ಅವರ ಬಜೆಟ್‌ನ ಶೇ.2 ರಷ್ಟು ಮಾತ್ರ ಒದಗಿಸಿದೆ ಎಂಬುದನ್ನು ನಾನು ಈ ಸದನಕ್ಕೆ ತಿಳಿಸಬಯಸುತ್ತೇನೆ.

76. ಅಧಿಕಾರದಲ್ಲಿದ್ದಾಗ ಒಂದು, ಅಧಿಕಾರದಲ್ಲಿ ಇಲ್ಲದಿದ್ದಾಗ ಒಂದು; ಇದೇ ತಾನೆ ನಿಮ್ಮ ದ್ವಂದ್ವ ನೀತಿ. ಅಧಿಕಾರದಲ್ಲಿ ಇಲ್ಲದಿದ್ದಾಗ ಈ ಸಮುದಾಯಗಳ ಬಗ್ಗೆ ಪ್ರೀತಿ ಹುಟ್ಟುತ್ತದೆ, ಅಧಿಕಾರಕ್ಕೆ ಬಂದ ಕೂಡಲೇ ಏಣಿ ಹತ್ತಿದವನು ಈ 5 ವರ್ಗಗಳನ್ನು ಒದ್ದು ಬೀಳಿಸುವಂತೆ ದಮನ ಮಾಡಲಾಗುತ್ತದೆ. ಈ ದ್ರೋಹ ಜನರಿಗೆ ಅರ್ಥವಾಗುತ್ತದೆ.

77. ತಾವು ದಮನಿತ ಸಮುದಾಯಗಳ ವಿರೋಧಿಗಳು ಎಂಬುದು ಗೊತ್ತಿರುವ ಕಾರಣಕ್ಕೆ ಅದನ್ನು ಮರೆಮಾಚಲು ಮುಸ್ಲಿಂ ಬಜೆಟ್, ಹಲಾಲ್ ಬಜೆಟ್ ಎಂದೆಲ್ಲಾ ಹೇಳಿ ಸಮಾಜವನ್ನು ದಿಕ್ಕು ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಮಾನ್ಯ ವಿರೋಧ ಪಕ್ಷದವರು ಹೇಳುವ ಮುಸ್ಲಿಂ ಬಜೆಟ್, ಹಲಾಲ್ ಬಜೆಟ್ ಎಂಬ ಮಾತುಗಳು 'ಸಬ್ಕಾ ಸಾಥ್– ಸಬ್ಕಾ ವಿಕಾಸ್' ಎಂದು ಹೇಳುವ ಮಾನ್ಯ ನರೇಂದ್ರ ಮೋದಿಯವರ ನಿಲುವಿಗೆ ಸಂಪೂರ್ಣ ವಿರುದ್ಧವಾಗಿದೆ. ಅಲ್ಲಿ ಸಬ್ಕಾ ಸಾಥ್ ಎಂದು ಹೇಳುವಂತಹ ಮಾನ್ಯ ನರೇಂದ್ರ ಮೋದಿಯವರು ಇಲ್ಲಿ ನೀವುಗಳು ಸಂಪೂರ್ಣ ಗೋಮುಖ ವ್ಯಾಘ್ರ ನಿಲುವಿನವರು. ಹೇಳುವುದು ಒಂದು, ಆದರೆ ಮಾಡುವುದು ಇನ್ನೊಂದು ಎಂಬುದನ್ನು ಮಾನ್ಯ ವಿರೋಧ ಪಕ್ಷದವರೆಲ್ಲರೂ ಒಟ್ಟಿಗೆ ಸೇರಿ ಸಾಬೀತು ಮಾಡಿದ್ದಾರೆ.

78. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಬಜೆಟ್ ಮೇಲೆ ಮಾತನಾಡುವಾಗ ದಾಖಲೆಗಳನ್ನು R,S,S ನವರು ಕೊಟ್ಟಿದ್ದರೋ ಅಥವಾ ಇವರೇ ಅಧ್ಯಯನ ಮಾಡಿದ್ದಾರೋ ಗೊತ್ತಿಲ್ಲ. ಆದರೆ ಅವರ ಬಜೆಟ್ ಮೇಲಿನ ಭಾಷಣ ಸಂಪೂರ್ಣ ದೋಷಪೂರಿತ ಹಾಗೂ ಬಡವರ, ದಮನಿತರ ವಿರೋಧಿಯಾಗಿತ್ತು ಎಂದು ಮಾತ್ರ ಹೇಳಬಲ್ಲೆ.

**ಎಸ್.ಸಿ.ಪಿ ಮತ್ತು ಟಿ.ಎಸ್.ಪಿ**

79. ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಗಾಗಿ ನಮ್ಮ ಸರ್ಕಾರ ಈ ಬಾರಿ ರೂ. 42,018 ಕೋಟಿಗಳನ್ನು ಒದಗಿಸಿದೆ. ನಾವು ಪರಿಶಿಷ್ಟ ಸಮುದಾಯಗಳ ಏಳಿಗೆಯನ್ನು ಬಯಸುವವರು. ನಮ್ಮ ಕಾಳಜಿ ಕೇವಲ ಬಾಯಿ ಮಾತಿನದಲ್ಲ. 2020-21 ರಿಂದ 2022-23 ರವರೆಗೆ ಪ್ರಾಮಾಣಿಕವಾಗಿ 3 ವರ್ಷಗಳ ಅವಧಿಯಲ್ಲಿ ಹಿಂದಿನ ಬಿ.ಜೆ.ಪಿ ಸರ್ಕಾರ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ.ಗಾಗಿ 80,415 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಆದರೆ ನಾವು 2023-24 ರಿಂದ 2025-26ರ ಬಜೆಟ್‌ವರೆಗೆ 1,15,509 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಬಿ.ಜೆ.ಪಿಯ 3 ವರ್ಷಗಳಿಗೆ ಹೋಲಿಸಿದರೆ ನಾವು ರೂ.35,094 ಕೋಟಿಗಳಷ್ಟು ಹೆಚ್ಚಿಗೆ ಒದಗಿಸಿದ್ದೇವೆ. ಶೇ.43.64 ರಷ್ಟು ಹೆಚ್ಚಿನ ಅನುದಾನವನ್ನು ಒದಗಿಸಿದಂತಾಗುತ್ತದೆ. ಒಟ್ಟಾರೆ ಸಮಾಜ ಕಲ್ಯಾಣ ಇಲಾಖೆಗೆ ಶೇ.52.5 ರಷ್ಟು ಹೆಚ್ಚು ಅನುದಾನವನ್ನು ಕೊಟ್ಟಿದ್ದೇವೆ.

ನಮ್ಮದು ಮುಸ್ಲಿಂ ಬಜೆಟ್ ಅಲ್ಲ – ನಮ್ಮದು ಸರ್ವೋದಯದ ಬಜೆಟ್.

ರಾಷ್ಟ್ರಕವಿ ಕುವೆಂಪು ಅವರು ಪದ್ಯವೊಂದನ್ನು ಬರೆದು ಅದರಲ್ಲಿ ಈ ರೀತಿ ಹೇಳಿದ್ದಾರೆ;

**ಬಾರಿಸು ಕನ್ನಡ ಡಿಂಡಿಮವ!!**
**ಓ! ಕರ್ನಾಟಕ ಹೃದಯ ಶಿವ**

**ಸತ್ತಂತಿಹರನು ಬಡಿದೆಚ್ಚರಿಸು**
**ಕಚ್ಚಾಡುವರನು ಕೂಡಿಸಿ ಒಲಿಸು**
**ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು**
**ಒಟ್ಟಿಗೆ ಬಾಳುವ ತೆರದಲಿ ಹರಸು**

**ಚೈತ ಶಿವೇತರ ಕೃತಿ ಕೃತಿಯಲ್ಲಿ**
**ಮೂಡಲಿ ಮಂಗಳ ಮತಿ ಮತಿಯಲ್ಲಿ**
**ಕವಿ ಋಷಿ ಸಂತರ ಆದರ್ಶದಲ್ಲಿ**
**ಸರ್ವೋದಯವಾಗಲಿ ಸರ್ವರಲಿ**

೮೦. ಇದು ಈ ಸಂದರ್ಭಕ್ಕೆ ಅತ್ಯಂತ ಸೂಕ್ತವಾದ ಪದ್ಯವಾಗಿದೆ. ಇನ್ನೆಷ್ಟು ದಿನ ಧರ್ಮ ಧರ್ಮಗಳ ನಡುವೆ, ಜಾತಿ ಜಾತಿಗಳ ನಡುವೆ ದ್ವೇಷ, ಹಿಂಸೆ, ಅಸಹನೆಯನ್ನು ಹುಟ್ಟು ಹಾಕುತ್ತೀರಿ? ಒಟ್ಟಿಗೆ ಬಾಳಲು ಯಾವ ಸಮಸ್ಯೆಯಿದೆ? ರಾಷ್ಟ್ರಕವಿ ಕುವೆಂಪು ಅವರು ಕಡೆಯದಾಗಿ 'ಸರ್ವೋದಯವಾಗಲಿ ಸರ್ವರಲಿ' ಎಂದು ಹೇಳಿದ್ದಾರೆ.

81. 2025-26ನೇ ಸಾಲಿನ ಬಜೆಟ್ ಪುಸ್ತಕದಲ್ಲಿ ನಾವು ಹೇಳಿದಂತೆ, " ನಮ್ಮ ಉದ್ದೇಶ ಸಮಾಜವನ್ನು ಸೋಷಿಯಲ್ ಡಾರ್ವಿನಿಸಂ ಕಡೆಗೆ ತೆಗೆದುಕೊಂಡು ಹೋಗುವುದಲ್ಲ, ಬಾಬಾ ಸಾಹೇಬ್ ಡಾ: ಬಿ.ಆರ್. ಅಂಬೇಡ್ಕರ್ ಅವರು ರಚಿಸಿರುವ ಭಾರತ ಸಂವಿಧಾನದ ಕಡೆಗೆ ಮುನ್ನಡೆಸುವುದು". ಮನುವಾದವು 'ಸೋಷಿಯಲ್ ಡಾರ್ವಿನಿಸಂ' ಅನ್ನು ಹೇಳುತ್ತದೆ. ಇದು ಮನುಷ್ಯ ಸಮಾಜಕ್ಕೂ ಅನ್ವಯವಾದರೆ ದಮನಿತ ಸಮುದಾಯಗಳು ಮತ್ತು ಮಹಿಳೆಯರು ಬದುಕುವುದು ಹೇಗೆ? ಈ ವರ್ಗಗಳಿಗೆ ನ್ಯಾಯ ಕೊಡುವುದು ಸಂವಿಧಾನ ಮಾತ್ರ.

೮೨. ನಾವು ಭಾರತ ಸಂವಿಧಾನದ ಆಶಯಗಳ ಹಾದಿಯಲ್ಲಿ ಮುನ್ನಡೆಯುತ್ತಿದ್ದೇವೆ. ಹಾಗಾಗಿ ನಾವು ಸರ್ವೋದಯವಾಗಲಿ ಸರ್ವರಲಿ ಎಂಬುದನ್ನು ಮಾತಿಗೋಸ್ಕರ ಬಳಸುವುದಿಲ್ಲ. ಬದಲಾಗಿ ಅದನ್ನು ನಮ್ಮ ಸಿದ್ಧಾಂತವಾಗಿಸಿಕೊಂಡು ಕೆಲಸ ಮಾಡುತ್ತಿದ್ದೇವೆ.

**ಮುಸ್ಲಿಂ ಸಮುದಾಯಕ್ಕೆ ಶೇ.4 ರಷ್ಟು ಗುತ್ತಿಗೆ ನೀಡುತ್ತಿರುವ ವಿಚಾರ**

ಮಾನ್ಯ ಸದಸ್ಯರಾದ ಸಿ.ಟಿ. ರವಿಯವರು ಹಾಗೂ ವಿರೋಧ ಪಕ್ಷದ ಅನೇಕ ಮಾನ್ಯ ಸದಸ್ಯರುಗಳು ಮುಸ್ಲಿಂ ಸಮುದಾಯಕ್ಕೆ ಮೀಸಲಾತಿ ನೀಡಿರುವ ವಿಚಾರದ ಕುರಿತು ಆಕ್ಷೇಪದ ಧ್ವನಿಯಲ್ಲಿ ಮಾತನಾಡಿದ್ದಾರೆ. ರಿಲೀಜನ್ ಬೇಸ್ ಮೇಲೆ ಮೀಸಲಾತಿ ಕೊಟ್ಟಿರುವುದು ತಪ್ಪು ಎಂದು ಪ್ರಸ್ತಾಪಿಸಿದ್ದಾರೆ.

1. ಎಸ್.ಸಿ.ಪಿ.-ಟಿ.ಎಸ್.ಪಿ ವಿಚಾರಗಳನ್ನು ಮಾತನಾಡುವಾಗ ಕರ್ನಾಟಕದ ಮಾನವ ಅಭಿವೃದ್ಧಿ ಸೂಚ್ಯಂಕದ ಬಗ್ಗೆ ಮಾತನಾಡಿದ್ದಾರೆ. ಅವರು ಪ್ರಸ್ತಾಪ ಮಾಡಿದ್ದು ಒಳ್ಳೆಯದಾಯಿತು. 2022 ರಲ್ಲಿ ಮಾನ್ಯ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದಾಗ ಹಿಂದಿನ ಸರ್ಕಾರ 'ಕರ್ನಾಟಕ ಮಾನವ ಅಭಿವೃದ್ಧಿ' ಎಂಬ ವರದಿಯನ್ನು ಬಿಡುಗಡೆ ಮಾಡಿದೆ. ಸದರಿ ವರದಿಯಲ್ಲಿ ಮಕ್ಕಳ ಮರಣ, ಆರೋಗ್ಯ, ಶಾಲಾ ದಾಖಲಾತಿ, ಮಹಿಳಾ ಶಿಕ್ಷಣ, ಶಿಕ್ಷಣ ಸೂಚ್ಯಂಕ, ಸುಧಾರಿತ ಕುಡಿಯುವ ನೀರು, ಸುಧಾರಿತ ವಿದ್ಯುತ್ ಲಭ್ಯತೆ, ಸುಧಾರಿತ ಶೌಚಾಲಯ, ಶೇಕಡಾವಾರು ಪಕ್ಕಾ ಮನೆ, ಸುಧಾರಿತ ಅಡುಗೆ ಇಂಧನ, ವರಮಾನ ಸೂಚ್ಯಂಕಗಳನ್ನು ಆಧರಿಸಿ ಒಟ್ಟಾರೆ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಸಿದ್ಧಪಡಿಸಲಾಗುತ್ತಿದೆ. ಯಾವ ಯಾವ ಪ್ಯಾರಾಮೀಟರುಗಳಲ್ಲಿ ಎಷ್ಟೆಷ್ಟು ಅಂಶಗಳನ್ನು ಗಳಿಸಲಾಗಿದೆ ಎಂದು ಈ ಕೆಳಕಂಡ ಅಧ್ಯಯನದಿಂದ ದೃಢಪಡುತ್ತದೆ.

2. ಅದರ ಪ್ರಕಾರ,

| **ವಿವಿಧ ಸಾಮಾಜಿಕ ಗುಂಪುಗಳು** | **2022 ರ ಒಟ್ಟಾರೆ ಮಾನವ ಅಭಿವೃದ್ಧಿ ಸೂಚ್ಯಂಕ** |
|---|---|
| ಪರಿಶಿಷ್ಟ ಜಾತಿ | 0.49 |
| ಪರಿಶಿಷ್ಟ ಪಂಗಡ | 0.44 |
| ಅಲ್ಪಸಂಖ್ಯಾತ | 0.37 |
| ಸಾಮಾನ್ಯ ವರ್ಗ | 0.644 |

3. ಕರ್ನಾಟಕದ ಸಾಮಾನ್ಯ ವರ್ಗಗಳ ಮಾನವ ಅಭಿವೃದ್ಧಿ ಸೂಚ್ಯಂಕ 0.644 ರಷ್ಟಿದೆ. ಸಾಮಾನ್ಯ ವರ್ಗ ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ನಡುವೆ 0.274 ಅಂಶಗಳ ವ್ಯತ್ಯಾಸವಿದೆ. ಪರಿಶಿಷ್ಟ ಪಂಗಡಗಳಿಗೆ 0.204 ಅಂಶಗಳಷ್ಟು ವ್ಯತ್ಯಾಸವಿದೆ. ಪರಿಶಿಷ್ಟ ಜಾತಿಗಳ ನಡುವೆ 0.154 ಅಂಶಗಳಷ್ಟು ವ್ಯತ್ಯಾಸವಿದೆ.

**ವಿವಿಧ ಸೂಚ್ಯಂಕಗಳು**

| **ಸಾಮಾಜಿಕ ಸಮುದಾಯ** | **ಆರೋಗ್ಯದ ಸೂಚ್ಯಂಕ** | **ಶಿಕ್ಷಣದ ಸೂಚ್ಯಂಕ** | **ಗುಣಮಟ್ಟದ ಜೀವನದ ಸೂಚ್ಯಂಕ** | **2022ರ ಮಾನವ ಅಭಿವೃದ್ಧಿ ಸೂಚ್ಯಂಕ** |
|---|---|---|---|---|
| ಪರಿಶಿಷ್ಟ ಜಾತಿ | 0.58 | 0.36 | 0.60 | 0.49 |
| ಪರಿಶಿಷ್ಟ ಪಂಗಡ | 0.63 | 0.29 | 0.52 | 0.44 |
| ಅಲ್ಪ ಸಂಖ್ಯಾತ | 0.62 | 0.23 | 0.42 | 0.37 |

4. ಈ ಮಾಹಿತಿಯು ಹಲವು ಸತ್ಯಗಳನ್ನು ಹೇಳುತ್ತಿದೆ. ನಾನು ಮಾನ್ಯ ವಿರೋಧ ಪಕ್ಷದವರನ್ನು ಕೇಳಬಯಸುತ್ತೇನೆ. ಸಮಾಜದ ಒಂದು ವರ್ಗ ಸಂಪೂರ್ಣ ಅಂಗವಿಕಲವಾದರೆ ಇಡೀ ಸಮಾಜವನ್ನು ಮುನ್ನಡೆಸಲು ಹೇಗೆ ಸಾಧ್ಯ? ರಾಜ್ಯದಲ್ಲಿ ಅಲ್ಪಸಂಖ್ಯಾತರ ಪ್ರಮಾಣ ಸುಮಾರು ಶೇ.14 ರಷ್ಟಿದೆ. ಇಷ್ಟು ದೊಡ್ಡ ಜನಸಂಖ್ಯೆಯ ಸಮುದಾಯದ ಕಲ್ಯಾಣಕ್ಕೆ ಈ ಬಾರಿಯ ಬಜೆಟ್‌ನಲ್ಲಿ 4,514 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಇದು ಒಟ್ಟಾರೆ ಬಜೆಟ್‌ನಲ್ಲಿ ಶೇ.1.1 ರಷ್ಟು ಮಾತ್ರ. ಇಷ್ಟಕ್ಕೆ ಇಷ್ಟೊಂದು ಏಕೆ ದ್ವೇಷ?

5. ಶಿಕ್ಷಣ, ಆರೋಗ್ಯ, ಗುಣಮಟ್ಟದ ಜೀವನದ ವಿಚಾರದಲ್ಲಿ ಪರಿಶಿಷ್ಟ ಪಂಗಡಗಳಿಗಿಂತಲೂ ದಯನೀಯ ಸ್ಥಿತಿಯಲ್ಲಿ ಇರುವುದರ ಕುರಿತು ಹಿಂದಿನ ಸರ್ಕಾರವೇ ಮಾಡಿರುವ ವರದಿಯು ಹೇಳುತ್ತಿದೆ.

6. ಶೇ.14 ರಷ್ಟಿರುವ ಅಲ್ಪಸಂಖ್ಯಾತರಿಗೆ ಶಿಕ್ಷಣ, ಆರೋಗ್ಯ, ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಮನೆ, ಶೌಚಾಲಯ ಮುಂತಾದವುಗಳನ್ನು ಇಲ್ಲವಾಗಿಸಿ ಭಾರತವನ್ನು ವಿಶ್ವಗುರುವಾಗಿಸುವುದು ಹೇಗೆ?

7. ಶೇ. 14 ಇರುವ ಜನರನ್ನು ಅಭಿವೃದ್ಧಿಯ ಹಾದಿಗೆ ತರದೇ ಜಿ.ಎಸ್.ಡಿ.ಪಿ/ ಜಿ.ಡಿ.ಪಿ.ಗಳನ್ನು ಹೆಚ್ಚು ಮಾಡಲು ಹೇಗೆ ಸಾಧ್ಯ?

8. ಇದಷ್ಟೇ ಅಲ್ಲ, ಈ ಸಮುದಾಯಗಳನ್ನು ದೂರವಿಡುವುದು ಭಾರತ ಸಂವಿಧಾನದ ವಿರೋಧಿ ನಡೆಯೂ ಕೂಡ ಆಗಿದೆ.

9. ದೇಶದಲ್ಲಿ ಕರ್ನಾಟಕವನ್ನು ಮಾದರಿ ರಾಜ್ಯವನ್ನಾಗಿಸಲು ಈ ಬಾರಿಯ ಬಜೆಟ್‌ನಲ್ಲಿ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಆ ಕ್ರಮಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದ ಪ್ರವರ್ಗ-1, ಪ್ರವರ್ಗ-2ಎ ಮತ್ತು ಪ್ರವರ್ಗ-2ಬಿ ಗಳನ್ನು ಸೇರಿಸಿ ಈ ಕ್ರಮ ತೆಗೆದುಕೊಂಡಿದ್ದೇವೆ. ಈ ವರ್ಗಗಳಲ್ಲಿ ಗುತ್ತಿಗೆದಾರರೇ ಇಲ್ಲವೆನ್ನುವಷ್ಟು ಕಡಿಮೆ ಇದ್ದಾರೆ.

**ಎರಡನೆಯ ಅಂಶ;** ಮುಸಲ್ಮಾನರು ಹಾಗೂ ಧಾರ್ಮಿಕ ಅಲ್ಪಸಂಖ್ಯಾತರಿಗೆ ಮೀಸಲಾತಿ ಕೊಡಬಾರದಿತ್ತು ಎಂದು ಆಕ್ಷೇಪಗಳನ್ನು ಎತ್ತಿದ್ದಾರೆ. ಮಾನ್ಯ ವಿರೋಧ ಪಕ್ಷದವರು ಸ್ವಲ್ಪ ಇತಿಹಾಸವನ್ನು ಓದಿಕೊಂಡರೆ ಒಳ್ಳೆಯದು ಎನ್ನುವುದು ನನ್ನ ಭಾವನೆ. ಇತಿಹಾಸದ ತಿಳುವಳಿಕೆ ಇರುವವರು ಈ ರೀತಿ ಮಾತನಾಡುವುದಿಲ್ಲ.

1. 1919 ರಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 'ಮಿಲ್ಲರ್ ಸಮಿತಿ'ಯನ್ನು ರಚಿಸಿದರು. ಆ ಸಮಿತಿಯು ಮುಸಲ್ಮಾನರು ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಶೇ. 82 ರಷ್ಟು, ಬ್ರಾಹ್ಮಣರಿಗೆ ಶೇ. 20 ರಷ್ಟು ಮೀಸಲಾತಿಯನ್ನು ಅಂದರೆ (10 ಹುದ್ದೆಗಳಿದ್ದರೆ ಅದರಲ್ಲಿ 2 ಹುದ್ದೆಗಳು ಬ್ರಾಹ್ಮಣರಿಗೆ, 8 ಹುದ್ದೆಗಳು ಮುಸಲ್ಮಾನರು ಮತ್ತು ಹಿಂದುಗಳಿದವರಿಗೆ) ಕೊಡಲು ಶಿಫಾರಸ್ಸು ಮಾಡಿತ್ತು. ಸರ್, ಎಂ.ವಿಶ್ವೇಶ್ವರಯ್ಯನವರ ನಂತರ ಶ್ರೀ ಕಾಂತರಾಜ ಅರಸ್ ಅವರು ದಿವಾನರಾಗಿದ್ದಾಗ ಈ ವರದಿಯನ್ನು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜಾರಿಗೆ ತಂದರು.

2. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕರ್ನಾಟಕ ಸರ್ಕಾರಗಳು ಭಾರತ ಸಂವಿಧಾನದ ಆರ್ಟಿಕಲ್ 15 [4], 16 [4] ರ ಪ್ರಕಾರ ಮೀಸಲಾತಿಯನ್ನು ಕೊಟ್ಟುಕೊಂಡು ಬಂದಿವೆ. ಏಕೆಂದರೆ ಈ ಸಮುದಾಯವು ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿವೆ ಎಂಬ ಕಾರಣದಿಂದಲೇ ಮೀಸಲಾತಿಯನ್ನು ಕೊಡಲಾಗಿದೆ. ಹಿಂದುಳಿದ ವರ್ಗಗಳ ವ್ಯಾಪ್ತಿಯಲ್ಲಿ ಮೀಸಲಾತಿಯನ್ನು ಕೊಡಬಹುದೆಂದು ರಾಜ್ಯದ ಹಲವು ಸಮಿತಿಗಳು ಹಾಗೂ ಆಯೋಗಗಳು ಶಿಫಾರಸ್ಸು ಮಾಡಿವೆ.

3. ಕರ್ನಾಟಕದ ಮೊದಲ ಹಿಂದುಳಿದ ವರ್ಗಗಳ ಆಯೋಗ ಎಂದು ಕರೆಸಿಕೊಳ್ಳುವ ಎಲ್.ಜಿ.ಹಾವನೂರ ರವರ ಆಯೋಗವು 4 ಪ್ರವರ್ಗಗಳನ್ನು ಗುರುತಿಸಿದೆ. 1) ಹಿಂದುಳಿದ ಸಮುದಾಯಗಳು, 2) ಹಿಂದುಳಿದ ಜಾತಿಗಳು, 3) ಹಿಂದುಳಿದ ಬುಡಕಟ್ಟುಗಳು, 4) ವಿಶೇಷ ಸಮುದಾಯಗಳು ಎಂದು ವ್ಯಾಖ್ಯಾನಿಸಿ ಎಲ್.ಜಿ ಹಾವನೂರ ಆಯೋಗ ವರದಿ ಕೊಟ್ಟಿದೆ. ಇದನ್ನು ಆಧರಿಸಿ, ಸರ್ಕಾರಿ ಆದೇಶ ಸಂಖ್ಯೆ. ಡಿಪಿಎಆರ್ 01 ಎಸ್‌ಬಿಸಿ 1977, ದಿನಾಂಕ

04.03.1977ರ ಆದೇಶದ ಪ್ರಕಾರ ಮುಸಲ್ಮಾನರನ್ನು ಹಿಂದುಳಿದ ಸಮುದಾಯಗಳ ವ್ಯಾಪ್ತಿಯಲ್ಲಿ ವ್ಯಾಖ್ಯಾನಿಸಲಾಗಿದೆ.

4. ದಿನಾಂಕ 04.03.1977 ರ ಸರ್ಕಾರದ ಆದೇಶವನ್ನು ಸೋಮಶೇಖರಪ್ಪ V/S ಕರ್ನಾಟಕ ಸರ್ಕಾರ ಹಾಗೂ ಇತರರು ರಿಟ್ ಪಿಟಿಷನ್ ಸಂಖ್ಯೆ. 4371/1977 ರಂತೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಗೌರವಾನ್ವಿತ ಉಚ್ಛ ನ್ಯಾಯಾಲಯವು ತನ್ನ ಆದೇಶದ ಪ್ಯಾರಾ ನಂಬರ್ 42 ರಲ್ಲಿ ಈ ರೀತಿ ಆದೇಶ ಮಾಡಿದೆ.

"So far as the Muslims are concerned the Commission was unwise in excluding them from the list of Backward Classes solely on the ground that they belong to a religious minority. The Commission has, however, found that the Muslims are socially and educationally backward and also do not have adequate representation in the Civil Service. The fact that they are a religious minority is no ground to exclude them from the list of Backward Classes. The Government, in our opinion, was perfectly justified in listing the Muslims in the list of Backward Classes."

5. ಹಿಂದುಳಿದ ಸಮುದಾಯಗಳ ವ್ಯಾಪ್ತಿಯಲ್ಲಿ ತರಬಹುದೆಂದು ಗೌರವಾನ್ವಿತ ಉಚ್ಛ ನ್ಯಾಯಾಲಯವು ವ್ಯಾಖ್ಯಾನಿಸಿ ಅರ್ಜಿದಾರರ ರಿಟ್ ಅರ್ಜಿಯನ್ನು ತಿರಸ್ಕರಿಸಿತು.

6. ಆನಂತರ, ಶ್ರೀ ಟಿ. ವೆಂಕಟಸ್ವಾಮಿ ಆಯೋಗವು ಒಟ್ಟು 5 ವರ್ಗಗಳನ್ನು ಗುರುತಿಸಿ 'ಎ', 'ಬಿ', 'ಸಿ', 'ಡಿ' ಮತ್ತು 'ಇ' ವರ್ಗಗಳೆಂದು ವ್ಯಾಖ್ಯಾನಿಸಿತು. ಮುಸ್ಲಿಂ ಸಮುದಾಯವನ್ನು ಹಿಂದುಳಿದ ವರ್ಗಗಳ ಗ್ರೂಪ್ 'ಸಿ'ಯಲ್ಲಿ ಸೇರಿಸಿತು.

7. ನಂತರ, ನ್ಯಾಯಮೂರ್ತಿ ಓ. ಚಿನ್ನಪ್ಪರೆಡ್ಡಿ ಆಯೋಗವು ಕೆಟಗರಿ–1, ಕೆಟಗರಿ–2ಎ, ಕೆಟಗರಿ–2ಬಿ, ಕೆಟಗರಿ–3ಎ, ಕೆಟಗರಿ–3ಬಿ ಮತ್ತು ಕೆಟಗರಿ–4 ಎಂದು ಗುರುತಿಸಿತು. ಆಗ, ಮುಸ್ಲಿಂ ಸಮುದಾಯವನ್ನು ಪ್ರತ್ಯೇಕವಾಗಿ ಪ್ರವರ್ಗ–2ಬಿಯಲ್ಲಿ ಗುರುತಿಸಿ ಮೀಸಲಾತಿ ನೀಡಲು ಶಿಫಾರಸ್ಸು ಮಾಡಿತು.

8. ಆನಂತರದ ಪ್ರೊ. ರವಿವರ್ಮ ಕುಮಾರ್ ಆಯೋಗವು ಕೆಟಗರಿ–1, ಕೆಟಗರಿ–2ಎ, ಕೆಟಗರಿ–2ಬಿ, ಕೆಟಗರಿ–3ಎ, ಮತ್ತು ಕೆಟಗರಿ–3ಬಿ ಗಳೆಂದು 5 ಪ್ರವರ್ಗಗಳಾಗಿ ಗುರುತಿಸಿತು. ಇವತ್ತಿಗೂ ಇದೇ ಪದ್ಧತಿ ಮುಂದುವರೆದಿದೆ. ಪ್ರೊ. ರವಿವರ್ಮ ಕುಮಾರ್ ಆಯೋಗವು ಕೂಡ ಮುಸ್ಲಿಂ ಸಮುದಾಯವನ್ನು ಹಿಂದುಳಿದ ವರ್ಗಗಳ ಕೆಟಗರಿ–2ಬಿ ನಲ್ಲಿ ಸೇರಿಸಿದೆ. ಹಾಗಾಗಿ, ರಾಜ್ಯದ ಎಲ್ಲಾ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟ ಸಮಿತಿಗಳು ಹಾಗೂ ಆಯೋಗಗಳು ಮುಸ್ಲಿಂ ಸಮುದಾಯವನ್ನು ಹಿಂದುಳಿದ ವರ್ಗ ಎಂದು ಗುರುತಿಸಿವೆ.

9. ಆದರೆ, ನಿಮ್ಮ ಸರ್ಕಾರ ರಾಜಕೀಯ ದುರುದ್ದೇಶದಿಂದ ಮುಸ್ಲಿಮರನ್ನು ಹಿಂದುಳಿದ ವರ್ಗಗಳ ಮೀಸಲಾತಿಯಿಂದ ಹೊರಗಿಡಲು ಪ್ರಯತ್ನಿಸಿತ್ತು. ಆದರೆ ಅದು ಅನೂರ್ಜಿತವಾಗುತ್ತದೆ ಎಂದು ತಿಳಿದ ಕೂಡಲೇ

ಸುಪ್ರೀಂ ಕೋರ್ಟಿನಲ್ಲಿ ಪ್ರಕರಣ ಸಂಖ್ಯೆ: ರಿಟ್ ಪಿಟಿಷನ್ (ಸಿವಿಲ್) ನಂ.435/2023 ರಲ್ಲಿ ಸಾಲಿಸಿಟರ್ ಜನರಲ್‌ರವರು ತಿಳಿಸಿದ ಅಭಿಪ್ರಾಯಗಳನ್ನು ಗೌರವಾನ್ವಿತ ಸುಪ್ರೀಂ ಕೋರ್ಟ್ ದಾಖಲಿಸಿಕೊಂಡಿದೆ.

“We further record the following statements made by the learned Solicitor General:

(1) The impugned orders dated 27.03.2023 shall not be implemented till the next date of hearing.

(2) He further submits that the earlier regime relating to reservation viz., Notification dated 30.03.2002 will continue to hold the field till the next date of hearing.

He undoubtedly submits that this submission which he made is without prejudice to his contentions.”

10. ನಾವು ರಾಜಕಾರಣವನ್ನು ಪ್ರಾಮಾಣಿಕ ಕಾಳಜಿಯಿಂದ ಮಾಡಬೇಕು. ಅದು ಅರ್ಥಬದ್ಧವಾಗಿರಬೇಕು. ನಮ್ಮ ರಾಜಕಾರಣ ಪ್ರಾಮಾಣಿಕವಾಗಿರುವುದು ಮುಖ್ಯ. ಇಲ್ಲದಿದ್ದರೆ, ಓಟಿನ ಗಿಮಿಕ್ಕಿಗಾಗಿ ರಾಜಕಾರಣ ಮಾಡಿದರೆ ಮುಸ್ಲಿಂ ಮೀಸಲಾತಿ ವಿಚಾರದಲ್ಲಿ ರಾಜ್ಯದಲ್ಲಿ ಜನರ ಮುಂದೆ ಒಂದು ತೀರ್ಮಾನ ತೆಗೆದುಕೊಂಡು, ಸುಪ್ರೀಂ ಕೋರ್ಟಿನಲ್ಲಿ ಒಂದು ನಿಲುವನ್ನು ತೆಗೆದುಕೊಂಡಂತೆ ಎಲ್ಲ ವಿಚಾರಗಳಿಗೂ ಅನ್ವಯವಾಗುತ್ತದೆ.

ಒಟ್ಟಾರೆ ನಮ್ಮ ಸರ್ಕಾರವು ನಾಡಿನ ಸಮಗ್ರ ಅಭಿವೃದ್ಧಿಗಾಗಿ ದುಡಿಯುತ್ತಿದೆ. ಸುಸ್ಥಿರ ಅಭಿವೃದ್ಧಿಯತ್ತ ಕರ್ನಾಟಕವನ್ನು ಮುನ್ನಡೆಸುವುದು ನಮ್ಮ ಗುರಿ. ಮುಂದಿನ ದಿನಗಳಲ್ಲಿ ರಾಜಸ್ವ ಕೊರತೆಯನ್ನು ಹೋಗಲಾಡಿಸಿ ರೆವಿನ್ಯೂ ಸರ್ಪ್ಲಸ್ ಬಜೆಟ್ ಮಂಡಿಸುವುದೂ ಕೂಡ ನಮ್ಮ ಧ್ಯೇಯ.

ಇದು “ಸರ್ವರ ಬಜೆಟ್, ಸರ್ವೋದಯದ ಬಜೆಟ್” ಎಂದು ನಾನು ಮತ್ತೊಮ್ಮೆ ತಮಗೆ ತಿಳಿಸಬಯಸುತ್ತೇನೆ.

ನಮ್ಮ ಬಜೆಟ್‌ನಲ್ಲಿ ಈ ಬಾರಿ ಅನೇಕ ಹೊಸ ಕಾರ್ಯಕ್ರಮಗಳನ್ನು ತಂದಿದ್ದೇವೆ. ಪಶುಪಾಲಕರಿಗೆ ಕುರಿ, ಮೇಕೆ, ಎತ್ತು, ಹಸು ಆಕಸ್ಮಿಕವಾಗಿ ಮೃತಪಟ್ಟರೆ ಪರಿಹಾರ ಧನ ಹೆಚ್ಚು ಮಾಡುವುದರಿಂದ ಹಿಡಿದು, ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ತಂದಿದ್ದೇವೆ. ಕೃಷಿ ಕ್ಷೇತ್ರಕ್ಕೆ ಕೊಡಲಾಗಿತ್ತು. ಈ ಬಾರಿ ನಾವು ಸಮಗ್ರ ಕೃಷಿ ಕ್ಷೇತ್ರಕ್ಕೆ ಒಟ್ಟು ರೂ. 51,339 ಕೋಟಿಗಳನ್ನು ಕೊಟ್ಟಿದ್ದೇವೆ.

2022-23 ರಲ್ಲಿ ಮಹಿಳಾ ಅಭಿವೃದ್ಧಿಗೆ ರೂ. 43,188 ಕೋಟಿ ಕೊಡಲಾಗಿತ್ತು. 2025-26 ರಲ್ಲಿ ರೂ. 94,084 ಕೋಟಿಗಳನ್ನು ಕೊಟ್ಟಿದ್ದೇವೆ.

ಮಕ್ಕಳ ಬಜೆಟ್‌ಗಾಗಿ 2022-23ರಲ್ಲಿ ರೂ. 40,944 ಕೋಟಿಗಳನ್ನು ಕೊಡಲಾಗಿತ್ತು. 2025-26 ರಲ್ಲಿ 62,033 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಇಷ್ಟೆಲ್ಲಾ ಆದ ಮೇಲೂ ನಿಮಗೆ ಬಜೆಟ್ ಬಗ್ಗೆ ಆಕ್ಷೇಪಗಳಿದ್ದರೆ, ಅದು ರಾಜಕೀಯ ಪ್ರೇರಿತವಾದ ಆಕ್ಷೇಪಗಳೇ ಹೊರತು, ಪ್ರಾಮಾಣಿಕ ಅಭಿಪ್ರಾಯಗಳಲ್ಲ ಬಹುಶಃ ಜನರ ಅಭಿಪ್ರಾಯವೂ ಆಗಿರಬಹುದು.

ಕಡೆಯದಾಗಿ ನಿಮ್ಮ ಹಿಂದಿನ ಆಡಳಿತಕ್ಕೆ ಕನ್ನಡಿಯಂತಿರುವ ಬಸವಣ್ಣನವರ ವಚನವನ್ನು ಓದಬೇಕೆಂದೆನಿಸುತ್ತಿದೆ.

**ಆನೆಯನೇರಿಕೊಂಡು ಹೋದಿರೇ ನೀವು**
**ಕುದುರೆಯನೇರಿಕೊಂಡು ಹೋದಿರೇ ನೀವು**
**ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೇ ಅಣ್ಣಾ**
**ಸತ್ಯದ ನಿಲುವನರಿಯದೆ ಹೋದಿರಲ್ಲಾ**

**- ವಿಶ್ವಗುರು ಸಾಂಸ್ಕೃತಿಕ ನಾಯಕ ಬಸವಣ್ಣ**

ಬಸವಣ್ಣನವರು ಬಹುಶಃ ನಿಮ್ಮಂತಹವರನ್ನು ನೋಡಿಯೇ ಹೀಗೆ ಹೇಳಿದ್ದಾರೆ ಎಂದು ನನಗನಿಸುತ್ತದೆ. ಎಲ್ಲರಿಗೂ ಧನ್ಯವಾದಗಳು."

**ಸಭಾಪತಿಯವರು:-** ಮುಖ್ಯಮಂತ್ರಿಗಳ ಲಿಖಿತ ಉತ್ತರವನ್ನು ನಡವಳಿ ಭಾಗವಾಗಿ ಪರಿಗಣಿಸಲಾಗಿದೆ.

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಒಟ್ಟು ರೂ. 4,09,549 ಕೋಟಿಗಳನ್ನು 2025-26ನೇ ಸಾಲಿನ ಆಯವ್ಯಯದಲ್ಲಿ ನಾನು ಮಂಡಿಸಿದ್ದೇನೆ. **(ಗೊಂದಲ)** ಮಾನ್ಯ ಸದಸ್ಯರು ಮಾಡಿರತಕ್ಕಂಥ ಎಲ್ಲಾ ಟೀಕೆಗಳಿಗೆ, ಸಲಹೆ ಮತ್ತು ಸೂಚನೆಗಳಿಗೆ ಎಲ್ಲದಕ್ಕೂ ಕೂಡ ಉತ್ತರದಲ್ಲಿ ಹೇಳಿದ್ದೇನೆ. ಇದನ್ನು ತಾವು ಒಪ್ಪಿಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡುವುದಕ್ಕೆ ಬಯಸುತ್ತಿದ್ದೇನೆ.

The House is not in order. **(ಗೊಂದಲ)** ಮಾನ್ಯ ವಿರೋಧ ಪಕ್ಷದವರಿಗೆ ನನ್ನ ಉತ್ತರವನ್ನು ಕೇಳುವ ಮನಸ್ಸಿಲ್ಲ. **(ಗೊಂದಲ)** ಏಕೆಂದರೆ, ನಾನು ಅವರ ಕೇಂದ್ರ ಸರ್ಕಾರವನ್ನು, ಇಂದಿನ ಬಿ.ಜೆ.ಪಿ ಸರ್ಕಾರವನ್ನೆಲ್ಲಾ expose ಮಾಡುತ್ತೇನೆ, ಅವರ ಲೋಪದೋಷಗಳನ್ನೆಲ್ಲಾ ಹೇಳುತ್ತೇನೆ ಮತ್ತು ಅವರ ತಪ್ಪುಗಳನ್ನೆಲ್ಲಾ ಹೇಳುತ್ತೇನೆ ಎಂಬ ಭಯದಿಂದ ಅವರು ಈ ರೀತಿಯಾಗಿ ಧರಣಿ ಮಾಡಲು ಪ್ರಾರಂಭ ಮಾಡಿದ್ದಾರೆ. ಅವರು ಬಜೆಟ್ ಮೇಲಿನ ಚರ್ಚೆಗೆ ನನ್ನಿಂದ ಉತ್ತರ ಕೇಳುವುದಕ್ಕೆ ತಯಾರಿಲ್ಲ. ಈಗ ಅವರೇನು ಹನಿಟ್ರ್ಯಾಪ್ ಎನ್ನತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ನಾನು . . .

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ನಿನ್ನೆದಿವಸ ಮಾನ್ಯ ಗೃಹ ಸಚಿವರು ಉತ್ತರ ಕೊಟ್ಟಿದ್ದಾರೆ. ನಾನು ಕೂಡ ವಿಧಾನ ಸಭೆಯಲ್ಲಿ ಹೇಳಿದ್ದೇನೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್ ರವರೇ, ನಿಮ್ಮ ಬೇಡಿಕೆಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಹೇಳುತ್ತಿದ್ದಾರೆ ಕೇಳಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ನಾನು ವಿಧಾನಸಭೆಯಲ್ಲಿ "ನಾವು ಕೆಳಮನೆ ಮತ್ತು ಮೇಲ್ಮನೆ ಸದಸ್ಯರಿರಬಹುದು ಅವರೆಲ್ಲರಿಗೂ ಕೂಡ ರಕ್ಷಣೆ ಕೊಡತಕ್ಕಂಥ ಕೆಲಸ ಮಾಡುತ್ತೇವೆ" ಎಂದು ಹೇಳಿದ್ದೇನೆ. ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ.ಎನ್.ರಾಜಣ್ಣನವರು ಯಾರ ಹೆಸರನ್ನೂ ಕೂಡ ಹೇಳಿಲ್ಲ. ಆದರೂ ಕೂಡ ಉನ್ನತ ಮಟ್ಟದ ತನಿಖೆಯನ್ನು ಮಾಡಿಸುತ್ತೇವೆಂದು ಮಾನ್ಯ ಗೃಹ ಸಚಿವರು ಕೂಡ ಹೇಳಿದ್ದಾರೆ, ನಾನು ಕೂಡ ಅದನ್ನೇ ಪುನರುಚ್ಚಾರ ಮಾಡುತ್ತೇನೆ. ಅದನ್ನು ಉನ್ನತ ಮಟ್ಟದ ತನಿಖೆಯನ್ನು ಮಾಡಿಸಿ, ಅದು ಬಿ.ಜೆ.ಪಿ ಯವರೇ ಇರಲಿ, ಕಾಂಗ್ರೆಸ್‌ನವರೇ ಇರಲಿ ಅಥವಾ ಜೆ.ಡಿ. (ಎಸ್)ನವರೇ ಇರಲಿ, ಅವರು ಯಾರೇ ಆಗಿರಲಿ ಅವರ ಮೇಲೆ ಕಠಿಣವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆದರೆ ಇದು ತನಿಖೆ ಆಗಬೇಕಲ್ಲವೇ? ಸುಮ್ಮನೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರು ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಸುಮಾರು 48 ಜನರ ಮೇಲೆ ಈ ರೀತಿ ಆಗಿದೆ ಎಂದು ಎಲ್ಲಾ ಕಡೆ ವರದಿಯಾಗಿದೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದನ್ನು ನಾನು ಕೇಳುವುದಕ್ಕೆ ತಯಾರಿಲ್ಲ. ಸುಮ್ಮನೆ ಅನಗತ್ಯವಾಗಿ ಇವೆಲ್ಲಾ . . .

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್ ರವರೇ, ಒಂದು ನಿಮಿಷ. **(ಗೊಂದಲ)** ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ತನಿಖೆ ಮಾಡಿಸುತ್ತೇವೆಂದಮೇಲೆ ಏನಿದೆ ನಿಮಗೆ? ನಿಮಗೆ ತನಿಖೆ ಆಗುವುದು ಬೇಡ, ನಿಮಗೆ ಸತ್ಯ ಗೊತ್ತಾಗುವುದು ಬೇಡ **(ಗೊಂದಲ)** . . .

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಮುಖ್ಯಮಂತ್ರಿಗಳು Sitting Judge ನಿಂದ ತನಿಖೆ ಮಾಡಿಸುತ್ತೇವೆ ಎಂದರೆ ನಮಗೆ ಅಭ್ಯಂತರವಿಲ್ಲ. ಇಲ್ಲವೆಂದರೆ, ನೀವು ಇದನ್ನು C.B.I. ಗೆ ಕೊಟ್ಟರೆ ನಮಗೆ ಅಭ್ಯಂತರವಿಲ್ಲ. ದಯವಿಟ್ಟು ಅವರು ಉತ್ತರ ಕೊಡಬೇಕು.

**(ಗೊಂದಲ)**

**18) ಶಾಸನ ರಚನೆ**

**ಮುಂದುವರಿದ ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಋ) ಕರ್ನಾಟಕ ಧನವಿನಿಯೋಗ ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ಇದು Consequential Bill.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

ಖಂಡ 2 ಮತ್ತು 3

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಮುಂದು)**

**(582)21.3.2025/5.00/ಎಂ.ಎಂ-ಎ.ಕೆ** **(ಸಭಾಪತಿಯವರ ಉಪಸ್ಥಿತಿ)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಬಿ.ಜೆ.ಪಿ. ಮತ್ತು ಜೆ.ಡಿ(ಎಸ್.) ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಘೋಷಣೆ ಕೂಗುತ್ತಿದ್ದರು)**

**ಎ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು) (ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**(ಪ್ರಸ್ತಾವವನ್ನು ಮಂಡಿಸಲಾಯಿತು)**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು) (ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಈ ಮೂರು ತಿದ್ದುಪಡಿಗಳನ್ನು ತಂದಿರುವುದು ವಿಶೇಷವಾಗಿ petrol and diesel operated motor cabs and taxis ಏನಿವೆ 10 ಲಕ್ಷ ರೂಪಾಯಿಗಳ ಒಳಗಡೆ ಇರುವ ವಾಹನಗಳಿಗೆ ಶೇ.5ರಷ್ಟು ತೆರಿಗೆಯನ್ನು ವಿಧಿಸುತ್ತಿದ್ದೇವೆ. ಜೊತೆಗೆ ವಿಶೇಷವಾಗಿ battery operated vehicles ಮತ್ತು cabs ಮೇಲೆ 10% tax impose ಮಾಡುತ್ತಿದ್ದೇವೆ. ಯಾವ battery operated ವಾಹನಗಳು 25 ಲಕ್ಷ ರೂಪಾಯಿಗಳ ಮೇಲಿವೆ, ಅದೇ ರೀತಿ construction equipment vehicles ಗೆ ತೆರಿಗೆಯನ್ನು ಶೇ.6 ರಿಂದ ಶೇ.8ಕ್ಕೆ ಹೆಚ್ಚಳ ಮಾಡುತ್ತಿದ್ದೇವೆ.

**(ಈ ಹಂತದಲ್ಲಿ ಬಿ.ಜೆ.ಪಿ. ಮತ್ತು ಜೆ.ಡಿ(ಎಸ್) ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2025ಅನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 5ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 5ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 5ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ–1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು) (ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**19) ಸರ್ಕಾರದ ಲಿಖಿತ ಉತ್ತರಗಳ ಮಂಡನೆ**

**(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 21ನೇ ಮಾರ್ಚ್ 2025, ಸಮೂಹ-5ರ ಸದನದಲ್ಲಿ ಉತ್ತರಿಸುವ ಒಟ್ಟು 22 ಪ್ರಶ್ನೆಗಳ ಪೈಕಿ 21 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 21ನೇ ಮಾರ್ಚ್ 2025, ಸಮೂಹ-5ರ ಸದನದಲ್ಲಿ ಲಿಖಿತ ಮೂಲಕ ಉತ್ತರಿಸುವ ಒಟ್ಟು 22 ಪ್ರಶ್ನೆಗಳ ಪೈಕಿ 21 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಇ) ನಿಯಮ 72ರ ಗಮನ ಸೆಳೆಯುವ ಸೂಚನೆಗಳ ಉತ್ತರಗಳು**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಈ) **ನಿಯಮ 330 ರ ಸೂಚನೆಗಳ ಉತ್ತರಗಳು**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)** ಮಾನ್ಯ ಸಭಾಪತಿಯವರೇ, ನಿಯಮ 330ರ ಸೂಚನೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉ) **ನಿಯಮ 58ಎ ಅಡಿಯಲ್ಲಿ ಪ್ರಸ್ತಾಪಿಸಿದ ಶೂನ್ಯವೇಳೆ ಸೂಚನೆಗಳ ಉತ್ತರಗಳು**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)** ಮಾನ್ಯ ಸಭಾಪತಿಯವರೇ, ನಿಯಮ 58ಎ ಶೂನ್ಯವೇಳೆ ಸೂಚನೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**20) ನಿರ್ಣಯ**

“ವಿಶ್ವವಿದ್ಯಾಲಯ ಧನಸಹಾಯ ಆಯೋಗ ಹೊರಡಿಸಿರುವ ಕರಡು “University Grants Commission (Minimum Qualifications for Appointment and Promotion of Teachers and Academic Staff in Universities and Colleges and Measures for the Maintenance of Standards in Higher Education) Regulations, 2025” ಅನ್ನು ಹಿಂಪಡೆಯುವ ಕುರಿತು.

– – – – –

**ಡಾ: ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ನನ್ನ ಈ ಕೆಳಕಂಡ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗ ಹೊರಡಿಸಿರುವ ಕರಡು “University Grants Commission (Minimum Qualifications for Appointment and Promotion of Teachers and Academic Staff in Universities and Colleges and Measures for the Maintenance of Standards in Higher Education) Regulations, 2025” ಅನ್ನು ಹಿಂಪಡೆಯಬೇಕೆಂದು ನಿರ್ಣಯಿಸಲಾಗಿದೆ.

**ಸಭಾಪತಿಯವರು:–** ಮಾನ್ಯ ಸದಸ್ಯರಿಗೆ ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಈ ಸಭೆಯು ಅನುಮತಿಸುತ್ತದೆಯೇ? ದಯಮಾಡಿ ಯಾರಾದರೂ ಇದರ ಬಗ್ಗೆ ಮಾತನಾಡುತ್ತೀರಾ?

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಬಿ.ಜೆ.ಪಿ. ಮತ್ತು ಜೆ.ಡಿ(ಎಸ್) ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಘೋಷಣೆ ಕೂಗುತ್ತಿದ್ದರು)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮೊದಲು ಇದಕ್ಕೆ ಉತ್ತರ ಕೊಡಿಸಿ ನಂತರ ಮಾತನಾಡುತ್ತೇವೆ.

**ಡಾ: ಎಂ.ಸಿ. ಸುಧಾಕರ್:–** ಮಾನ್ಯ ಸಭಾಪತಿಯವರೇ, ನಿರ್ಣಯವನ್ನು ಸದನದಲ್ಲಿ ಮಂಡಿಸಲಾಗಿದೆ. ಇದನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಹಾಲಿ ನ್ಯಾಯಾಧೀಶರಿಂದ (**ಗೊಂದಲ**) ಇಲ್ಲದಿದ್ದರೆ ಸಿ.ಬಿ.ಐ. ನಿಂದ ತನಿಖೆ ಮಾಡಿಸಿ.

**ಸಭಾಪತಿಯವರು:–** ಸದನವು ನಿರ್ಣಯವನ್ನು ಅಂಗೀಕರಿಸಿದೆ.

**ನಿರ್ಣಯ ಅಂಗೀಕರಿಸಲ್ಪಟ್ಟಿತು ಹಾಗೂ ಸದನದ ಅನುಮೋದನೆ ದೊರೆಯಿತು**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸತ್ಯ ಹೊರಗೆ ಬರಬೇಕಾಗಿದೆ. ಏಕೆಂದರೆ, ಮಂತ್ರಿಗಳೇ ಇದರಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆಂದರೆ, ಶಾಸಕರ ಕಥೆ ಏನು? 48 ಜನರ ಹೆಸರು ಪ್ರಸ್ತಾಪವಾಗುತ್ತಿದೆ. ದಯವಿಟ್ಟು ಇದಕ್ಕೆ ಉತ್ತರ ಕೊಡಿಸಿ. ನಾವು ಈ ನಿರ್ಣಯವನ್ನು ಹರಿದು ಬಿಸಾಕುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ನಿರ್ಣಯದ ಪ್ರತಿಗಳನ್ನು ಹರಿದು ಹಾಕಿದರು)

**ಸಭಾಪತಿಯವರು:-** ಈಗ ಸದನವನ್ನು 10 ನಿಮಿಷ ಮುಂದೂಡಲಾಗುವುದು.

**(ಸದನವು ಸಂಜೆ 5 ಗಂಟೆ 8 ನಿಮಿಷದಲ್ಲಿ 10 ನಿಮಿಷಗಳ ಕಾಲ ಮುಂದೂಡಲಾಯಿತು)**

**(583) 21-03-2025/6.10/ಎಂವಿ-ಕೆಎಸ್**

**(ಸಂಜೆ 5 ಗಂಟೆ 8 ನಿಮಿಷಕ್ಕೆ ಮುಂದೂಡಲ್ಪಟ್ಟಿದ್ದ ಸದನವು ಪುನಃ ಸಂಜೆ 6 ಗಂಟೆ 15 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಮತ್ತು ಮಾನ್ಯ ಸದಸ್ಯರಾದ ಶ್ರೀ ಸಿ.ಟಿ. ರವಿಯವರು ಹಾಗೂ ಜೆಡಿ(ಎಸ್.) ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ ರವರುಗಳನ್ನು ಹೊರತುಪಡಿಸಿ, ವಿರೋಧ ಪಕ್ಷದ ಇನ್ನುಳಿದ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಫಲಕಗಳನ್ನು ಪ್ರದರ್ಶಿಸಿದರು)**

**21) <u>ಪ್ರಕಟಣೆ</u>**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ 21.03.2025ರಂದು "ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ (ತಿದ್ದುಪಡಿ) ವಿಧೇಯಕ, 2025" ಹಾಗೂ "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2025" ಅನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ. ಇದನ್ನು ಸದನ ಒಪ್ಪಿದೆ ಎಂದು ಭಾವಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತನಿಖೆಯಾಗಲಿ, ತನಿಖೆಯಾಗಲಿ.

**22) ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಕಾರ್ಯದರ್ಶಿ, ಕವಿಪ:–** ಮಾನ್ಯ ಸಭಾಪತಿಯವರೇ, "ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ (ತಿದ್ದುಪಡಿ) ವಿಧೇಯಕ, 2025" ಅನ್ನು ಹಾಗೂ "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2025" ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ, ಈಗ 3 ಮತ್ತು 4ರ ನಂತರ ಬಾಬ್ತನ್ನು ಸೇರಿಸಿಕೊಳ್ಳತಕ್ಕದ್ದು. Additional agenda ಅಥವಾ 2ನೇ ಪೂರಕ ಕಾರ್ಯಕಲಾಪಗಳ ಪಟ್ಟಿ.

**23) ಶಾಸನ ರಚನೆ**

**ಮುಂದುವರಿದ ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಏ) ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರಡಿಯಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಯ ಭಾಗದಲ್ಲಿ 15 ಎಕರೆಗಳು 17.5 ಗುಂಟೆಗಳ ವ್ಯಾಪ್ತಿಯಷ್ಟನ್ನು ಮೂಲಸೌಕರ್ಯ ಯೋಜನೆಗೆ ಬಳಸಿಕೊಳ್ಳಲು ಉದ್ದೇಶಿಸಲಾಗಿತ್ತು. ಅದರಲ್ಲಿ 1217.41 ಚದರ ಮೀಟರ್‌ಗಳಷ್ಟನ್ನು ಮಾತ್ರ ವಾಸ್ತವವಾಗಿ ಬಳಸಲಾಗಿರುವುದರಿಂದ;

ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 14ಬಿ ಪ್ರಕರಣದಡಿಯಲ್ಲಿನ ಯಾವುದೇ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳು, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಅನುಸಾರ ಸರ್ಕಾರದಲ್ಲಿ ನಿಹಿತವಾಗಿರುವ ಭೂಮಿಗೆ ಅನ್ವಯಿಸುವುದಿಲ್ಲವಾದ್ದರಿಂದ;

ಮತ್ತು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಅನುಸೂಚಿ 1ರಲ್ಲಿ ವಿವರಿಸಲಾದ ಭೂಮಿಯ ಯಾವುದೇ ಭಾಗವನ್ನು ಬಳಸಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವುದು ಅಗತ್ಯವಾಗಿರುವುದರಿಂದ;

ಮತ್ತು ರಾಜ್ಯ ಸರ್ಕಾರವು ಯಾವುದೇ ಮೂಲಸೌಕರ್ಯ ಯೋಜನೆಗಾಗಿ ಭೂಮಿಯ ಭಾಗವನ್ನು ಬಳಸಲಾಗಿದ್ದರೆ, ಯಾವುದೇ ಅಂಥ ಮೂಲಸೌಕರ್ಯ ಯೋಜನೆಯಲ್ಲಿ ಪೂರ್ಣವಾಗಿ ಅಥವಾ ಭಾಗಶಃ ಮುಂದುವರಿಯದಿರಲು ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಸಲಹೆ ನೀಡಲಾಗಿದ್ದರೆ, ಅದು ಅದನ್ನು ತೀರ್ಮಾನಿಸಬಹುದಾಗಿರುವುದರಿಂದ;

ಮತ್ತು ರಾಜ್ಯ ಸರ್ಕಾರವು ಅಗತ್ಯವಿದ್ದಲ್ಲಿ, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಅನುಸೂಚಿ 1ರಲ್ಲಿ ವಿವರಿಸಿದ ಭೂಮಿಯನ್ನು ಒಳಗೊಂಡು, ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಭೂಮಿಯ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಮೂಲಸೌಕರ್ಯ ಯೋಜನೆಯಲ್ಲಿ ಮುಂದುವರಿಯಲು ಪರಿಗಣಿಸಬಹುದಾಗಿರುವುದರಿಂದ;

ಹಾಗೂ ಯಾವುದೇ ಸದರಿ ಬಳಕೆಗಾಗಿ ಪಾವತಿಸಲಾದ ಯಾವುದೇ ನಷ್ಟಪರಿಹಾರವನ್ನು, ವಾಸ್ತವಿಕವಾಗಿ ಬಳಸಲಾದ ಪ್ರದೇಶಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ 8ನೇ ಪ್ರಕರಣದಲ್ಲಿರುವಂತೆ ಪಾವತಿಸಬೇಕಾದ ಮೊತ್ತಕ್ಕೆ ಅನುಗುಣವಾಗಿ ಲೆಕ್ಕಹಾಕುವುದು, ಮತ್ತು ಯಾವುದೇ ಅಂಥ ಪಾವತಿಸತಕ್ಕ ನಷ್ಟಪರಿಹಾರವನ್ನು, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996, (1996ರ ಕರ್ನಾಟಕ ಅಧಿನಿಯಮ 18)ರ ಅಡಿಯಲ್ಲಿನ ಒಟ್ಟಾರೆ ನಷ್ಟ ಪರಿಹಾರದಿಂದ ಪ್ರಮಾಣಾನುಸಾರವಾಗಿ ಕಟಾವಣೆ ಮಾಡತಕ್ಕದ್ದು;

ಮತ್ತು ಈಗ ಈ ಪ್ರಸ್ತಾವಿತ ಅಧಿನಿಯಮವು ಮೇಲಿನ ಉದ್ದೇಶಗಳನ್ನು ಸಾಧಿಸಲು ಮತ್ತು ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ಅಧಿನಿಯಮ, 2025 (2025ರ ಕರ್ನಾಟಕ ಅಧಿನಿಯಮ 14)ನ್ನು ತಿದ್ದುಪಡಿ ಮಾಡುತ್ತಿದ್ದೇವೆ.

(ಮುಂದು)

**(584) 21.03.2025 06.20 LL-KS** **(ಸಭಾಪತಿಯವರ ಉಪಸ್ಥಿತಿ)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಮತ್ತು ಮಾನ್ಯ ಸದಸ್ಯರಾದ ಶ್ರೀ ಸಿ.ಟಿ. ರವಿಯವರು ಹಾಗೂ ಜೆಡಿ(ಎಸ್) ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ ರವರುಗಳನ್ನು ಹೊರತುಪಡಿಸಿ, ವಿರೋಧ ಪಕ್ಷದ ಉಳಿದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾರದ ವಿರುದ್ಧ ಫಲಕಗಳನ್ನು ಪ್ರದರ್ಶಿಸುತ್ತಾ, ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಹೆಚ್.ಕೆ. ಪಾಟೀಲ್ (ಮುಂದು):-**

ಈ ಒಂದು ಮಸೂದೆಯ ಮೂಲಕ ನಾವು ನಮ್ಮ ತಜ್ಞರ ಸಲಹೆಯಂತೆ ನಾವು ಕಾಯ್ದೆಯ, Section 2(i)(D) ಅನ್ನು amendment ಮಾಡುತ್ತಿದ್ದೇವೆ, Section 2(ii)(F) ಅನ್ನು delete ಮಾಡುತ್ತಿದ್ದೇವೆ, Section 3(i)(2) ಅನ್ನು amendment ಮಾಡುತ್ತಿದ್ದೇವೆ Section 3(iii)(6) ಅನ್ನು delete ಮಾಡುತ್ತಿದ್ದೇವೆ. Section 4(i)(1) ಅನ್ನು amendment ಮಾಡುತ್ತಿದ್ದೇವೆ, Section 4(ii)(2) ಅನ್ನು amendment ಮಾಡುತ್ತಿದ್ದೇವೆ, Section 4(iii)(3) ಅನ್ನು amendment ಮಾಡುತ್ತಿದ್ದೇವೆ, Section 4(iv)(5) ಅನ್ನು delete ಮಾಡುತ್ತಿದ್ದೇವೆ. ಇದು ನಮ್ಮ ರಾಜ್ಯದ ಹಿತ ಕಾಪಾಡುವುದಕ್ಕೆ ಒಂದು ರೀತಿಯ ಬಲ ಕೊಡುತ್ತದೆ. ನ್ಯಾಯಯುತವಾದ ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ತಾವು ಈ ಮಸೂದೆಯನ್ನು ಪಾಸ್ ಮಾಡಿಕೊಟ್ಟರೆ, ಇದು ನಮಗೆ ಶಕ್ತಿಯನ್ನು

ನೀಡುತ್ತದೆ. ಬೆಂಗಳೂರು ಅರಮನೆ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕಾಗಲಿ, ರಾಜ್ಯಕ್ಕಾಗಲಿ, ಯಾವುದೇ ರೀತಿಯಾದಂತಹ ಹಾನಿಯಾಗದೇ ಇರುವ ರೀತಿ ನೋಡಿಕೊಳ್ಳುವುದಕ್ಕೆ ಈಗಾಗಲೇ ಸುಪ್ರೀಂ ಕೋರ್ಟ್‌ನಲ್ಲಿ ಏನು ಪ್ರಕರಣ ಇದೆ, ಆ ಪ್ರಕರಣದಲ್ಲಿ ನಾವು ಹಲವಾರು ಮಾಹಿತಿಗಳನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುತ್ತೇವೆ ಹಾಗೂ ಈ ಹಿಂದೆ 2004ಕ್ಕೆ ಮೊದಲು ಏನು ಭೂಸ್ವಾಧೀನವಾಗಿದೆ ಅವುಗಳಿಗೆ ಟಿಡಿಆರ್ (Transferable Development Rights) ಕೊಡತಕ್ಕಂಥದ್ದು ಅನ್ಯಾಯ ಆಗುವುದಿಲ್ಲ. ಅದನ್ನು ಸಹ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈ ಎಲ್ಲಾ ಕಾರಣಗಳ ಹಿನ್ನೆಲೆಯಲ್ಲಿ ದಯಮಾಡಿ, ಸದನ ಈ ತಿದ್ದುಪಡಿ ವಿಧೇಯಕವನ್ನು ಒಪ್ಪಬೇಕೆಂದು ತಮ್ಮ ಮೂಲಕ ಎಲ್ಲಾ ಸದಸ್ಯರಲ್ಲಿ ಮನವಿ ಮಾಡುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ ಅನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

ಖಂಡ 2 ರಿಂದ 4 ರವರೆಗೆ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಚ್.ಕೆ. ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ ಅನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

## ಐ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2025

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎಚ್.ಕೆ. ಪಾಟೀಲ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಎಚ್.ಕೆ. ಪಾಟೀಲ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2025 ಅನ್ನು ತರತಕ್ಕಂತಹ ಉದ್ದೇಶ ಏನೆಂದರೆ, ಪ್ರವರ್ಗ-I, ಪ್ರವರ್ಗ-II(ಎ) ಮತ್ತು ಇತ್ಯಾದಿ ಸಮುದಾಯಗಳಿಗೆ ನಾವು ಈಗಾಗಲೇ ಮೀಸಲಾತಿಯನ್ನು ಕೊಟ್ಟಿರುತ್ತೇವೆ. ಈ ಸಂದರ್ಭದಲ್ಲಿ ಪ್ರವರ್ಗ-II(ಬಿ) ಗೆ ಅನುಗುಣವಾಗುವ ಹಾಗೆ, ತಿದ್ದುಪಡಿಗಳನ್ನು ತರಲಾಗಿದೆ. ಆದ್ದರಿಂದ, ಈ ಒಂದು ಉದ್ದೇಶವನ್ನು ತಂದಿರುವಂತಹ ಈ ಕಾನೂನಿನ ಅನ್ವಯ ಎರಡು ಕೋಟಿ ರೂಪಾಯಿಗಳವರೆಗಿನ ಒಟ್ಟು ಸರ್ಕಾರಿ ನಿರ್ಮಾಣ ಕಾಮಗಾರಿಗಳ ಪೈಕಿ ಅಂತಹ ಕಾಮಗಾರಿಗಳ ಸಂಖ್ಯೆ ಶೇಕಡ 4 ರಷ್ಟು ಮೀರದಂತೆ, ಹಿಂದುಳಿದ ವರ್ಗಗಳ ಪ್ರವರ್ಗ-II(ಬಿ) ವ್ಯಕ್ತಿಗಳು ಪಾಲ್ಗೊಳ್ಳುವುದನ್ನು ಪ್ರೋತ್ಸಾಹಿಸುವ ಸಲುವಾಗಿ, ಅಧಿಸೂಚಿತ ಇಲಾಖೆಗಳಲ್ಲಿ ನಿರ್ಮಾಣ ಕಾಮಗಾರಿಗಳ ಹೊರತಾಗಿ, ಸರಕು ಮತ್ತು ಸೇವೆಗಳು ಸಂಗ್ರಹಣೆಯಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಅಥವಾ ಹಿಂದುಳಿದ ವರ್ಗಗಳಲ್ಲಿ ಒಂದು

ಕೋಟಿ ರೂಪಾಯಿಗಳ ಮೌಲ್ಯ ಮೀರದ ಅಂತಹ ಸರಕು ಮತ್ತು ಸೇವೆಗಳ ಸಂಗ್ರಹಣೆಗಾಗಿ ಶೇಕಡ 17.15 ರಷ್ಟು ಅನುಸೂಚಿತ ಜಾತಿಗಳಿಗೆ, ಶೇಕಡ 6.95 ರಷ್ಟು ಅನುಸೂಚಿತ ಪಂಗಡಗಳಿಗೆ, ಶೇಕಡ 15 ರಷ್ಟು ಪ್ರವರ್ಗ-II(ಎ) ಗೆ ಮತ್ತು ಶೇಕಡ 4 ರಷ್ಟನ್ನು ಪ್ರವರ್ಗ-II(ಬಿ) ಗೆ ಸೇರಿದ ವ್ಯಕ್ತಿಗಳಿಗೆ ಅಂತಹ ಸಂಗ್ರಹಣೆಗಳಲ್ಲಿ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದಕ್ಕೆ ಈ ತಿದ್ದುಪಡಿ ವಿಧೇಯಕವನ್ನು ಉದ್ದೇಶಿಸಲಾಗಿದೆ. ಇದೊಂದು progressive legislation ಆಗಿರುವುದರಿಂದ ದಯಮಾಡಿ ತಿದ್ದುಪಡಿ ವಿಧೇಯಕಕ್ಕೆ ಒಪ್ಪಿಗೆ ನೀಡಬೇಕೆಂದು ಸದನವನ್ನು ನಾನು ಪ್ರಾರ್ಥನೆ ಮಾಡುತ್ತೇನೆ.

**(ಈ ಹಂತದಲ್ಲಿ ಜೆಡಿ(ಎಸ್) ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಶರವಣ ಟಿ.ಎ. ರವರು ಮತ್ತು ಬಿಜೆಪಿ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ನವೀನ್‌ರವರು ತಮ್ಮ ಸ್ಥಾನಕ್ಕೆ ಹಿಂತಿರುಗಿದರು)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ,...

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ ತಮಗೆ ಅವಕಾಶ ನೀಡುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ಶೇಕಡ 4 ರಷ್ಟು ಮೀಸಲಾತಿಯನ್ನು ಮುಸಲ್ಮಾನ ಬಂಧುಗಳಿಗೆ ಕೊಡಬೇಕೆಂದು ಸರ್ಕಾರ...

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದು ವಿಧೇಯಕ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಅವರು ಮಾತನಾಡುತ್ತಿರುವುದು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹೌದು ನಾನು ಆ ಬಿಲ್ ಬಗ್ಗೆಯೇ ಮಾತನಾಡುತ್ತಿದ್ದೇನೆ. ಶೇಕಡ 4 ರಷ್ಟು ಮೀಸಲಾತಿ ಅದರಲ್ಲಿಯೇ ಇರುವುದು.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇದೇನಿದು? ಮೊದಲು ಇಲ್ಲಿಗೆ ಬರುತ್ತಾರೆ. ಆಮೇಲೆ ಅಲ್ಲಿಗೆ ಹೋಗುತ್ತಾರೆ. ಪುನಃ ಇಲ್ಲಿಗೆ ಬರುತ್ತಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಟಿ. ರವಿಯವರು ಮಾತನಾಡಿದ ನಂತರ, ನಾನು ಮಾತನಾಡುತ್ತೇನೆ.

**(ಗೊಂದಲ)**

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಮುಕ್ಕಾಲು ಜನ ಸದಸ್ಯರು ಸದನದ ಬಾವಿಯಲ್ಲಿ ಧರಣಿ ಮಾಡುತ್ತಿದ್ದಾರೆ. ಒಬ್ಬೊಬ್ಬ ಸದಸ್ಯರು

ಮಾತನಾಡಬೇಕೆಂದು ತಮ್ಮ ಸ್ಥಾನಗಳಿಗೆ ಹೋಗಿ ಮಾತನಾಡುವುದಕ್ಕೆ ಹೇಗೆ ಸಾಧ್ಯ? ಇದು ಸಾಧ್ಯವಿಲ್ಲ. ಬೇಕಾದರೆ ಅವರೆಲ್ಲರೂ ಸಹ ತಮ್ಮ ಸ್ಥಾನಗಳಿಗೆ ವಾಪಸ್ಸು ಹೋಗಿ ವಿಧೇಯಕದ ಮೇಲೆ ಚರ್ಚೆ ಮಾಡಲಿ. **(ಗೊಂದಲ)** ಎಲ್ಲರೂ ಬಾವಿಗೆ ಬಂದು ಧರಣಿ ಮಾಡುವುದು. ನಂತರ ಒಬ್ಬೊಬ್ಬರೇ ತಮ್ಮ ಸ್ಥಾನಗಳಿಗೆ ಹೋಗಿ ಮಾತನಾಡುವುದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. **(ಗೊಂದಲ)** ಇದು ಸರಿಯಲ್ಲ. ದ್ವಂದ್ವ ನಿಲುವು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸೀಟ್‌ನಲ್ಲಿ ಯಾರು ಇದ್ದಾರೋ, ಅವರು ಮಾತನಾಡಬಹುದಾಗಿರುತ್ತದೆ.

**(ಗೊಂದಲ)**

**ಶ್ರೀ ಶಿವರಾಜ್ ಎಸ್. ತಂಗಡಗಿ(ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಸದನದ ಬಾವಿಯಿಂದ ಹೊರಗಡೆ ಬಂದು ಚರ್ಚೆ ಮಾಡಲಿ, ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ. ಆದರೆ, ಸದನದ ಬಾವಿಯಲ್ಲಿ ನಿಂತು ಚರ್ಚೆ ಮಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಬಹಳ ಅಸಂಬದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಇವರಿಗೆ ನಾಚಿಕೆ ಆಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಅವರವರ ಸ್ಥಾನದಲ್ಲಿ ಕುಳಿತಿರುವವರು ಮಾತನಾಡಬಹುದು. ಹಾಗಾಗಿ, ಮಾನ್ಯ ಸಿ.ಟಿ. ರವಿಯವರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸದನ ಆರ್ಡರ್‌ನಲ್ಲಿ ಇಲ್ಲ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಈ ರೀತಿ ಸದನ ಆರ್ಡರ್‌ನಲ್ಲಿ ಇಲ್ಲದೇ ಇರುವಾಗ ಅವರು ಬಿಲ್ ಮೇಲೆ ಯಾವ ರೀತಿ ಮಾತನಾಡುತ್ತಾರೆ? ಹಾಗಾಗಿ, ಮೊದಲು ಅವರು ತಮ್ಮ ಸ್ಥಾನಗಳಿಗೆ ತೆರಳಿ, ನಂತರ ಅವರು ಮಾತನಾಡಲಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸದನ ಆರ್ಡರ್‌ನಲ್ಲಿ ಇಲ್ಲದೇ ಇದ್ದರೆ, ಬಿಲ್ ಅನ್ನು ಹೇಗೆ ಪಾಸ್ ಮಾಡುತ್ತೀರಿ?

**(ಗೊಂದಲ)**

**ಡಾ॥ ಯತೀಂದ್ರ ಎಸ್. (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಿಲ್ ಪಾಸ್ ಮಾಡುವುದಕ್ಕೆ ಅವಕಾಶವಿದೆ. ಆದರೆ, ಮಾತುಕತೆಗೆ ಅವಕಾಶವಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಬಿಲ್ ಮೇಲೆ ಮಾತುಕತೆಗೂ ಅವಕಾಶವಿದೆ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ನಾನು ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು ಸಹ, ತಮ್ಮ ಸ್ಥಾನಗಳಿಗೆ ತೆರಳಿ ಮಾತನಾಡುವುದಕ್ಕೆ ಅವಕಾಶವಿದೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಸದನ ಆರ್ಡರ್ ಇಲ್ಲದೇ ಇದ್ದಾಗ ಮಾತನಾಡಲು ಅವಕಾಶವಿರುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ನೀವು ಆ ರೀತಿ ಹೇಳಿದರೆ ಯಾವುದೇ ಬಿಲ್‌ಗಳನ್ನು ಪಾಸ್ ಆಗುವುದೇ ಇಲ್ಲ. ಸದನ ಆರ್ಡರ್‌ನಲ್ಲಿ ಇಲ್ಲದೇ ಇದ್ದರೂ ಸಹ, ಈಗತಾನೆ ಒಂದು ಬಿಲ್ ಪಾಸ್ ಮಾಡಿರುವುದಿಲ್ಲವೇ?

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಇದು ಸರಿಯಲ್ಲ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, .........

**(ಗೊಂದಲ)**

**ಸಭಾಪತಿಯವರು:–** ಆಡಳಿತ ಪಕ್ಷದವರು ಮಾತನಾಡುವಾಗ ಸದನ ಆರ್ಡರ್‌ನಲ್ಲಿ ಇತ್ತೇ? ಹಾಗಾದರೆ, ಈಗ ನೀವು ಹೇಗೆ ಮಾತನಾಡುತ್ತೀರಿ? ಇದುವರೆವಿಗೂ ವಿಧೇಯಕವನ್ನು ಪಾಸ್ ಮಾಡಿ, ಈಗ ಆರ್ಡರ್‌ನಲ್ಲಿ ಇಲ್ಲವೆಂದರೆ ಹೇಗೆ? ನೀವು ಮಾತನಾಡಬೇಕು. ಆದರೆ, ಅವರು ಮಾತನಾಡಬಾರದೆಂದರೆ ಹೇಗೆ? ಇದನ್ನು ನಾನು ಒಪ್ಪುವುದಿಲ್ಲ.

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಹೇಳಿರುವುದನ್ನು ನಾನು ಒಪ್ಪುತ್ತೇನೆ.

**(ಗೊಂದಲ)**

**ಶ್ರೀ ಎಂ. ನಾಗರಾಜು(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದನ್ನು ಖಂಡಿತ ನಾನು ಒಪ್ಪುತ್ತೇನೆ. ಅದೇನೆಂದರೆ, ಸದನದ ಬಾವಿಯಲ್ಲಿ ಧರಣಿ ಮಾಡುತ್ತಿರುವವರು ಮಾತನಾಡಬಾರದು. ಬದಲಾಗಿ, ತಮ್ಮ ಸ್ಥಾನಗಳಿಗೆ ತೆರಳಿ ಮಾತನಾಡಬೇಕು.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇಲ್ಲಿ ಇದ್ದವರು ಕೂಡ ಮಾತನಾಡಬಹುದು.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಆದರೆ ನಾನು ಹೇಳುವುದೇನೆಂದರೆ, ವಿರೋಧ ಪಕ್ಷದವರು ಈಗಾಗಲೇ ಸದನದ ಬಾವಿಯಲ್ಲಿ ಧರಣಿ ಮಾಡುತ್ತಿದ್ದಾರೆ. ಈ ಧರಣಿ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತನಾಡಬೇಕೆ ಹೊರತು, ಬೇರೆ ವಿಷಯಗಳಿಗೆ ಮಾತನಾಡುವಂತಿಲ್ಲ. ಬೇರೆ ವಿಷಯಗಳನ್ನು ಹೇಗೆ ಮಾತನಾಡುತ್ತಾರೆ?

**ಡಾ|| ಎಂ.ಆರ್. ಸೀತಾರಾಂ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಹೌದು ಮಾತನಾಡುವ ಹಾಗಿಲ್ಲ.

(ಮುಂದು)

(585) 21.03.2025 6.30 ವೈಎಲ್–ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪುಟ್ಟಣ್ಣ (ಮುಂದು):**

ಈಗಾಗಲೇ ಸದನದ ಬಾವಿಯೊಳಗೆ ಧರಣಿ ನಿರತರಾಗಿದ್ದು, ಬಾವಿಯೊಳಗೆ ನಿಂತು ಹೇಗೆ ಮಾತನಾಡುತ್ತಾರೆ? ನೀವೇ ಹೇಳಿ. ಈ ಹಿಂದೆ ಎಲ್ಲಾ ಯಾವ ರೀತಿ ಸದನ ನಡೆದುಕೊಂಡು ಬಂದಿದೆ ಎಂಬುದನ್ನು ನಾವು ಎಲ್ಲಾ ನೋಡಿದ್ದೇವೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಯಾವುದೇ ರೀತಿ ನಿಯಂತ್ರಣ ಹಾಕುವ ಅಧಿಕಾರ ಇಲ್ಲಿ ಯಾವುದೇ ಸದಸ್ಯರಿಗೆ ಇಲ್ಲ **(ಗೊಂದಲ)** ಈ ಸದನದ ಸದಸ್ಯನಿಗೆ ಷರತ್ತು ವಿಧಿಸುವ ಅಧಿಕಾರ ಯಾವುದೇ ಸದಸ್ಯರಿಗೆ ಇರುವುದಿಲ್ಲ.

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮನವಿ ಮಾಡುವುದೇನೆಂದರೆ, ಸದನದ ಬಾವಿಯಿಂದ ಅವರವರ ಸ್ಥಾನಕ್ಕೆ ತೆರಳಲಿ ಹಾಗೂ ವಿಧೇಯಕದ ಮೇಲೆ ಮಾತನಾಡಲು ಎಲ್ಲರೂ ಭಾಗವಹಿಸಲಿ. ವಿಧೇಯಕದ ಮೇಲೆ ಚರ್ಚೆಯಾಗಲಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಈ ವಿಧೇಯಕವು ಸಂವಿಧಾನ ಬಾಹಿರವಾಗಿದೆ **(ಗೊಂದಲ)** ಸಂವಿಧಾನ ಬಾಹಿರವಾಗಿರುವ ವಿಧೇಯಕದ ಮೇಲೆ ಮಾತನಾಡಬೇಕಾಗಿದೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಿ.ಟಿ.ರವಿರವರೇ, ಒಂದು ನಿಮಿಷ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಮಾತನಾಡುತ್ತಾರೆ. ದಯವಿಟ್ಟು ಆಡಳಿತ ಪಕ್ಷದ ಸದಸ್ಯರೆಲ್ಲರೂ ಒಂದು ನಿಮಿಷ ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿಯಮ 303 ರಲ್ಲಿ ಸದನದಲ್ಲಿ ಘೋಷಣೆ ಕೂಗುವುದಕ್ಕಾಗುವುದಿಲ್ಲ ಎನ್ನುವ ವಿಚಾರವಿದ್ದರೂ ಸಹ , ಅದು ನಡೆಯುತ್ತಿದೆ.

**ಸಭಾಪತಿಯವರು:–** ಅದೆಲ್ಲವೂ ನಡೆದಿಲ್ಲ ಬಿಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಓದುವುದನ್ನು ಪೂರ್ಣವಾಗಿ ಕೇಳಿ. ನಿಯಮ 303 ರ (14) ನೇ ಅಂಶದಲ್ಲಿ 'ಸದನದಲ್ಲಿ ಬ್ಯಾಡ್ಜುಗಳು ಅಥವಾ ಯಾವುದೇ ವಸ್ತುವನ್ನು ಧರಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸತಕ್ಕದ್ದಲ್ಲ' ಎಂದು ಇದೆ.

**ಸಭಾಪತಿಯವರು:–** ಹೌದು. Placard ಎಲ್ಲಾ ಪ್ರದರ್ಶನ ಮಾಡಬಾರದು, ಬೇಕಾದ ರೀತಿ ಸದನದೊಳಗೆ ನಡೆದುಕೊಳ್ಳಬಾರದು ಎಂದು ಇದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಆ ಕೆಲಸವನ್ನು ವಿರೋಧ ಪಕ್ಷದ ಸದಸ್ಯರು ಮಾಡುತ್ತಿದ್ದಾರೆ ಅಲ್ಲವೇ? ಮೊದಲು ಅದನ್ನು ತೆಗೆಯಿಸಿ.

**(ಗೊಂದಲ)**

**ಸಭಾಪತಿಯವರು:–** ಇದೆಲ್ಲವೂ ಬೇಕಾದಷ್ಟು ಸಲ ನಡೆದಿದೆ.

**ಶ್ರೀ ಸುನೀಲ್ ವಲ್ಯಾಪುರೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹಾಗಾದರೆ, ಅವರು ವಿರೋಧ ಪಕ್ಷದಲ್ಲಿದ್ದಾಗ ಆ ರೀತಿ ನಡೆದುಕೊಂಡಿಲ್ಲವೇ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾವು ಮಾಡಿದಾಗ ಕೇಳುವುದಕ್ಕೆ ಆಡಳಿತ ಪಕ್ಷದವರಿಗೆ ಧೈರ್ಯವೇ ಇರಲಿಲ್ಲ ಅಲ್ಲವೇ? ಈಗ ನಾವು ಕೇಳುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ. ಬಾವಿಯಲ್ಲಿ ನಿಂತುಕೊಂಡಿರುವವರು ಬಾಯಿ ಮುಚ್ಚಿಕೊಂಡು ನಿಂತುಕೊಳ್ಳಿ. ಈ ದಿನ ಸದನ ನಿಯಮದ ಪ್ರಕಾರ ನಡೆದಿಲ್ಲ, ದಯವಿಟ್ಟು ಅದನ್ನು ತಿಳಿದುಕೊಳ್ಳಿ. ಈಗಾಗಲೇ ಸದನದ ಬಾವಿಯೊಳಗೆ ಇರುವ ಸದಸ್ಯರೆಲ್ಲರಿಗೂ ತಮ್ಮ ತಮ್ಮ ಜಾಗಕ್ಕೆ ತೆರಳಿ, ಮುಖ್ಯವಾದ ವಿಧೇಯಕದ ಬಗ್ಗೆ ಚರ್ಚೆ ಮಾಡಬೇಕಾಗಿದೆ ಎಂದು ಮನವಿ ಮಾಡಿಕೊಂಡಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಆರ್‌ಎಸ್‌ಎಸ್ ನವರು ಬರೆದಿರುವಂಥ ಒಂದು ಪುಸ್ತಕವನ್ನು ಕೊಡುತ್ತೇನೆ. ಆರ್.ಎಸ್.ಎಸ್. ನವರು ಎಷ್ಟು ಜನರಿದ್ದಾರೆ ಎಂಬುದನ್ನು ನೋಡಿ,

**ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ಆ ಕೆಲಸವನ್ನು ಆಮೇಲೆ ಮಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಆರ್.ಎಸ್.ಎಸ್ ನಲ್ಲಿರತಕ್ಕಂಥವರು ಈ ಸದನದ ಸದಸ್ಯರಾಗಿದ್ದಾರೆ. ಅದರ ಬಗ್ಗೆ ಚರ್ಚೆಯಾಗಲಿ.

**ಸಭಾಪತಿಯವರು:–** ವಿಧೇಯಕಕ್ಕೂ ತಾವು ಹೇಳುವ ವಿಚಾರಕ್ಕೂ ಏನು ಸಂಬಂಧವಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಪಕ್ಕ ಆರ್ಎಸ್.ಎಸ್ ಸದಸ್ಯರು ಈ ಸದನದೊಳಗೂ ಇದ್ದಾರೆ. **(ಗೊಂದಲ)** ಮಾನ್ಯ ಕಿಶೋರ್ ಕುಮಾರ್‌ರವರಿಗೆ ಏನು ಗೊತ್ತಿದೆ ಕುಳಿತುಕೊಳ್ಳಲು ಹೇಳಿ. ಅವರಂಥ ಸದಸ್ಯರು ಇರುವುದರಿಂದಲೇ ಈ ರೀತಿ ಎಲ್ಲಾ ಆಗುತ್ತಿರುವುದು.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಎಲ್ಲರೂ ಈ ವಿಧೇಯಕದ ಮೇಲೆ ಚರ್ಚೆ ಮಾಡಲು ಭಾಗವಹಿಸಲಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಉತ್ತರ ಕೊಡುವುದಕ್ಕೆ ಯಾರೂ ಇಲ್ಲ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಕಿಶೋರ್ ಕುಮಾರ್‌ರವರು ಸದನದ ಬಾವಿಯೊಳಗೆ ನಿಂತು ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೊಂದಿಗೆ ಮಾತನಾಡುತ್ತಿದ್ದರು)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕಿಶೋರ್ ಕುಮಾರ್‌ರವರು ಅಪ್ಪಾ–ಗಿಪ್ಪಾ ಎಂದೆಲ್ಲಾ ಮಾತನಾಡುತ್ತಾರೆ. **(ಗೊಂದಲ)** ಅವನನ್ನು ಸದನದಿಂದ ಹೊರಗೆ ಹಾಕಿ **(ಗೊಂದಲ)** ಅಪ್ಪಾ ಎಂಬ ಪದವನ್ನು ಬಳಕೆ ಮಾಡಿರುವುದಕ್ಕೆ ಕ್ಷಮೆ ಕೇಳಬೇಕು.

**ಸಭಾಪತಿಯವರು:–** ಮಾನ್ಯ ಕಿಶೋರ್ ಕುಮಾರ್ ಸುಮ್ಮನೆ ಇರಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಕ್ಷಮೆ ಕೇಳುವುದಿಲ್ಲ ಎಂದು ಹೇಳುತ್ತಿದ್ದು, ಕ್ಷಮೆ ಕೇಳುವುದು ಬೇಡ. ಆದರೆ, ಮಾನ್ಯ ಕಿಶೋರ್ ಕುಮಾರ್‌ರವರು ಕಛೇರಿಯಲ್ಲಿ ಏನೇನು ಮಾಡಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಬೇಕಾದರೆ ಆ ಪುಸ್ತಕದಲ್ಲಿದೆ ಓದಲಿ ಗೊತ್ತಾಗುತ್ತದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಮಾನ್ಯ ಕಿಶೋರ್ ಕುಮಾರ್‌ರವರಿಗೆ ಏಕವಚನದಲ್ಲಿ ಮಾತನಾಡಿದ್ದಾರೆ. ಇದೇನು ಸಂಸ್ಕೃತಿ?

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅಪ್ಪಾ ಎಂದು ಕರೆಯುವವನಿಗೆ ಬಹುವಚನದಲ್ಲಿ ಮಾತನಾಡುವುದಕ್ಕಾಗುತ್ತದೆಯೇ? **(ಗೊಂದಲ)** ಅಪ್ರಯೋಜಕ ಪ್ರಚಾರಕ, ಅವರ ಸಂಘ ಪರಿವಾರದ ಪ್ರಚಾರಕ.

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿಸಿಕೊಳ್ಳಿ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಸದನದ ಬಾವಿಯೊಳಗೆ ನಿಂತು ಮಾತನಾಡುವುದು ಬೇಡ. ಅವರು ಏನಾದರೂ ಹೇಳುವುದಾದರೆ, ತಮ್ಮ ಸ್ಥಾನಕ್ಕೆ ತೆರಳಿ ಮಾತನಾಡಲಿ. ಅದೇನು ಹೇಳುತ್ತಾರೆ ಹೇಳಲಿ. ಮಾನ್ಯ ಭಾರತಿ ಶೆಟ್ಟಿರವರು ಸದನದ ಬಾವಿಯೊಳಗೆ ನಿಂತು ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಏನಾದರೂ ಇದ್ದರೆ ತಮಗೆ ಹೇಳಲಿ, ನಮಗೆ ಹೇಳುವುದಕ್ಕೆ ಬರುವುದು ಬೇಡ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ಕೂಡ ತಮಗೆ ಹೇಳಿದ್ದು, ಅವರಿಗೇನು ಹೇಳಲಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕವು ಸಂವಿಧಾನಕ್ಕೆ ವಿರೋಧವಾಗಿರುವಂಥ ವಿಧೇಯಕವಾಗಿದೆ. It is anti-constitutional.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗಾಗಲೇ ನಾನು ಮಾತನಾಡುವವರು ತಮ್ಮ ತಮ್ಮ ಸ್ಥಾನಕ್ಕೆ ತೆರಳಿ ಮಾತನಾಡಬಹುದೆಂದು ಹೇಳಿದ್ದೇನೆ. ಹಾಗಾಗಿ, ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ಸದನದ ಬಾವಿಯಲ್ಲಿ ನಿಂತಿರುವ ಮಾನ್ಯ ಸದಸ್ಯರಿಗೆ ಬಾಯಿ ಮುಚ್ಚಿಕೊಂಡು ಸುಮ್ಮನೆ ನಿಂತುಕೊಳ್ಳಲು ಹೇಳಿ. ಮಾನ್ಯ ಕಿಶೋರ್ ಕುಮಾರ್‌ರವರೇ ತಮ್ಮನ್ನು ಹೊರಗೆ ಹಾಕಿಸಬೇಕಾಗುತ್ತದೆ. ಹುಡುಗಾಟಿಕೆ ಮಾಡುತ್ತೀರಾ? ಸುಮ್ಮನೆ ನಿಂತುಕೊಳ್ಳಿ.

**ಶ್ರೀ ಎ.ವಸಂತಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಮಾತನಾಡುವಾಗ ಧಿಕ್ಕಾರ ಕೂಗುತ್ತಾರೆ, ಅವರ ಕಡೆಯವರು ಮಾತನಾಡುವಾಗ ಸುಮ್ಮನೆ ನಿಂತಿರುತ್ತಾರೆ.

**ಸಭಾಪತಿಯವರು-** ಮಾನ್ಯ ವಸಂತ್‌ಕುಮಾರ್‌ರವರೇ, ಸುಮ್ಮನೆ ಕುಳಿತುಕೊಳ್ಳಿ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ಈ ವಿಧೇಯಕಕ್ಕೆ ಸಂಬಂಧಿಸಿದಂತೆ ಮಾತ್ರ ತಾವು ಮಾತನಾಡಿ. ಆರ್‌ಎಸ್‌ಎಸ್ ಬಗ್ಗೆ ಎಲ್ಲಾ ದಯವಿಟ್ಟು ಮಾತನಾಡಬೇಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆಯವ್ಯಯ ಭಾಷಣದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಲು ಸದನದೊಳಗೆ ಬಂದರೆ, ಹನಿಟ್ರ್ಯಾಪ್ ವಿಚಾರ ತೆಗೆದು ಈ ದಿನವೆಲ್ಲಾ ಆಯವ್ಯದ ಮೇಲೆ ಮಾನ್ಯ ಮುಖ್ಯಮಂತ್ರಿಗಳಿಗೆ ಮಾತನಾಡಲು ಬಿಡಲಿಲ್ಲ. ನನಗೂ ಸಹ ಹನಿಟ್ರ್ಯಾಪ್ ಬಗ್ಗೆ ಮಾತನಾಡಲು ಅವಕಾಶ ಕೊಡಿ, ನಾನು ಸಹ ಮಾತನಾಡುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಏತಕ್ಕೆ ಹನಿಟ್ರ್ಯಾಪ್ ಮಾಡಿದ್ದರು.

**(ಗೊಂದಲ)**

**ಶ್ರೀ ಯತೀಂದ್ರ.ಎಸ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 17 ಜನರ ಮೇಲೆ ಹನಿಟ್ರ್ಯಾಪ್ ಆಗಿದ್ದು, ಅವರಿಗೆ ಯಾವ ರೀತಿ ಟ್ರೀಟ್ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಹನಿಟ್ರ್ಯಾಪ್ ಪಿತಾಮಹಾ ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು. ಶ್ರೀ ಸಂಜಯ್ ಜೋಶಿಯವರ ವಿರುದ್ಧ ಹನಿಟ್ರ್ಯಾಪ್ ಮಾಡಿದ್ದರು. ಈ ಹನಿಟ್ರ್ಯಾಪ್‌ಗೆಲ್ಲಾ ಬಿ.ಜೆ.ಪಿ.ಯವರೇ ಕಾರಣ. ಈಗ ಇಲ್ಲಿ ದೊಡ್ಡದಾಗಿ ನಿಂತುಕೊಂಡು ಮಾತನಾಡುತ್ತಿದ್ದಾರೆ. ಇನ್ನು ಬೇಕಾದರೆ ಏನೇನು ಮಾಡಿದ್ದಾರೆ ಎಂಬುದನ್ನು ಬೇಕಾದಷ್ಟು ಹೇಳುತ್ತೇವೆ.

**ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ದಯವಿಟ್ಟು ಒಂದು ನಿಮಿಷ ನಾನು ಹೇಳುವುದೇನೆಂದರೆ, ಈಗಾಗಲೇ ಒಂದು ಸಲ ನಾನು ಹೇಳಿದ ಹಾಗೆ,...

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಆಯವ್ಯಯದ ಮೇಲೆ ಉತ್ತರ ನೀಡಲು ಸದನಕ್ಕೆ ಬಂದಿದ್ದರು. ಇವರು ಹನಿಟ್ರ್ಯಾಪ್ ವಿಚಾರ ತೆಗೆದರು. ಹಾಗೆಯೇ ಈಗ ವಿಧೇಯಕದ ಮೇಲೆ ಚರ್ಚೆ ಮಾಡಲು ತೆಗೆದುಕೊಂಡರೆ, ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿ ಮತ್ತು ಮಾನ್ಯ ಸಿ.ಟಿ.ರವಿರವರು ಬಾವಿಯಿಂದ ಹೊರಗೆ ನಿಂತು ಭಾಷಣ ಮಾಡುತ್ತಿದ್ದಾರೆ. ಮಾನ್ಯ ಎಸ್.ಎಲ್.ಭೋಜೇಗೌಡ, ಮಾನ್ಯ ಟಿ.ಎ.ಶರವಣ ಹಾಗೂ ಮಾನ್ಯ ಕೆ.ಎಸ್.ನವೀನ್‌ರವರನ್ನು ಹೊರತುಪಡಿಸಿ, ಉಳಿದ ಸದಸ್ಯರೆಲ್ಲರೂ ಬಾವಿಯೊಳಗೆ ಧರಣಿ ನಿರತರಾಗಿದ್ದಾರೆ. ಅದರ ಜೊತೆಗೆ ಬೇರೆ ಬೇರೆ ವಿಚಾರಗಳನ್ನು ತೆಗೆದು ಮಾತನಾಡುತ್ತಾರೆ.

**ಶ್ರೀ ಸಿ.ಟಿ.ರವಿ:–** ಹನಿಟ್ರ್ಯಾಪ್‌ಗೆ ಒಳಗಾಗಿಯೇ ಡ್ಯಾಶ್ ಡ್ಯಾಶ್..... ಇಟಲಿಯಿಂದ ಕರೆದುಕೊಂಡು ಬಂದಿದ್ದು. ಇಲ್ಲದಿದ್ದರೆ ಇಟಲಿಗೂ ಇಲ್ಲಿಗೂ ಏನು ಸಂಬಂಧ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ನಾನು ಈಗಾಗಲೇ ವಿಧೇಯಕಕ್ಕೆ ಸಂಬಂಧಿಸಿದಷ್ಟೇ ಮಾತನಾಡಿ ಎಂದು ಹೇಳಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ವಿಧೇಯಕದ ಮೇಲೆ ಮಾತನಾಡಲು ಅವಕಾಶ ಕಲ್ಪಿಸಿಕೊಡಿ. ನಾವೆಲ್ಲರೂ ವಿಧೇಯಕಕ್ಕೆ ಸಂಬಂಧಿಸಿದಂತೆ ಮಾತನಾಡುತ್ತೇವೆ. ಆದರೆ, ಸದನದ ಬಾವಿಯೊಳಗೆ ಧರಣಿ ನಿರತರಾಗಿದ್ದರೆ ಹೇಗೆ ವಿಧೇಯಕದ ಮೇಲೆ ಚರ್ಚೆ ಮಾಡುವುದು?

**(ಗೊಂದಲ)**

**ಸಭಾಪತಿಯವರು:–** ಆಗಲಿ, ವಿಧೇಯಕದ ಮೇಲೆ ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅವರ ಪಕ್ಷದವರು ಬಹಿಷ್ಕಾರ ಹಾಕಿ ಮಾತನಾಡಿಸುವುದು.

**(ಗೊಂದಲ)**

**ಶ್ರೀಮತಿ ಉಮಾಶ್ರೀ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವರವರ ಸ್ಥಾನಕ್ಕೆ ಹೋಗಿ ಮಾತನಾಡಲಿ, ಯಾರು ಬೇಡ ಎಂದು ಹೇಳುತ್ತಾರೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2025 ಅನ್ನು ನಾನು ವಿರೋಧಿಸುತ್ತೇನೆ. ಕಾರಣವೇನೆಂದರೆ, ಈ ಒಂದು ವಿಧೇಯಕ ಸಂವಿಧಾನ ಬಾಹಿರವಾಗಿರುವಂಥ ವಿಧೇಯಕವಾಗಿದೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಎಲ್ಲಾ ಸದಸ್ಯರು ವಿಧೇಯಕದ ಮೇಲೆ ಚರ್ಚೆ ಮಾಡಲಿ. ದಯವಿಟ್ಟು ಈ ರೀತಿ ಸದನದೊಳಗೆ ಧರಣಿ ಮಾಡಿಕೊಂಡು ವಿಧೇಯಕದ ಮೇಲೆ ಚರ್ಚೆ ಮಾಡುವುದು ಬೇಡ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಆಶಯಗಳಿಗೆ ವಿರುದ್ಧವಾದ ವಿಧೇಯಕ. **(ಗೊಂದಲ)** ಸಂವಿಧಾನ religion based reservation ನ್ನು ಮಾನ್ಯ ಮಾಡಿಲ್ಲ. ಇದರಿಂದ religion based reservation ಗೆ ಅವಕಾಶ ಕೊಟ್ಟಿಲ್ಲ. ಹಾಗಾಗಿ, ಸಂವಿಧಾನಬಾಹಿರವಾಗಿರುವಂಥ ವಿಧೇಯಕವಾಗಿದೆ. ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಸಂವಿಧಾನದ ಆಶಯಕ್ಕೆ ವಿರೋಧವಾಗಿರುವಂಥ ವಿಧೇಯಕವಾಗಿದೆ.

**ಶ್ರೀ ಯತೀಂದ್ರ.ಎಸ್:-** ಮಾನ್ಯ ಸಭಾಪತಿಯವರೇ, ಇದೇ ವಿಧೇಯಕದಲ್ಲಿ ಎಸ್.ಸಿ./ಎಸ್.ಟಿ., ಹಿಂದೂಳಿದ ವರ್ಗದವರಿಗೂ ಕೊಟ್ಟಿದ್ದಾರೆ. ಅದರ ಬಗ್ಗೆ ಹೇಳಲಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಸಮಾಜವನ್ನು ಒಡೆಯತಕ್ಕಂಥ ವಿಧೇಯಕ. **(ಗೊಂದಲ)** ಹುಚ್ಚನಿಗೆ ಹೆಚ್ಚು ತಿನ್ನಿಸಿ, ಹುಚ್ಚು ಬಿಡಿಸಬಹುದೆನ್ನುವಂಥ ನೀತಿಯ ವಿಧೇಯಕ. **(ಗೊಂದಲ)** ಮತಾಂತರ ಶಕ್ತಿಗಳಿಗೆ.... ಹುಚ್ಚು ನೀತಿ ಈ ವಿಧೇಯಕದಲ್ಲಿದೆ. 2ಬಿ ಎಂದರೆ, ಜಾತಿಯಲ್ಲ, ನಮ್ಮ ಸಂವಿಧಾನ ಜಾತಿಯ ವಿಶ್ಲೇಷಣೆಗೆ ಅವಕಾಶಕೊಟ್ಟಿದೆ. ಮತೀಯ ಆಧಾರಿತ ಮೀಸಲಾತಿಗೆ ಅವಕಾಶ ಕೊಟ್ಟಿಲ್ಲ. Religion based reservation ಗೆ ನಮ್ಮ ಸಂವಿಧಾನ ಅವಕಾಶ ಕೊಟ್ಟಿಲ್ಲ. ಏಕೆಂದರೆ, ಡಾ॥ ಬಿ.ಆರ್.ಅಂಬೇಡ್ಕರ್‌ರವರು ಹೇಳಿದ ಹಾಗೆ, Drafting Committee Chairman ರವರು ಹೇಳಿರುವಂತೆ, "*...he strongly opposed religious based reservation. Arguing that reservation action should be for the socially and educationally backward classes, not for the entitled religious communities, he stated that, reservation should be for either backwardness and not for membership of religious community...*" ಪ್ರವರ್ಗ 2(ಬಿ) ಮೀಸಲಾತಿ ಕೊಡುತ್ತಿರುವುದು religio based ನಲ್ಲ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ):-** ಮಾನ್ಯ ಸಭಾಪತಿಯವರೇ, ಯಾವುದೋ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರೆ, ವಿಧೇಯಕದ ಬಗ್ಗೆ ಮಾತನಾಡಲಿ. **(ಗೊಂದಲ)** ನಾಟಕ ಮಾಡಲು ಬಂದಿದ್ದಾರೆ, ಚರ್ಚೆ ಮಾಡಲು ಬಂದಿಲ್ಲ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಈ ರೀತಿ ಮಾತನಾಡಬಹುದೇ, ನೀವೇ ಹೇಳಿ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, **(ಗೊಂದಲ)** ಸರ್ದಾರ್ ವಲ್ಲಬಾಯಿ ಪಟೇಲ್‌ರವರು ಏನೆಂದು ಹೇಳಿದ್ದಾರೆಂದರೆ,...

**ಸಭಾಪತಿಯವರು:–** ಒಂದು ನಿಮಿಷ. ಆಡಳಿತ ಪಕ್ಷದವರಿಗೆ ಹೇಳುವುದೇನೆಂದರೆ, ಸದನದೊಳಗೆ ಜಗಳವಾಗುತ್ತಿದ್ದರು ವಿಧೇಯಕದ ಮೇಲೆ ಮಾತನಾಡಲು ಅಧಿಕಾರ ಕಲ್ಪಿಸಲಾಗಿದೆ. ಕೆಲವು ಸಂದರ್ಭದಲ್ಲಿ ಈ ಸದನ ಆರ್ಡರ್‌ನಲ್ಲಿ ಇಲ್ಲವೆಂದರೂ ವಿಧೇಯಕವು ಪಾಸ್ ಆಗಿದೆ. ಈಗ ನಾನು ಮಾತನಾಡಲು ಮಾನ್ಯ ಸಿ.ಟಿ.ರವಿರವರಿಗೆ ಅನುಮತಿ ಕೊಟ್ಟಿದ್ದು, ಅವರು ಮಾತನಾಡಲಿ. ಆಮೇಲೆ ಏನಾದರೂ ಇದ್ದರೆ ನೀವು ಹೇಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಸದನ ಆರ್ಡರ್‌ನಲ್ಲಿ ಇಲ್ಲವೆಂದರೆ ಹೇಗೆ ಮಾತನಾಡುತ್ತಾರೆ?

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಈ ರೀತಿ ಮಾತನಾಡಿದರೆ ಬಿಲ್ ಹೇಗೆ ಪಾಸ್ ಆಗಬೇಕು?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಸದನದ ಬಾವಿಯಿಂದ ಅವರೆಲ್ಲರನ್ನೂ ಅವರವರ ಸ್ಥಾನಕ್ಕೆ ಕಳುಹಿಸಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಡಾ॥ ಬಿ.ಆರ್.ಅಂಬೇಡ್ಕರ್‌ರವರು **(ಗೊಂದಲ)** ಸಂವಿಧಾನದ ಆಧಾರದ ಮೇಲೆ ಮೀಸಲಾತಿಯನ್ನು ಕೊಟ್ಟರು. ಈ ದೇಶದ ಐಕ್ಯತೆಗೆ ಮುಖ್ಯವೆಂದು ಅಭಿಪ್ರಾಯಪಟ್ಟರು **(ಗೊಂದಲ)**

ಮೀಸಲಾತಿಯು ಮುಖ್ಯವಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ ಅಥವಾ ಶೈಕ್ಷಣಿಕವಾಗಿ ಹಿನ್ನಡೆಯಾಗಿರುವ ಜನಾಂಗದವರಿಗೆ ಮಾತ್ರ ಮೀಸಲಿಡಬೇಕು, ಧಾರ್ಮಿಕತೆ ಆಧಾರವಾಗಿರಬಾರದು ಎಂದು ತಿಳಿಸಿದ್ದಾರೆ. **(ಗೊಂದಲ)** ಶ್ರೀ ಸರ್ದಾರ್ ವಲ್ಲಭ್‌ಭಾಯಿ ಪಟೇಲ್‌ರವರು ಮೀಸಲಾತಿ ಅಗತ್ಯತೆಯನ್ನು ಒಪ್ಪಿಕೊಂಡು, ಅದು ಕೇವಲ ಹಿಂದೂಳಿದ ವರ್ಗಗಳಿಗೆ ಮತ್ತು ಎಸ್.ಸಿ./ಎಸ್.ಟಿ. ರವರಿಗೆ ಮಾತ್ರ ಸೀಮಿತವಾಗಿರಬೇಕೆಂದು ಮಾತನಾಡಿದ್ದರು. ಶ್ರೀ ಕೆ.ಎಂ.ಮುನ್ಷಿರವರು ಧಾರ್ಮಿಕ ಮೀಸಲಾತಿ ಎಂಬುದು ಈ ದೇಶದ ಸಂಭಾವ್ಯತೆ,...

**ಶ್ರೀ ಎಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ, ಈ ರೀತಿಯ ಸನ್ನಿವೇಶದೊಳಗೆ ನಾನು ತಮ್ಮಲ್ಲಿ ಆಗ್ರಹ ಮಾಡುವುದೇನೆಂದರೆ,

**ಸಭಾಪತಿಯವರು:–** ಮಾನ್ಯ ಸಿ.ಟಿ.ರವಿರವರೇ, ಒಂದು ನಿಮಿಷ. ದಯವಿಟ್ಟು ವಿರೋಧ ಪಕ್ಷದ ಸದಸ್ಯರೆಲ್ಲರಿಗೂ ತಿಳಿಸುವುದೇನೆಂದರೆ, ವಿಧೇಯಕದ ಮೇಲೆ ಮಾನ್ಯ ಸಿ.ಟಿ.ರವಿರವರು ಮಾತನಾಡುತ್ತಿದ್ದು, ತಾವು ಸಹ ತಮ್ಮ ತಮ್ಮ ಸ್ಥಾನಕ್ಕೆ ತೆರಳಿ ಮಾತನಾಡಿ. **(ಗೊಂದಲ)** ಸದನದ ಬಾವಿಯೊಳಗೆ ನಿಂತು ಧರಣಿ ಮಾಡುತ್ತಿದ್ದು, ಮಾನ್ಯ ಸಿ.ಟಿ.ರವಿರವರು ತಮ್ಮ ಸ್ಥಾನದಲ್ಲಿ ನಿಂತು ಮಾತನಾಡುತ್ತಿದ್ದಾರೆ. ಎರಡು ನಡೆಯಬೇಕೆಂದರೆ ಹೇಗೆ? ದಯವಿಟ್ಟು ತಮ್ಮ ತಮ್ಮ ಸ್ಥಾನಕ್ಕೆ ತೆರಳಿ ಎಲ್ಲರೂ ವಿಧೇಯಕದ ಮೇಲೆ ಮಾತನಾಡಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಮ್ಮ ಸದಸ್ಯರೆಲ್ಲರನ್ನೂ ಸದನದ ಬಾವಿಯಿಂದ ಹೊರಗೆ ಬರುವಂತೆ ಕರೆಯಿರಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ವಿಧೇಯಕದ ಮೇಲೆ ಚರ್ಚೆ ಆದ ಮೇಲೆ ನಾವು ಸದನದ ಬಾವಿಯೊಳಗೆ ಮತ್ತೆ ಬರಬಹುದೇ?

**ಸಭಾಪತಿಯವರು:–** ಆಯಿತು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅವರ ಬಗ್ಗೆಯೇ ಅವರಿಗೆ ಗೌರವ ಇಲ್ಲ, ಬೇರೆಯವರಿಗೆ ಇನ್ನೇನು ಗೌರವ ಕೊಡುತ್ತಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಸದನದ ಬಾವಿಯಲ್ಲಿ ಧರಣಿ ನಿರತರಾಗಿರುವ ಸದಸ್ಯರೆಲ್ಲರೂ ತಮ್ಮ ಸ್ಥಾನಕ್ಕೆ ಬನ್ನಿ. ವಿಧೇಯಕದ ಮೇಲೆ ಮೊದಲು ಮಾತನಾಡೋಣ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ತೆರಳಿದರು)**

(ಮುಂದು)

**(586) 21.03.2025/6.40/ಎಸ್‌ಕೆ-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಮಾನ್ಯ ಸದಸ್ಯರೆಲ್ಲರೂ ಸ್ವಲ್ಪ ತಾಳ್ಮೆಯಿಂದ ಇರಿ. ಒಬ್ಬರಿಗಾದರೂ ತಾಳ್ಮೆಯಿಲ್ಲ. ನಾನು ನಿಮ್ಮ ಜೊತೆಗೆ ಗುದ್ದಾಟಕ್ಕೆ ಬರಬೇಕಾ. ನಿಮ್ಮ ಕಾಲದಲ್ಲಿ ನನಗೆ ಸಾಕಾಗಿದೆ. ದಯವಿಟ್ಟು, ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಿ.ಟಿ. ರವಿಯವರೇ ತಾವು ಚುಟುಕಾಗಿ ಹೇಳಿ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ ಸಭಾಪತಿಯವರೇ, ಈ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ...

**ಸಭಾಪತಿಯವರು:-** ಇನ್ನುಂದೆ ಯಾರೂ ಕೂಡ ಸದನದ ಬಾವಿಗೆ ಬರಬೇಡಿ. ಎಲ್ಲರೂ ತಮ್ಮ ತಮ್ಮ ಸ್ಥಾನದಲ್ಲಿಯೇ ಕುಳಿತುಕೊಂಡು ಮಾತನಾಡಿ. ಮಾನ್ಯ ಸಿ.ಟಿ. ರವಿಯವರೇ, ಒಂದು ನಿಮಿಷ. ಮಾನ್ಯ ಸಚಿವರು ಮಾತನಾಡುತ್ತಾರೆ.

**ಶ್ರೀ ಎಚ್.ಕೆ. ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಮತ್ತು ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಬಗ್ಗೆ ಹಲವಾರು clarifications ಅನ್ನು ಇವತ್ತು ಎಲ್ಲರೂ ಮಾತನಾಡುವ ಸಂದರ್ಭದಲ್ಲಿ ಹೇಳಬೇಕಾಗಿತ್ತು. ಅದು ಹೇಳುವುದು ಸಾಧ್ಯವಾಗಿರಲಿಲ್ಲ. ಅವರು ಪ್ರವರ್ಗ 2(ಎ) ಮತ್ತು 2(ಬಿ) ಬಿಟ್ಟು ಬೇರೆ ಇದೆ ಎಂದು ಹೇಳುತ್ತಿದ್ದರು. ನಾನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಈ Backward Classes ಪಟ್ಟಿಗಳು ಮತ್ತು Reservation ಪಟ್ಟಿಗಳು ಹೇಗೆ evolve ಆದವು ಎಂದು ನಾನು ಮೊದಲನೆಯದನ್ನು ಹೇಳುತ್ತೇನೆ.

**Recommendation of various Backward Classes Commission on Muslim in Karnataka**

I. The Government of Karnataka is providing reservation as per 15(4) and 16(4) of the Constitution of India to those who are Socially and Educationally Backward.

II. The community like Muslim is a Backward Class, who are entitled to get the reservation as per 15(4) and 16(4) of the Constitution of India, recommended by various Commissions constituted by State Government.

III. The Commission headed by Sri. L.G. Havnoor, the nationally known Commission which is recognized as one of the best Backward Class Report in the country. They said:

The Commission headed by Sri. L.G. Havnoor recognized Muslim as Backward Class who are eligible for the reservation. Based on the Sri L.G. Havnoor recommendations, Backward Classes are grouped as a

1) Backward Communities
2) Backward Caste
3) Backward Tribe
4) Special Group

Government have issued order No. DPAR 1 SBC 77 Bangalore dated: 04.03.1977 for providing reservation to Backward Class including Muslims. Muslims have been placed under **Backward Community Group** in the said Government Order. This is in 1977 during Sri Devaraj Urs time.

Further, Government order dated: 04.03.1977 was challenged in the Hon'ble High court of Karnataka, WP: and Others, 4371/77 Somashekarappa Vs Govt. Karnataka in classifying questioning the said Government order Backward Classes and directing reservation in State civil service and in educational institutions– validity of limitation on the State's power in regard to reservations.

The Judgment of para of 62 of the order passed by the High Court of Karnataka is mentioned below:

**"So far as the Muslims are concerned the Commission was unwise in excluding them from the list on the ground that they Backward Classes solely belong to a religious minority. The Commission has, however, found that the Muslims are socially and educationally backward and also do not have adequate representation in the Civil Service. The fact that they a religious minority is no ground to exclude them from the**

**list of Backward Classes. The Government, in our opinion, was perfectly justified in listing the Muslims in the list of Backward Classes."**

(Sri L.G. Havanoor Commission report is enclosed herewith in Annexure-A Page no. from 1 to 12)

Government Order No.SWL 123 BCA 79, Bangalore, dated 01.05.1979 issued. Muslims have been placed under Backward Communities Group.

(Page no. from 13 to 22)

IV. The Commission headed by Sri. Venkataswamy recognized Muslim as Backward Class who are eligible for the reservation. Based on the Sri. Venkataswamy Backward classes Commission recommendations, Backward Classes are classified as:

1) Group-A,
2) Group-B,
3) Group-C
4) Group-D.
5) Group-E- Backward Special Group

(Sri Venkataswamy Commission report is enclosed herewith in Annexure-B (Page no. from 23 to 29)

Government have issued order No.SWL 66 BCA 86, Bangalore, dated 13.10.1986 for providing reservation to Backward Classes including Muslim. Muslims have listed under Group-C of the said Government Order.

(Page no. from 30 to 45)

V. The Commission headed by Justice O Chinnappa Reddy recognized Muslim as Backward Classes who are eligible for the reservation. Based on the Justice O Chinnappa Reddy recommendations, Backward Classes are grouped as

1) Category-I –Most Backward
2) Category-IIA – Relatively More Backward
3) Category-IIB – More Backward
4) Category-IIIA – Backward
5) Category-IIIB – Relatively Backward
6) Category-IV – Occupational Group

(Justice O Chinnappa Reddy Commission report is enclosed herewith in **Annexure-C** (Page no. from 46 to 51)

Government have also issued order No.SWD 150 BCA 94 Bangalore, dated 17.09.1994 for providing reservation to Backward Classes including Muslim. Exclusively Muslims have been listed under Category-IIB of the above said Government Order. (Page no. from 52 to 65)

VI. The Commission headed by Prof Ravivarma Kumar recognized Muslim as Backward Classes who are eligible for the reservation. Based on the Prof Ravivarma Kumar recommendations, Backward Classes are Grouped as

1) Category-I
2) Category-IIA
**3) Category-IIB**
4) Category-IIIA
5) Category-IIIB

Government have issued order No.SWD 225 BCA 2000 dated 30.03.2002 for providing reservation to Backward Classes including Muslim. Muslims have been listed under **Category-IIB** of the above said Government Order.

(Prof. Ravivarma Kumar advice report is enclosed herewith in **Annexure-D)** (Page no. from 66 to 81)

WP: 4371/77 Somashekarappa Vs Govt. Karnataka and Others, questioning the said Government order in classifying Backward Classes and directing reservation in State civil service and in educational institutions

(Page no. from 82 to 83)

Accordingly, State Government have identified the Backward Classes in the State of Karnataka and providing reservation under Article 15 (4) and 16 (4) of the Constitution of India.

State, in 2023, has made certain changes in the classification of backward classes. However, the matter was questioned in the Supreme Court and during the hearing (I will repeat for the benefit of the members) Solicitor General appearing on behalf of the State Government (This is during BJP Government time) has made a commitment that the order will not be implemented and the order issued in 2002 will be continued until the next date of hearing. Hence the present system of BCWD is continuing.

*****

ಮಾನ್ಯ ಸಭಾಪತಿಯವರೇ, ಈ ಕೆ.ಟಿ.ಪಿ.ಪಿ. ಕಾಯಿದೆ ಕಲಂನಲ್ಲಿ ಶೇಕಡಾ 1 ರಷ್ಟು ಮೀಸಲಾತಿಯನ್ನು ಕೊಟ್ಟಿದ್ದೇವೆ. ಪ್ರವರ್ಗ 2(ಎ) ಕೊಟ್ಟಿದ್ದೇವೆ. ಆ ಸಂದರ್ಭದಲ್ಲಿ ಪ್ರವರ್ಗ 2(ಬಿ) ಗೆ ಕೊಟ್ಟಿದ್ದೀರಾ. ಈಗ ಪ್ರವರ್ಗ 1, ಪ್ರವರ್ಗ–2(ಎ), ಪ್ರವರ್ಗ ಮತ್ತು ಈಗ 2(ಬಿ)ಗೆ ಕೊಡುತ್ತಿದ್ದೇವೆ. ಇದು ಅತ್ಯಂತ ಸಂವಿಧಾನಿಕವಾದ ಸರ್ಕಾರದ ನಿಲುವು. 1977 ರಲ್ಲಿ ದಿವಂಗತ ಡಿ. ದೇವರಾಜ ಅರಸುರವರ ಕಾಲದಲ್ಲಿ ಹಿಂದುಳಿದ ವರ್ಗಗಳು ಎಂದು ಕರೆಯುತ್ತಿದ್ದೇವೆಯಲ್ಲಾ, ಅದೇ ಹಿಂದುಳಿದ ವರ್ಗಗಳಿಗೆ ಸಿಮಿತವಾಗಿರುವಂತಹ ಮೀಸಲಾತಿ. ವರ್ಗ, ಜಾತಿ, ಸಮುದಾಯ ಯಾವುದನ್ನು ಗುರುತಿಸಿ, ನಾವು ಹಿಂದುಳಿದ ವರ್ಗ ಎಂದು ಹೇಳಿದ್ದೇವೆಯೋ, ಆ ಸಮುದಾಯಗಳಿಗೆ ಮೀಸಲಾತಿಯನ್ನು ಕೊಡುತ್ತಿದ್ದೇವೆ. ಇದು ಸಂವಿಧಾನಿಕವೂ ಹೌದು ಮತ್ತು ಕಾನೂನಾತ್ಮಕವಾಗಿರುವಂತಹದ್ದು ಹೌದು. ರಾಜ್ಯ ತೆಗೆದುಕೊಂಡಿರುವ ಸಾಮಾಜಿಕ ನ್ಯಾಯ ನೀತಿ, ತತ್ವ ಇದೆ. ಆ ತತ್ವದ ಹಿನ್ನೆಲೆಯಲ್ಲಿ ಈ ಮೀಸಲಾತಿಯನ್ನು ತಂದಿರುವಂತಹದ್ದು. ಮಾನ್ಯ ಸದಸ್ಯರೆಲ್ಲರೂ ಈ ವಿಧೇಯಕವನ್ನು ಒಪ್ಪಿಗೆ ಕೊಟ್ಟು, ಅಂಗೀಕಾರ ಮಾಡಿಕೊಡುತ್ತೀರಾ ಎಂದು ನಾನು ಭಾವಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಿಟಿ. ರವಿಯವರೇ, ತಾವು ಮಾತನಾಡಿ. ತಾವು ಚುಟುಕಾಗಿ ಮಾತನಾಡಿ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2025ನ್ನು ನಾನು ವಿರೋಧಿಸುತ್ತೇನೆ. ಇದಕ್ಕೆ ಕಾರಣವೇನೆಂದರೆ, ಇದು ಸಂವಿಧಾನಬಾಹಿರ. ನಮ್ಮ ದೇಶದ ಸಂವಿಧಾನ ಮೀಸಲಾತಿಗೆ ಅವಕಾಶವನ್ನು ಕೊಟ್ಟಿದೆ. ಹಿಂದುಳಿದ ಜಾತಿಗಳಿಗೆ ಮೀಸಲಾತಿ ಅವಕಾಶವನ್ನು ಕೊಟ್ಟಿದೆ. Religion based reservation ಅನ್ನು ನಿರಾಕರಿಸಿತು. ನಮ್ಮಲ್ಲಿ ಎಷ್ಟೇ

ಆಯೋಗಗಳು ಬಂದಿದ್ದರೂ ಕೂಡ ಯಾವುದೇ ಆಯೋಗಗಳು ಸಂವಿಧಾನಕ್ಕಿಂತ ಸರ್ವೋಚ್ಚವಾದುದೇನಲ್ಲ. ಸಂವಿಧಾನವೇ ಸರ್ವೋಚ್ಚವಾದುದು.

**(ಮುಂದು)**

(587) 21.03.2025/6.50/ಟಿಸಿಹೆಚ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ (ಮುಂದು):-**

ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಕ್ಕೆ ಅಧಿಕಾರ ಮತ್ತು ಅದರ ಪರಿಮಿತಿಯನ್ನು ಕೊಟ್ಟಿರುವುದು ಕೂಡ ಸಂವಿಧಾನವೇ. ಸಂವಿಧಾನಕ್ಕಿಂತ supreme ಬೇರೆ ಯಾವುದೂ ಇಲ್ಲ. ಸಂವಿಧಾನದ ಅಡಿಯಲ್ಲಿ ನಮಗೆ ಅಧಿಕಾರ ವ್ಯಾಪ್ತಿಯನ್ನು ಕೊಟ್ಟಿದೆ. We are not supreme to the Constitution. ನಾವು ಸಂವಿಧಾನಕ್ಕಿಂತ ದೊಡ್ಡವರಲ್ಲ. ನಾನು ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. Religion-based ಮೀಸಲಾತಿ ವಿರೋಧಕ್ಕೆ ಕಾರಣವೇನು ಎಂದು ನಾನು ಮೊನ್ನೆದಿವಸ ಕೂಡ ಹೇಳಿದ್ದೇನೆ. ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ರವರು "Religion ಆಧಾರದ ಮೇಲೆ ಮೀಸಲಾತಿ ನೀಡುವುದು ದೇಶದ ಐಕ್ಯತೆಗೆ ವಿರುದ್ಧ" ಎಂದು ಅಭಿಪ್ರಾಯಪಟ್ಟಿದ್ದಾರೆ. ಮತ್ತೆ ಅವರು "ಮೀಸಲಾತಿಯನ್ನು ಪ್ರಮುಖವಾಗಿ ಸಾಮಾಜಿಕ, ಶೈಕ್ಷಣಿಕ ಹಿನ್ನೆಲೆ ಹೊಂದಿರುವ ಜನಾಂಗಗಳಿಗೆ ಮಾತ್ರ ನೀಡಬೇಕು "ಎಂದು ಒತ್ತಿ ಹೇಳಿದ್ದಾರೆ. ಅದಕ್ಕಾಗಿ ನಾವು ಮತೀಯ ಆಧಾರದ ಮೇಲೆ ಮೀಸಲಾತಿಯನ್ನು ಕೊಡಬಾರದು. ಸರ್ದಾರ್ ವಲ್ಲಭಬಾಯಿ ಪಟೇಲ್ ರವರು "ಮೀಸಲಾತಿಯ ಅಗತ್ಯತೆಯನ್ನು ಒಪ್ಪಿಕೊಂಡರೆ ಅದು ಎಸ್.ಸಿ. ಎಸ್.ಟಿ ಮತ್ತು ಹಿಂದುಳಿದ ವರ್ಗಗಳಿಗೆ ಮಾತ್ರ ಸೀಮಿತವಾಗಿರಬೇಕು" ಎಂದು ಹೇಳಿದ್ದಾರೆ. ಶ್ರೀ ಕನ್ಹೈಯಲಾಲ್ ಮನೇಕ್‌ಲಾಲ್ ಮುನ್ಷಿಯವರು "ಧಾರ್ಮಿಕ ಮತೀಯ ಮೀಸಲಾತಿ ದೇಶದ ಸಂಭಾವ್ಯತೆಗೆ ಅಪಾಯಕಾರಿ" ಎಂದು ವಾದಿಸಿದ್ದಾರೆ. ಶ್ರೀ ತೇಜ್ ಬಹದ್ದೂರ್ ಸಪ್ರು ರವರು ಸಮಾನ ನಾಗರಿಕ ಸಂಹಿತೆ "ಮೀಸಲಾತಿ ಎಲ್ಲರಿಗೂ ಸಮಾನವಾಗಿರಬೇಕು" ಎಂದು ಒತ್ತಿ ಹೇಳಿದ್ದಾರೆ. ಶ್ರೀ ಮೌಲನಾ ಅಬ್ದುಲ್ ಅಜಾದ್ ರವರು ಮುಸ್ಲಿಂ ಸಮುದಾಯದ ನಾಯಕರಾಗಿದ್ದರೂ ಕೂಡ ಪ್ರತ್ಯೇಕ ಧಾರ್ಮಿಕ ಮೀಸಲಾತಿಯನ್ನು, ಮತೀಯ ಮೀಸಲಾತಿಯನ್ನು ವಿರೋಧಿಸಿ "ಅನಗತ್ಯ ಮತ್ತು ಭಾರತದ ಜಾತ್ಯಾತೀತ ಪ್ರಜಾಪ್ರಭುತ್ವವು ಸಮಾನ ಅವಕಾಶಗಳ ಮೇಲೆ ನಿರ್ಮಿಸಲ್ಪಡಬೇಕು" ಎಂದು ಹೇಳಿದ್ದಾರೆ. ಶ್ರೀಮತಿ ಇಂದಿರಾ ಸಾಹ್ನಿ ವಿರುದ್ಧ ಭಾರತ ಸರ್ಕಾರದ ಪ್ರಕರಣದಲ್ಲಿ "ಜಾತಿಯು ಹಿಂದುಳಿದಿರುವಿಕೆಯ ಸ್ವೀಕಾರಾರ್ಹ ಸೂಚಕ" ಎಂದು ಹೇಳಿದೆ. ಹಾಗಾಗಿ, ಕೇಂದ್ರ ಸರ್ಕಾರದ ಸೇವೆಗಳಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಮಾನ್ಯ ಮಾಡಲಾಗಿದೆ. ಶ್ರೀಮತಿ ಇಂದಿರಾ ಸಾಹ್ನಿ ತೀರ್ಪನ್ನು ವಿಶ್ಲೇಷಣೆ ಮಾಡುತ್ತಾ, ಈ ಪ್ರಕರಣದ ವಿಶ್ಲೇಷಣೆಯು ಸುಪ್ರೀಂ ಕೋರ್ಟಿನ ತೀರ್ಪಿನ ಮೀಸಲಾತಿಯನ್ನು ಕೇವಲ ಮತೀಯ ಆಧಾರದ ಮೇಲೆ ನೀಡಲಾಗುವುದಿಲ್ಲ. ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯ ಮೇಲೆ ಕೇಂದ್ರೀಕರಿಸಬೇಕೆಂದು ಒತ್ತಿ ಹೇಳಿದ್ದಾರೆ. ಅಂತಿಮ ನಿರ್ಧಾರ ಭಾರತ ಸಂವಿಧಾನದ 5ನೇ ಭಾಗದ 352 ವಿಧಿಯಂತೆ ಸಮಾಜದ ಹಿತಾಸಕ್ತಿ ಕಾಯ್ದಿರಿಸುವ ನಿಟ್ಟಿನಲ್ಲಿ ಮೀಸಲಾತಿ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಮತ್ತು

ಎಸ್.ಸಿ. ಎಸ್.ಟಿ ವರ್ಗಳಿಗೆ ಮಾತ್ರ ನೀಡುವಂತೆ ನಿರ್ಧರಿಸಲಾಯಿತು. ಈ ನಿಯಮದ ಪ್ರಕಾರ religion-based ಮೀಸಲಾತಿಯ ಆಧಾರವಾಗಬಾರದು ಎಂದು ತೀರ್ಮಾನ ಕೈಗೊಳ್ಳಲಾಯಿತು. ಮಾನ್ಯ ಸಭಾಪತಿಯವರೇ, ನಾನು ತಮಗೆ ಯಾವ ಕಾರಣಕ್ಕೆ ಮೀಸಲಾತಿ ಕೊಡಬಹುದು ಎಂದು ಹೇಳಿದ್ದೇನೆ. ನಮ್ಮಲ್ಲಿ ಜಾತಿಯ ಕಾರಣಕ್ಕಾಗಿ ಮೀಸಲಾತಿಯನ್ನು ಮುಸಲ್ಮಾನರಿಗೂ ಕೊಟ್ಟಿದ್ದೇವೆ. ಪ್ರವರ್ಗ-1 ರಲ್ಲಿ ದರ್ವೇಸಿ, ಬಿಂಜಾರ, ಚಪ್ಪರ್‌ಬಂಧು ಮತ್ತು ನಗಾಫ್ ಈ ರೀತಿ ಮುಸಲ್ಮಾನರಲ್ಲಿ ಇರತಕ್ಕಂಥ ಹಿಂದುಳಿದ ಜಾತಿಗಳಾಗಿವೆ. ಅವರನ್ನು ಪಶ್ಮಂಡ ಮುಸಲ್ಮಾನರು ಎಂದು ಕರೆಯುತ್ತಾರೆ. ಅವರಿಗೆ ನಾವು ಮೀಸಲಾತಿಯನ್ನು ಕೊಟ್ಟಿದ್ದೇವೆ. ಮುಸಲ್ಮಾನರಲ್ಲಿವಂತಹ ಹಿಂದುಳಿದ ಜಾತಿಗಳಿಗೆ ಸರ್ಕಾರ ಮೀಸಲಾತಿಯನ್ನು ಕೊಡಬಹುದು. Wholesale ಆಗಿ ಇಡೀ ಮುಸಲ್ಮಾನ ಸಮುದಾಯಕ್ಕೆ ಮೀಸಲಾತಿಯನ್ನು ಕೊಡುವುದಕ್ಕೆ ಆಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಿ.ಟಿ. ರವಿಯವರೇ, ಒಂದು ನಿಮಿಷ. ದಯವಿಟ್ಟು ವಿರೋಧ ಪಕ್ಷದ ಸದಸ್ಯರುಗಳು ತಮ್ಮ ಸೀಟಿನ ಮುಂದೆ ಇಟ್ಟುಕೊಂಡಿರುವಂತಹ ಬಿತ್ತಿ ಪತ್ರಗಳ ಫೋಟೋಗಳನ್ನೆಲ್ಲಾ ಕೆಳಗಡೆ ಇಟ್ಟುಕೊಳ್ಳಿ. ಅದು ಸರಿಯಲ್ಲ, ನಮ್ಮ ಪದ್ಧತಿ ಅಲ್ಲ. ಕೆಳಗಡೆ ಇಟ್ಟುಕೊಳ್ಳಿ. ಮಾನ್ಯ ಸಿ.ಟಿ. ರವಿಯವರೇ, ತಾವು ಮಾತನಾಡಿ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರ ಸೀಟಿನ ಮುಂದೆ ಇಟ್ಟುಕೊಂಡಿದ್ದಂತಹ ಬಿತ್ತಿ ಪತ್ರಗಳ ಫೋಟೋಗಳನ್ನು ಕೆಳಗಡೆ ಇಟ್ಟುಕೊಂಡರು)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮುಸಲ್ಮಾನರಲ್ಲಿರತಕ್ಕಂಥ ಹಿಂದುಳಿದ ಜಾತಿಗಳಿಗೆ ನಾವು ಮೀಸಲಾತಿಯನ್ನು ಕೊಡಬಹುದು. ಜಮ್ಮು ಮತ್ತು ಕಾಶ್ಮೀರದಲ್ಲಿ ಮುಸಲ್ಮಾನರಲ್ಲಿರತಕ್ಕಂಥ ಒಂದು ಜಾತಿಯನ್ನು ಎಸ್.ಸಿ. ವರ್ಗಕ್ಕೂ ಸೇರಿಸಿದ್ದಾರೆ. ನಿಮಗೆ ಎಲ್ಲಾ ಹಿಂದೂಗಳಿಗೆ ಮೀಸಲಾತಿ ಕೊಡುವುದಕ್ಕೆ ಅವಕಾಶ ಇದೆಯೇ, ಇಲ್ಲ. ಹಿಂದೂಗಳಲ್ಲಿ ಇರತಕ್ಕಂಥ ಹಿಂದುಳಿದ ಜಾತಿಗಳಿಗೆ ಮೀಸಲಾತಿ ಕೊಡುವುದಕ್ಕೆ ಅವಕಾಶವಿದೆ. ಅದಕ್ಕೂ ಕಾರಣ ಅವರ socio-economic ಸ್ಥಿತಿಗತಿಯ ಬಗ್ಗೆ ಅಧ್ಯಯನ ಆಗಿರಬೇಕು. ಇದರಲ್ಲಿ ಒಂದು ಜಾತಿಗೆ ಮೀಸಲಾತಿಯನ್ನು ಕೊಡಬೇಕೆಂದರೆ, ಆ ಜಾತಿಯಲ್ಲಿ ಯಾರೂ ಗುತ್ತಿಗೆದಾರರೇ ಇಲ್ಲವೆಂದಾಗ ಅದರೊಳಗೆ ಆ ಅವಕಾಶದಿಂದ ವಂಚಿತರಾಗಬಾರದು ಎಂಬ ಕಾರಣಕ್ಕಾಗಿ ಆ ಜಾತಿಗೆ ನಾವು ಅವಕಾಶವನ್ನು ಕಲ್ಪಿಸಿಕೊಡಬೇಕು. ಈಗ ರಾಜ್ಯದಲ್ಲಿರತಕ್ಕಂಥ ಒಟ್ಟು ಗುತ್ತಿಗೆದಾರರು ಎಷ್ಟು? ಅದರೊಳಗೆ ಯಾವ್ಯಾವ ಜಾತಿಯ ಗುತ್ತಿಗೆದಾರರು ಎಷ್ಟು ಜನ ಇದ್ದಾರೆಂದು ಸರ್ಕಾರ ಏನಾದರೂ ವರ್ಗೀಕರಣ ಮಾಡಿದೆಯೇ? ಅದರೊಳಗೆ ಆ ವರ್ಗೀಕರಣ ಮಾಡಿದ್ದರೆ ಯಾವ ಜಾತಿಯವರಿಗೆ ಅವಕಾಶ ಇಲ್ಲವೋ ಆ ಜಾತಿಯವರಿಗೆ ಮೀಸಲಾತಿಯನ್ನು ಕಲ್ಪಿಸುತ್ತೇವೆಂದರೆ ಅದು ಒಂದು ಸಾಮಾಜಿಕ ನ್ಯಾಯವೆಂದು ನಾವು ಒಪ್ಪಿಕೊಳ್ಳಬಹುದು. ಆದರೆ wholesale ಆಗಿ ಒಂದು religion ಅನ್ನು ಮೀಸಲಾತಿಯ ವ್ಯಾಪ್ತಿಗೆ ತರುವುದಕ್ಕೆ ನಾನೇ ಅಲ್ಲ, ನಮ್ಮ ಭಾರತದ ಸಂವಿಧಾನವೇ ಒಪ್ಪಿಲ್ಲ. ಹಾಗಾಗಿ, ಭಾರತದ ಸಂವಿಧಾನಕ್ಕೆ ವಿರುದ್ಧವಾಗಿರತಕ್ಕಂಥ ಈ ಮೀಸಲಾತಿ ನಿರ್ಣಯವನ್ನು ಈ ಸದನ ಒಪ್ಪಿಕೊಳ್ಳಬಾರದು. ಈ ಸದನದ

ಸದಸ್ಯರು ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳಬೇಕು. ನಾವು ಕೆಲವೊಮ್ಮೆ ಓಟ್ ಬ್ಯಾಂಕ್‌ನ ರಾಜಕಾರಣಕ್ಕಾಗಿ ಆತ್ಮಸಾಕ್ಷಿಯನ್ನು ಮಾರಿಕೊಂಡುಬಿಡುತ್ತೇವೆ. ಕೆಲವೊಮ್ಮೆ ಓಟ್ ಬ್ಯಾಂಕ್‌ನ ರಾಜಕಾರಣ ನಮ್ಮ ವಿವೇಚನಾ ಶಕ್ತಿಯನ್ನು ಕಳೆದುಬಿಡುತ್ತದೆ. ಮಾನ್ಯ ಸಭಾಪತಿಯವರೇ, ನಮ್ಮ ಸಂವಿಧಾನ ತಜ್ಞರು ಕೂಡ ವಿರೋಧಿಸಿ ಅದಕ್ಕೂ ಕೂಡ ಕಾರಣಗಳನ್ನು ಹೇಳಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಿ.ಟಿ.ರವಿಯವರೇ, ಬೇರೆ ಸದಸ್ಯರು ಮಾತನಾಡಲಿ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಅದಕ್ಕೂ ಕೂಡ ಕಾರಣಗಳನ್ನು ಹೇಳಿದ್ದಾರೆ. ಸಂವಿಧಾನ ಸಭೆ ದಿನಾಂಕ 30.11.1948 ರಲ್ಲಿನ ಚರ್ಚೆಯಲ್ಲಿ ಆ ಕಾರಣಗಳನ್ನೂ ಕೂಡ ಹೇಳುತ್ತಾರೆ. ಅದೇನೆಂದರೆ,

*"The Final Decision – No Religion-Based Reservation*

- *The Constituent Assembly unanimously rejected religion-based reservations.*
- *Instead, Article 15(4) and Article 16(4) were introduced, allowing reservations only for socially and educationally backward classes, Scheduled Castes (SC), and Scheduled Tribes (ST).*
- *The Constitution abolished separate electorates for religious minorities (except for SC/ST representation)."*

ಅಂದರೆ ಎಸ್.ಸಿ.,ಎಸ್.ಟಿ ಯವರನ್ನು ಹೊರತುಪಡಿಸಿ ಬೇರೆ ಎಲ್ಲಾ ಜಾತಿಗಳಿಗೆ ಮೀಸಲಾತಿಯನ್ನು ಅವರು ನಿರಾಕರಿಸಿದ್ದರು. 1990ರ ನಂತರ ನಾವು ಓ.ಬಿ.ಸಿ.ಯವರಿಗೂ ಕೂಡ ಮೀಸಲಾತಿಯನ್ನು ಜಾರಿಗೆ ತಂದಿದ್ದೇವೆ. ನಮ್ಮ ದೇಶದಲ್ಲಿ 1990ಕ್ಕೆ ಮುಂಚೆ ಓ.ಬಿ.ಸಿ.ಯವರಿಗೂ ಕೂಡ ಮೀಸಲಾತಿ ಇರಲಿಲ್ಲ. ನ್ಯಾಯಾಲಯಗಳ ತೀರ್ಪುಗಳನ್ನು ಆಧಾರವನ್ನಾಗಿ ಇಟ್ಟುಕೊಂಡು . . . ಆಂಧ್ರಪ್ರದೇಶದಲ್ಲೂ ಕೂಡ ಈ ರೀತಿ ಮೀಸಲಾತಿಯನ್ನು ಜಾರಿಗೆ ತಂದಿತ್ತು. ಈ ನಮ್ಮ ರಾಜ್ಯದಲ್ಲೂ ಕೂಡ ಸರ್ಕಾರ ಮುಸಲ್ಮಾನರಲ್ಲಿ ಆರ್ಥಿಕವಾಗಿ ಹಿಂದುಳಿದ ಜಾತಿಗಳನ್ನು ಸರ್ವೆ ಮಾಡಲಿ. ಆ ಜಾತಿಗಳನ್ನು ನೀವು ಓ.ಬಿ.ಸಿ.ಗೆ ತರುತ್ತೀರೋ, ಎಸ್.ಸಿ., ಎಸ್.ಟಿಗೆ ತರುತ್ತೀರೋ; ಆದರೆ ತರುವುದಕ್ಕೆ ಅವಕಾಶವಿದೆ. ಆದರೆ . . .

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.. . .

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ನಾನು ಪೂರ್ಣಗೊಳಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಹೆಚ್.ಕೆ.ಪಾಟೀಲ್ ರವರೇ, ಮಾನ್ಯ ಸಿ.ಟಿ. ರವಿಯವರು ಹೇಳಿಬಿಡಲಿ. ಆಮೇಲೆ ತಾವು ಉತ್ತರ ಹೇಳಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಆದರೆ ಇಡೀ ಮುಸಲ್ಮಾನರಿಗೆ ಮೀಸಲಾತಿಯನ್ನು ತೆಗೆದುಕೊಂಡು ಬರುವುದು ಅಥವಾ 'muslim is not a religion', 'ಮುಸಲ್ಮಾನರು ಎನ್ನುವುದು ಒಂದು caste' ಎಂದು declare ಮಾಡಿ. 'It is not a religion. It is only a caste' ಎಂದು declare ಮಾಡಿ. ಇಡೀ ಮುಸಲ್ಮಾನರು ಒಂದು caste ಆಗುತ್ತದೆಯೇ? ಇಲ್ಲ. ಮುಸಲ್ಮಾನರಲ್ಲಿ ಆರ್ಥಿಕವಾಗಿ ಹಿಂದುಳಿದಿರತಕ್ಕಂಥ, ಸಾಮಾಜಿಕವಾಗಿ ಹಿಂದುಳಿದಿರತಕ್ಕಂಥ ಮತ್ತು ಎಜುಕೇಷನ್‌ನಲ್ಲಿ ಹಿಂದುಳಿದಿರತಕ್ಕಂಥ ಯಾವುದಾದರೂ ಜಾತಿಗಳನ್ನು ಸೇರಿಸಿದರೆ ಯಾರೂ ಇದಕ್ಕೆ ಅಡ್ಡಿಪಡಿಸುವುದಿಲ್ಲ. ಆ ರೀತಿ ಜಾತಿಗಳನ್ನು ನಾವು ಪ್ರವರ್ಗ-1ರಲ್ಲಿ ಸೇರಿಸಿದ್ದೇವೆ. ನಾನು ಕೂಡ ಕೇಳಿದ್ದೇನೆ. ಆದರೆ ಇಡೀ religion ಅನ್ನೇ ಸೇರಿಸುವುದು it is against the Constitution. 2004ರಲ್ಲಿ ಆಂಧ್ರಪ್ರದೇಶ ಸರ್ಕಾರ ಶಿಕ್ಷಣ ಸಂಸ್ಥೆ ಮತ್ತು ಸರ್ಕಾರಿ ಉದ್ಯೋಗಗಳಿಗೆ ಶೇ.5 ರಷ್ಟು ಮೀಸಲಾತಿಯನ್ನು ಘೋಷಣೆ ಮಾಡಿದೆ. ಈ ನಿರ್ಧಾರವನ್ನು ಆಂಧ್ರಪ್ರದೇಶದ ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಯಿತು. ಆಂಧ್ರಪ್ರದೇಶದ ಹೈಕೋರ್ಟಿನ 5 ನ್ಯಾಯಾಧೀಶರ ಪೀಠವು ಈ ಮೀಸಲಾತಿ ಕೊಟ್ಟಿರುವುದು ಅಸಂವಿಧಾನಿಕ ಎಂದು ಘೋಷಿಸಿದೆ. "ಇಡೀ ಮುಸಲ್ಮಾನರ ಸಮುದಾಯವನ್ನು ಕೇವಲ religion ಆಧಾರದ ಮೇಲೆ ಹಿಂದುಳಿದ ವರ್ಗವಾಗಿ ಪರಿಗಣಿಸುವುದು ಸರಿಯಲ್ಲ" ಎಂದು ಆದೇಶ ಮಾಡಿದೆ. ಇದೆಲ್ಲಾ ನಮ್ಮ ಹತ್ತಿರ ಇರುವಂಥ citations. ಇದನ್ನೆಲ್ಲಾ ಇಟ್ಟುಕೊಂಡು ಮೀಸಲಾತಿಯನ್ನು ತರಬೇಕಾದರೆ ಯಾವ ಹಿನ್ನೆಲೆಯಲ್ಲಿ ತೆಗೆದುಕೊಂಡು ಬಂದರು? ನಾನು ಈ ಮುಂಚೆ ಕೇಳಿದ ರೀತಿಯಲ್ಲಿ ಇಡೀ ರಾಜ್ಯದಲ್ಲಿ ಅವರು socially, economically ಹಿಂದುಳಿದಿದ್ದಾರೆಂದು ಸರ್ಕಾರ ಸರ್ವೇ ಮಾಡಿದೆಯೇ? ಇಡೀ ರಾಜ್ಯದಲ್ಲಿ ಅವರು ಎಷ್ಟು ಜನ Class-1, Class-2 ಮತ್ತು Class-3 ಗುತ್ತಿಗೆದಾರರು ಇದ್ದಾರೆ? ಅದರೊಳಗೆ ಯಾವ್ಯಾವ ಜಾತಿಯವರು ಎಷ್ಟೆಷ್ಟು ಗುತ್ತಿಗೆದಾರರು ಇದ್ದಾರೆ? ಸರ್ಕಾರದಲ್ಲಿ ಏನಾದರೂ ಅದರ data ಇದೆಯೇ? ಅವರು ಯಾರೂ ಗುತ್ತಿಗೆದಾರರು ಇಲ್ಲದಿರುವ ಕಾರಣಕ್ಕಾಗಿ ನಾವು ಅವರಿಗೆ ಅವಕಾಶ ಕಲ್ಪಿಸುತ್ತೇವೆಂದರೆ ಅದು social justice. ಅದುಬಿಟ್ಟು ಓಟ್ ಬ್ಯಾಂಕ್ ರಾಜಕಾರಣಕ್ಕಾಗಿ . . . ಕೆಲವರ ಸ್ವಾರ್ಥಕ್ಕಾಗಿ ಅವೊತ್ತು ಭಾರತ ವಿಭಜನೆ ಆಯಿತು. ಅವೊತ್ತು ಇಡೀ ಭಾರತೀಯರೆಲ್ಲರೂ ಆ ಸಮಸ್ಯೆಯನ್ನು ಎದುರಿಸಿದ್ದರೆ ಭಾರತ ವಿಭಜನೆ ಆಗುವುದನ್ನು ತಪ್ಪಿಸಬಹುದಾಗಿತ್ತು. ಆದರೆ ದುರ್ದೈವ ಮತೀಯ ಕಾರಣಕ್ಕಾಗಿಯೇ ವಿಭಜನೆ ಆಯಿತು. ನಾವು ನಿಮ್ಮ ಜೊತೆ ಬದುಕುವುದಕ್ಕೆ ಆಗುವುದಿಲ್ಲವೆಂದು ಭಾರತ ವಿಭಜನೆಗೆ ಅವಕಾಶ ಕೊಟ್ಟಿದ್ದು. ಆದರೆ ಇವತ್ತು ಸಮಾಜವನ್ನು ಈ ರೀತಿ religion ಆಧಾರದ ಮೇಲೆ ಒಡೆಯಬೇಡಿ. ಸರ್ಕಾರಕ್ಕೆ ಸಾಮಾಜಿಕ ನ್ಯಾಯದ ಬಗ್ಗೆ ನಿಜವಾಗಲೂ ಕಾಳಜಿ ಇದ್ದಲ್ಲಿ ಮುಸಲ್ಮಾನರಲ್ಲಿರತಕ್ಕಂಥ ಹಿಂದುಳಿದ ವರ್ಗದವರನ್ನು ಸರ್ವೇ ಮಾಡಿಸಿ ನಂತರ ಈ ವಿಧೇಯಕವನ್ನು ತೆಗೆದುಕೊಂಡು ಬನ್ನಿ. ಆಗ ನಾವು ಕೂಡ ಒಪ್ಪುತ್ತೇವೆ. ಆದರೆ ಸರ್ಕಾರ ಏನು ಮಾಡುತ್ತಿದೆಯೆಂದರೆ, ಬಿ.ಜೆ.ಪಿಯವರು ಹೇಗಿದ್ದರೂ ವಿರೋಧಿಸುತ್ತಾರೆ. ನಾಳೆ ದಿವಸ ಇದು ಕೋರ್ಟ್‌ನಲ್ಲಿ ಬಿದ್ದುಹೋದರೂ ಹೋಗಲಿ. ನಾವು ಅವರಿಗೆ ಕೊಟ್ಟಿದ್ದೇವೆ ಎಂದು ತೋರಿಸಿಕೊಳ್ಳುವುದಕ್ಕೋಸ್ಕರ ತರುತ್ತಿರುವುದು ಭಾರತದ ಸಂವಿಧಾನಕ್ಕೆ ವಿರುದ್ಧವಾಗುತ್ತದೆ. ಯಾರು ಭಾರತದ ಸಂವಿಧಾನವನ್ನು ಒಪ್ಪಿಕೊಂಡಿಲ್ಲವೋ ಅಂಥವರು ಮಾತ್ರ ಇಂತಹ

ಮೀಸಲಾತಿಯನ್ನು ತರುವುದು ಸಾಧ್ಯವಾಗುತ್ತದೆ. ಭಾರತದ ಸಂವಿಧಾನವನ್ನು ಯಾರು ಒಪ್ಪಿಕೊಂಡಿದ್ದಾರೋ ಅವರು ಇಂತಹ ಮೀಸಲಾತಿ ವಿಧೇಯಕವನ್ನು ತರುವುದಿಲ್ಲ. ಹಾಗಾಗಿ ನಾನು ಈ ವಿಧೇಯಕವನ್ನು ವಿರೋಧಿಸುತ್ತೇನೆ. ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ದಯಮಾಡಿ ಪ್ರವರ್ಗ-2ಬಿಯಲ್ಲಿ ಯಾವ್ಯಾವ ಜಾತಿ ಇದೆಯೆಂದು explain ಮಾಡಿ. ಪ್ರವರ್ಗ 2-ಬಿ ಯಲ್ಲಿ ಯಾವ್ಯಾವ ಜಾತಿ ಇದೆಯೆಂದು ನಮಗೆ list ಕೊಡಿ. ಆಗ ಒಪ್ಪಬಹುದು.

**ಸಭಾಪತಿಯವರು:-** ಸರಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಆದರೆ ವಂಚನೆ ಮಾಡುವುದು ಇದೆಯಲ್ಲ. . . ಮುಸಲ್ಮಾನರ ಹೆಸರನ್ನು ತಂದರೆ, ಬಿ.ಜೆ.ಪಿಯವರೆಲ್ಲಾ ಬಳಸಿಕೊಂಡುಬಿಡುತ್ತಾರೆ. ಅದಕ್ಕೆ ಬಹಳ ಬುದ್ಧಿವಂತಿಕೆಯಿಂದ ಹೆಸರನ್ನೇ ತರದೇ ಪ್ರವರ್ಗ- 2ಬಿ ಎಂದು ತಂದುಬಿಡುವುದು. ಪ್ರವರ್ಗ-2ಬಿ ಯಲ್ಲಿ ಯಾವ ಜಾತಿ ಇದೆ ಹೇಳಿ? ಹಾಗಾಗಿ ಈ religion-based reservation ಏನಿದೆ, ಅದು anti-constitutional.

**(ಮುಂದು)**

(588)21.3.2025/7.00/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ. ರವಿ (ಮುಂದು):**

ಸಂವಿಧಾನ ವಿರೋಧಿಯಾಗಿರುವಂತಹ ಈ ಬಿಲ್ ಅನ್ನು ಸಭೆಯು ಪಾಸ್ ಮಾಡಬಾರದು, ಸರ್ಕಾರ ಇದನ್ನು ಹಿಂಪಡೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2025ನ್ನು ನಾನು ಪ್ರವರ್ಗ 2ಬಿ ಗೆ ಸೇರಿದಂತಹ ಸಮುದಾಯಕ್ಕೆ ಶೇ.4ರಷ್ಟು ಮೀಸಲಾತಿ ಕೊಡುವುದಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಆದರೆ ಪ್ರವರ್ಗ 2ಬಿ ರಲ್ಲಿ ಬರುವವರು ಮುಸ್ಲಿಂ ಸಮುದಾಯದವರು. ಸಾರ್ವಜನಿಕವಾಗಿ ಅಲ್ಪಸಂಖ್ಯಾತರಿಗೆ ಈ ಮೀಸಲಾತಿ ಇದೆ ಎಂಬ ಅಭಿಪ್ರಾಯವಿದೆ. ಅಲ್ಪಸಂಖ್ಯಾತರು ಎಂದರೆ ಕ್ರಿಶ್ಚಿಯನ್ಸ್, ಪಾರ್ಸಿಗಳು, ಸಿಖ್ಖರು ಮತ್ತು ಜೈನರು ಸಹ ಬರುತ್ತಾರೆ. ಆದರೆ ಜೈನರು ಇದರಲ್ಲಿ include ಆಗಿಲ್ಲ. ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಕ್ರೈಸ್ತ ಅಲ್ಪಸಂಖ್ಯಾತರಲ್ಲಿಯೂ ಬಡವರು, ಕೂಲಿ ಕಾರ್ಮಿಕರು, ಎಲ್ಲಾ ತರಹದ ಕಸುಬು ಮಾಡುವವರು ಇದ್ದಾರೆ. ಅವರನ್ನು ಬಿಟ್ಟು ನೀವು ಬರೀ ಒಂದು ಸಮುದಾಯಕ್ಕೆ ಸೇರಿಸಿದ್ದೀರಿ, ನಮ್ಮನ್ನು ಅಲ್ಪಸಂಖ್ಯಾತರು ಎಂದು ಹೇಳುವುದನ್ನು ಒಟ್ಟಿಗೆ ಪ್ರವರ್ಗ-2ಬಿ ಗೆ ತರುವುದಾದರೆ ಪ್ರವರ್ಗ-2ಬಿ.ಗೆ ತನ್ನಿ, ನಾವು ಈಗ ಪ್ರವರ್ಗ-3ಬಿ ಯಲ್ಲಿದ್ದೇವೆ. ಜೈನರು ಸಹ ಪ್ರವರ್ಗ-3ಬಿ ಯಲ್ಲಿದ್ದಾರೆ. ನಮ್ಮನ್ನು ಒಟ್ಟು ಸೇರಿಸಿ ಎಲ್ಲರಿಗೂ ಅವಕಾಶ ಕೊಟ್ಟರೆ ಬಹುಶಃ ಇದರಿಂದ ಒಳ್ಳೆಯ ಸಂದೇಶ ಹೋಗುತ್ತದೆ, ಸರ್ಕಾರಕ್ಕೂ ಒಳ್ಳೆಯದಾಗುತ್ತದೆ ಎಂದು ಹೇಳಬಯಸುತ್ತೇನೆ. ಈ ಮೀಸಲಾತಿಯಲ್ಲಿ ಇವತ್ತು ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಶೇ.4ರಷ್ಟು ಮೀಸಲಾತಿಯನ್ನು ನೀಡುವುದನ್ನು ಸಮರ್ಥಿಸಿಕೊಂಡಿರುವ ಉಪ ಮುಖ್ಯಮಂತ್ರಿಗಳು ಕೇವಲ 2 ಕೋಟಿ ರೂಪಾಯಿಗಳವರೆಗಿನ ಕಾಮಗಾರಿಗಳಿಗೆ

ಮುಸ್ಲಿಂರಿಗೆ ಮಾತ್ರವಲ್ಲ, ಅಲ್ಪಸಂಖ್ಯಾತರೆಂದರೆ, ಕ್ರಿಶ್ಚಿಯನ್, ಜೈನ್, ಸಿಖ್ ಮತ್ತು ಪಾರ್ಸಿ ಎಲ್ಲರೂ ಬರುತ್ತಾರೆ ಎಂದು ಹೇಳಿದ್ದಾರೆ. ನಮ್ಮ ಸಮುದಾಯದಲ್ಲಿ ಏನಾಗಿದೆಯೆಂದರೆ, ಎಲ್ಲೋ ಒಂದು ಕಡೆ ನಮಗೂ ಮೀಸಲಾತಿ ಬರುತ್ತದೆ, ನಮ್ಮಲ್ಲಿ ಕೂಡ ಕೆಲವರು ಗುತ್ತಿಗೆದಾರರಾಗಬಹುದು, ಕೆಲವರು ತಮ್ಮ ಕಸುಬುಗಳನ್ನು ಮಾಡಬಹುದು, ಇನ್ನು ಕೆಲವರು ಸಮಾಜದ ಮುಖ್ಯವಾಹಿನಿಗೆ ಬರಬಹುದು ಎಂಬ ಚಿಂತನೆ ಇದೆ. ಕೇಂದ್ರ ಸರ್ಕಾರಕ್ಕೆ ಹೋದಾಗ ನಾವು ಓ.ಬಿ.ಸಿ.ಯಲ್ಲಿ ಬರುತ್ತೇವೆ. ಹಾಗಾಗಿ ಮುಸ್ಲಿಂ ಸಮುದಾಯದಲ್ಲಿ ಎಷ್ಟು ಬಡವರಿದ್ದಾರೋ ಅಷ್ಟೇ ಕ್ರೈಸ್ತರಲ್ಲಿ, ಜೈನರಲ್ಲಿ, ಪಾರ್ಸಿಗಳಲ್ಲಿ ಹಾಗೂ ಸಿಖ್ಖರಲ್ಲಿಯೂ ಇದ್ದಾರೆ. ಹಾಗಾಗಿ ನಾನು ಒತ್ತಾಯ ಮಾಡುವುದೇನೆಂದರೆ, ಅಲ್ಪಸಂಖ್ಯಾತರ ಗುಂಪನ್ನು ಒಟ್ಟಾಗಿ ತೆಗೆದುಕೊಂಡು ಹೋಗಿ ಸಾಧ್ಯವಾದರೆ ಪ್ರವರ್ಗ-2ಬಿ ಗೆ ನಮ್ಮನ್ನು ಸೇರಿಸಿ ನಮಗೂ ಮೀಸಲಾತಿ ಕೊಡಿ ಅದರಿಂದ ನಮ್ಮ ಸಮುದಾಯಕ್ಕೂ ಸಹಾಯವಾಗುತ್ತದೆ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಅವರ ಉತ್ತರವನ್ನು ನೋಡಿ ಮತ್ತೆ ಪ್ರತಿಕ್ರಿಯೆ ಕೊಡುತ್ತೇನೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2025ರ ಈ ಬಿಲ್‌ಗೆ ನನ್ನ ಅಸಮ್ಮತಿಯನ್ನು ವ್ಯಕ್ತಪಡಿಸುತ್ತಾ ಈ ಬಿಲ್‌ನಲ್ಲಿ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ ಇದರಲ್ಲಿ ಪುಟ-3ರಲ್ಲಿ 2ನೇ ಪ್ಯಾರಾದಲ್ಲಿ ''*ಎರಡು ಕೋಟಿ ರೂಪಾಯಿಗಳವರೆಗಿನ ಒಟ್ಟು ಸರ್ಕಾರಿ ನಿರ್ಮಾಣ ಕಾಮಗಾರಿಗಳ ಪೈಕಿ ಅಂಥ ಕಾಮಗಾರಿಗಳ ಸಂಖ್ಯೆಯ ಶೇಕಡ 4ರಷ್ಟನ್ನು ಮೀರದಂತೆ ಹಿಂದುಳಿದ ವರ್ಗಗಳ ಪ್ರವರ್ಗ-2(ಬಿ)ಗೆ ಸೇರಿದ ವ್ಯಕ್ತಿಗಳು ಪಾಲ್ಗೊಳ್ಳುವುದನ್ನು ಪ್ರೋತ್ಸಾಹಿಸುವುದು*'' ಎಂದು ಇದೆ. ಇದಕ್ಕೆ ನನ್ನ ಸಂಪೂರ್ಣ ವಿರೋಧವಿದೆ. ಪ್ರವರ್ಗ-2ಬಿರಲ್ಲಿ ಯಾರು ಬರುತ್ತಾರೆ ಎಂಬ ಬಗ್ಗೆ ನನ್ನ ಬಳಿ ಲಿಸ್ಟ್ ಇದೆ. ಪ್ರವರ್ಗ-2ಬಿ.ರಲ್ಲಿ ಒಂದೇ ಸಮುದಾಯ ಬರುತ್ತಿದೆ. 'Muslims exclusively' ಎಂದು ಇದೆ. ಇದು ಧರ್ಮದ ಆಧಾರದ ಮೇಲೆ ಕೊಟ್ಟ ಹಾಗೆ ಆಗುವುದಿಲ್ಲವೇ? ಸಂವಿಧಾನದಲ್ಲಿ ಡಾ:ಬಿ.ಆರ್. ಅಂಬೇಡ್ಕರ್‌ರವರು 'ಯಾವುದೇ ಮೀಸಲಾತಿಯನ್ನು ಯಾವುದೇ ಆರಕ್ಷಣೆ ಧರ್ಮದ ಆಧಾರದ ಮೇಲೆ, ಲಿಂಗದ ಆಧಾರದ ಮೇಲೆ ಕೊಡುವುದಕ್ಕೆ ಬರುವುದಿಲ್ಲ' ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಸಂವಿಧಾನದ ಕರ್ತೃ, ಸಂವಿಧಾನದ ಪಿತಾಮಹ, ನಮ್ಮ ರಾಜ್ಯದ, ದೇಶದ ಎಸ್.ಸಿ., ಎಸ್.ಟಿ.ಗಳಿಗೆ ಬದುಕನ್ನು ಕೊಟ್ಟಂತಹ ಮಹಾಮಹಿಮ ಡಾ: ಬಿ.ಆರ್. ಅಂಬೇಡ್ಕರ್‌ರವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಾಗ ನಾಲ್ಕು ಸಂಗತಿಗಳನ್ನು ಹೇಳಿದ್ದಾರೆ. ಅವತ್ತು ಸ್ವಾತಂತ್ರ್ಯ ಹೋರಾಟ ಮುಗಿದು, ದೇಶಕ್ಕೆ ಸ್ವಾತಂತ್ರ್ಯ ಬಂದು ಇನ್ನೇನು ಅಧಿಕಾರ ಹಂಚಿಕೆಯಾಗುತ್ತಿರುವಂತಹ ಸಂದರ್ಭದಲ್ಲಿ ನಮ್ಮ ದೇಶಕ್ಕೆ ಸಂವಿಧಾನ introduce ಆದಮೇಲೆ ನಾಲ್ಕು ಕಾರಣಗಳನ್ನು ಕೊಟ್ಟಿದ್ದಾರೆ. ಮೊದಲನೆಯದು, ಕಾಂಗ್ರೆಸ್‌ಗೆ ಎಸ್.ಸಿ. ಎಸ್.ಟಿ., ಓ.ಬಿ.ಸಿ.ಗಳು ಆದ್ಯತೆ ಅಲ್ಲ; ಎರಡನೆಯದು, ಕಾಂಗ್ರೆಸ್‌ಗೆ ಆದ್ಯತೆ ನಮ್ಮ ದೇಶದಲ್ಲಿರುವ ಅಲ್ಪಸಂಖ್ಯಾತರೆಂದು ಕರೆಸಿಕೊಳ್ಳುವಂತಹ ಮುಸ್ಲಿಂರು ಕಾಂಗ್ರೆಸ್‌ಗೆ ಆದ್ಯತೆ, first priority ಅಲ್ಲ ಎಂದು ಡಾ: ಬಿ.ಆರ್. ಅಂಬೇಡ್ಕರ್‌ರವರು ಬಹಳ ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದಾರೆ. ಮೂರನೆಯದು, ನಮ್ಮ ದೇಶದಲ್ಲಿ ಮುಸ್ಲಿಮರ ಬಗ್ಗೆ ವಿಪರೀತ ತುಷ್ಟೀಕರಣ ಆಗುತ್ತಿದೆ. ಅವರಿಗೆ ಏನು

ಆದ್ಯತೆಯನ್ನು ಕೊಡುತ್ತಿದೆ ಆ ಪ್ರಮಾಣದಲ್ಲಿ ನಮ್ಮ ದೇಶದೊಳಗೆ ಎಸ್.ಸಿ. ಎಸ್.ಟಿ., ಓ.ಬಿ.ಸಿ.ಗಳಿಗೆ ಆದ್ಯತೆಯನ್ನು ಕೊಡಲಿಲ್ಲ. ಹಾಗಾಗಿ ನಾನು ಬಹಳ ಅಸಂತುಷ್ಟನಾಗಿದ್ದೇನೆ, ಬೇಸರದಲ್ಲಿದ್ದೇನೆ ಎಂದು ಹೇಳಿದ್ದಾರೆ. ನಾಲ್ಕನೆಯ ಕಾರಣ ಬಹಳ ಮುಖ್ಯವಾದುದು. With inverted comma, underline ಮಾಡಿ ಇರುವುದನ್ನು ಹೇಳುತ್ತಿದ್ದೇನೆ, "ಇದೇ ತುಷ್ಟೀಕರಣ ಕಾರಣದಿಂದ ದೇಶ ಬಹಳ ಬೆಲೆಯನ್ನು ತೆತ್ತುಬಿಟ್ಟಿದೆ. ದೇಶ ವಿಭಜನೆಯಾಗಿದೆ. ದೇಶದ ಪ್ರತಿಯೊಬ್ಬ ಪ್ರಜೆ ಇದರ ನೋವನ್ನು ಅನುಭವಿಸಿದ್ದಾನೆ." ದೇಶ ವಿಭಜನೆಯ ನೋವನ್ನು ನೋಡಿ ಡಾ: ಬಿ.ಆರ್.ಅಂಬೇಡ್ಕರ್‌ರವರು ಈ ನೋವನ್ನು ಮರೆಯಬೇಕೆಂದರೆ, "the complete population exchange between Pakistan and Hindustan" ಎಂದು ಹೇಳಿದರು. ಅದರಿಂದ ನಾವು ಬಹಳ ದೂರ ಬಂದಿದ್ದೇವೆ. ದೇಶ ವಿಭಜನೆಯಾಗಿ ಏನು ನಮ್ಮ ದೇಶ ಬೆಲೆ ತೆತ್ತಿತು ಎನ್ನುವುದನ್ನು ನಾವೆಲ್ಲಾ ಅನುಭವಿಸಿದ್ದೇವೆ. ಕೊನೆಯ ಅಂಶವನ್ನು ಹೇಳುತ್ತೇನೆ. ನಾವು ಸಾವಿರಾರು ಕಿಲೋಮೀಟರ್ ಧಾವಿಸಿ ಬಿಟ್ಟಿದ್ದೇವೆ. ಇದೆಲ್ಲಾ ಆದ ಮೇಲೆ ಅನೇಕ ಜನರು ಪ್ರಧಾನ ಮಂತ್ರಿಗಳಾದರು. ಡಾ: ಮನಮೋಹನ್‌ಸಿಂಗ್‌ರವರು ನಮ್ಮ ದೇಶದ ಪ್ರಧಾನ ಮಂತ್ರಿಯಾಗಿ ಬಂದರು. ಅವರು ಏನು ಹೇಳುತ್ತಾರೆಂದರೆ, ನಮ್ಮ ದೇಶದ ಆಸ್ತಿ-ಪಾಸ್ತಿ, ಸಂಪನ್ಮೂಲಗಳಲ್ಲಿ ಮುಸ್ಲಿಂ ಬಂಧುಗಳಿಗೆ ಮೊದಲನೆ ಆದ್ಯತೆ ಸಿಗಬೇಕು. ಇದು ಇಡೀ ದೇಶದಾದ್ಯಂತ ಚರ್ಚೆಯಾಯಿತು. ಕೊನೆಯದಾಗಿ, ಮುಸ್ಲಿಂ ಸಮುದಾಯದಲ್ಲಿ ಬಡವರಿದ್ದಾರೆ. ಎಲ್ಲಾ ಧರ್ಮದಲ್ಲಿಯೂ ಬಡವರಿದ್ದಾರೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಔದ್ಯೋಗಿಕವಾಗಿ, ಎಲ್ಲಾ ಜಾತಿಗಳಲ್ಲಿ, ಎಲ್ಲಾ ಧರ್ಮದಲ್ಲಿಯೂ ಬಡವರಿದ್ದಾರೆ. ಎಲ್ಲಾ ಜಾತಿಯವರಿಗೆ, ಎಲ್ಲಾ ಧರ್ಮದವರಿಗೆ ಮೀಸಲಾತಿ ಕೊಡಬೇಕೆಂದು ಡಾ:ಬಿ.ಆರ್. ಅಂಬೇಡ್ಕರ್‌ರವರು ಹೇಳಲಿಲ್ಲ. ಯಾರಿಗೆ ಹೇಳಿದರೆಂದರೆ, ಯಾರು ಶೋಷಿತರಿದ್ದಾರೆ, ಯಾರ ಸ್ವಾತಂತ್ರ ಹರಣ ಆಯಿತು, ಯಾರಿಗೆ ದೇವಸ್ಥಾನಗಳಿಗೆ ಪ್ರವೇಶ ಇರಲಿಲ್ಲ, ಯಾರನ್ನು ಸಮಾಜದಿಂದ, ಸಂಸ್ಕೃತಿಯಿಂದ, ಶಿಕ್ಷಣದಿಂದ ದೂರ ಇಟ್ಟಿದ್ದರು ಅಂತಹವರಿಗೆ ಮೀಸಲಾತಿ ಕೊಡಬೇಕೆಂದು ಅಂಬೇಡ್ಕರ್ ಹೇಳಿದರು. The most important point is, ನಮ್ಮ ದೇಶದಲ್ಲಿ ಮುಸಲ್ಮಾನ ಬಂಧುಗಳು ಬಡವರಿದ್ದಾರೆ ಆದರೆ ಮುಸಲ್ಮಾನರು ನಮ್ಮ ದೇಶವನ್ನು ನೂರಾರು ವರ್ಷಗಳ ಕಾಲ ಆಳಿದ್ದಾರೆ.

(ಮುಂದು)

(589) 21.03.2025 (7.10) ಹೆಚ್‌ವಿ.ಆರ್‌ಎನ್ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎನ್.ರವಿಕುಮಾರ್(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಆದ್ದರಿಂದ ಡಾ||ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಬರೆದಿರುವಂತಹ ಸಂವಿಧಾನದಲ್ಲಿ "ಇಂತಹ ಸಮುದಾಯಕ್ಕೆ ಮೀಸಲಾತಿಯನ್ನು ಕೊಡುವುದಕ್ಕೆ ಆಗುವುದಿಲ್ಲ" ಎಂದು ತಿಳಿಸಿದ್ದಾರೆ. ಇವರು ನಮ್ಮ ದೇಶವನ್ನು ನೂರಾರು ವರ್ಷಗಳ ಕಾಲ ಆಳ್ವಿಕೆ ಮಾಡಿದ್ದಾರೆ. ಅವರಲ್ಲಿಯೂ ಬಡವರು ಇದ್ದಾರೆ. ಅವರನ್ನು ಆರ್ಥಿಕವಾಗಿ ಮೇಲೆತ್ತಬೇಕಾದರೆ, ಸರ್ಕಾರದಿಂದ ಸವಲತ್ತುಗಳನ್ನು ನೀಡಲಿ. ಪಡಿತರ, ಶಿಕ್ಷಣ, ಉದ್ಯೋಗ ಇವುಗಳನ್ನು ನೀಡಲಿ ನಾವು ಬೇಡವೆನ್ನುವುದಿಲ್ಲ. ಆದರೆ, ಮೀಸಲಾತಿ ನೀಡುವುದು ಬೇಡ. ಇಂತಹ ನೋವು, ಸಂಕಟ ಎಲ್ಲವನ್ನು

ಅನುಭವಿಸಿರುವಂತಹ ಸಂದರ್ಭದಲ್ಲಿ ಪುನಃ ಈ ಸರ್ಕಾರ, ಸರ್ಕಾರಿ ಕಾಮಗಾರಿಗಳಲ್ಲಿ ಶೇಕಡಾ 4ರಷ್ಟು ಗುತ್ತಿಗೆ ಮೀಸಲಾತಿಯನ್ನು ಮುಸ್ಲಿಮರಿಗೆ ನೀಡುತ್ತಿರುವುದು ಎಷ್ಟರ ಮಟ್ಟಿಗೆ ಸರಿ? ಈ ಮೀಸಲಾತಿಯನ್ನು ಜಾರಿಗೆ ತರುವ ಮೂಲಕ ಈ ಸರ್ಕಾರ ದೇಶವನ್ನು ಯಾವ ಕಡೆಗೆ ತೆಗೆದುಕೊಂಡು ಹೋಗುತ್ತಿದೆ?

ಸನ್ಮಾನ್ಯ ಸಭಾಪತಿಯವರೇ, ಸರ್ಕಾರಿ ಕಾಮಗಾರಿಗಳಲ್ಲಿ ಶೇಕಡಾ 4ರಷ್ಟು ಗುತ್ತಿಗೆ ಮೀಸಲಾತಿಯನ್ನು ಮುಸ್ಲಿಂ ಧರ್ಮದವರಿಗೆ ನೀಡುತ್ತಿರುವುದನ್ನು pin-to-point ನಾನು ವಿರೋಧಿಸುತ್ತಿದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರಿ ಕಾಮಗಾರಿಗಳಲ್ಲಿ ಶೇಕಡಾ 4ರಷ್ಟು ಗುತ್ತಿಗೆ ಮೀಸಲಾತಿಯನ್ನು ಮುಸ್ಲಿಮರಿಗೆ ನೀಡುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ (ತಿದ್ದುಪಡಿ) ವಿಧೇಯಕ, 2025ರ ಮೇಲೆ ಈ ಸದನದಲ್ಲಿ ಚರ್ಚೆ ನಡೆಯುತ್ತಿದೆ.

**ಸಭಾಪತಿಯವರು:-** ಕುಳಿತುಕೊಂಡು ಯಾವ ಮಾನ್ಯ ಸದಸ್ಯರುಗಳು ಮಾತನಾಡಬಾರದು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಸಂವಿಧಾನದ ಕೆಲ ವಿಚಾರಗಳ ಮೇಲೆ ಇಲ್ಲಿ ಚರ್ಚೆ ನಡೆಯುತ್ತಿದೆ. ಇದರ ಜೊತೆಗೆ ಸ್ವಲ್ಪ ಮಟ್ಟಿಗೆ ಇತಿಹಾಸದ ಬಗ್ಗೆಯೂ ಚರ್ಚೆ ನಡೆಯುತ್ತಿದೆ. "ಹಿಂದು ಕೋಡ್ ಬಿಲ್"ಗೆ ಆಗಿನ ಪಾರ್ಲಿಮೆಂಟ್‌ನಲ್ಲಿ ಒಪ್ಪಿಗೆ ಸಿಗಲಿಲ್ಲ. "ಹಿಂದು ಕೋಡ್ ಬಿಲ್"ನಲ್ಲಿ ಮಹಿಳೆಯವರಿಗೆ ಸಮಾನವಾದ ಅವಕಾಶಗಳನ್ನು ನೀಡುವುದರ ಬಗ್ಗೆ ಮತ್ತು ಮನುಸ್ಮೃತಿಯನ್ನು ಯಾವುದೇ ಕಾರಣಕ್ಕೂ ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಅಂಶಗಳ ಹಿನ್ನೆಲೆಯಲ್ಲಿ ಪಾರ್ಲಿಮೆಂಟ್‌ನಲ್ಲಿ ಆ ವಿಧೇಯಕಕ್ಕೆ ಅನುಮತಿ ದೊರಯದೇ ಇದ್ದ ಕಾರಣಕ್ಕಾಗಿ ಡಾ॥ ಬಾಬಾ ಸಾಹೇಬ್ ಭೀಮರಾವ್ ಅಂಬೇಡ್ಕರ್‌ರವರು ಪಂಡಿತ್ ಜವಹರಲಾಲ್ ನೆಹರು ಅವರ ಮಂತ್ರಿಮಂಡಲಕ್ಕೆ ರಾಜಿನಾಮೆಯನ್ನು ನೀಡುತ್ತಾರೆ. ಅದೇ ಸಂದರ್ಭದಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್‌ರವರು ಬರೆದಂತಹ ಸಂವಿಧಾನವನ್ನು ರಾಮ್‌ಲೀಲಾ ಮೈದಾನದಲ್ಲಿ ಯಾರು ಸುಟ್ಟಿದ್ದು ಎನ್ನುವುದು ಇತಿಹಾಸವಾಗಿದೆ. ನಮ್ಮ ದೇಶದ ಸಂವಿಧಾನ ಯಾವುದೇ ಧರ್ಮಕ್ಕೆ ಸೇರಿರುವುದಲ್ಲ.

ಡಾ॥ ಬಾಬಾ ಸಾಹೇಬ್ ಭೀಮರಾವ್ ಅಂಬೇಡ್ಕರ್‌ರವರ ನೇತೃತ್ವದಲ್ಲಿ ಸುಮಾರು ಎರಡು ವರ್ಷ ಹನ್ನೊಂದು ತಿಂಗಳು ಎಂಟು ದಿನಗಳ ಕಾಲ ಸುದೀರ್ಘವಾಗಿ ಚರ್ಚೆಗಳನ್ನು ನಡೆಸಿ ಈ ಸಂವಿಧಾನವನ್ನು ರಚನೆ ಮಾಡಲಾಗಿದೆ. ಸಂವಿಧಾನದ ಪೀಠಿಕೆ ರಚನೆಯಾಗುವ ಸಂದರ್ಭದಲ್ಲಿ ನಮ್ಮ ಕರ್ನಾಟಕ ರಾಜ್ಯದವರಾದ ಮಾನ್ಯ ಕಾಮತ್‌ರವರು, "Constituent Assembly ಸದಸ್ಯರಾಗಿರುತ್ತಾರೆ. ಅವರು *"We the People of India"* ಅಂದರೆ "ಭಾರತದ ಜನಗಳಾದ ನಾವು" ಎಂದು ಏತಕ್ಕೋಸ್ಕರ ಇರಬೇಕು? "ದೇವರ ಹೆಸರಿನಲ್ಲಿ ನಾವು" ಎಂದು solemnly accept ಎಂದು ಮಾಡೋಣ" ಎನ್ನುವ ಮಾತನ್ನು ಹೇಳಿದಾಗ, ಆಚಾರ್ಯ ಕೃಪಲಾನಿಯವರು, "ಈ ದೇಶದಲ್ಲಿ ಆಸ್ತಿಕರಿದ್ದಾರೆ, ನಾಸ್ತಿಕರೂ ಇದ್ದಾರೆ ಹಾಗೂ ವಿಚಾರವಂತರಿದ್ದಾರೆ. ಆದ್ದರಿಂದ ಒಂದು ದೇವರಿಗೆ ಮಾತ್ರ ಸೀಮಿತಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ" ಎನ್ನುವ ಮಾತನ್ನು ಹೇಳುತ್ತಾರೆ. ಈ ಬಗ್ಗೆ ಸುದೀರ್ಘವಾಗಿ ಚರ್ಚೆಗಳು ನಡೆದು ಡಾ॥

ಬಿ.ಆರ್.ಅಂಬೇಡ್ಕರ್‌ರವರ ಪೀಠಿಕೆಯನ್ನು ಒಪ್ಪಿಕೊಂಡು, *'We the People of India"* ಎಂದು ಪ್ರತಿಯೊಬ್ಬರಿಗೂ ಸಹ ಈ ಸಂವಿಧಾನ ಅನ್ವಯಿಸುತ್ತದೆಂದು ಸಂವಿಧಾನದ ಪೀಠಿಕೆಯಲ್ಲಿಯೇ ಸಾಬೀತು ಮಾಡುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರಿ ಕಾಮಗಾರಿಗಳಲ್ಲಿ ಶೇಕಡಾ 4ರಷ್ಟು ಗುತ್ತಿಗೆ ಮೀಸಲಾತಿಯನ್ನು ಮುಸ್ಲಿಮರಿಗೆ ನೀಡುವ ವಿಚಾರ ಅಸಂವಿಧಾನಿಕವಾಗಿದೆಯೆಂದು ಸಂವಿಧಾನದಲ್ಲಿರುವ ಕೆಲವೊಂದು ಅರ್ಟಿಕಲ್‌ಗಳನ್ನು ಮಾನ್ಯ ಸದಸ್ಯರಾಗಿರುವ ಶ್ರೀ ಸಿ.ಟಿ.ರವಿಯವರು ಉಲ್ಲೇಖ ಮಾಡಿದ್ದಾರೆ. Fundamental Rights ಅಂದರೆ ಮೂಲಭೂತ ಹಕ್ಕುಗಳಲ್ಲಿ; Right to Equality–*"The State shall not deny to any person equality before the law or the equal protection of the laws within the territory of India".* ಕನ್ನಡದಲ್ಲಿ ಹೇಳಬೇಕಾದರೆ, ಕಾನೂನಿನ ಮುಂದೆ ಸಮಾನತೆ; "ಭಾರತದ ರಾಜ್ಯ ಕ್ಷೇತ್ರದಲ್ಲಿ ಯಾರೇ ವ್ಯಕ್ತಿಗೆ ಕಾನೂನಿನ ಮುಂದೆ ಸಮಾನತೆಯನ್ನು ಅಥವಾ ಕಾನೂನುಗಳಿಂದ ಸಮಾನ ಸಂರಕ್ಷಣೆಯನ್ನು ರಾಜ್ಯ ನಿರಾಕರಿಸತಕ್ಕದ್ದಲ್ಲ; ಎಂದು ತಿಳಿಸಲಾಗಿದೆ." ಅರ್ಟಿಕಲ್ 15ರಲ್ಲಿ "Prohibition of discrimination on grounds of religioin, race, caste, sex or place of birth" ಎಂದು ಹೇಳಿದೆ. ಇದರ ಜೊತೆಗೆ ಅರ್ಟಿಕಲ್ 16ರಲ್ಲಿಯೂ ಇದನ್ನೇ ಹೇಳಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಭಾರತ ದೇಶ ಇಬ್ಭಾಗವಾಗುವಂತಹ ಸಂದರ್ಭ ಬಂತು. ಆಗ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು 'Pakistan or Partition of India' ಎನ್ನುವ ಪುಸ್ತಕವನ್ನು ಬರೆದರು. ಅದರಲ್ಲಿ "ಭಾರತ ದೇಶ ಇಬ್ಭಾಗವಾಗಲು ಜಿನ್ನಾ ಮತ್ತು ಸಾವರ್ಕರ್‌ರವರು ಪರಸ್ಪರ ವಿರುದ್ಧವಾಗಿರುವ ಸಿದ್ಧಾಂತವನ್ನು ಹೊಂದಿದ್ದರೂ ಭಾರತ ದೇಶ ಇಬ್ಭಾಗವಾಗಲು ಒಂದೇ ನಿಲುವನ್ನು ಹೊಂದಿದ್ದಾರೆ" ಎಂದು ಹೇಳಿದ್ದಾರೆ. ವಿಷಯ ಹೀಗಿರುವಾಗ ಭಾರತೀಯ ಜನತಾ ಪಕ್ಷದವರು, ನಮ್ಮಿಂದ ಒಂದು ದೇಶ ಇಬ್ಭಾಗವಾದ ದಿನವನ್ನು ಅಂದರೆ, ಆಗಸ್ಟ್ 14ನೇ ತಾರೀಖನ್ನು ದೇಶದ ಕರಾಳ ದಿನವೆಂದು ಯಾವ ಪುರುಷಾರ್ಥಕ್ಕಾಗಿ ಆಚರಣೆ ಮಾಡುತ್ತಾರೆನ್ನುವುದು ನನಗೆ ಗೊತ್ತಾಗುತ್ತಿಲ್ಲ. ಇದರ ಜೊತೆಗೆ ಸಂವಿಧಾನದ ಆಶಯಗಳು ಎಂದು ಹೇಳುವಾಗ, ಯಾರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಐತಿಹಾಸಿಕವಾಗಿ ಯಾವುದೇ ಅವಕಾಶಗಳು ಇಲ್ಲದೇ, ಮುಖ್ಯವಾಹಿನಿಯಿಂದ ಹೊರಗುಳಿದಿದ್ದವರನ್ನು ಮುಖ್ಯವಾಹಿನಿಗೆ ತರಬೇಕು ಎನ್ನುವ ಮೂಲ ಉದ್ದೇಶದಿಂದ ಅರ್ಟಿಕಲ್ 14, 15 ಮತ್ತು 16 ಅನ್ನು ಸಂವಿಧಾನದಲ್ಲಿ ತರಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಅಲ್ಪ ಸಂಖ್ಯಾತರಿಗೆ ಅನುಚ್ಛೇದ 20 ಮತ್ತು 30ಅನ್ನು ತರಲಾಗಿದೆ. ಅಲ್ಪಸಂಖ್ಯಾತರು ಅವರದೇ ಆಗಿರುವ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡಬಹುದು ಎನ್ನುವುದು ಸಂವಿಧಾನದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಹಿಂದು ಧರ್ಮ, ಇಸ್ಲಾಂ ಧರ್ಮ ಅಥವಾ ಕ್ರೈಸ್ತ ಧರ್ಮವೆಂದು ಯಾವುದೇ ಧರ್ಮದ ಉಲ್ಲೇಖವಿಲ್ಲ. ಎಲ್ಲ ಧರ್ಮಗಳಿಗೂ ಪವಿತ್ರವಾಗಿರುವ ಗ್ರಂಥ ನಮ್ಮ ಸಂವಿಧಾನವೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಆರ್ಟಿಕಲ್ 15(4) ಮತ್ತು 16(4); 'The Constitution empower the providing reservation to socially, educationally backward class.' "ಮುಸ್ಲಿಂ" ಎನ್ನುವುದು

ಒಂದು ಸಮುದಾಯವಾಗಿದೆಯೇ ಹೊರತು ಧರ್ಮವಲ್ಲ. ಮುಸ್ಲಿಂ ಸಮುದಾಯದವರು "ಇಸ್ಲಾಂ" ಧರ್ಮವನ್ನು ಅನುಸರಿಸುತ್ತಾರೆ. ನಾವು ಇಸ್ಲಾಂ ಧರ್ಮಕ್ಕೆ ಮೀಸಲಾತಿಯನ್ನು ಕೊಡುತ್ತಿಲ್ಲ; ಮುಸ್ಲಿಂ ಸಮುದಾಯಕ್ಕೆ ಮೀಸಲಾತಿಯನ್ನು ಕೊಡುತ್ತಿದ್ದೇವೆ. ಅದೇ ರೀತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರು ಸಾವಿರಾರು ವರ್ಷಗಳಿಂದ ಅವಕಾಶ ವಂಚಿತರಾಗಿದ್ದರು. ಯಾರೋ ಮಾನ್ಯ ಸದಸ್ಯರೊಬ್ಬರು ಮಾತನಾಡುವಂತಹ ಸಂದರ್ಭದಲ್ಲಿ; "1993ನೇ ಇಸವಿಯವರೆವಿಗೂ ರಾಷ್ಟ್ರಮಟ್ಟದಲ್ಲಿ ಮೀಸಲಾತಿ ಇರಲಿಲ್ಲ" ಎನ್ನುವ ಮಾತನ್ನು ಹೇಳಿದ್ದರು. ಮಾನ್ಯ ಹೆಚ್.ಕೆ.ಪಾಟೀಲ್‌ರವರು ಹೇಳಿದಂತೆ ನಮ್ಮ ರಾಜ್ಯ ಮಟ್ಟದಲ್ಲಿ ಮಾನ್ಯ ಡಿ.ದೇವರಾಜ ಅರಸುರವರ ನೇತೃತ್ವದಲ್ಲಿ 1972ನೇ ಇಸವಿಯಲ್ಲಿ ನ್ಯಾಯಮೂರ್ತಿ ಎಲ್.ಜಿ.ಹಾವನೂರು ಆಯೋಗವನ್ನು ರಚನೆ ಮಾಡಿ, ಆ ಮೂಲಕ ಹಿಂದುಳಿದ ವರ್ಗದವರು ಸಶಕ್ತರಾಗುವುದಕ್ಕೆ ಮೊಟ್ಟಮೊದಲ ಹೆಜ್ಜೆಯನ್ನಿಟ್ಟಿದ್ದರು. ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟಂತೆ ನ್ಯಾಯಮೂರ್ತಿ ಎಲ್.ಜಿ.ಹಾವನೂರು ಆಯೋಗ, ನ್ಯಾಯಮೂರ್ತಿ ಓ.ವೆಂಕಟಸ್ವಾಮಿ ಆಯೋಗ, ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿ ಆಯೋಗ ಮತ್ತು ನ್ಯಾಯಮೂರ್ತಿ ಪ್ರೊ:ರವಿವರ್ಮಕುಮಾರ್ ಆಯೋಗದ ವರದಿ ಈ ಎಲ್ಲ ಆಯೋಗಗಳ ವರದಿಯಲ್ಲಿಯೂ ಮುಸ್ಲಿಂ ಸಮುದಾಯದಲ್ಲಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರು ಇದ್ದಾರೆಂದು, ಅವರಿಗೆ ಮೀಸಲಾತಿ ಅವಕಾಶಗಳನ್ನು ಈ ರಾಜ್ಯದಲ್ಲಿ 1977ರಿಂದ ನೀಡುತ್ತಾ ಬಂದಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಗುಜರಾತ್ ರಾಜ್ಯವನ್ನು ತೆಗೆದುಕೊಂಡರೆ, 1997ರಲ್ಲಿ ಸುಮಾರು 101 ಹಿಂದುಳಿದ ಜಾತಿಗಳ ಪೈಕಿ 23 ಅಲ್ಪ ಸಂಖ್ಯಾತ ಗುಂಪಿಗೆ ಸೇರಿದವರು ಇದ್ದಾರೆ. ಗುಜರಾತ್ ಸರ್ಕಾರವೇ ಈ ನಿಟ್ಟಿನಲ್ಲಿ ಮೀಸಲಾತಿ ಕೊಟ್ಟಿರುವ ಉದಾಹರಣೆ ನಮ್ಮ ಮುಂದಿದೆ. ಯಾವುದೇ ರಾಜ್ಯವನ್ನು ತೆಗೆದುಕೊಂಡರೂ ಸಹ ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರಿಗೆ 1993ನೇ ಇಸವಿಯಲ್ಲಿ ಇಂದಿರಾ ಸಾಹ್ನಿ Vs ಭಾರತ ಒಕ್ಕೂಟದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಬಹಳ ಸ್ಪಷ್ಟವಾಗಿರುವಂತಹ ಆದೇಶವನ್ನು ನೀಡುತ್ತದೆ. ಅಲ್ಲಿಯವರೆವಿಗೂ ಬಹಳಷ್ಟು ರಾಜ್ಯಗಳಲ್ಲಿ ಹಿಂದುಳಿದ ವರ್ಗಗಳ ಆಯೋಗಗಳು ರಚನೆಯಾಗಿರಲಿಲ್ಲ. "ಎಲ್ಲ ರಾಜ್ಯಗಳಲ್ಲಿ ಕಡ್ಡಾಯವಾಗಿ ಹಿಂದುಳಿದ ವರ್ಗಗಳ ಆಯೋಗ ರಚನೆಯಾಗಬೇಕು; ಆ ಆಯೋಗಗಳು ವರದಿ ತಯಾರು ಮಾಡುವ ಸಂದರ್ಭದಲ್ಲಿ ಸಂಪೂರ್ಣವಾಗಿ ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರನ್ನು ಗಣನೆಗೆ ತೆಗೆದುಕೊಳ್ಳಬೇಕು ಎನ್ನುವ ಸೂಚನೆಯನ್ನು ಸುಪ್ರೀಂ ಕೋರ್ಟ್ ನೀಡಿತ್ತು.

**(ಈ ಹಂತದಲ್ಲಿ ಮಾನ್ಯ ದಿನೇಶ್ ಗುಂಡೂರಾವ್ ಮತ್ತು ಮಾನ್ಯ ಪ್ರಿಯಾಂಕ್ ಖರ್ಗೆಯವರು ಹಿಂದಿನ ಸಾಲಿನಲ್ಲಿ ಕುಳಿತು ಮಾತನಾಡುತ್ತಿದ್ದರು.)**

**ಸಭಾಪತಿಯವರು:–** ಸಚಿವರು ಇಬ್ಬರೂ ಮುಂದೆ ಬಂದು ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ದಕ್ಷಿಣ ಭಾಗಕ್ಕೆ ತನ್ನದೇ ಆಗಿರುವಂತಹ ಇತಿಹಾಸವಿದೆ. ಕರ್ನಾಟಕದಲ್ಲಿ ಜಗಜ್ಯೋತಿ ಬಸವಣ್ಣನವರು ಸಮಾನತೆಗೆ ಒತ್ತು ಕೊಟ್ಟರು. ಕೇರಳ

ರಾಜ್ಯದಲ್ಲಿ ನಾರಾಯಣಗುರುಗಳು ಒಂದೇ ಧರ್ಮ, ಒಂದೇ ಜಾತಿ, ಒಂದೇ ಮತವೆಂದು ಹೇಳಿ ಸಮಾನತೆಗೆ ಒತ್ತು ಕೊಟ್ಟರು. ತೆಲಂಗಾಣದಲ್ಲಿ ತೆಲಗಿನ ವಚನಕಾರ, ಸಮಾಜ ಚಿಂತಕ ವೇಮಣ್ಣ ಸಮಾನತೆಯ ಬಗ್ಗೆ ತಿಳಿಸಿದರು. ಮಹಾರಾಷ್ಟ್ರದಲ್ಲಿ ಸಮಾಜ ಸುಧಾರಕ ಶ್ರೀ ಜ್ಯೋತಿರಾವ್ ಫುಲೆ, ಶಿಕ್ಷಕಿ ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಶ್ರೀಮತಿ ಸಾವಿತ್ರಿಬಾಯಿ ಫುಲೆ, ಸಮಾಜ ಸುಧಾರಕರು ಹಾಗೂ ಮೊದಲ ಮುಸ್ಲಿಂ ಶಿಕ್ಷಿತ ಮಹಿಳೆ ಶ್ರೀಮತಿ ಫಾತಿಮಾ ಶೇಕ್, ಡಾ॥ಬಿ.ಆರ್.ಅಂಬೇಡ್ಕರ್‌ರವರು ಮತ್ತು ಸಾಹು ಮಹಾರಾಜ್‌ರವರು ಸಾವಿರಾರು ವರ್ಷಗಳಿಂದ ತುಳಿತಕ್ಕೆ ಒಳಪಟ್ಟವರ ಪರವಾಗಿ ಸಾಮಾಜಿಕ ನ್ಯಾಯದ ಬಗ್ಗೆ ಹೋರಾಟ ಮಾಡಿದವರು. ಆದ್ದರಿಂದ ಯಾವುದೇ ರೀತಿಯಲ್ಲಿಯೂ ನಮ್ಮ ಸರ್ಕಾರ ಸಂವಿಧಾನ ವಿರುದ್ಧವಾಗಿ ಮೀಸಲಾತಿಯನ್ನು ಮುಸ್ಲಿಂ ಸಮುದಾಯದವರಿಗೆ ಕೊಟ್ಟಿರುವಂತೆ ಎಲ್ಲಿಯೂ ಕಾಣುವುದಿಲ್ಲ. ಯಾರಾದರು ರಾಜಕೀಯ ಮಾಡುವುದಿದ್ದರೆ ಮಾಡಬಹುದು.

(ಮುಂದುವರಿದಿದೆ)

**(590) 21.03.2025 (7.20) ಪಿ.ಕೆ(ಹೆಚ್‌ವಿ)ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ನಮ್ಮ ದೇಶದ ಉತ್ತರ ಪೂರ್ವದಲ್ಲಿ ಸುಮಾರು 7-8 ರಾಜ್ಯಗಳಿವೆ. ಇವುಗಳ ಪೈಕಿ ಅಸ್ಸಾಂ ರಾಜ್ಯವನ್ನು ಹೊರತುಪಡಿಸಿದರೆ, ಬಾಕಿ ರಾಜ್ಯಗಳು ಸಣ್ಣಸಣ್ಣ ರಾಜ್ಯಗಳಾಗಿವೆ. ಸಿಕ್ಕಿಂ, ಮಿಜೋರಾಂ, ಮೇಘಾಲಯ, ನಾಗಾಲ್ಯಾಂಡ್ ಮತ್ತು ಮಣಿಪುರ ರಾಜ್ಯಗಳ ವಿಧಾನಸಭೆಯಲ್ಲಿ ಗರಿಷ್ಠ 60 ಸೀಟ್‌ಗಳಿವೆ. ಈ 60 ಸೀಟ್‌ಗಳಲ್ಲಿ ಸುಮಾರು 54 ರಿಂದ 56 ಸೀಟ್‌ಗಳನ್ನು ಆದಿವಾಸಿಗಳಿಗಾಗಿ ಮೀಸಲಿಟ್ಟಿದ್ದೇವೆ. ಅಲ್ಲಿನ ಜನರ ಅಭಿವೃದ್ಧಿ ಮೀಸಲಾತಿ ಇಲ್ಲದಿದ್ದರೆ ಆಗುವುದಿಲ್ಲ. ಆರ್ಥಿಕವಾಗಿ ಹಿಂದುಳಿದವರಿಗೆ ಶೇಕಡಾ 10ರಷ್ಟು ಮೀಸಲಾತಿಯನ್ನು ನೀಡಲಾಗಿದೆ. 140 ಕೋಟಿ ಜನರು ಸಹ ಈ ಭಾರತ ದೇಶದ ಪ್ರಜೆಗಳಾಗಿದ್ದಾರೆ. ಸಂವಿಧಾನದಲ್ಲಿರುವ ಆಶಯಗಳು ಈ 140 ಕೋಟಿ ಜನರಿಗೂ ಮುಟ್ಟಬೇಕಾಗಿದೆ.

**ಶ್ರೀ ಎನ್.ರವಿಕುಮಾರ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರ ಮಾಹಿತಿಗಾಗಿ ಹೇಳುವುದಾದರೆ, ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ನೀಡುತ್ತಿರುವ ಶೇಕಡಾ 10ರಷ್ಟು ಮೀಸಲಾತಿಯಲ್ಲಿ ಮುಸ್ಲಿಮರು ಸಹ ಬರುತ್ತಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಅವರು ಕೇಳಿರುವುದಕ್ಕೆ ನಾನು ಉತ್ತರವನ್ನು ಕೊಡುತ್ತಿದ್ದೇನೆ. ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ನೀಡಿರುವಂತಹ ಶೇಕಡಾ 10ರಷ್ಟು ಮೀಸಲಾತಿ ಮೇಲ್ಜಾತಿಯಲ್ಲಿ ಇರುವಂತಹ ಬಡವರಿಗೆ ನೀಡಲಾಗಿದೆ. ಕೆಳಜಾತಿಯಲ್ಲಿರುವ ಬಡವರಿಗೆ ಕೊಟ್ಟರೇ, ನಾವು ಸಹ ಅದನ್ನು ಒಪ್ಪಿಕೊಳ್ಳುತ್ತೇವೆ. ಆರ್ಥಿಕವಾಗಿ ಹಿಂದುಳಿದ ವರ್ಗಗಳಡಿಯಲ್ಲಿ ನೀಡುವ ಮೀಸಲಾತಿಯಲ್ಲಿ ಕೆಳ ಜಾತಿಯ ಬಡವರಿಗೆ ಅವಕಾಶವಿಲ್ಲ. "ಮೀಸಲಾತಿ" ಎನ್ನುವುದು ಬಡತನ ನಿರ್ಮೂಲನ ಕಾರ್ಯಕ್ರಮವಲ್ಲ ಎನ್ನುವ ಮಾತನ್ನು ನಾನು

ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದು ಎಂಪ್ಲಾಯಿಮೆಂಟ್ ಎಕ್ಸ್‌ಚೆಂಜ್ ಸಹ ಅಲ್ಲ. ನಮ್ಮ ದೇಶದಲ್ಲಿ ಎಲ್ಲರೂ ಸಮಾನರು ಎನ್ನುವ ಭಾವನೆ ಬರಲಿ ಎನ್ನುವ ಆಶಯವನ್ನು ಇಟ್ಟುಕೊಂಡು ರಾಷ್ಟ್ರಪಿತ ಮಹಾತ್ಮಗಾಂಧಿಜೀಯವರು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರನ್ನು ಸಂವಿಧಾನ ರಚನೆಯ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದರು. ಪಂಡಿತ್ ಜವಹರಲಾಲ್ ನೆಹರುರವರು ಕಟ್ಟಕಡೆಯ Resolutions of Constituent Assembly ಯಲ್ಲಿ resolutions ಎನ್ನುವುದನ್ನು ಹೇಳಿದ್ದಾರೆ. ಅದನ್ನು ಅವರು ಓದಿದರೆ ಗೊತ್ತಾಗುತ್ತದೆ. ಡಾ॥ ರಾಜೇಂದ್ರ ಪ್ರಸಾದ್‌ರವರ ಅಧ್ಯಕ್ಷತೆಯಲ್ಲಿ ಇದರ ಬಗ್ಗೆ Constituent Assembly ಯಲ್ಲಿ ಚರ್ಚೆ ಮಾಡಲಾಯಿತು. ಎಲ್ಲರಿಗೂ ಸಮಾನವಾದ ಅವಕಾಶ ಇರಬೇಕೆನ್ನುವುದು ಅದರ ಮೂಲ ಆಶಯವಾಗಿದೆ. ಅದರಲ್ಲಿ ಸುಮಾರು 395 ಆರ್ಟಿಕಲ್‌ಗಳಿವೆ. ಈಗ ಅದು 400 ದಾಟಿರಬಹುದು. ಸುಮಾರು 25 ಪಾರ್ಟ್‌ಗಳಿವೆ. ಆಗ 7 ಷೆಡ್ಯೂಲ್‌ಗಳಿದ್ದವು; ಈಗ ಅದರ ಸಂಖ್ಯೆ 12 ಆಗಿದೆ.

ರಾಷ್ಟ್ರಕವಿ ಕುವೆಂಪುರವರ "ಸರ್ವ ಜನಾಂಗದ ಶಾಂತಿಯ ತೋಟ" ಎನ್ನುವ ಕವನ ಶೀರ್ಷಿಕೆ ಎಲ್ಲರಿಗೂ ಅನ್ವಯವಾಗುತ್ತದೆ. ಯಾರೂ ಕೂಡ ಯಾರನ್ನು ತಪ್ಪು ದಾರಿಗೆಳೆಯಬಾರದು. ಸಂವಿಧಾನಿಕವಾಗಿ ಆರ್ಟಿಕಲ್ 14(4) ಮತ್ತು 16(4) ಅಡಿಯಲ್ಲಿ ಈ ಮೀಸಲಾತಿಯನ್ನು ನಮ್ಮ ಕಾಂಗ್ರೆಸ್ ಪಕ್ಷ ಕೊಟ್ಟಿದೆ ಎನ್ನುವುದನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಕೆ.ಎಸ್.ನವೀನ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಸಾರ್ವಜನಿಕ ಸಂಗ್ರಹಗಳಲ್ಲಿ ಪಾರದರ್ಶಕ (ತಿದ್ದುಪಡಿ) ವಿಧೇಯಕ, 2025ಅನ್ನು ನಾನು ತೀವ್ರವಾಗಿ ವಿರೋಧಿಸುತ್ತಿದ್ದೇನೆ. ಮಾನ್ಯ ಸಚಿವರು ಏತಕ್ಕೋಸ್ಕರ ಈ ವಿಧೇಯಕವನ್ನು ತರಲಾಗಿದೆ; ಹಿಂದೆ ಯಾವ-ಯಾವ ಆಯೋಗದವರು ಏನೇನು ಹೇಳಿದ್ದಾರೆ ಎನ್ನುವುದರ ಬಗ್ಗೆ ಬಹಳ ಗುರುತರವಾಗಿರುವ ವಿವರಣೆಯನ್ನು ನೀಡಿದ್ದಾರೆ. ಸರ್ಕಾರದಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳವರೆಗೆ ನಡೆಯುವಂತಹ ಕಾಮಗಾರಿಗಳಲ್ಲಿ ಶೇಕಡಾ 4ರಷ್ಟು ಮೀಸಲಾತಿಯನ್ನು ಮುಸ್ಲಿಮರಿಗೆ ನೀಡಬೇಕೆನ್ನುವ ತಿದ್ದುಪಡಿಯನ್ನು ಈ ಸರ್ಕಾರ ತರುವುದಕ್ಕೆ ಹೊರಟಿದೆ.

ಸನ್ಮಾನ್ಯ ಸಭಾಪತಿಯವರೇ, ಅವರದೇ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ಈ ಬಾರಿ ಮಂಡಿಸಿರುವಂತಹ ಆಯವ್ಯಯದ ಕಂಡಿಕೆ ಸಂಖ್ಯೆ:212 ರಿಂದ ಪ್ರಾರಂಭಗೊಂಡು ಕಂಡಿಕೆ ಸಂಖ್ಯೆ: 235ರವರೆಗೆ ಸುಮಾರು 23 ಪ್ಯಾರಾಗಳು ಅಲ್ಪಸಂಖ್ಯಾತರಿಗೇ ಮೀಸಲಿಟ್ಟಿರುವಂತಹ ಯೋಜನೆಗಳ ಬಗ್ಗೆ ಬಹಳ ವಿವರವಾಗಿರುವಂತಹ ಮಾಹಿತಿಯನ್ನು ಕೊಟ್ಟಿವೆ. ಅಲ್ಪಸಂಖ್ಯಾತರಲ್ಲಿ ಕೇವಲ ಮುಸಲ್ಮಾನರೇ ಬರುವುದಿಲ್ಲ, ಇತರರು ಬರುತ್ತಾರೆ ಎಂದು ಅವರೇ ಹೇಳಿದ್ದಾರೆ. ಈ 23 ಕಂಡಿಕೆಗಳಲ್ಲಿ ಬೇರೆ ಅಲ್ಪ ಸಂಖ್ಯಾತರಿಗೆ ಅಂದರೆ, ಜೈನರು, ಸಿಕ್ಕರು ಮತ್ತು ಭೌದ್ಧ ಧರ್ಮಿಯರಿಗೆ ಮೀಸಲಿಟ್ಟಿರುವುದು ಕೇವಲ 3 ಕಂಡಿಕೆಗಳು ಮಾತ್ರ. ಉಳಿದಂತೆ ಎಲ್ಲವೂ ಕೂಡ ಅಲ್ಪಸಂಖ್ಯಾತ ಮುಸಲ್ಮಾನರ ಕಲ್ಯಾಣಕ್ಕೋಸ್ಕರ ಅವರನ್ನು ಶೈಕ್ಷಣಿಕವಾಗಿ ಮುಂದೆ ತರುವುದಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ಈ ಆಯವ್ಯಯದಲ್ಲಿ ವೆಚ್ಚ ಮಾಡಲಾಗುತ್ತಿದೆ. ಇದಕ್ಕೆ ನಮ್ಮ ವಿರೋಧವಿಲ್ಲ. ಅವರಿಗೆ ಶಿಕ್ಷಣದ ಕೊರತೆ ಇದೆ. ಅವರನ್ನು ಸರ್ಕಾರ ಶಿಕ್ಷಿತರನ್ನಾಗಿ ಮಾಡುತ್ತಿದೆ. ಶಿಕ್ಷಣವನ್ನು ಕಲಿಸಿಕೊಟ್ಟರೇ ಮಾತ್ರ ಅವರು ಮುಂದೆ

ಗುತ್ತಿಗೆ ಕಾರ್ಯವನ್ನು ಮಾಡುವುದಕ್ಕೆ ಆಗುತ್ತದೆ. ಅವರಿಗೆ ಶಿಕ್ಷಣವೇ ಇಲ್ಲವೆಂದು ಇವರೇ ಹೇಳುತ್ತಿದ್ದಾರೆ. ಶಿಕ್ಷಣ ಇಲ್ಲದವರಿಗೆ, "ಎರಡು ಕೋಟಿ ರೂಪಾಯಿಗಳ ಗುತ್ತಿಗೆ ಕಾಮಗಾರಿಯನ್ನು ಕೊಡುತ್ತೇವೆ ಮಾಡಿ" ಎಂದು ಹೇಳಿದರೆ, ಅವರಲ್ಲಿ ಈ ರೀತಿ ಸಿವಿಲ್ ಕಾಮಗಾರಿ ಮಾಡುವ ಗುತ್ತಿಗೆದಾರರು ಎಷ್ಟು ಸಂಖ್ಯೆಯಲ್ಲಿದ್ದಾರೆ? ಎಷ್ಟು ಸಂಖ್ಯೆಯಲ್ಲಿ ಈ ರೀತಿ ಸರ್ಕಾರದ ಟೆಂಡರ್‌ಗಳನ್ನು ಪಡೆದು ಕಾಮಗಾರಿಗಳನ್ನು ಮಾಡುವಂತಹವರು ಇದ್ದಾರೆ? ಇವೆಲ್ಲವುಗಳನ್ನು ಸರ್ಕಾರ ಅವಲೋಕನ ಮಾಡಲಿಲ್ಲವೇ?

ಸನ್ಮಾನ್ಯ ಸಭಾಪತಿಯವರೇ, " ಸರ್ಕಾರಿ ಕಾಮಗಾರಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಗಳಿಗೆ ಮೀಸಲಾತಿ ಕೊಟ್ಟಿದ್ದೇವೆ" ಎಂದು ಈ ಸರ್ಕಾರದವರು ಕಳೆದ ಬಾರಿ ಬಹಳ ಹೆಮ್ಮೆಯಿಂದ ಹೇಳಿಕೊಂಡಿದ್ದರು. ಈ ರಾಜ್ಯದಲ್ಲಿ ಬಹು ದೊಡ್ಡ ಸಂಖ್ಯೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಇವರು ಏತಕ್ಕೋಸ್ಕರ ಹೆಚ್ಚುವರಿಯಾಗಿ ಮೀಸಲಾತಿಯನ್ನು ನೀಡಲಿಲ್ಲ? ಈ ಟೆಂಡರ್‌ಗಳಲ್ಲಿ ಭಾಗವಹಿಸುವುದಕ್ಕೆ ಅವರ ಜನಸಂಖ್ಯೆ ಎಷ್ಟಿದೆ? ನಿಜವಾಗಿಯೂ ಕಾಮಗಾರಿಗಳಲ್ಲಿನ ಮೀಸಲಾತಿ ಸಿಗಬೇಕಾದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದ ಯುವಕರಿಗೆ ಸಿಗಬೇಕಾಗಿದೆ. ಸರ್ಕಾರ ಈ ವರ್ಗದವರಿಗೆ ಮೀಸಲಾತಿಯನ್ನು ನೀಡದೇ, ಯಾರನ್ನು ಓಲೈಸಿ, ಯಾರ ಮತಗಳನ್ನು ಪಡೆದು ಇವರು ಅಧಿಕಾರಕ್ಕೆ ಬಂದಿದ್ದಾರೆ; ಅವರ ಋಣ ತೀರಿಸುವುದಕ್ಕಾಗಿ ಈ ವಿಧೇಯಕವನ್ನು ತಂದಿದೆ. ಕಾಮಗಾರಿಗಳ ಗುತ್ತಿಗೆಯಲ್ಲಿ ನೀಡಲಾಗಿರುವ ಮೀಸಲಾತಿಯಲ್ಲಿ ಮುಸಲ್ಮಾನರಿಗೆ ನೀಡಿರುವ ಮೀಸಲಾತಿ ಪ್ರಮಾಣಕ್ಕಿಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನೀಡಿರುವ ಗುತ್ತಿಗೆ ಮೀಸಲಾತಿ ಪ್ರಮಾಣವನ್ನು ಹೆಚ್ಚು ಮಾಡಿ ಎನ್ನುವುದು ನನ್ನ ಒತ್ತಾಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಶೇಕಡಾ 28 ರಿಂದ 30ರಷ್ಟು ಜನಸಂಖ್ಯೆ ಹೊಂದಿರುವ ವರ್ಗದವರಿಗೆ ಸರ್ಕಾರದ ಎರಡು ಕೋಟಿ ರೂಪಾಯಿಗಳ ಕಾಮಗಾರಿಯಲ್ಲಿ ಗುತ್ತಿಗೆ ಮೀಸಲಾತಿಯನ್ನು ನೀಡಲಾಗಿದೆ. ಅದೇ ರೀತಿ ಶೇಕಡಾ 14ರಷ್ಟು ಜನಸಂಖ್ಯೆ ಇರುವವರಿಗೂ ಸರ್ಕಾರದ ಎರಡು ಕೋಟಿ ರೂಪಾಯಿಗಳ ಕಾಮಗಾರಿಯಲ್ಲಿ ಗುತ್ತಿಗೆ ಮೀಸಲಾತಿಯನ್ನು ನೀಡಲಾಗಿದೆ.

**ಶ್ರೀ ಪ್ರಿಯಾಂಕ ಖರ್ಗೆ(ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:–** ಸನ್ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ. ನಾನು ಯೀಲ್ಡ್ ಆದರೆ, ಅವರು ಮಾತನಾಡಲಿ. ಈ ಸರ್ಕಾರ ಮುಸಲ್ಮಾನರ ಕಲ್ಯಾಣಕ್ಕಾಗಿ ಇಷ್ಟೆಲ್ಲ ಮಾಡುತ್ತಿದೆ. ಈ ಮುಸಲ್ಮಾನರ ಶೈಕ್ಷಣಿಕ ಸಂಸ್ಥೆಗಳಲ್ಲಿ ಅಥವಾ ಅವರು ಮಾಡುವಂತಹ ವ್ಯವಹಾರಗಳಲ್ಲಿ ಎಷ್ಟು ಬಹು ಸಂಖ್ಯಾತರನ್ನು ಅಥವಾ ಹಿಂದುಗಳನ್ನು ಕೆಲಸಕ್ಕೆ ಇಟ್ಟುಕೊಳ್ಳುತ್ತಾರೆ? ಅದೇ ಹಿಂದುಗಳು ನಡೆಸುವ ಸಂಸ್ಥೆಗಳಲ್ಲಿ ಎಷ್ಟು ಜನ ಮುಸಲ್ಮಾನರನ್ನು ಕೆಲಸಕ್ಕೆ ಇಟ್ಟುಕೊಂಡಿದ್ದಾರೆ ಎನ್ನುವುದರ ತುಲನೆಯನ್ನು ಮಾಡಬೇಕಾಗುತ್ತದೆ. ಹಿಂದುಗಳು ನಡೆಸುವ ಸಂಸ್ಥೆಗಳಲ್ಲಿ

ಬೇಡವೆಂದರೂ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತಾರೆ. ಮುಸಲ್ಮಾನರು ನಡೆಸುತ್ತಿರುವ ಸಂಸ್ಥೆಗಳಲ್ಲಿ ಎಷ್ಟು ಜನ ಬೇರೆ ಸಮಾಜದವರಿಗೆ ಅಂದರೆ. ಹಿಂದುಗಳಿಗೆ ಅಥವಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕೆಲಸವನ್ನು ಕೊಟ್ಟಿದ್ದಾರೆ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕೆಲಸ ಸಿಗಬೇಕೆಂದು ಈ ಸರ್ಕಾರ ಹೇಳುತ್ತಿರುತ್ತದೆ. ಮುಸಲ್ಮಾನರ ಸಂಸ್ಥೆಗಳಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ ಎನ್ನುವ ಮಾಹಿತಿ ಇವರ ಬಳಿ ಇದೆಯೇ?

ಸನ್ಮಾನ್ಯ ಸಭಾಪತಿಯವರೇ, ತುಷ್ಟೀಕರಣದ ಮತ್ತೊಂದು ಹಂತಕ್ಕೆ ಈ ಸರ್ಕಾರ ಹೋಗುತ್ತಿದೆ. ಮಾನ್ಯ ಹೆಚ್.ಕೆ.ಪಾಟೀಲ್‌ನವರು ಹಿರಿಯ ಸಚಿವರಾಗಿದ್ದಾರೆ. ಅವರಿಗೆ ಯಾಕೆ ಇಷ್ಟು ಭಯ? ಮುಸಲ್ಮಾನರು ಇವರಿಗೆ ಬಿಟ್ಟರೆ ಬೇರೆ ಯಾರಿಗೂ ಮತ ಹಾಕುವುದಿಲ್ಲ. ಅಷ್ಟು ಗೊತ್ತಿದ್ದರೂ ಸಹ ಈ ಸರ್ಕಾರ ಮತ್ತ್ಯಾಕೆ ಅವರನ್ನು ತುಷ್ಟೀಕರಣ ಮಾಡುವಂತಹ ಪ್ರಯತ್ನ ಮಾಡುತ್ತಿದೆ?

**ಶ್ರೀ ಸಿ.ಟಿ.ರವಿ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮುಸಲ್ಮಾನರ ಸಂಖ್ಯೆ ಹೆಚ್ಚಾಗುವವರೆಗೂ ಇವರಿಗೆ ಮತ ಹಾಕುತ್ತಾರೆ; ಸಂಖ್ಯೆ ಹೆಚ್ಚಾದ ಮೇಲೆ ಮುಸ್ಲಿಂ ಲೀಗ್‌ಗೆ ಮತ ಹಾಕುತ್ತಾರೆ.

**ಸಭಾಪತಿಯವರು:–** ಮಾನ್ಯ ಸಿ.ಟಿ.ರವಿಯವರೇ, ಮಧ್ಯೆ ತಾವು ಏತಕ್ಕೋಸ್ಕರ ಮಾತನಾಡುತ್ತಿದ್ದೀರಿ? ಮಾನ್ಯ ಕೆ.ಎಸ್.ನವೀನ್‌ರವರೇ, ಶ್ರೀ ಸಿ.ಟಿ.ರವಿ ಮಾತನಾಡುವಾಗ ತಾವು ಸುಮ್ಮನಿರುತ್ತೀರಿ, ಆ ಭಾಗದವರು ಮಾತನಾಡುವುದಕ್ಕೆ ಹೋರಟರೇ ಯೀಲ್ಡ್ ಆಗುವುದಿಲ್ಲ ಎಂದು ಹೇಳುತ್ತೀರಿ. ಎಲ್ಲರ ಜೊತೆಗೆ ಒಂದೇ ರೀತಿಯಲ್ಲಿ ಇರಬೇಕಾಗುತ್ತದೆ.

**ಶ್ರೀ ಕೆ.ಎಸ್.ನವೀನ್:–** ಸನ್ಮಾನ್ಯ ಸಭಾಪತಿಯವರೇ, ಒಂದೇ ರೀತಿ ಇರುತ್ತೇನೆ.

**ಶ್ರೀ ಪ್ರಿಯಾಂಕ ಖರ್ಗೆ:–** ಮುಸ್ಲಿಂ ಲೀಗ್ ಜೊತೆಗೆ ಯಾರ್ಯಾರು ಸರ್ಕಾರ ನಡೆಸಿದ್ದರು ಎನ್ನುವುದರ ಬಗ್ಗೆ ಅವರು ಇತಿಹಾಸ ತೆಗೆದು ನೋಡಲಿ; ಆಗ ಗೊತ್ತಾಗುತ್ತದೆ. ಅದನ್ನು ಇವರು ಮರೆತು ಬಿಡುತ್ತಾರೆ. ಹಿಂದು ಮಹಾ ಸಭಾ ಜೊತೆಗೆ ಮುಸ್ಲಿಂ ಲೀಗ್ ಸರ್ಕಾರ ನಡೆಸಿದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ನವೀನ್:–** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕಕ್ಕೆ ಅಂಗೀಕಾರವನ್ನು ಪಡೆದುಕೊಳ್ಳುವುದಕ್ಕೂ ಮೊದಲು ಮಾನ್ಯ ಸಚಿವರು ಮತ್ತೊಮ್ಮೆ ಯೋಚನೆ ಮಾಡಬೇಕಾಗುತ್ತದೆ. ಇವತ್ತು ಸರ್ಕಾರ ಯಾರ್ಯಾರಿಗೆ ಸರ್ಕಾರಿ ಕಾಮಗಾರಿಯ ಗುತ್ತಿಗೆಯನ್ನು ನೀಡಿದೆ ಅವರಿಗೆ ವರ್ಷಗಟ್ಟಲೇ ಬಿಲ್ ನೀಡದಿದ್ದರೂ ತಡೆದುಕೊಳ್ಳುತ್ತಾರೆ. ಸರ್ಕಾರ ಇವರಿಗೆ ಕೆಲಸ ಕೊಟ್ಟು ಬಿಲ್ ಕೊಡದಿದ್ದರೇ, ಮತ್ತಷ್ಟು ಉದಯಗಿರಿ ಮತ್ತು ಹುಬ್ಬಳ್ಳಿ ಪೋಲೀಸ್ ಠಾಣೆಗೆ ಬಂದಂತಹ ಪರಿಸ್ಥಿತಿ ಸರ್ಕಾರಿ ಕಟ್ಟಡಗಳಿಗೆ ಬರುತ್ತದೆ. ಅದನ್ನು ತಡೆದುಕೊಳ್ಳುವುದಕ್ಕೆ ಸರ್ಕಾರ ತಯಾರಿದೆಯೇ ಎನ್ನುವುದರ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಕೊನೆಗೆ ಸರ್ಕಾರದ್ದೇ ಆಸ್ತಿ–ಪಾಸ್ತಿ ನಷ್ಟವಾಗುತ್ತದೆ. ಹಾಗಾಗಿ ನಾನು ಒತ್ತಾಯ ಮಾಡುತ್ತೇನೆ. ಅವರಿಗೆ ಶಿಕ್ಷಣ ಕೊಡಿ.

(ಮುಂದುವರಿದಿದೆ)

(591) 21-3-2025 7.30 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಇದೇನು? ಅವರು ಗಲಭೆಕೋರರು ಎಂದು ಮಾತನಾಡುತ್ತಾರಲ್ಲಾ, ಅವರಿಗೆ ನಾಚಿಕೆಯಾಗಬೇಕು. ಏನು ಮಾತನಾಡುತ್ತಾರೆ ಅವರು.

**Smt. BALKHEES BANU:-** He is provoking the community.

**ಶ್ರೀ ಕೆ.ಎಸ್.ನವೀನ್:-** ಶಿಕ್ಷಣ ಕೊಡಿ, ಅದಕ್ಕೆ ನಮ್ಮ ವಿರೋಧವಿಲ್ಲ, ಅವರನ್ನು ಮುಖ್ಯವಾಹಿನಿಗೆ ತನ್ನಿ. **(ಗೊಂದಲ)** ಅವರೇನು ಮೀಸಲಾತಿಯನ್ನು ಕೊಡುವುದಕ್ಕೆ ಹೊರಟಿದ್ದಾರೆ, ಅದನ್ನು ನಾನು ವಿರೋಧ ಮಾಡುತ್ತೇನೆ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, "ಮುಸಲ್ಮಾನರು ಗಲಭೆಕೋರರು" ಎಂದು ಅವರ ಭಾಷಣದಲ್ಲಿ ಹೇಳಿದ್ದಾರೆ, ಅದನ್ನು ಕಡತದಿಂದ ತೆಗೆಯಿಸಿ.

**ಸಭಾಪತಿಯವರು:-** ಅದನ್ನು ಕಡತದಿಂದ ತೆಗೆಯಿರಿ. ಮಾನ್ಯ ನಾಗರಾಜುರವರೇ, ತಾವು ಬೇಗ ಮಾತನಾಡಿ ಮುಗಿಸಬೇಕು.

**ಶ್ರೀ ಕೆ.ಎಸ್.ನವೀನ್:-** ಅವರೇಕೆ ಮಾತನಾಡಬೇಕು

**ಸಭಾಪತಿಯವರು:-** ಅವರೇಕೆ ಮಾತನಾಡಬೇಕೆಂದರೆ, ಅವರು ಸಹ ಈ ಸದನದ ಸದಸ್ಯರು. ಅವರಿಗೂ ಸಹ ಮಾತನಾಡಲು ಹಕ್ಕಿದೆ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದೇ ಬೇಗ ಬೇಗ ಮಾತನಾಡುತ್ತೇನೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2025 ಅನ್ನು ತಂದಿರುವುದನ್ನು ನಾನು ತುಂಬು ಹೃದಯದಿಂದ ಸ್ವಾಗತ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜುರವರೇ, ಸ್ವಾಗತ ಮಾಡಿದ ಮೇಲೆ ಮುಗಿಯಿತು, ಅದರ ಬಗ್ಗೆ ಮಾತನಾಡಬಾರದು.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸ್ವಾಗತ ಮಾಡುವುದಕ್ಕೆ ಕಾರಣವೇನು ಎಂಬುದನ್ನು ಹೇಳಬೇಕಾಗಿದೆ. ತಾವು ನನ್ನ ಸಮಯವನ್ನು ತೆಗೆದುಕೊಳ್ಳಬೇಡಿ. ನಾನು ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ. ಸ್ವಾಗತ ಮಾಡುವುದಕ್ಕೆ ಕಾರಣಗಳಿವೆ ಎಂಬ ಮಾತನ್ನು ಹೇಳುತ್ತಿದ್ದೇನೆ. ನಾವು ಹುಟ್ಟಿರುವಂತಹ ಭೂಮಿ ಪವಿತ್ರವಾದಂತಹ ಭೂಮಿ ಕರ್ನಾಟಕ. ಶ್ರೀ ಕುವೆಂಪುರವರು ಹೇಳಿದ ಹಾಗೆ, 'ಸರ್ವ ಜನಾಂಗದ ಶಾಂತಿಯ ತೋಟ' ಎಂಬುದನ್ನು ಮರೆಯಬಾರದು ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಬಸವಣ್ಣನವರು ಹುಟ್ಟಿರುವಂತಹ ಈ ನಾಡು. ಈ ನಾಡಿನಲ್ಲಿ ಇರತಕ್ಕಂಥವರಿಗೆ ಸರ್ವರಿಗೂ ಸಮಪಾಲು ಕೊಡುವಂತಹ

ಸಮಾನತೆಯನ್ನು ಪ್ರತಿಪಾದನೆ ಮಾಡುವಂತಹ, ದೇಶಕ್ಕೆ ಮಾದರಿಯಾಗಿರುವಂತಹ ಕನ್ನಡ ನಾಡಿನಲ್ಲಿ ಈ ರೀತಿ ಅಸೂಯೆ ಪಡತಕ್ಕಂಥದ್ದನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಅದೇ ರೀತಿ ಮೊನ್ನೆ 7ನೇ ತಾರೀಖು ಮಾನ್ಯ ಸಿದ್ದರಾಮಯ್ಯನವರು ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ಕೊಟ್ಟಿರುವಂಥ ಬಜೆಟ್‌ನಲ್ಲಿ ಸರ್ವರಿಗೂ ಸಮಾನತೆಯನ್ನು ಕೊಡುವಂತಹ ರೀತಿಯಲ್ಲಿ ಅಲ್ಪಸಂಖ್ಯಾತರು, ಬಹುಸಂಖ್ಯಾತರು, ದೀನದಲಿತರು, ಮಹಿಳೆಯರು, ಯುವಕರು, ಮಕ್ಕಳು ಇರಬಹುದು, ಎಲ್ಲರಿಗೂ ಕೂಡ ಕಾರ್ಯಕ್ರಮಗಳನ್ನು ಕೊಟ್ಟಿರುವುದನ್ನು ನಾವು ಸ್ವಾಗತ ಮಾಡಿದ್ದೇವೆ. Coming back to the Bill, ಕರ್ನಾಟಕ ರಾಜ್ಯದಲ್ಲಿ ಮೀಸಲಾತಿ ವಿಚಾರಗಳು ಬಂದಾಗ ದೊಡ್ಡ ಇತಿಹಾಸ ಇರತಕ್ಕಂಥ ಜಾಗದಲ್ಲಿ ಶ್ರೀ ಎಲ್.ಜಿ. ಹಾವನೂರುರವರ ಕಮಿಷನ್ ಇರಬಹುದು, ಶ್ರೀ ವೆಂಕಟಸ್ವಾಮಿ ಕಮಿಷನ್ ಇರಬಹುದು, Prof. Ravi Verma Kumar Commission ಇರಬಹುದು ಅಥವಾ ಕೇಂದ್ರದಲ್ಲಿ ಶ್ರೀ ಮನಮೋಹನ ಸಿಂಗ್‌ರವರು ಪ್ರಧಾನ ಮಂತ್ರಿಗಳಾಗಿದ್ದಾಗ Sachar Committee ಕೊಟ್ಟಿರುವಂತಹ ವರದಿಗಳಿರಬಹುದು. ಎಲ್ಲವನ್ನು ನೋಡಿದಾಗ ಅಲ್ಪಸಂಖ್ಯಾತರು ಎಂದು ಹೇಳತಕ್ಕಂಥ ಮುಸಲ್ಮಾನರು ಕೂಡ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಬಹಳ ಹಿಂದುಳಿದಿರುವಂತಹ ಸಮುದಾಯ ಎಂದು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇದಕ್ಕೆ ಬೇಕಾದ ದಾಖಲೆಗಳನ್ನು ನಾನು ಕೊಡುವುದಕ್ಕೆ ತಯಾರಿದ್ದೇನೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ಕಾಮಗಾರಿಯಲ್ಲಿ ಕೇವಲ ಮುಸಲ್ಮಾನರಿಗೆ ಮಾತ್ರ ಮೀಸಲಾತಿ ಕೊಟ್ಟಿರುವುದಲ್ಲ. ಎಸ್.ಸಿ. ಗಳಿಗೆ ಶೇಕಡ 17.5 ರಷ್ಟು ಮೀಸಲಾತಿಯನ್ನು ಕಾಮಗಾರಿಗಳಲ್ಲಿ ಕೊಟ್ಟಿರುವುದನ್ನು ನಾವು ನೋಡಿದ್ದೇವೆ. ಎಸ್.ಟಿ.ಗಳಿಗೆ ಶೇಕಡ 6.95 ರಷ್ಟು ಮೀಸಲಾತಿಯನ್ನು ಕೊಟ್ಟಿದ್ದೇವೆ. ಕ್ಯಾಟಗರಿ-1ರಲ್ಲಿ ಅಂದರೆ ನಾನು ಬರುವಂತಹ ಸಮುದಾಯಕ್ಕೆ ಶೇಕಡ 4 ರಷ್ಟು ಕೊಟ್ಟಿದ್ದೇವೆ. 2ಎ ವರ್ಗದಲ್ಲಿ ಬರುವಂತಹ ಸಮುದಾಯ ಕುರುಬ ಮತ್ತು ಇನ್ನಿತರ ಹಿಂದುಳಿದ ಸಮುದಾಯಗಳಿಗೆ ಶೇಕಡ 17 ರಷ್ಟು ಕೊಟ್ಟಿದ್ದೇವೆ. ಈ ಎಲ್ಲಾ ನಾಗರಿಕರಿಗೆ ಕೊಟ್ಟಿರಬೇಕಾದರೆ 2ಬಿ ಯಲ್ಲಿರುವಂತಹ ಮುಸಲ್ಮಾನರಿಗೆ ಶೇಕಡ 4 ರಷ್ಟು ಮೀಸಲಾತಿ ಕೊಡುವುದನ್ನು ಪ್ರಶ್ನಿಸುವುದರಿಂದ ಇವರು ಏನನ್ನು ಅಭಿವೃದ್ಧಿ ಮಾಡುವುದಕ್ಕೆ ಹೊರಟಿದ್ದಾರೆ ಎನ್ನುವ ಮಾತನ್ನು ನಾನು ಕೇಳುತ್ತಿದ್ದೇನೆ. ಈ ಕಾಮಗಾರಿಯಲ್ಲಿ ಮೀಸಲಾತಿ ಕೊಟ್ಟಿರುವಂತಹ ಸಂದರ್ಭದಲ್ಲಿ ಶೇಕಡ 52.9 ರಷ್ಟು ಇತರ ಸಮುದಾಯಗಳಿಗೂ ಮೀಸಲಾತಿಗಳನ್ನು ಕೊಟ್ಟಿರುವುದನ್ನು ನಾವು ಸ್ವಾಗತ ಮಾಡಬೇಕಾಗುತ್ತದೆ. ಕಾನೂನು ಚೌಕಟ್ಟಿನಲ್ಲಿ ಶೇಕಡ 50 ರಷ್ಟು ಮೀರಿ ಹೋಗಬಾರದು ಎಂದು ಹೇಳಿದಾಗ ಕರ್ನಾಟಕ ರಾಜ್ಯದಲ್ಲಿ ಶ್ರೀ ಸಿದ್ದರಾಮಯ್ಯನವರು ಎಲ್ಲವನ್ನು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿರುವುದನ್ನು ನಾವು ಸ್ವಾಗತ ಮಾಡಬೇಕಾಗುತ್ತದೆ. ಹಾಗಾಗಿ ಮುಸಲ್ಮಾನರಿಗೆ ಇವತ್ತು ಗುತ್ತಿಗೆಯಲ್ಲಿ ಎರಡು ಕೋಟಿ ರೂಪಾಯಿಗಳನ್ನು ಕೊಡುತ್ತಿರುವುದನ್ನು ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು, ಅವರು educated ಅಲ್ಲ, ದಡ್ಡರಿದ್ದಾರೆ, ಅವರಿಗೆ ಕಾಮಗಾರಿಯನ್ನು ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿರುವುದನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನಾನು ಒಂದು ಮುಖ್ಯವಾದ ವಿಚಾರವನ್ನು ಹೇಳುತ್ತೇನೆ, ಈ ದೇಶದಲ್ಲಿ ಶೇಕಡ 10 ರಷ್ಟು ಕೆಲವು ಜನರು ಶೇಕಡ 58 ರಷ್ಟು

ಆಸ್ತಿಯನ್ನು ಮಾಡಿಟ್ಟುಕೊಂಡಿದ್ದಾರಲ್ಲಾ, ಅದರ ಬಗ್ಗೆ ನಾನು ಪ್ರಸ್ತಾಪ ಮಾಡಬೇಕಾಗುತ್ತದೆ. ಈ ದೇಶದ wealth should be divided equally to everybody ಎನ್ನುವ ಮಾತನ್ನು ಹೇಳುತ್ತೇನೆ. ಸಮ ಸಮಾಜವನ್ನು ಕಟ್ಟಬೇಕಾಗುತ್ತದೆ. ಎಲ್ಲರಿಗೂ ಅವಕಾಶ ಕೊಡಬೇಕಾಗುತ್ತದೆ. ಯಾವ ಕಾರಣಕ್ಕೆ ನಾವು ಮುಸಲ್ಮಾನರಿಗೆ ಮೀಸಲಾತಿಯನ್ನು ಕೊಡಬೇಕು ಎಂದರೆ, ಅವರಿಗೆ ಶಿಕ್ಷಣ ಇಲ್ಲ ಎಂದು ಗೊತ್ತಿದ್ದು, ಅವರು ಯಾರು ಐ.ಎ.ಎಸ್., ಐ.ಪಿ.ಎಸ್. ಆಗದೇ ಇರುವುದನ್ನು ನಾವುಗಳು ಕಣ್ಣಾರೆ ನೋಡುತ್ತಿರಬೇಕಾದರೆ ಕೊನೆ ಪಕ್ಷ ಕಾಮಗಾರಿಗಳಲ್ಲಿ ಕೆಲಸ ಕೊಟ್ಟಾಗ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಿರುದ್ಯೋಗ ಸಮಸ್ಯೆಗೆ ಒಂದು ಕಡೆ ಪರಿಹಾರವನ್ನು ಕಂಡುಕೊಂಡ ಹಾಗೆ ಆಗುತ್ತದೆ. ಮತ್ತೊಂದು ಕಡೆ ಸಮ ಸಮಾಜವನ್ನು ನೋಡಬಹುದು. ಅವರನ್ನು ಮನುಷ್ಯರಾಗಿ ನೋಡುವಂತಹದ್ದು ಈ ಸಂವಿಧಾನದ ಶಿಲ್ಪಿ ಡಾ॥ ಬಿ.ಆರ್. ಅಂಬೇಡ್ಕರ್ ರವರ ಆಶಯವಾಗಿತ್ತು.

**ಶ್ರೀ ಸಿ.ಟಿ.ರವಿ:–** ಮನುಷ್ಯರಾಗಿ ನೋಡಿ, ಓಟ್ ಬ್ಯಾಂಕ್ ಆಗಿ ನೋಡಬೇಡಿ.

**ಶ್ರೀ ಎಂ.ನಾಗರಾಜು:–** ಮಾನ್ಯ ಸಿ.ಟಿ. ರವಿಯವರೇ, ನಾವು ಓಟ್ ಬ್ಯಾಂಕ್ ಆಗಿ ನೋಡಿಲ್ಲ. **(ಗೊಂದಲ)** ಮಾನ್ಯ ಸಭಾಪತಿಯವರೇ, ನಾನು conclude ಮಾಡುತ್ತೇನೆ.

**ಶ್ರೀ ಸಿ.ಟಿ.ರವಿ:–** ಮನುಷ್ಯರಾಗಿ ನೋಡಲು ಮೀಸಲಾತಿ ಬೇಕೆ?

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಟಿ.ರವಿಯವರು ಶ್ರೀ ನರೇಂದ್ರ ಮೋದಿಯವರಿಗೆ, ಶ್ರೀ ಅಮಿತ್ ಶಾ ರವರಿಗೆ ಮುಸಲ್ಮಾನರು ನಾಗರಿಕರಲ್ಲ ಎಂದು ಹೇಳಲಿ.

**ಶ್ರೀ ಸಿ.ಟಿ.ರವಿ:–** ಜಿನ್ನಾರವರಿಗೆ ಸಪೋರ್ಟ್ ಮಾಡಿದ್ದು ಇವರು.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೆ, ನಾನು ಇವರಿಗೆ yield ಆಗಿಲ್ಲ, ಇವರೇಕೆ ಮಾತನಾಡುತ್ತಾರೆ.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ಸಂವಿಧಾನದಲ್ಲಿ ಅವರಿಗೆ ಏನು ಸ್ಥಾನಮಾನ ಇಲ್ಲವೇ? ಇವರೇನು ಮಾಡುತ್ತಿದ್ದಾರೆ? ಅವರೇನು ನಾಗರಿಕರಲ್ಲವೇ? ಸಂವಿಧಾನದ ಯಾವ ಆರ್ಟಿಕಲ್‌ನಲ್ಲಿ ಬರುತ್ತದೆ ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇವರು ಪದೇಪದೇ ಮುಸಲ್ಮಾನರು ನಾಗರಿಕರಲ್ಲ ಎಂದು ಹೇಳುತ್ತಿರುತ್ತಾರೆ. ಹಾಗಾದರೆ ಇವರು ಶ್ರೀ ನರೇಂದ್ರ ಮೋದಿ, ಶ್ರೀ ಅಮಿತ್ ಶಾ ರವರಿಗೆ ಅವರು ನಾಗರಿಕರಲ್ಲ ಎಂದು ತಿರಸ್ಕಾರ ಮಾಡುವುದಕ್ಕೆ ಹೇಳಲಿ, ಯಾರು ಬೇಡ ಎಂದು ಹೇಳುತ್ತಾರೆ? ಮಾತು ಎತ್ತಿದರೆ ಇವರು ಓಟ್ ಬ್ಯಾಂಕ್ ಎಂದು ಹೇಳುತ್ತಿರುತ್ತಾರೆ.

"Two Nation Theory" ತಂದಿದ್ದು ಯಾರು ಎಂದು ಇತಿಹಾಸ ತೆಗೆದು ನೋಡಲಿ? "Essentials of Hindutva" ಓದಿದ್ದೀರಾ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಪ್ರಿಯಾಂಕ್ ಖರ್ಗೆಯವರೇ, ಕುಳಿತುಕೊಳ್ಳಿ; ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. **(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, 1923ರಲ್ಲಿ ಪ್ರಕಟಗೊಂಡ "Essentials of Hindutva" ಪುಸ್ತಕದಲ್ಲಿ ಶ್ರೀ ವೀರ್ ಸಾರ್ವಕರ್‌ರವರು "Two Nation Theory" ಯನ್ನು propose ಮಾಡಿದ್ದಾರೆ. ಅದು ಅವರಿಗೆ ಗೊತ್ತಿದೆಯೇ? 1937ರಲ್ಲಿ ಹಿಂದು ಮಹಾಸಭಾದ 19ನೇ ಸೆಷನ್‌ನಲ್ಲಿ, ಅಲಹಾಬಾದ್‌ನಲ್ಲಿ ಶ್ರೀ ವೀರ್ ಸಾರ್ವಕರ್‌ರವರು Two Nation Theory" ಯನ್ನು ಸಪೋರ್ಟ್ ಮಾಡಿರುವುದು ಅವರಿಗೆ ಗೊತ್ತಿದೆಯೇ? ಅವರು ಇತಿಹಾಸ ತೆಗೆದು ನೋಡಲಿ. ಅವರ ಇತಿಹಾಸ ಅವರಿಗೆ ಗೊತ್ತಿಲ್ಲ.

**ಸಭಾಪತಿಯವರು:–** ಎಲ್ಲರೂ ತಿಳಿದುಕೊಳ್ಳಿ, ಬೇಕಾದಾಗ ಎದ್ದು ಮಾತನಾಡುವುದಕ್ಕೆ ಇದು ಧರ್ಮ ಶಾಲೆಯೇ? ನಿಮಗೆಲ್ಲರಿಗೂ ಎಷ್ಟು ಸಲ ಹೇಳುತ್ತೇನೆ, ಎದ್ದೆದ್ದು ಮಾತನಾಡುತ್ತೀರಲ್ಲಾ ನಿಮಗೆಲ್ಲಾ ನಾಚಿಕೆಯಾಗುವುದಿಲ್ಲವೇ?

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ 'vote bank politics' ಎಂದು ಹೇಳತಕ್ಕಂಥಾದ್ದು, ಮುಸಲ್ಮಾನರನ್ನು ತೋರಿಸಿ ಓಟ್ ಬ್ಯಾಂಕ್ ಮಾಡತಕ್ಕಂಥವರಿಗೆ ಛೀಮಾರಿ ಹಾಕುವ ದಿನಗಳು ಬಹಳ ದೂರವಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಮೀಸಲಾತಿ ವಿಚಾರ ಬಂದಾಗ, ಶಿಕ್ಷಣ ಇರಬಹುದು ಅಥವಾ ಕಾಮಗಾರಿಗಳಿರಬಹುದು, ಉದ್ಯೋಗಗಳಿರಬಹುದು, ಮುಸಲ್ಮಾನರಿಗೆ ಕೊಡುವುದು ತಪ್ಪಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಏಕೆಂದರೆ, it is not a reservation at all. It is a reservation on the social backwardness ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಸಿದ್ದರಾಮಯ್ಯನವರು, ಸರ್ಕಾರ ತಂದಿರುವ ಮೀಸಲಾತಿ, it is not religious based ಎನ್ನುವ ಮಾತನ್ನು ಹೇಳುತ್ತಿದ್ದೇನೆ. It is purely on a backwardness. ಮುಸಲ್ಮಾನರಿಗೆ ಮೀಸಲಾತಿ ಕೊಟ್ಟಿರುವುದನ್ನು ನಾನು ಸ್ವಾಗತ ಮಾಡುತ್ತೇನೆ, ಧನ್ಯವಾದಗಳು.

**ಶ್ರೀಮತಿ ಬಿಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಸಿ.ಟಿ. ರವಿಯವರಿಗೆ ಈ ವಿಧೇಯಕದ ಬಗ್ಗೆ favour ಆಗಿ ಮಾತನಾಡಿ ಎಂದು ನಾನು ಹೇಳುತ್ತಿಲ್ಲ. ಮಾನ್ಯ ಸಿ.ಟಿ.ರವಿಯಣ್ಣರವರು, I have a very great respect for him. ಡಾ॥ ಬಿ.ಆರ್. ಅಂಬೇಡ್ಕರ್‌ರವರು ಎಂದೂ ಕೂಡ ಮುಸಲ್ಮಾನರನ್ನು ವಿರೋಧ ಮಾಡಿಲ್ಲ. ಅವರು ಸುಮ್ಮನೆ ಮುಸಲ್ಮಾನರಿಗೂ,

ಡಾ॥ ಬಿ.ಆರ್. ಅಂಬೇಡ್ಕರ್‌ರವರಿಗೂ ಕ್ಯಾತೆ ಹಚ್ಚುವುದಕ್ಕೆ ಹೋಗಬಾರದು. ನಿಮಗೆ ಸ್ಪಷ್ಟೀಕರಣವನ್ನು ನೀಡಲು ಬಯಸುತ್ತೇನೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, Constituent Assembly Debates ಅನ್ನು ದಯಮಾಡಿ debate ಮಾಡುವುದಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:–** ಮಾನ್ಯ ಸಿ.ಟಿ.ರವಿಯವರೇ, ತಾವು ಕುಳಿತುಕೊಳ್ಳಿ. ನೀವು ಏಕೆ ಮಧ್ಯದಲ್ಲಿ ಮಾತನಾಡುತ್ತೀರಿ? **(ಗೊಂದಲ)**

ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸಿ.ಟಿ.ರವಿಯವರು ಪದೇಪದೇ ಎದ್ದು ಮಾತನಾಡುತ್ತಿರುತ್ತಾರೆ. ನೀವು ಅವರಿಗೆ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ನಾನು ಅವರನ್ನು ಹೊರಗೆ ಹಾಕಬೇಕಾಗುತ್ತದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಿ.ಟಿ.ರವಿಯವರು ಅವರ ಅನುಮತಿಯನ್ನು ಪಡೆದುಕೊಂಡು ಮಾತನಾಡಿದರು.

**ಸಭಾಪತಿಯವರು:–** ನಿಮಗೆ ಆ liberty ಇದೆ. ಆದರೆ ಎಲ್ಲರಿಗೂ ಆ liberty ಇಲ್ಲ. ಯಾರೇ ಮಾತನಾಡಿದರೂ ಮಧ್ಯದಲ್ಲಿ ನೀವು ಮಾತನಾಡುವುದಕ್ಕೆ ಅವಕಾಶವಿದೆ. ಆದರೆ ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸಿ.ಟಿ.ರವಿಯವರಿಗೆ ನಾನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರ ಹೆಸರನ್ನು ತೆಗೆದುಕೊಳ್ಳಬಾರದಾಗಿತ್ತಲ್ಲವೇ?

**ಸಭಾಪತಿಯವರು:–** ಯಾರೇ ಮಾತನಾಡಿದರೂ ಕೂಡ ಮಾನ್ಯ ಸಿ.ಟಿ.ರವಿಯವರು ಪದೇಪದೇ ಎದ್ದು ಮಾತನಾಡುತ್ತಾರೆ, ಅದರ ದಾಖಲೆಯನ್ನು ನಿಮಗೆ ಕೊಡಲೇನು?

**ಶ್ರೀಮತಿ ಬಲ್ಕೀಸ್ ಬಾನು:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಂಡಿಸಿರುವ ಈ ವಿಧೇಯಕವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. Where there is a Muslim Colony, there is a SC Colony also. ಮುಸಲ್ಮಾನರು, Scheduled Castes ನವರು ಬಹಳ ಪ್ರೀತಿ, ವಿಶ್ವಾಸದಿಂದ ಇದ್ದಾರೆ. ದಯವಿಟ್ಟು ಬೆಂಕಿ ಹಚ್ಚುವುದಕ್ಕೆ ಹೋಗಬೇಡಿ.

(ಮುಂದು)

(592) 21/03/2025 7:40 ಎಸ್‌ಪಿಆರ್/ವಿಕೆ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:–** ಕಡೆಯದಾಗಿ ವಿರೋಧ ಪಕ್ಷದ ನಾಯಕರೇ ಮಾತನಾಡಿ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.:–** ಮಾನ್ಯ ಸಭಾಪತಿಯವರೆ, ....

**ಸಭಾಪತಿಯವರು:–** ನಾನು ಯಾರಿಗೂ ಸಹ ಅವಕಾಶ ಕೊಡುವುದಿಲ್ಲ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.:–** ಮಾನ್ಯ ಸಭಾಪತಿಯವರೆ, ಎರಡು ನಿಮಿಷಗಳು ಮಾತ್ರವೇ ಅವಕಾಶ ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಮಾತನಾಡುವವರ ಪಟ್ಟಿಯನ್ನು ನಾನು ಮಾಡಿಟ್ಟುಕೊಂಡಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2025 ಅನ್ನು ನಾನು ವಿರೋಧಿಸುತ್ತೇನೆ.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೆ, ...

**ಸಭಾಪತಿಯವರು:–** ಶ್ರೀ ನಾಗರಾಜುರವರೇ ಸುಮ್ಮನೆ ಕುಳಿತುಕೊಳ್ಳಿ. ಎಷ್ಟೊಂದು ಮಾತನಾಡುತ್ತೀರಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಇದಕ್ಕೆ ಕಾರಣವೇನೆಂದರೆ, ಇದರ ಬಗ್ಗೆ ಸಚಿವರು ಬಹಳ ವಿಸ್ತಾರವಾದ ವಿವರಣೆಯನ್ನು ಈಗಾಗಲೇ ನೀಡಿದ್ದಾರೆ. ಅವರು ವಿವರಣೆ ನೀಡುವ ಸಂದರ್ಭದಲ್ಲಿ ಸಮಾನತೆಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಸಮಾನತೆ ಎಲ್ಲರಿಗೂ ಬೇಕು; ಯಾರೂ ಸಹ ಇದನ್ನು ಬೇಡವೆಂದು ಹೇಳುವುದಿಲ್ಲ. ಸಮಾನತೆ ಎಂದರೆ ಮೀಸಲಾತಿ ಅಲ್ಲ. ಸಮಾನತೆಗೂ ಮೀಸಲಾತಿಗೂ ಯಾವುದೇ ಸಂಬಂಧವಿಲ್ಲ. ವಿದ್ಯಾ ಸಂಸ್ಥೆಗಳನ್ನು ಸ್ಥಾಪನೆ ಮಾಡಬೇಕು ಎಂದು ಅವರು ಹೇಳಿದರು. ವಿದ್ಯಾ ಸಂಸ್ಥೆಗಳು ಅಥವಾ ಸವಲತ್ತುಗಳನ್ನು ಕೊಡುವುದು ಅದು ಮೀಸಲಾತಿ ಅಲ್ಲ. ಇದು ಸ್ಪಷ್ಟವಾಗಿದೆ.

ಮುಂದುವರೆದು, "ಪ್ರವರ್ಗ 2 (ಎ) ರಲ್ಲಿ ನಿರ್ದಿಷ್ಟ ಪಡಿಸಿದ ಹಿಂದುಳಿದ ಜಾತಿಗಳಿಗೆ ಸೇರಿದ ಟೆಂಡರ್‌ದಾರರ ಪೈಕಿ ಮಾತ್ರ ಟೆಂಡರ್ ಅನ್ನು ನೀಡತಕ್ಕದ್ದು ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳ ತರುವಾಗ ಮತ್ತು ಶೇಕಡಾ 4 ರಷ್ಟನ್ನು ಮೀರದಂತೆ ಹಿಂದುಳಿದ ವರ್ಗಗಳು ಎಂದು ಪ್ರವರ್ಗ 2 (ಬಿ) ರಲ್ಲಿ ನಿರ್ದಿಷ್ಟ ಪಡಿಸಿದ ಹಿಂದುಳಿದ ಜಾತಿಗಳಿಗೆ ಸೇರಿದ ಟೆಂಡರ್‌ದಾರರು ಪೈಕಿ ಮಾತ್ರ ಟೆಂಡರ್ ಅನ್ನು ನೀಡತಕ್ಕದ್ದು ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಸೇರಿಸತಕ್ಕದ್ದು" ಎಂಬುದಾಗಿ ವಿಧೇಯಕದಲ್ಲಿ ತಿಳಿಸಲಾಗಿದೆ. ಇಲ್ಲಿ ಅಲ್ಪಸಂಖ್ಯಾತರು ಇರಬಹುದು, religious minority reservation is not accepted under the Constitution. Can minorities receive reservations based on religion? What does the Indian Constitution say? In the drafting of the country's Constitution minority rights, particularly, those of SC's and ST's were subject to significant debate. However, influenced by concerns of separatism and the changing landscape after the partition the Constitution provided reservation for Scheduled Castes and Scheduled Tribes. But not for religious minorities. ಒಟ್ಟಾರೆಯಾಗಿ ಇದನ್ನು ನಮ್ಮ ಸಂವಿಧಾನವು ತಿಳಿಸುತ್ತದೆ.

ಇಲ್ಲಿ ಸಾಕಷ್ಟು ವಿಚಾರಗಳಿದ್ದು, ಬಹಳಷ್ಟು ಸಮಯವನ್ನು ತೆಗೆದುಕೊಳ್ಳಬಾರದೆಂಬ ಕಾರಣಕ್ಕಾಗಿ ನಾನು ಇಷ್ಟನ್ನು ಮಾತ್ರವೇ ಹೇಳುತ್ತೇನೆ. Religion based reservation was initially implemented in the State of Travancore, Cochin in 1936. It was in Kerala. However, it was later replaced by communal reservation in 1952. Notably Muslims constituting 22 percent of the population were included among the OBC's. ಏಕೆಂದರೆ ಇದನ್ನು ತೆಗೆದುಬಿಟ್ಟು ಇತರೆ ಹಿಂದುಳಿದ ವರ್ಗಗಳು (ಓ.ಬಿ.ಸಿ.) ಯಡಿ ಸೇರಿಸಿದರು. ಇದಾದ ನಂತರ initially conceived as a mechanism to safeguard the political interest of minorities. The debate ultimately resulted in the provisions of the reservations and affirmative action exclusively for backward classes rather than the religious minorities. ಈ ರೀತಿಯಾಗಿ ಮಾಡಿದ್ದರು. ಆದರೆ ಈಗ ಇಲ್ಲಿ ಏನಾಗಿದೆ ಎಂದರೆ, ಅಲ್ಪಸಂಖ್ಯಾತರ ಮೀಸಲಾತಿ ಅಂದರೆ ಪ್ರವರ್ಗ 2 (ಎ) ರಲ್ಲಿ...., ಅಲ್ಪಸಂಖ್ಯಾತರು ಎಂದು ತೆಗೆದುಕೊಂಡರೆ, ಅಲ್ಲಿ ಕ್ರಿಶ್ಚಿಯನ್ನರು, ಜೈನರು, ದಿಗಂಬರರು ಮತ್ತಿತರೆ ಸಮುದಾಯ, ಬುದ್ಧರು ಇವರುಗಳೆಲ್ಲರೂ ಅಲ್ಪಸಂಖ್ಯಾತರಡಿ ಬರುತ್ತಾರೆ. ಆದರೆ, ಪವರ್ಗ 2 (ಬಿ) ರಡಿ ಶೇಕಡಾ 4 ರಷ್ಟು ಮುಸ್ಲಿಂರಿಗೆ ಮಾತ್ರವೇ ಪ್ರತ್ಯೇಕವಾಗಿ ನೀಡಿದ್ದಾರೆ. ಆದರೆ ಸರ್ಕಾರ ಇಲ್ಲಿ ನೀಡಿರುವ ಮೀಸಲಾತಿಯೂ ಸಹ only for minorities. Exclusively only for Muslims. ಅಂದರೆ ಇಲ್ಲಿ ಕೇವಲ ಮುಸ್ಲಿಂ ಎಂಬುದಾಗಿಯೇ ಇದೆ. ಬೇರೆ ಸಮುದಾಯಗಳ ಬಗ್ಗೆ ಉಲ್ಲೇಖವಿಲ್ಲ. ಇದು ಬೇರೆ ಇದ್ದಿದ್ದರೆ ಅದು ಅಲ್ಪಸಂಖ್ಯಾತರು ಎಂದು ಆಗುವುದು. ಆದರೆ ಇದು ಅಲ್ಪಸಂಖ್ಯಾತರು ಎಂದು ಅಲ್ಲ. ಇಲ್ಲಿ ಮುಸ್ಲಿಂ ಎನ್ನುವುದು ಒಂದು ಧರ್ಮವಾಗಿದೆ. "ಧರ್ಮ"ದ ಅಡಿ ನೀಡಿರುವ ಯಾವುದೇ ಮೀಸಲಾತಿಯನ್ನು ಸಂವಿಧಾನವು ಒಪ್ಪುವುದಿಲ್ಲ. ಆ ಕಾರಣದಿಂದಾಗಿ ಚರ್ಚೆ ನಡೆಯುವಾಗಲೂ ಸಹ ತಾಜ್‌ಮುಲ್ ಹುಸೇನ್ ಎನ್ನುವವರು "ಕ್ಷೇತ್ರಗಳ ಮೀಸಲಾತಿ ಯಾವುದೇ ರೂಪದಲ್ಲಿರಲಿ ಅಥವಾ ಯಾವುದೇ ಜನಾಂಗಕ್ಕಾಗಲಿ, ನನ್ನ ಅಭಿಪ್ರಾಯದಲ್ಲಿ ತಾತ್ವಿಕವಾಗಿ ಕೆಟ್ಟದ್ದು" ಎಂಬುದಾಗಿ ಹೇಳಿದ್ದಾರೆ. ಇದನ್ನು ನಾವು ಹೇಳುತ್ತಿಲ್ಲ; ಹೊರತು ಚರ್ಚೆಯಲ್ಲಿ ಬಂದಿರುವುದು. ತಾಜ್‌ಮುಲ್ ಹುಸೇನ್ ಎಂಬುವವರು ಬಿಹಾರ್ ರಾಜ್ಯದವರು. "ಯಾರಿಗೂ ಮೀಸಲಾತಿ ಇರಲೇಬಾರದು ಮತ್ತು ನಾನು ಮುಸ್ಲಿಂನಾಗಿ ಮುಸ್ಲಿಮರ ಪರವಾಗಿ ಮಾತನಾಡುತ್ತೇನೆ. ಮುಸ್ಲಿಂರಿಗೆ ಯಾವುದೇ ಮೀಸಲಾತಿ ಇರಕೂಡದು. ಪ್ರಪಂಚದ ಯಾವುದೇ ಪ್ರಜಾತಾಂತ್ರಿಕ ಅಭಿವೃದ್ಧಿ ದೇಶದಲ್ಲೂ, ಕ್ಷೇತ್ರದಲ್ಲೂ ಮೀಸಲಾತಿ ಎಂಬುದು ಇಲ್ಲ. ಇಂಗ್ಲೆಂಡ್ ಅನ್ನು ನೋಡಿ, ಅಲ್ಲಿ ಸಂಸತ್ತಿನ ಕೆಳಮನೆ ಪ್ರಜಾತಂತ್ರದ ತಾಯಿ; ಅಲ್ಲಿ ಯಾವುದೇ ಮತೀಯ ಮೀಸಲಾತಿ ಇಲ್ಲ. ನಿಜ, ಅಲ್ಲಿ ಮುಂಚೆ ವಿಶ್ವವಿದ್ಯಾನಿಲಯಗಳಿಗೆ ಮೀಸಲಾತಿ ಇತ್ತು. ಅದನ್ನೂ ಸಹ ತೆಗೆದು ಹಾಕಲಾಯಿತು. ಈ ರೀತಿ ಮೀಸಲಾತಿ ಏನು? ಮೀಸಲಾತಿ ಒಂದು ರಿಯಾಯಿತಿ. ದುರ್ಬಲರಿಗಾಗಿ ಒಂದು ರಿಯಾಯಿತಿ. ನಮಗೆ ಮುಸ್ಲಿಂರಿಗೆ ಯಾವುದೇ ಮೀಸಲಾತಿ ಬೇಕಿಲ್ಲ. ನಮಗೆ ಮುಸ್ಲಿಂರಿಗೆ ಯಾವುದೇ ರೀತಿಯಲ್ಲಿ ಮೀಸಲಾತಿ ಬೇಕಿಲ್ಲ. ಮುಸ್ಲಿಂರಿಗೆ ಯಾವುದೇ ರೀತಿಯ ಸುರಕ್ಷತೆಯೂ ಬೇಕಿಲ್ಲ. ನಾವು ದುರ್ಬಲರಲ್ಲ. ಈ ರಿಯಾಯಿತಿ ನಮಗೆ ಒಳ್ಳೆಯದರ ಬದಲು ಕೆಡಕನ್ನೇ ಮಾಡುತ್ತದೆ" ಎಂಬುದಾಗಿ ಅವರು ಹೇಳಿದ್ದಾರೆ ಹೊರತು

ನಾವಲ್ಲ. ಇದನ್ನು ಹೇಳಿರುವುದು ಶ್ರೀ ತಾಜ್‌ಮುಲ್ ಹುಸೇನ್. ಅವರು ಮಾಜಿ ಸಂಸದರಾಗಿದ್ದು, ಚರ್ಚೆಯಲ್ಲಿ ಭಾಗವಹಿಸಿದ್ದರು. ಇದು ಇದರಿಂದ ಬಂದಿದ್ದಲ್ಲ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ರಾಜಕೀಯ ಪಕ್ಷಗಳು ಮತ್ತು ರಾಜಕೀಯ ಆಕಾಂಕ್ಷೆಗಳು ಎಲ್ಲಾ....

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಹೀಗೆ ಅವರೇ ಮಾತನಾಡಿದ್ದಾರೆ.

**(ಗೊಂದಲ)**

**ಶ್ರೀ ಎ.ವಸಂತ್ ಕುಮಾರ್:-** ಮಾನ್ಯ ಸಭಾಪತಿಯವರೆ, ಅದನ್ನು ಇಲ್ಲಿ ಪ್ರಸ್ತಾಪ ಮಾಡುವ ಅವಶ್ಯಕತೆ ಇಲ್ಲ. ಒಬ್ಬ ವ್ಯಕ್ತಿಯ .....

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, Religious conversion to avail reservation is a fraud under the Constitution ಎಂದು ಸರ್ವೋಚ್ಚ ನ್ಯಾಯಾಲಯವು ತಿಳಿಸಿದೆ. ಅದರಿಂದಾಗಿ ನಾನು ಹೇಳುವುದೇನೆಂದರೆ, ಈ ಮೀಸಲಾತಿ ಏನಿದೆ, ಅದು ಮುಸ್ಲಿಂ ಮೀಸಲಾತಿ ಆಗಿದೆ. ಇದರಿಂದಾಗಿ ಸಂವಿಧಾನದಡಿ ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಇವತ್ತಿನ ದಿವಸ ಮೀಸಲಾತಿ ನೀಡಲಾಗಿದೆ. ಅಲ್ಲಿ ಒಂದು ಕಡೆಯಿಂದ ಕೊಟ್ಟು ಮತ್ತೊಂದು ಕಡೆಯಿಂದ ಕಿತ್ತುಕೊಳ್ಳುತ್ತಾರೆ. ಈಗ ಪರಿಶಿಷ್ಟ ಜಾತಿಯವರಿಗೆ ಎರಡು ಕೋಟಿ ರೂಪಾಯಿಗಳವರೆಗೆ ಗುತ್ತಿಗೆಯಲ್ಲಿ ಮೀಸಲಾತಿ ಇದೆ. ಇವರಿಗೆ ಮೀಸಲಾತಿ ಇದೆ; ಹೀಗಾಗಿ ಸರ್ಕಾರವು ಇವರಿಗೆ ನೀಡುತ್ತದೆ. ನಾನು ಈ ಮೊದಲೇ ತಿಳಿಸಿದಂತೆ, ಇಟ್ಟಿದ್ದು ಎಷ್ಟು ಎಂದು ಸರ್ಕಾರವು ಹೇಳುವುದು ಬೇಡ, ಕೊಟ್ಟಿದ್ದು ಎಷ್ಟು ಎಂಬುದನ್ನು ಮಾತ್ರವೇ ತಿಳಿಸಲಿ. ಏಕೆಂದರೆ, ಎಷ್ಟು ಜನ ತೊಂದರೆಯಲ್ಲಿದ್ದಾರೆ ಎನ್ನುವುದು ನನಗೆ ಗೊತ್ತಿದೆ. ಅವರುಗಳು ನನ್ನ ಬಳಿ ಬಂದು "ಸ್ವಾಮಿ ನಮಗೆ ಒಂದು ಕೋಟಿ ರೂಪಾಯಿಗಳವರೆಗೆ ಮೀಸಲಾತಿ ಕೊಟ್ಟಿದ್ದಾರೆ; ಆದರೆ ಒಂದು ಕೋಟಿ ರೂಪಾಯಿಯ ಗುತ್ತಿಗೆ ಬಂದ ತಕ್ಷಣ ನಾಲ್ಕು ಕೆಲಸಗಳನ್ನು ಕ್ಲಬ್ ಮಾಡಿ ಪ್ಯಾಕೇಜ್ ಮಾಡಿ ಬೇರೆಯವರಿಗೆ ಕೊಡುತ್ತಾರೆ; ಹೀಗಾಗಿ ನಮಗೆ ಅದರಲ್ಲಿ ಪಾರ್ಟಿಸಿಪೇಟ್ ಮಾಡುವುದಕ್ಕೇ ಬಿಡುವುದಿಲ್ಲ" ಎಂಬುದಾಗಿ ಹೇಳುತ್ತಾರೆ. ಇಂತಹ ಪರಿಸ್ಥಿತಿ ಪರಿಶಿಷ್ಟ ಜಾತಿ ವರ್ಗಗಳಿಗೆ ಇದೆ. ಇಂತಹ ಪರಿಸ್ಥಿತಿಯಲ್ಲಿ ಇವರಿಗೆ ಪ್ರತ್ಯೇಕವಾಗಿ ಕೊಡುತ್ತಾರೆ. ಇವರು ಇತರೆ ಹಿಂದುಳಿದ ವರ್ಗಗಳಡಿ (ಓ.ಬಿ.ಸಿ.) ಇದ್ದಾರೆ. ಓ.ಬಿ.ಸಿ. ಅಡಿ ಕೊಟ್ಟಿದ್ದನ್ನು ಇವರೂ ಸಹ ಅನುಭವಿಸಲಿ. ಇದರಲ್ಲಿ ನಮಗೆ ಯಾವುದೇ ಪ್ರಶ್ನೆ ಇಲ್ಲ. ಓ.ಬಿ.ಸಿ. ಅಡಿ ಎಲ್ಲರಿಗೂ ಮೀಸಲಾತಿಯನ್ನು ನೀಡಿ. ಎರಡು ಕೋಟಿ ರೂಪಾಯಿಗಳ ಗುತ್ತಿಗೆಯನ್ನು ಓ.ಬಿ.ಸಿ. ಅಡಿ ಎಲ್ಲರಿಗೂ ನೀಡಿ. ಆಗ ಇವರೂ ಸಹ ಅದರಡಿ ಬರುತ್ತಾರೆ; ಅವರೂ ಸಹ ತೆಗೆದುಕೊಳ್ಳಲಿ. ಇಲ್ಲಿಯೂ ಸಹ ನಮಗೆ ಯಾವುದೇ ಪ್ರಶ್ನೆ ಇಲ್ಲ. ಆದರೆ, ಸರ್ಕಾರವು ಈಗ ಮಂಡಿಸಿರುವ ವಿಧೇಯಕವು ಅಂಗೀಕೃತಗೊಳ್ಳುವುದಿಲ್ಲ. ನಾವು ಅವರಿಗೆ

ಕೊಟ್ಟಂತೆ ಮಾಡಿದ್ದೇವೆ; ಅವರನ್ನು please ಮಾಡಿದ್ದೇವೆ appease ಮಾಡಿದ್ದೇವೆ ಎಂದು ಸರ್ಕಾರವು ಭಾವಿಸಿದೆ. ಇದು ಏನು ಎಂದು ನಾನು ಕೇಳಬಯಸುತ್ತೇನೆ. ಇದು ಒಂದು ರೀತಿಯಲ್ಲಿ ಸರ್ಕಾರವು ಅವರಿಗೆ ಮಾಡುತ್ತಿರುವ ತೊಂದರೆಯಾಗಿದೆ ಹೊರತು ಉಪಕಾರವಲ್ಲ. ಪಾಪ, ಇದು ಅವರಿಗೆ ಅರ್ಥವಾಗುತ್ತಿಲ್ಲ. ಇದನ್ನು ಅವರು ಅರ್ಥಮಾಡಿಕೊಳ್ಳುವಷ್ಟರಲ್ಲಿ ಪರಿಸ್ಥಿತಿ ಬದಲಾಗಿರುತ್ತದೆ.

(ಮುಂದು)

(593) 21/03/2025 7:50 ಬಿಕೆಪಿ(ಎಸ್‌ಪಿಆರ್)/ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ಮುಂದು):-

ಪ್ರಸ್ತುತ ಕಾಂಗ್ರೆಸ್ ಪಕ್ಷವು ಸರ್ಕಾರ ನಡೆಸುತ್ತಿದ್ದು, ಅನುಕೂಲ ಮಾಡಿಕೊಡಬೇಕು. ಅನುಕೂಲವೆಂದರೆ, appeasement ಅಲ್ಲ. ಸವಲತ್ತುಗಳನ್ನು ನೀಡಲಿ; ಮೀಸಲಾತಿಯನ್ನು ಅಲ್ಲ. ಆದ್ದರಿಂದ ನಾವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2025 ಅನ್ನು ವಿರೋಧಿಸುತ್ತೇವೆ. ಸಚಿವರು ತಮ್ಮ ನಿಲುವನ್ನು ಬದಲಾಯಿಸಿಕೊಳ್ಳಬೇಕು. ಇದನ್ನು ಅವರಿಗೆ ಇತರೆ ಹಿಂದುಳಿದ ವರ್ಗಗಳಡಿ (ಓ.ಬಿ.ಸಿ.) ನೀಡಲಿ, ನಮಗೇನೂ ತೊಂದರೆ ಇಲ್ಲ. ಇದು ನಮ್ಮ ವಿರೋಧವಲ್ಲ; ಇದು ಸಂವಿಧಾನವು ಮಾಡುವ ವಿರೋಧವಾಗಿದೆ. **(ಗೊಂದಲ)** ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಬೇಕು ಎನ್ನುವುದು ನಮ್ಮ ವಾದವಾಗಿದೆ. ಅದನ್ನೇ ಬುಡಮೇಲು ಮಾಡಬೇಕು ಎನ್ನುವುದು ನಿಮ್ಮ ವಾದವಾಗಿದೆ. ಇದನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಶ್ರೀ ಹೆಚ್.ಕೆ.ಪಾಟೀಲ್ ರವರೇ ತಾವು ಮಾತನಾಡಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ...,

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ...,

**(ಗೊಂದಲ)**

**ಸಭಾಪತಿಯವರು:-** ಇಲ್ಲ ನಾನು ಯಾರಿಗೂ ಅವಕಾಶ ಕೊಡುವುದಿಲ್ಲ.

**ಶ್ರೀ ಸಲೀಂ ಅಹಮದ್(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ. ಅವರು ಅಲ್ಪಸಂಖ್ಯಾತರ ಬಗ್ಗೆ ಮಾತನಾಡುತ್ತಾರೆ ಆದರೆ ವಿರೋಧ ಪಕ್ಷದ ಸದಸ್ಯರು ಬಾವಿಯಲ್ಲಿ ಧರಣಿ ಮಾಡುತ್ತಿದ್ದವರು ವಿಧೇಯಕ ಮಂಡನೆಯಾದ ತಕ್ಷಣ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. **(ಗೊಂದಲ)** ಅವರು ಏನು ಮಾತನಾಡುತ್ತಿದ್ದಾರೆ?

**ಸಭಾಪತಿಯವರು:-** ವಿಧೇಯಕದ ಬಗ್ಗೆ ಮಾತನಾಡುವುದಾದರೆ ಮಾತನಾಡಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ, ನಾವೂ ಸಹ ಸ್ವತಂತ್ರ ಸಂಗ್ರಾಮದ ಹೋರಾಟದಲ್ಲಿ ಭಾಗಿಯಾಗಿದ್ದೆವು. ಎಲ್ಲಾ ಸೇರಿ...,

**ಸಭಾಪತಿಯವರು:–** ಸಲೀಂ ಅಹಮದ್‌ರವರೇ, ವಿಧೇಯಕದ ಬಗ್ಗೆ ಮಾತನಾಡಿ. ಅದನ್ನು ಬಿಟ್ಟು ಬೇರೆ ಮಾತನಾಡಬೇಡಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ಇಲ್ಲ. ಆದರೆ ಅವರು.....

**ಸಭಾಪತಿಯವರು:–** ಮತ್ತೆ ಬಿಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಈಗ ಮಂಡಿಸಿರುವ ವಿಧೇಯಕವನ್ನು ಹಿಂಪಡೆಯಬೇಕು ಎನ್ನುವುದು ನಮ್ಮ ವಾದವಾಗಿದೆ. ಇದನ್ನು ಹಿಂಪಡೆದಾಗ ಅದಕ್ಕೆ ನಮ್ಮದೇನೂ ತಕರಾರು ಇಲ್ಲ.

**ಸಭಾಪತಿಯವರು:–** ಆಯಿತು ಬಿಡಿ. ನಾನು ಹೇಳುತ್ತಿದ್ದೇನೆ ಕೇಳಿ.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರು, ಮತ್ತು ಈ ಮನೆಯ ಸದಸ್ಯರುಗಳಾದ ಶ್ರೀ ಸಿ.ಟಿ.ರವಿ, ಶ್ರೀ ಎನ್.ರವಿಕುಮಾರ್, ಶ್ರೀ ಕೆ.ಎಸ್.ನವೀನ್, ಶ್ರೀ ಎಂ.ನಾಗರಾಜು, ಶ್ರೀಮತಿ ಬಲ್ಕೀಸ್ ಬಾನು, ಶ್ರೀ ಬಿ.ಕೆ.ಹರಿಪ್ರಸಾದ್ ಮತ್ತು ಶ್ರೀ ಐವನ್ ಡಿ'ಸೋಜಾ ಇವರುಗಳೆಲ್ಲಾ ಸಾಕಷ್ಟು ವಿಚಾರಗಳನ್ನು ತಮ್ಮದೇ ಆದ ರೀತಿಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಆದರೆ, ಎಲ್ಲಿಯೋ ಒಂದು ಕಡೆ on wrong premise ಹೋಗುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅವರುಗಳು ಅದನ್ನು ಗೊತ್ತಾಗದೇ ಹೇಳಿದ್ದಾರೆ ಎಂದು ನಾನು ಹೇಳುವುದಿಲ್ಲ. ಆದರೆ, ಅದನ್ನು ಹೇಳುವಾಗ, ಅವರು ಎಲ್ಲಿಯೋ ಒಂದು ಕಡೆ ಹುಸೇನ್ ಎಂಬುವವರ ಹೆಸರನ್ನು ಉಲ್ಲೇಖಿಸುತ್ತಾರೆ. ಯಾರೋ ಒಬ್ಬರು ಸಾಂವಿಧಾನಿಕ ತಜ್ಞರ ಹೆಸರನ್ನು ಅವರು ಹೇಳುತ್ತಾರೆ. ನಾವು ಇವತ್ತಿನ ದಿವಸ ಪ್ರವರ್ಗ 2 (ಎ), 2 (ಬಿ) ಮತ್ತು 3 (ಎ), 3 (ಬಿ), ಪ್ರವರ್ಗ–1 ಇವುಗಳನ್ನೆಲ್ಲಾ ಮಾಡಿದ್ದೇವೆ. ಹೌದು ಪ್ರವರ್ಗ 2 (ಬಿ) ರಡಿ ಮುಸ್ಲಿಂ ಸಮುದಾಯ; ಪ್ರವರ್ಗ 2 (ಎ) ರಡಿ ಬೇರೆ ಇನ್ನಿತರೆ ಸಮುದಾಯಗಳು; ಪ್ರವರ್ಗ–1 ರಡಿ ಇಂತಿಷ್ಟು ಸಮುದಾಯಗಳು, ಮತ್ತು ಪ್ರವರ್ಗ 3(ಬಿ) ರಡಿ ಇಂತಿಷ್ಟು ಸಮುದಾಯಗಳು ಬರುತ್ತವೆ ಎಂಬುದಾಗಿ ವಿಂಗಡಣೆ ಮಾಡಿಕೊಡಲಾಗಿದೆ. ಅದು ಸಂವಿಧಾನಿಕ ಅಲ್ಲ ಎನ್ನುವ ಅಭಿಪ್ರಾಯವು ಬರುವಂತೆ ಅವರ ಮಾತುಗಳಿಂದ ನಮಗೆ ....,

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಸಚಿವರ ಮಾತುಗಳಿಂದ ನಮಗೆ ಮನವರಿಕೆಯಾಗುವ ಅವಶ್ಯಕತೆ ಇಲ್ಲ. **(ಗೊಂದಲ)** ಇದು ಸಂವಿಧಾನ ವಿರೋಧವಾಗಿರುವುದರಿಂದ ಇದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. **(ಗೊಂದಲ)** ಇದರ ಬಗ್ಗೆ ವಿರೋಧವಿದೆ.

**(ಗೊಂದಲ)**

**(ಈ ಹಂತದಲ್ಲಿ ಶ್ರೀ ಸಿ.ಟಿ.ರವಿ ಮತ್ತು ಶ್ರೀ ಎಸ್.ಎಲ್.ಭೋಜೇಗೌಡ ರವರುಗಳನ್ನು ಹೊರತುಪಡಿಸಿ, ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ...,

**(ಗೊಂದಲ)**

**ಸಭಾಪತಿಯವರು:- ಪ್ರಸ್ತಾವ ಏನೆಂದರೆ,**

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:-** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3 ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಸಭಾಪತಿಯವರು:- ಪ್ರಸ್ತಾವ ಏನೆಂದರೆ,**

**"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ಮೇಜನ್ನು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧದ ಫಲಕಗಳನ್ನು ಪ್ರದರ್ಶಿಸುತ್ತಾ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಕಾಗದಗಳನ್ನು ಹರಿದು ಹಾಕುತ್ತಿದ್ದರು.)**

**24) ನಿರ್ಣಯಗಳು**

**ಅ) ಸಂವಿಧಾನದ ಮೂಲಭೂತ ತತ್ವಗಳನ್ನು ಉಲ್ಲಂಘಿಸುವ ನಿಬಂಧನೆಗಳನ್ನು ಒಳಗೊಂಡಿರುವ ವಕ್ಸ್ (ತಿದ್ದುಪಡಿ) ಮಸೂದೆ, 2024 ಅನ್ನು ತಕ್ಷಣ ಹಿಂಪಡೆಯುವ ಮೂಲಕ ದೇಶದ ಸರ್ವಾನುಮತದ ಅಭಿಪ್ರಾಯಗಳನ್ನು ಗೌರವಿಸಲು ಕೇಂದ್ರ ಸರ್ಕಾರವು ವಿಳಂಬವಿಲ್ಲದೇ ಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರವನ್ನು ಸರ್ವಾನುಮತದಿಂದ ಆಗ್ರಹಿಸುವ ಬಗ್ಗೆ.**

– – – – – –

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ಸರ್ಕಾರವು ನಿನ್ನೆಯ ದಿನ ಈ ನಿರ್ಣಯವನ್ನು ಮಂಡನೆ ಮಾಡಿದ್ದು, ಅದನ್ನು ಅನುಮೋದಿಸಿಕೊಡುವಂತೆ ನಾನು ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ನಿರ್ಣಯ ಏನೆಂದರೆ;

**"ಸಂವಿಧಾನದ ಮೂಲಭೂತ ತತ್ವಗಳನ್ನು ಉಲ್ಲಂಘಿಸುವ ನಿಬಂಧನೆಗಳನ್ನು ಒಳಗೊಂಡಿರುವ ವಕ್ಸ್ (ತಿದ್ದುಪಡಿ) ಮಸೂದೆ, 2024 ಅನ್ನು ತಕ್ಷಣ ಹಿಂಪಡೆಯುವ ಮೂಲಕ ದೇಶದ ಸರ್ವಾನುಮತದ ಅಭಿಪ್ರಾಯಗಳನ್ನು ಗೌರವಿಸಲು ಕೇಂದ್ರ ಸರ್ಕಾರವು ವಿಳಂಬವಿಲ್ಲದೇ ಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರವನ್ನು ಸರ್ವಾನುಮತದಿಂದ ಆಗ್ರಹಿಸುವ ಬಗ್ಗೆ ನಿರ್ಣಯವನ್ನು ಅಂಗೀಕರಿಸುವುದು."**

**ನಿರ್ಣಯ ಅಂಗೀಕೃತವಾಯಿತು ಮತ್ತು ನಿರ್ಣಯಕ್ಕೆ ಸದನದ ಅನುಮೋದನೆ ದೊರೆಯಿತು**

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತ ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಆ) ಭಾರತ ಸರ್ಕಾರವು ಸಂವಿಧಾನದ ಅನುಚ್ಛೇದ 46ರಂತೆ ಕೇಂದ್ರ ಬಜೆಟ್‌ನ ಒಂದು ಭಾಗವನ್ನು ಪರಿಶಿಷ್ಟ ಜಾತಿ ಉಪ ಯೋಜನೆ (ಪರಿಶಿಷ್ಟ ಜಾತಿಗಳ ಅಭಿವೃದ್ಧಿ ಕ್ರಿಯಾ ಯೋಜನೆ-DAPSC) ಮತ್ತು ಬುಡಕಟ್ಟು ಉಪ ಯೋಜನೆಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಿಡಲು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಅನುಕೂಲವಾಗುವಂತೆ ವಿವಿಧ ಕೇಂದ್ರ ಯೋಜನೆಗಳಿಗೆ ಹಣವನ್ನು ಒದಗಿಸಲು, ಸಂವಿಧಾನದ ಅನುಚ್ಛೇದ 46ರ ಅಡಿಯಲ್ಲಿ ಕೇಂದ್ರ ಕಾಯ್ದೆಯನ್ನು ಜಾರಿಗೆ ತರುವ ಬಗ್ಗೆ.**

**- - - - -**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ ಇರುವ ನಿರ್ಣಯವನ್ನು ನಿನ್ನೆಯ ದಿನ ಮಂಡಿಸಿದ್ದು, ಅದರ ಬಗ್ಗೆ ಚರ್ಚೆ ಮಾಡಬೇಕೆಂದು ನಾವು ಕೇಳಿದ್ದೆವು. ಈಗ ಅದನ್ನು ಅನುಮೋದಿಸಿಕೊಡುವಂತೆ ನಾನು ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ನಿರ್ಣಯ ಏನೆಂದರೆ;

**"ಭಾರತ ಸರ್ಕಾರವು ಸಂವಿಧಾನದ ಅನುಚ್ಛೇದ 46ರಂತೆ ಕೇಂದ್ರ ಬಜೆಟ್‌ನ ಒಂದು ಭಾಗವನ್ನು ಪರಿಶಿಷ್ಟ ಜಾತಿ ಉಪ ಯೋಜನೆ (ಪರಿಶಿಷ್ಟ ಜಾತಿಗಳ ಅಭಿವೃದ್ಧಿ ಕ್ರಿಯಾ ಯೋಜನೆ-DAPSC) ಮತ್ತು ಬುಡಕಟ್ಟು ಉಪ ಯೋಜನೆಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಿಡಲು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಅನುಕೂಲವಾಗುವಂತೆ ವಿವಿಧ ಕೇಂದ್ರ ಯೋಜನೆಗಳಿಗೆ ಹಣವನ್ನು ಒದಗಿಸಲು, ಸಂವಿಧಾನದ ಅನುಚ್ಛೇದ 46ರ ಅಡಿಯಲ್ಲಿ ಕೇಂದ್ರ ಕಾಯ್ದೆಯನ್ನು ಜಾರಿಗೆ ತರುವ ಬಗ್ಗೆ. ನಿರ್ಣಯವನ್ನು** ಅಂಗೀಕರಿಸುವುದು."

**<u>ನಿರ್ಣಯ ಅಂಗೀಕರಿಸಲ್ಪಟ್ಟಿತು ಮತ್ತು ನಿರ್ಣಯಕ್ಕೆ ಸದನದ ಅನುಮೋದನೆ ದೊರೆಯಿತು</u>**

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಈಗ ಎಲ್ಲಾ ಕಾರ್ಯಕಲಾಪಗಳು ಮುಗಿದಿದ್ದು, ನನಗೆ ಮಾತನಾಡಲು ಬಿಡಿ; ನಿಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ.

**25) ಸಾರಾಂಶ**

**ಸಭಾಪತಿಯವರು:–** ವಿಧಾನ ಪರಿಷತ್ತಿನ 155ನೇ ಅಧಿವೇಶನದ ಉಪವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ: 03/03/2025 ರಿಂದ ದಿನಾಂಕ: 21/03/2025 ರವರೆಗೆ ಒಟ್ಟು 15 ದಿನಗಳು ಅಂದರೆ, 93 ಗಂಟೆಗಳ ಕಾಲ ನಡೆಸಲಾಗಿರುತ್ತದೆ. ಪ್ರತಿ ಅಧಿವೇಶನದ ಪ್ರಾರಂಭದಲ್ಲಿ ಸಂವಿಧಾನದ ಪೀಠಿಕೆಯನ್ನು ಎಲ್ಲಾ ಮಾನ್ಯ ಶಾಸಕರುಗಳು ಓದಬೇಕೆಂದು ನಿರ್ಣಯಿಸಲಾಗಿರುವ ರೀತ್ಯಾ, ಪ್ರಸ್ತುತ ಅಧಿವೇಶನದ ಮೊದಲ ದಿನದ ಉಪವೇಶನದಲ್ಲಿ ಎಲ್ಲಾ ಮಾನ್ಯ ಶಾಸಕರುಗಳಿಂದ ಸಂವಿಧಾನದ ಪೀಠಿಕೆಯನ್ನು ಪಠಣ ಮಾಡಲಾಯಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 10 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ದಿನಾಂಕ: 03/03/2025 ರಂದು ಬೆಳಗ್ಗೆ 11:00 ಗಂಟೆಗೆ ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳ ಶಾಸಕರುಗಳನ್ನುದ್ದೇಶಿಸಿ ಭಾಷಣ ಮಾಡುವುದರೊಂದಿಗೆ ಪ್ರಾರಂಭಗೊಂಡಿತು. ವಂದನಾ ನಿರ್ಣಯದ ಮೇಲೆ 9 ಗಂಟೆ 59 ನಿಮಿಷಗಳು ಚರ್ಚೆ ನಡೆಸಿ ದಿನಾಂಕ: 18/03/2025 ರಂದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿತು.

ದಿನಾಂಕ: 07/03/2025 ರಂದು ಮಾನ್ಯ ಮುಖ್ಯಮಂತ್ರಿಯವರು 2025–26ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಒಪ್ಪಿಸಿದರು. ಆಯವ್ಯಯ ಅಂದಾಜುಗಳ ಮೇಲೆ 7 ಗಂಟೆ 10 ನಿಮಿಷಗಳ ಕಾಲ ಚರ್ಚೆ ನಡೆಸಿ, ದಿನಾಂಕ: 21/03/2025 ರಂದು ಸರ್ಕಾರದಿಂದ ಉತ್ತರಿಸಲಾಯಿತು.

ಸದಸ್ಯರಾದ ಶ್ರೀ ಎನ್.ರವಿಕುಮಾರ್ ರವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರನ್ನಾಗಿ ಮಾನ್ಯತೆ ನೀಡಲಾಯಿತು. ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ರವರು ಐ.ಸಿ.ಸಿ. ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ ತಂಡವು 12 ವರ್ಷಗಳ ತರುವಾಯ ವಿಜೇತರಾದ ಭಾರತೀಯ ಕ್ರಿಕೆಟ್ ತಂಡಕ್ಕೆ ಹಾಗೂ ಮಂಗಳೂರಿನಲ್ಲಿ ಕೋಟಿ ರೂಪಾಯಿ ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳುವ ಕಾರ್ಯಾಚರಣೆಯಲ್ಲಿ ಶ್ರಮವಹಿಸಿರುವ ಗೃಹ ಇಲಾಖೆಯ ಪೋಲೀಸ್ ಸಿಬ್ಬಂದಿಗಳಿಗೆ ಅಭಿನಂದನೆ ಸಲ್ಲಿಸಲಾಯಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು. 2024–25ನೇ ಸಾಲಿನ ಪೂರಕ ಅಂದಾಜುಗಳು (ಮೂರನೇ ಹಾಗೂ ಅಂತಿಮ ಕಂತು) ಹಾಗೂ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 01, 02 ಹಾಗೂ 3ನೇ ಪಟ್ಟಿಗಳನ್ನು ಮಂಡಿಸಲಾಯಿತು.

ಭಾರತ ಸಂವಿಧಾನದ 151 (2) ನೇ ಅನುಚ್ಛೇದದ ಮೇರೆಗೆ, ಮಾರ್ಚ್–2023 ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ (2025ರ ವರದಿ ಸಂಖ್ಯೆ:1) ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸಲಾಯಿತು.

2024ನೇ ಸಾಲಿನ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿಯ ವರದಿ ಮತ್ತು 2024-25ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ 103ನೇ ವರದಿಗಳನ್ನು ಒಪ್ಪಿಸಲಾಯಿತು.

ರಾಜ್ಯದಲ್ಲಿ 2020-21ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳಿಗೆ ಮೂಲ ಸೌಕರ್ಯಗಳಿಲ್ಲದಿದ್ದರೂ ಅನುಮತಿ ನೀಡಿ, ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ವಿಷಯವನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ: 14/01/2025 ರಿಂದ ದಿನಾಂಕ 13/07/2025 ರವರೆಗೆ ಆರು ತಿಂಗಳುಗಳ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿರುವ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಕುರಿತು 3 ಗಂಟೆ 34 ನಿಮಿಷ ವಿಶೇಷ ಚರ್ಚೆಯಾಗಿ ಸರ್ಕಾರದಿಂದ ಉತ್ತರಿಸಲಾಯಿತು.

ನಿಯಮ 59 ರಡಿಯಲ್ಲಿ ಒಟ್ಟು 03 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 01 ಸೂಚನೆಯನ್ನು ನಿಯಮ 68 ಕ್ಕೆ ಪರಿವರ್ತಿಸಿ ಉತ್ತರಿಸಲಾಯಿತು. ಉಳಿದ 02 ಸೂಚನೆಗಳನ್ನು ನಿಯಮ 330ಕ್ಕೆ ಪರಿವರ್ತಿಸಿ ಒಂದನ್ನು ಚರ್ಚಿಸಿ ಉತ್ತರಿಸಲಾಯಿತು.

ನಿಯಮ 68ರಡಿಯಲ್ಲಿ 02 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ.

(ಮುಂದು)

(594) 21/03/2025 8:00 ಎಸ್‌ವಿ/ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು (ಮುಂದು):-**

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 1,609 ಪ್ರಶ್ನೆಗಳನ್ನು ಸ್ವೀಕರಿಸಲಾಗಿರುತ್ತದೆ. ಅದರಲ್ಲಿ 195 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 158 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1,414 ಪ್ರಶ್ನೆಗಳ ಪೈಕಿ 1,035 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58 ರಡಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 04 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಒಂದು ಸೂಚನೆಗೆ ಚರ್ಚಿಸಲು ಅವಕಾಶ ನೀಡಲಾಯಿತು.

ನಿಯಮ 72 ರಡಿ 133 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 10 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 49 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330 ರಡಿ 78 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 12 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 32 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 137 ಸೂಚನೆಗಳ ಪೈಕಿ 62 ಕ್ಕೆ ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 75 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 07 ವಿಧೇಯಕಗಳು ಹಾಗೂ ಅಂಗೀಕೃತ ರೂಪದಲ್ಲಿರುವ 19 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ.

ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ, ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

**(ರಾಷ್ಟ್ರಗೀತೆಯೊಂದಿಗೆ ಸದನವು ರಾತ್ರಿ 8 ಗಂಟೆ 4 ನಿಮಿಷಗಳಿಗೆ ಅನಿರ್ದಿಷ್ಟಾವಧಿಯವರೆಗೆ ಮುಂದೂಡಲ್ಪಟ್ಟಿತು)**